ಮಂಗಳವಾರ, ಮೇ 9, 2023 | ₹ 7.00
www.prajavani.net
prajavani.net prajavani prajavani prajavani
ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ದೇಗುಲ ಭೇಟಿ
ತಮ್ಮ ಹೊಸ ಸಿನಿಮಾ 'ಐಬಿ 71'ಪ್ರಚಾರಾರ್ಥ ಅಮೃತಸರಕ್ಕೆ ಬಂದಿದ್ದ ಬಾಲಿವುಡ್ ನಟ ವಿದ್ಯುತ್ ಜಾಮ್‌ವಾಲಾ ಸ್ವರ್ಣಮಂದಿರಕ್ಕೆ ಭೇಟಿ ನೀಡಿ ಪ್ರಾರ್ಥಿಸಿದರು







ಚನ್ನಪಟ್ಟಣದಲ್ಲಿ ಸೋಮವಾರ ನಡೆದ ರೋಡ್ ಶೋನಲ್ಲಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಎಚ್‌.ಡಿ. ಕುಮಾರಸ್ವಾಮಿ ಮಾತನಾಡಿದರು (ಎಡಚಿತ್ರ) ಕನಕಪುರದಲ್ಲಿ ನಡೆದ ಬೃಹತ್ ಸಮಾವೇಶದಲ್ಲಿ ಕ್ಷೇತ್ರದ ಅಭ್ಯರ್ಥಿ ಡಿ.ಕೆ. ಶಿವಕುಮಾರ್ ಮಾತನಾಡಿದರು. ಸಂಸದ ಡಿ.ಕೆ. ಸುರೇಶ್ ಜೊತೆಗಿದ್ದರು

ಕೊನೆಯ ದಿನ ನಾಯಕರ ಭರ್ಜರಿ ಪ್ರಚಾರ: ಕನಕಪುರಕ್ಕೆ ಕಾಲಿಡದ ಎಚ್‌.ಡಿ.ದೇವೇಗೌಡ, ಎಚ್‌ಡಿಕೆ

ಕುಮಾರಸ್ವಾಮಿ, ಶಿವಕುಮಾರ್ ಶಕ್ತಿ ಪ್ರದರ್ಶನ

ಪ್ರಜಾವಾಣಿ ವಾರ್ತೆ

ರಾಮನಗರ: ಬಹಿರಂಗ ಪ್ರಚಾರದ ಕಡೆಯ ದಿನವಾದ ಸೋಮವಾರ ಜಿಲ್ಲೆಯಲ್ಲಿ ಅಭ್ಯರ್ಥಿಗಳು ರೋಡ್ ಶೋ ಮೂಲಕ ಕೊನೆಯ ಕ್ಷಣದ ಕಸರತ್ತು ನಡೆಸಿದರು.

ನಾಮಪತ್ರ ಸಲ್ಲಿಸಿದ ಬಳಿಕ ತಮ್ಮ ಕ್ಷೇತ್ರಗಳಿಗೆ ಕಾಲಿಡದ ಡಿ.ಕೆ. ಶಿವಕುಮಾರ್ ಹಾಗೂ ಎಚ್‌.ಡಿ. ಕುಮಾರಸ್ವಾಮಿ ಕಡೆಯ ದಿನದಂದು ಮತದಾರರ ಓಲೈಕೆಗೆ ಮುಂದಾದರು.

ಪ್ರಧಾನಿ ನರೇಂದ್ರ ಮೋದಿಯೇ ಬಂದು ತಮ್ಮ ಕ್ಷೇತ್ರದಲ್ಲಿ ಪ್ರಚಾರ ನಡೆಸಿದರೂ ಚನ್ನಪಟ್ಟಣಕ್ಕೆ ಬಾರದ ಕುಮಾರಸ್ವಾಮಿ ಸೋಮವಾರ ಮಾತ್ರ ಇಲ್ಲಿ ಮಿಂಚಿನ ಸಂಚಾರ ನಡೆಸಿದರು.

ಪಟ್ಟಣದಲ್ಲಿ ನಾಲ್ಕು ತಾಸು ರೋಡ್ ಶೋ ಮೂಲಕ ಮತಯಾಚನೆ ಮಾಡಿದರು. ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ನಡೆದ ಮೆರವಣಿಗೆಯಲ್ಲಿ ಸೇರಿದ್ದ ಸಾವಿರಾರು ಜನರ ಮೂಲಕ ಶಕ್ತಿ ಪ್ರದರ್ಶನ ಮಾಡಿದರು. ಕಾರ್ಯಕ್ರಮದ ಕೊನೆಗೆ ಅಭಿಮಾನಿಗಳು ಎಚ್‌ಡಿಕೆಗೆ ಬೆಳ್ಳಿ ಕುರ್ಚಿ, ಬೆಳ್ಳಿ ಗದೆ ಮತ್ತಿತರರ ಉಡುಗೊರೆ ನೀಡಿದರು. ರಾಮನಗರದಲ್ಲಿ ಸಂಜೆ ಪುತ್ರ ನಿಖಿಲ್ ಪರ ಕುಮಾರಸ್ವಾಮಿ ಜೊತೆಗೆ ಎಚ್‌.ಡಿ. ದೇವೇಗೌಡರು ಸಹ ಮತಯಾಚನೆ ಮಾಡಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಕೂಡ ಪ್ರಚಾರದ ಕಡೆಯ ದಿನವನ್ನು ತಮ್ಮ ಜಿಲ್ಲೆಯ ಪ್ರವಾಸಕ್ಕೆ ಮುಡಿಪಾಗಿಟ್ಟರು. ರಾಮನಗರದಲ್ಲಿ ಬೆಳಿಗ್ಗೆ ರೋಡ್ ಶೋ ಮೂಲಕ ಪಕ್ಷದ ಅಭ್ಯರ್ಥಿ ಇಕ್ಬಾಲ್ ಹುಸೇನ್ ಪರ ಮತಯಾಚಿಸಿದರು. ಮಧ್ಯಾಹ್ನ 4ಗಂಟೆಗೆ ಸಹೋದರ ಡಿ.ಕೆ. ಸುರೇಶ್ ಜೊತೆಗೂಡಿ ತವರೂರು ಕನಕಪುರದಲ್ಲಿ ಬೃಹತ್ ಸಮಾವೇಶದಲ್ಲಿ ಪಾಲ್ಗೊಂಡರು. ಈ ಬಾರಿ ಚುನಾವಣೆಗೆ ಕನಕಪುರದಲ್ಲಿ ಡಿಕೆಶಿ ನಡೆಸಿದ ಮೊದಲ ಹಾಗೂ ಕೊನೆಯ ಸಮಾವೇಶ ಇದಾಗಿತ್ತು.

ಕನಕಪುರಕ್ಕೆ ಬಾರದ ಎಚ್‌ಡಿಕೆ: ಚುನಾವಣೆ ಘೋಷಣೆ ಆದಾಗಿನಿಂದಲೂ ಜೆಡಿಎಸ್ ವರಿಷ್ಠರಾದ ಎಚ್‌.ಡಿ. ದೇವೇಗೌಡ ಹಾಗೂ ಕುಮಾರಸ್ವಾಮಿ ಕನಕಪುರಕ್ಕೆ ಕಾಲಿಡದೆ ಇರುವುದು ಕಾರ್ಯಕರ್ತರಲ್ಲಿ ನಿರಾಸೆ ಮೂಡಿಸಿದೆ.

ಸೋಮವಾರ ಮಧ್ಯಾಹ್ನ 3ಕ್ಕೆ ಕನಕಪುರದಲ್ಲಿ ಕುಮಾರಸ್ವಾಮಿ ಅವರಿಂದ ರೋಡ್ ಶೋ ನಿಗದಿಯಾಗಿತ್ತು. ಆದರೆ ಚನ್ನಪಟ್ಟಣದಲ್ಲೇ ಹೆಚ್ಚು ಸಮಯ ವ್ಯಯಿಸಿದ ಎಚ್‌ಡಿಕೆ, ಅಲ್ಲಿಂದ ನೇರವಾಗಿ ರಾಮನಗರಕ್ಕೆ ತೆರಳಿದರು.

ಸಿ.ಎಂ ಕನಸು ಬಿಚ್ಚಿಟ್ಟ ಡಿಕೆಶಿ

ರಾಮನಗರದಲ್ಲಿ ಸೋಮವಾರ ಪ್ರಚಾರದ ವೇಳೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ತಾವು ಮುಖ್ಯಮಂತ್ರಿ ಆಗಬೇಕೆನ್ನುವ ಕನಸನ್ನು ಮತದಾರರ ಮುಂದೆ ತೆರೆದಿಟ್ಟರು.


‘ರಾಮನಗರ ಜಿಲ್ಲೆಯ ಜನರು ಈಗಾಗಲೇ ನಾಡಿಗೆ ನಾಲ್ವರು ಮುಖ್ಯಮಂತ್ರಿಗಳನ್ನು ನೀಡಿದ್ದೀರಿ. ರಾಮನಗರ ಕ್ಷೇತ್ರದಿಂದ ಕೆಂಗಲ್ ಹನುಮಂತಯ್ಯ, ಎಚ್‌.ಡಿ. ದೇವೇಗೌಡ, ಎಚ್‌.ಡಿ. ಕುಮಾರಸ್ವಾಮಿ ಹಾಗೂ ರಾಮಕೃಷ್ಣ ಹೆಗಡೆ ಗೆದ್ದು ಮುಖ್ಯಮಂತ್ರಿ ಆಗಿದ್ದರು. ನಾನು ಈ ಜಿಲ್ಲೆಯ ರೈತನ ಮಗ. ಇಷ್ಟು ದಿನ ಹೊರಗಿನ ಜಿಲ್ಲೆಯವರಿಗೆ ಅವಕಾಶ ಮಾಡಿಕೊಟ್ಟ ನೀವು ಈ ಬಾರಿ ಜಿಲ್ಲೆಯ ಮಣ್ಣಿನ ಮಗನಿಗೆ ಒಂದು ಅವಕಾಶ ನೀಡಬೇಕು’ ಎಂದು ಮನವಿ ಮಾಡಿದರು.

‘35 ವರ್ಷ ಕಾಲ ದೇವೇಗೌಡರ ಕುಟುಂಬದ ವಿರುದ್ಧ ಹೋರಾಟ ಮಾಡಿದ್ದ ನಾನು, ಕಳೆದ ಚುನಾವಣೆ ನಂತರ ರಾಜ್ಯದಲ್ಲಿ ಅತಂತ್ರ ಪರಿಸ್ಥಿತಿ ಎದುರಾಗಿದ್ದು ಬಿಜೆಪಿಯನ್ನು ಅಧಿಕಾರದಿಂದ ದೂರ ಇಡಲು ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಲು ಸಹಕಾರ ನೀಡಿದ್ದೆ’ ಎಂದೂ ಸ್ಮರಿಸಿಕೊಂಡರು.

‘ನಾಲ್ಕು ಜನ ಏನೋ ಹೇಳಿದ್ರೆ, ಲಿಂಗಾಯತ ದನಿಯಾಗುತ್ತದೆಯೇ?’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ನಾಲ್ಕು ಜನ ಸೇರಿ ಏನೋ ಹೇಳಿದ್ರೆ ಅದು ಲಿಂಗಾಯತರ ದನಿಯಾಗುತ್ತದೆಯೇ? ಲಿಂಗಾಯತ ಸಮುದಾಯ ಸಮುದ್ರವಿದ್ದಂತೆ.



ಕರ್ನಾಟಕ ಲಿಂಗಾಯತ ಮತ್ತು ವೀರಶೈವ ವಿಚಾರ ವೇದಿಕೆ ಎನ್ನುವುದು ಎಲ್ಲಿಯೂ ಇಲ್ಲ. ಅದೊಂದು ಕಾಲ್ಪನಿಕ ಸಂಘಟನೆಯಾಗಿದ್ದು, ಚುನಾವಣೆ ಸಂದರ್ಭದಲ್ಲಿ ಹುಟ್ಟಿಕೊಂಡಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

‘ಬಿಜೆಪಿಗೆ ಲಿಂಗಾಯತರ ಅಗತ್ಯವಿಲ್ಲ. ಹಿಂದುತ್ವದ ಆಧಾರದ ಮೇಲೆಯೇ ಚುನಾವಣೆ ಗೆಲ್ಲುತ್ತೇವೆ’ ಎನ್ನಲಾದ ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರ ಹೇಳಿಕೆ ಬಗ್ಗೆ ಸ್ಪಷ್ಟನೆಗೆ ಆಗ್ರಹಿಸಿದ್ದ ವೇದಿಕೆ ಕುರಿತು, ಸೋಮವಾರ ನಗರದಲ್ಲಿ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದರು.

‘ವೀರಶೈವ ಸಮಾಜ ದೊಡ್ಡದು. ಅದು ಯಾವುದೇ ಸಂಸ್ಥೆಯಡಿ ಇಲ್ಲ. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷರನ್ನು ಗೌರವಿಸುವೆ. ಆದರೆ, ಚುನಾವಣೆ ಸಂದರ್ಭದಲ್ಲಿ ಯಾವುದೇ ಒಂದು ಪಕ್ಷಕ್ಕೆ ಸಂಸ್ಥೆಯ ಹೆಸರು ಬಳಸುವುದು ಸರಿಯಲ್ಲ’ ಎಂದು ಹೇಳಿದರು.

‘ಆದಾಯ ತೆರಿಗೆ ಇಲಾಖೆಯವರು ಎಲ್ಲಾ ಜಿಲ್ಲೆಗಳಲ್ಲಿ ಇದ್ದಾರೆ. ಅವರಿಗೆ ಎಲ್ಲಿ ತಪ್ಪು ನಡೆಯುತ್ತದೆ ಎಂಬ ಮಾಹಿತಿ ಇರುತ್ತದೆ. ಕಾಂಗ್ರೆಸ್‌ನವರು ತಪ್ಪು ಮಾಡಿದರೆ, ನಾವೇನು ಮಾಡಲು ಸಾಧ್ಯ? ಐಟಿ ದಾಳಿಯಾಗುತ್ತದೆ ಎಂದು ಮುಂಚೆಯೇ ಹೇಳಿ, ಅದರಿಂದ ತಪ್ಪಿಸಿಕೊಳ್ಳಲು ಯತ್ನಿಸುವುದು ಕಾಂಗ್ರೆಸ್‌ನವರ ತಂತ್ರಗಾರಿಕೆ’ ಎಂದು ಕಾಂಗ್ರೆಸ್ ನಾಯಕರ ಆಪ್ತರ ಮೇಲಿನ ಐಟಿ ದಾಳಿ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

‘2024ಕ್ಕೆ ಡಬಲ್ ಎಂಜಿನ್ ಬಂದ್’

ಕಲಬುರಗಿ: ‘ಡಬಲ್ ಎಂಜಿನ್ ಸರ್ಕಾರವು ರಾಜ್ಯದಲ್ಲಿ ಸ್ತಬ್ದಗೊಂಡಿದ್ದು, ಕೇಂದ್ರದಲ್ಲಿ 2024ರ ವೇಳೆಗೆ ಬಂದ್ ಆಗಲಿದೆ.



ರಾಜ್ಯವನ್ನು 40 ಪರ್ಸೆಂಟ್ ಸರ್ಕಾರ ಲೂಟಿ ಹೊಡೆದಿರುವುದರಿಂದ ಜನರು ಭ್ರಮನಿರಸನಗೊಂಡಿದ್ದಾರೆ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದರು.

ಕಲಬುರಗಿಯ ದಕ್ಷಿಣ ಕ್ಷೇತ್ರದ ಅಭ್ಯರ್ಥಿ ಅಲ್ಲಮಪ್ರಭು ಪಾಟೀಲ ಪರ ಸೋಮವಾರ ಬಹಿರಂಗ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ‘ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಸಿಲಿಂಡರ್ ಬೆಲೆ ಹೆಚ್ಚಳ ಜನರ ಬದುಕಿನ ಮೇಲೆ ಬರೆ ಎಳೆದಿದ್ದು, ಈ ಸರ್ಕಾರವನ್ನು ಕಿತ್ತೆಸೆಯುವರು. ಕಲ್ಯಾಣ ಕರ್ನಾಟಕದಲ್ಲಿ ನಾವು ಮಾಡಿದ ಕೆಲಸಗಳ ಬಗ್ಗೆ ಹೇಳಲು ತಯಾರಿದ್ದೇವೆ. ಅವರು (ಬಿಜೆಪಿ) ಏನು ಮಾಡಿದ್ದಾರೆ ಎಂಬುದನ್ನು ಹೇಳಲಿ’ ಎಂದು ಸವಾಲು ಹಾಕಿದರು.

‘ರಾಜ್ಯದಲ್ಲಿ ಬಿಜೆಪಿ ಸೋಲಿನ ಭೀತಿಯಿಂದಲೇ ಪ್ರಧಾನಿ ನರೇಂದ್ರ ಮೋದಿ ಅವರು ಗಲ್ಲಿ ಗಲ್ಲಿಗಳಲ್ಲಿ ರೋಡ್ ಶೋ ನಡೆಸುವ ಸ್ಥಿತಿ ನಿರ್ಮಾಣವಾಗಿದೆ’ ಎಂದರು.

15 ರಂದು ನಾವು ಸರ್ಕಾರ ರಚಿಸುತ್ತೇವೆ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಗುರಿ 141 ಸೀಟು, ಇದೇ 13ರಂದು ನೋಡಿ. 15ರಂದು ನಾವು ಸರ್ಕಾರ ರಚನೆ ಮಾಡುತ್ತೇವೆ. ಮೊದಲ ಸಚಿವ ಸಂಪುಟ ಸಭೆಯಲ್ಲಿಯೇ ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡುತ್ತೇವೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ‘ಯಾರ ನೇತೃತ್ವದಲ್ಲಿ ಸಚಿವ ಸಂಪುಟ ಸಭೆ ನಡೆಯಲಿದೆ ಎಂದು ಮೇ 15ರಂದು ಮಲ್ಲಿಕಾರ್ಜುನ ಖರ್ಗೆ ಘೋಷಣೆ ಮಾಡಲಿದ್ದಾರೆ’ ಎಂದರು.

‘ರಾಜ್ಯ ಸರ್ಕಾರದ ಭ್ರಷ್ಟಾಚಾರ ಕುರಿತು ದರ ಪಟ್ಟಿ ಸಹಿತ ಪಕ್ಷ ನೀಡಿದ್ದ ಜಾಹೀರಾತಿನ ವಿಚಾರದಲ್ಲಿ 24 ಗಂಟೆಯಲ್ಲಿ ಉತ್ತರ ನೀಡುವಂತೆ ಚುನಾವಣಾ ಆಯೋಗದ ನೋಟಿಸ್ ನೀಡಿತ್ತು. ನಾವು ಉತ್ತರ ನೀಡಿದ್ದೇವೆ’ ಎಂದರು.

‘ಮುಖ್ಯಮಂತ್ರಿ ಹುದ್ದೆ ಹಾಗೂ ಮಂತ್ರಿಗಿರಿ ಹುದ್ದೆಯ ದರವನ್ನು ಯತ್ನಾಳ್ ಹೇಳಿದ್ದಾರೆ. ಉಳಿದಂತೆ ಮಾಧ್ಯಮ ವರದಿಗಳು, ಬಿಜೆಪಿ ನಾಯಕರಾದ ವಿಶ್ವನಾಥ್, ಗೂಳಿಹಟ್ಟಿ ಶೇಖರ್ ಅವರ ಹೇಳಿಕೆಗಳೇ ಸಾಕ್ಷಿ‘ ಎಂದೂ ಅವರು ಹೇಳಿದರು.

ಲಿಂಗಾಯತರನ್ನು ಎತ್ತಿ ಕಟ್ಟಲು ಕಾಂಗ್ರೆಸ್ ಹುನ್ನಾರ: ಬಿಎಸ್‌ವೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಹಿಂದೆ ವೀರಶೈವ–ಲಿಂಗಾಯತ ಸಮಾಜವನ್ನು ಒಡೆಯಲು ಹೋಗಿದ್ದ ಕಾಂಗ್ರೆಸ್ ಪಕ್ಷ ಈಗ ಈ ಸಮುದಾಯವನ್ನು ಬಿಜೆಪಿ



ವಿರುದ್ಧ ಎತ್ತಿ ಕಟ್ಟುವ ಕೆಲಸ ಮಾಡುತ್ತಿದೆ. ಚುನಾವಣೆಯಲ್ಲಿ ಬಿಜೆಪಿ ಬಹುಮತ ಗಳಿಸುತ್ತದೆ ಎಂಬ ಕಾರಣಕ್ಕೆ ಕೊನೆಯ ಹಂತದಲ್ಲಿ ಅಪಪ್ರಚಾರ ನಡೆಸುತ್ತಿದೆ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಹರಿಹಾಯ್ದಿದ್ದಾರೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಧಿಕಾರ ಇದ್ದಾಗ ಕಾಂಗ್ರೆಸ್‌ಗೆ ಲಿಂಗಾಯತರ ನೆನಪಾಗಲಿಲ್ಲ. ಅಧಿಕಾರ ಇಲ್ಲದಾದ ಓಲೈಕೆ ರಾಜಕಾರಣ ಮಾಡುತ್ತಿದ್ದಾರೆ ಎಂದರು.

‘ವೀರಶೈವ– ಲಿಂಗಾಯತ , ಎಸ್‌ಸಿ, ಎಸ್‌ಟಿ, ಒಬಿಸಿ ಸೇರಿ ಎಲ್ಲರ ಆಶೀರ್ವಾದದಿಂದ ಮುಖ್ಯಮಂತ್ರಿಯಾಗಿದ್ದೆ. ಈಗಲೂ ವೀರಶೈವ ಲಿಂಗಾಯತ ಸಮಾಜ ಬಿಜೆಪಿ ಜೊತೆಗಿದೆ. ಕರ್ನಾಟಕದ ಜನರು ದೇಶದ ಅಭಿವೃದ್ಧಿ, ಸಮಗ್ರತೆಗಾಗಿ ಬಿಜೆಪಿಗೆ ಬೆಂಬಲ ಕೊಡುತ್ತಾರೆ’ ಎಂದರು.

‘ಡಿ.ಕೆ.ಶಿವಕುಮಾರ್ ಅವರು ವೀರಶೈವ–ಲಿಂಗಾಯತ ಸಮುದಾಯದ ಸ್ವಾಮೀಜಿಗಳು ಕಾಂಗ್ರೆಸ್‌ಗೆ ಬೆಂಬಲ ನೀಡಿದ್ದಾರೆ ಎಂದು ಹೇಳಿಕೊಂಡಿದ್ದಾರೆ. ಆದರೆ, ವೀರಶೈವ ಲಿಂಗಾಯತ ಮಠಾಧೀಶರು ನನ್ನನ್ನೂ ಕರೆಸಿಕೊಂಡು ಬಿಜೆಪಿಗೆ ಬೆಂಬಲವನ್ನು ಘೋಷಿಸಿದ್ದರು’ ಎಂದರು.‘ನನ್ನನ್ನು ಬಿಜೆಪಿಯಲ್ಲಿ ಮೂಲೆಗುಂಪು ಮಾಡಲಾಗಿದೆ ಎಂದು ಕಾಂಗ್ರೆಸ್ ಸುಳ್ಳು ಪ್ರಚಾರ ಮಾಡುತ್ತಿದೆ. ಈ ಅಪ ಪ್ರಚಾರದ ಹಿಂದೆ ಕುತ್ಸಿತ ಉದ್ದೇಶವಿದೆ. ನನ್ನನ್ನು ಬಿಜೆಪಿ ಮೂಲೆಗುಂಪು ಮಾಡಿಲ್ಲ. ಚೆನ್ನಾಗಿ ನೋಡಿಕೊಂಡಿದೆ’ ಎಂದೂ ಯಡಿಯೂರಪ್ಪ ತಿಳಿಸಿದರು. ಈ ಬಾರಿ 130 ರಿಂದ 135 ಸ್ಥಾನಗಳನ್ನು ಗೆಲ್ಲುವುದು ಖಚಿತ. ವರುಣ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಸೋಲುತ್ತಾರೆ. ವಿ.ಸೋಮಣ್ಣ ಅವರು ಗೆಲ್ಲುತ್ತಾರೆ ಎಂದು ಅವರು ಹೇಳಿದರು.

18ರಂದು ಜೆಡಿಎಸ್ ಸರ್ಕಾರ ಅಸ್ತಿತ್ವಕ್ಕೆ: ಎಚ್‌ಡಿಕೆ ವಿಶ್ವಾಸ

ಪ್ರಜಾವಾಣಿ ವಾರ್ತೆ

ರಾಮನಗರ: ‘ಮೇ 18ರಂದು ಎಚ್‌.ಡಿ. ದೇವೇಗೌಡರ ಜನ್ಮದಿನ. ಅಂದೇ ರಾಜ್ಯದಲ್ಲಿ ಜೆಡಿಎಸ್ ಸರ್ಕಾರ ಅಸ್ತಿತ್ವಕ್ಕೆ ಬರಲಿದೆ. ಮೂರನೇ ಬಾರಿ ಕುಮಾರಸ್ವಾಮಿ ಮುಖ್ಯಮಂತ್ರಿ ಆಗುವುದನ್ನು ಯಾರೂ ತಪ್ಪಿಸಲು ಆಗದು’ ಎಂದು ಪಕ್ಷದ ಶಾಸಕಾಂಗ ನಾಯಕ ಎಚ್‌.ಡಿ. ಕುಮಾರಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನಗರದ ಕೆಂಗಲ್ ಹನುಮಂತಯ್ಯ ವೃತ್ತದಲ್ಲಿ ಸೋಮವಾರ ಸಂಜೆ ನಡೆದ ಬಹಿರಂಗ ಸಮಾವೇಶದಲ್ಲಿ ರಾಮನಗರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ನಿಖಿಲ್ ಪರ ಮತಯಾಚಿಸಿ ಅವರು ಮಾತನಾಡಿದರು.

‘ಅಧಿಕಾರಕ್ಕೆ ಬರುತ್ತಿದ್ದಂತೆ ಬಿಜೆಪಿಯ ಎಲ್ಲ ಜನವಿರೋಧಿ ಕಾರ್ಯಕ್ರಮಗಳನ್ನೂ ರದ್ದುಪಡಿಸಲಾಗುವುದು. ಮುಖ್ಯಮಂತ್ರಿ ಆದರೂ ಬೆಂಗಳೂರಿನ ಸರ್ಕಾರಿ ಬಂಗಲೆ, ಹೋಟೆಲ್‌ಗಳಲ್ಲಿ ಇರುವುದಿಲ್ಲ. ಬಿಡದಿಯ ಕೇತಗಾನಹಳ್ಳಿಯ ಮನೆಯಲ್ಲಿಯೇ ಇರುತ್ತೇನೆ. ಯಾರು ಬೇಕಾದರೂ ಬಂದು ನನ್ನಲ್ಲಿ ತಮ್ಮ ಕಷ್ಟಗಳನ್ನು ಹಂಚಿಕೊಳ್ಳಬಹುದು’ ಎಂದರು.

ಎಎಪಿ ಅಭ್ಯರ್ಥಿ ಕಣದಿಂದ ನಿವೃತ್ತಿ: ಜೆಡಿಎಸ್‌ಗೆ ಬೆಂಬಲ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಲಬುರಗಿ ಉತ್ತರ ಕ್ಷೇತ್ರದ ಆಮ್ ಆದ್ಮಿ ಪಕ್ಷದ (ಎಎಪಿ) ಅಭ್ಯರ್ಥಿ ಸಜ್ಜಾದ್ ಅಲಿ ಇನಾಮದಾರ್ ಅವರು ಚುನಾವಣಾ ಕಣದಿಂದ ನಿವೃತ್ತಿ ಘೋಷಿಸಿ, ಜೆಡಿಎಸ್ ಅಭ್ಯರ್ಥಿ



ಸಜ್ಜಾದ್ ಅಲಿ ಇನಾಮದಾರ

ಉಸ್ತಾದ್ ನಾಸಿರ್ ಹುಸೇನ್ ಅವರಿಗೆ ಬೆಂಬಲ ಘೋಷಿಸಿದ್ದಾರೆ. ಎಎಪಿ ತೊರೆದು ಜೆಡಿಎಸ್ ಸೇರಿದ್ದಾರೆ.

ಸಜ್ಜಾದ್ ಅಲಿ ಪರ ಈಚೆಗೆ ಎಎಪಿ ರಾಜ್ಯಸಭೆ ಸದಸ್ಯ ಸಂಜಯ್ ಸಿಂಗ್ ಪ್ರಚಾರ ನಡೆಸಿದ್ದರು. ಮುಂಚೆ ಕಾಂಗ್ರೆಸ್‌ನಲ್ಲಿ ಗುರುತಿಸಿಕೊಂಡಿದ್ದ ಸಜ್ಜಾದ್ ಅಲಿ ಅವರು ನಂತರ ಎಎಪಿಗೆ ಸೇರಿದ್ದರು.

‘ಕ್ಷೇತ್ರದಲ್ಲಿ ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿದ್ದು, ಮುಸ್ಲಿಂ ಸಮುದಾಯದವರೇ ಶಾಸಕರಾಗಿ ಆಯ್ಕೆಯಾಗುತ್ತಿದ್ದಾರೆ. ನನಗೆ 10 ರಿಂದ 12 ಸಾವಿರ ಮತಗಳು ಬೀಳುತಿತ್ತು. ಮತಗಳ ವಿಭಜನೆಯಿಂದ ಜೆಡಿಎಸ್ ಅಭ್ಯರ್ಥಿ ಉಸ್ತಾದ್ ನಾಸಿರ್ ಹುಸೇನ್ ಅವರಿಗೆ ಸೋಲು ಆಗುತಿತ್ತು. ಅದಕ್ಕೆ ಅವರನ್ನು ಗೆಲ್ಲಿಸಲು ಚುನಾವಣೆಯಿಂದ ನಿವೃತ್ತನಾದೆ’ ಎಂದು ಸಜ್ಜಾದ್ ಅಲಿ ತಿಳಿಸಿದರು.

‘ಸಜ್ಜಾದ್ ಅಲಿ ಅವರು ಹಿಂದೆಯೇ ತಮ್ಮ ನಿಲುವು ತಿಳಿಸಿದ್ದರೆ ಬೇರೆ ಅಭ್ಯರ್ಥಿಗಳನ್ನು ಕಣಕ್ಕಿಳಿಸುತ್ತಿದ್ದೆವು. ಅವರ ಹಿರಿತನ ಪರಿಗಣಿಸಿ ಬೇರೆಯವರಿಗೆ ಟಿಕೆಟ್ ನಿರಾಕರಿಸಿದ್ದೆವು. ಅವರು ಪಕ್ಷಕ್ಕೆ ದ್ರೋಹ ಮಾಡಬಾರದಿತ್ತು’ ಎಂದು ಎಎಪಿ ರಾಜ್ಯ ಘಟಕದ ಜಂಟಿ ಕಾರ್ಯದರ್ಶಿ ದರ್ಶನ್ ಜೈನ್ ತಿಳಿಸಿದರು.

ಸಾಗರ: ಕಣದಿಂದ ಹಿಂದೆ ಸರಿದ ಜೆಡಿಎಸ್ ಅಭ್ಯರ್ಥಿ

ಪ್ರಜಾವಾಣಿ ವಾರ್ತೆ

ಸಾಗರ: ಸಾಗರ ವಿಧಾನಸಭೆ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಸೈಯದ್ ಜಾಕೀರ್ ಚುನಾವಣಾ ಕಣದಿಂದ ಹಿಂದೆ ಸರಿದಿರುವುದಾಗಿ ಸೋಮವಾರ ಘೋಷಿಸಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ಗೋಪಾಲಕೃಷ್ಣ ಬೇಳೂರು ಅವರನ್ನು ಬೆಂಬಲಿಸುವ ನಿಟ್ಟಿನಲ್ಲಿ ಕಣದಿಂದ ಹಿಂದೆ ಸರಿದಿದ್ದಾಗಿ ಹೇಳಿರುವ ಅವರು, ‘ನಾನು ಜೆಡಿಎಸ್ ತೊರೆದಿಲ್ಲ. ಕಾಂಗ್ರೆಸ್‌ಗೆ ಸೇರ್ಪಡೆ ಆಗಿಲ್ಲ. ವೈಯಕ್ತಿಕವಾಗಿ ಈ ನಿರ್ಧಾರ ಕೈಗೊಂಡಿದ್ದೇನೆ’ ಎಂದು ತಿಳಿಸಿದ್ದಾರೆ.

‘ಜಾಕೀರ್ ಅವರ ತೀರ್ಮಾನಕ್ಕೂ ಪಕ್ಷಕ್ಕೂ ಸಂಬಂಧವಿಲ್ಲ. ಅವರ ತೀರ್ಮಾನದ ಕುರಿತು ಪಕ್ಷದ ವರಿಷ್ಠರಿಗೆ ತಿಳಿಸಲಾಗುವುದು’ ಎಂದು ಜೆಡಿಎಸ್ ತಾಲ್ಲೂಕು ಘಟಕದ ಅಧ್ಯಕ್ಷ ಕನ್ನಪ್ಪ ಬೆಳಲಮಕ್ಕಿ ಹೇಳಿದ್ದಾರೆ.

ಮೋದಿ ಹೆಸರೇಳದೆ ಚುನಾವಣೆ ಮಾಡಲಿ: ಶೆಟ್ಟರ್

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ನಮಗೆ ಪಕ್ಷ ಮುಖ್ಯವೇ ಹೊರತು ವ್ಯಕ್ತಿಯಲ್ಲ ಎನ್ನುವ ಬಿಜೆಪಿಯವರು, ಪ್ರಧಾನಿ ನರೇಂದ್ರ ಮೋದಿ ಅವರನ್ನು ನೆಚ್ಚಿಕೊಳ್ಳದೆ ರಾಜ್ಯದಲ್ಲಿ ಚುನಾವಣೆ ಮಾಡಲಿ’ ಎಂದು ಹುಬ್ಬಳ್ಳಿ– ಧಾರವಾಡ ಸೆಂಟ್ರಲ್ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಜಗದೀಶ ಶೆಟ್ಟರ್ ಸವಾಲು ಹಾಕಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಯಾವುದೇ ಪಕ್ಷಕ್ಕೆ ವ್ಯಕ್ತಿ ಎಷ್ಟು ಮುಖ್ಯವೋ, ವ್ಯಕ್ತಿಗೂ ಪಕ್ಷ ಅಷ್ಟೇ ಮುಖ್ಯ. ಬೆಂಗಳೂರಿನಲ್ಲಿ ನಡೆದ ಪ್ರಧಾನಿ ಮೋದಿ ಅವರ ರೋಡ್ ಶೋ ಸಂದರ್ಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಪಕ್ಷದ ಮೇರು ನಾಯಕ ಬಿ.ಎಸ್. ಯಡಿಯೂರಪ್ಪ ಹಾಗೂ ಮಾಜಿ ಮುಖ್ಯಮಂತ್ರಿ ಸದಾನಂದಗೌಡ ಎಲ್ಲಿದ್ದರು? ರಾಜ್ಯ ಬಿಜೆಪಿ ನಾಯಕತ್ವ ಎತ್ತ ಸಾಗುತ್ತಿದೆ ಎಂಬುದನ್ನು ಇದು ತೋರಿಸುತ್ತದೆ’ ಎಂದರು.

‘ಜೋಶಿಗಷ್ಟೇ ಸಂಪುಟ ಸ್ಥಾನಮಾನ ಏಕೆ?’



‘ಕೇಂದ್ರ ಸಚಿವ ಸಂಪುಟದಲ್ಲಿ ದಲಿತ ಸಮುದಾಯದ ಎ. ನಾರಾಯಣಸ್ವಾಮಿ, ಒಕ್ಕಲಿಗರಾದ ಶೋಭಾ ಕರಂದ್ಲಾಜೆ, ಲಿಂಗಾಯತ ಸಮುದಾಯದ ಭಗವಂತ ಖೂಬಾ ಅವರನ್ನು ರಾಜ್ಯ ಸಚಿವರನ್ನಾಗಿ ಮಾಡಿ, ಪ್ರಲ್ಹಾದ ಜೋಶಿ ಅವರಿಗೆ ಮಾತ್ರ ಸಂಪುಟ ದರ್ಜೆ ಸ್ಥಾನಮಾನ ನೀಡಿದ್ದು ಏಕೆ? ಕೇಂದ್ರದ ಮಟ್ಟದಲ್ಲಿ ಜೋಶಿ ಅವರೇ ಕರ್ನಾಟಕದ ಪ್ರತಿನಿಧಿ ಎಂಬಂತೆ ಬಿಂಬಿಸಲಾಗುತ್ತಿದೆ. ಕರ್ನಾಟಕದಲ್ಲಿ 25 ಸೀಟುಗಳನ್ನು ಗೆದ್ದಿರುವ ಬಿಜೆಪಿಯ ನಾಯಕತ್ವ ಎತ್ತ ಸಾಗುತ್ತಿದೆ ಎಂಬುದಕ್ಕೆ ಇದು ದೊಡ್ಡ ಸಂದೇಶವಾಗಿದೆ. ರಾಜ್ಯ ಬಿಜೆಪಿ ಚುಕ್ಕಾಣಿ ಹಿಡಿದಿರುವವರಿಗೆ ಜೀ ಹುಜೂರ್ ಎನ್ನುವ ಶಾಸಕರು ಬೇಕೇ ಹೊರತು, ಸಮುದಾಯದ ನಾಯಕರು ಬೇಕಿಲ್ಲ’ ಎಂದು ಜಗದೀಶ ಶೆಟ್ಟರ್ ಹರಿಹಾಯ್ದರು.

‘ಬಿಜೆಪಿಯಲ್ಲಿ ಲಿಂಗಾಯತ ನಾಯಕರನ್ನು ಮುಗಿಸುವ ಷಡ್ಯಂತ್ರ ವ್ಯವಸ್ಥಿತವಾಗಿ ನಡೆಯುತ್ತಿದೆ. ಬಿ.ಎಸ್. ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಯಾವ ಕಾರಣಕ್ಕೆ ಕೆಳಗಿಳಿಸಿದರು? ವಯಸ್ಸಿನ ಕಾರಣಕ್ಕೆ ಇಳಿಸಿದ್ದರೆ, ಚುನಾವಣಾ ಪ್ರಚಾರಕ್ಕೆ ಏಕೆ ಬಳಸಿಕೊಳ್ಳುತ್ತಿದ್ದಾರೆ? ಇದೆಲ್ಲದರ ಹಿಂದೆ ಬಿ.ಎಲ್. ಸಂತೋಷ್ ಇದ್ದಾರೆ. ಅವರ ಬಗ್ಗೆ ಹಿಂದೊಮ್ಮೆ ಯಡಿಯೂರಪ್ಪ ಅವರೇ ಬಹಿರಂಗವಾಗಿ ಅಸಮಾಧಾನ ಹೊರಹಾಕಿದ್ದರು’ ಎಂದು ನೆನೆದರು.

ಅನುಕೂಲ ಸಿಂಧು ನಡೆ: ‘ಲಿಂಗಾಯತರ ಕುರಿತು ಸಂತೋಷ್ ಹೇಳಿದ್ದಾರೆಂಬ ಹೇಳಿಕೆಯನ್ನು ಸುಳ್ಳು ಎನ್ನುವ ಬಿಜೆಪಿ, ಅದರ ಸತ್ಯಾಸತ್ಯತೆ ಬಗ್ಗೆ ತನಿಖೆ ಮಾಡಿಸಬೇಕಲ್ಲವೆ? ಅದು ಬಿಟ್ಟು ಐವರ ವಿರುದ್ಧ ಪ್ರಕರಣ ದಾಖಲಿಸಿ ಸುಮ್ಮನಾಗಿದ್ದು ಏಕೆ? ಹಿಂದೆ ಬಿಜೆಪಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಆಡಿಯೊ ಬಂದಾಗಲೂ ಇದೇ ರೀತಿ ಆಗಿತ್ತು. ತಮಗೆ ಅನುಕೂಲವಿದ್ದಾಗ ಸುಮ್ಮನಿರುವುದು ಹಾಗೂ ಅನಾನುಕೂಲವಿದ್ದಾಗ ಸುಳ್ಳು ಎನ್ನುವುದು ಬಿಜೆಪಿಯವರ ಚಾಳಿ’ ಎಂದು ವಾಗ್ದಾಳಿ ನಡೆಸಿದರು.

‘ನಾನು ಕಾಂಗ್ರೆಸ್ ಸೇರಿದ ಬಳಿಕ, ಬಿಜೆಪಿಯಲ್ಲಿದ್ದ ನನ್ನ ಹಲವು ಬೆಂಬಲಿಗರು ನನ್ನೊಂದಿಗೆ ಕಾಂಗ್ರೆಸ್‌ಗೆ ಬರಲು ಮುಂದಾದರು. ಇದು ಗೊತ್ತಾಗುತ್ತಿದ್ದಂತೆ ಬಿಜೆಪಿಯವರು ಅವರೆಲ್ಲರಿಗೂ ಕರೆ ಮಾಡಿ ನನ್ನ ಜೊತೆ ಹೋಗದಂತೆ ಬೆದರಿಕೆ ಹಾಕುತ್ತಿದ್ದಾರೆ. ಇತ್ತೀಚೆಗೆ ಪಕ್ಷಕ್ಕೆ ಬಂದ ಕುರುಬ ಸಮುದಾಯದ ಶಾಂತಣ್ಣ ಕಡಿವಾಲ ಅವರಿಗೆ ದಿನವಿಡೀ ಇಂತಹ ಕರೆಗಳು ಬಂದವು. ಬಿಜೆಪಿಯವರಿಗೆ ಈ ಚುನಾವಣೆಯಲ್ಲಿ ದೊಡ್ಡ ಒಳೇಟು ನೀಡಲಿದ್ದು, ಮುಂದಿನ ಚುನಾವಣೆ ಮೇಲೂ ಪರಿಣಾಮ ಬೀರಲಿದೆ ಎಂಬುದನ್ನು ಕೇಂದ್ರ ಸಚಿವ ಜೋಶಿ ಅವರು ತಿಳಿದುಕೊಳ್ಳಬೇಕು’ ಎಂದು ಎಚ್ಚರಿಕೆ ನೀಡಿದರು.



ಬೆಂಗಳೂರಿನಲ್ಲಿ ರಾಹುಲ್ ಗಾಂಧಿ ಬಿಎಂಟಿಸಿ ಬಸ್ ಪ್ರಯಾಣಿಕರೊಂದಿಗೆ ಸೋಮವಾರ ಸಂವಾದ ನಡೆಸಿದರು

ಬಿಎಂಟಿಸಿ ಬಸ್ ಏರಿದ ರಾಹುಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರಕ್ಕಾಗಿ ರಾಜ್ಯಕ್ಕೆ ಬಂದಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಬಿಎಂಟಿಸಿ ಬಸ್ಸಿನಲ್ಲಿ ಜನಸಾಮಾನ್ಯರ ಜೊತೆ ಸೋಮವಾರ ಪ್ರಯಾಣಿಸಿದರು.

ಬೆಳಿಗ್ಗೆ ಕನ್ನಿಂಗ್‌ಹ್ಯಾಮ್ ರಸ್ತೆಯಲ್ಲಿ ಓಡಾಡಿದ ರಾಹುಲ್, ಸಮೀಪದಲ್ಲೇ ಇದ್ದ ಬಸ್ ನಿಲ್ದಾಣಕ್ಕೆ ತೆರಳಿ ಪ್ರಯಾಣಿಕರಿಂದ ತುಂಬಿದ್ದ ಬಿಎಂಟಿಸಿ ಬಸ್ (ಕೆ. ಆರ್. ಮಾರುಕಟ್ಟೆ– ಬಿಳಿಶಿವಾಲೆ) ಏರಿದ ಅವರು ಹೆಣ್ಣೂರು ಕ್ರಾಸ್‌ವರೆಗೆ ಪ್ರಯಾಣಿಸಿದರು. ರಾಹುಲ್‌ಗೆ ಮಹಿಳೆಯೊಬ್ಬರು ತಮ್ಮ ಸೀಟು ಬಿಟ್ಟುಕೊಟ್ಟರು.

ಬಸ್ಸಿನಲ್ಲಿದ್ದ ವಿದ್ಯಾರ್ಥಿಗಳು ಮತ್ತು ಕೆಲಸಕ್ಕೆ ತೆರಳುತ್ತಿದ್ದ ಮಹಿಳೆಯರ ಜೊತೆ ರಾಹುಲ್ ಸಂವಾದ ನಡೆಸಿದರು. ರಾಜ್ಯದ ಅಭಿವೃದ್ಧಿ ಕುರಿತ ಅವರ ದೃಷ್ಟಿಕೋನದ ಬಗ್ಗೆ ಮಾಹಿತಿ ಪಡೆದರು.

‘ಅಗತ್ಯ ವಸ್ತುಗಳ ಬೆಲೆ ಏರಿಕೆ, ಗೃಹಲಕ್ಷ್ಮಿ ಯೋಜನೆ (ಮನೆಯ ಮುಖ್ಯಸ್ಥ ಮಹಿಳೆಗೆ ತಿಂಗಳಿಗೆ ₹2,000), ಸರ್ಕಾರಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದ ಕಾಂಗ್ರೆಸ್‌ನ ‘ಗ್ಯಾರಂಟಿ’ ಯೋಜನೆಗಳ ಕುರಿತು ರಾಹುಲ್ ನಮ್ಮ ಜೊತೆ ಚರ್ಚಿಸಿದರು’ ಎಂದು ಬಸ್ಸಿನಲ್ಲಿದ್ದ ಮಹಿಳೆಯೊಬ್ಬರು ಹೇಳಿದರು.

ಅದಕ್ಕೂ ಮೊದಲು ವಸಂತನಗರದಲ್ಲಿರುವ ಕಾಫಿ ಡೇಗೆ ರಾಹುಲ್ ತೆರಳಿದಾಗ ಅಲ್ಲಿದ್ದ ವಿದ್ಯಾರ್ಥಿನಿಯರುರಾಹುಲ್ ಜೊತೆ ನಿಂತು ಸೆಲ್ಫಿ ತೆಗೆದುಕೊಂಡರು. ವಿದ್ಯಾರ್ಥಿನಿಯೊಬ್ಬಳುಹಿಜಾಬ್ ತೆಗೆದು ಸೆಲ್ಫಿಗೆ ಪೋಸ್ ಕೊಟ್ಟಳು. ‘ಲವ್ ಯು ಸರ್’ ಎಂದ ವಿದ್ಯಾರ್ಥಿನಿಯ ಕೈ ಕುಲುಕಿದ ರಾಹುಲ್, ‘ಲವ್ ಯು ಟೂ’ ಎಂದೂ ಹೇಳಿದರು.

ಮಹದೇಶ್ವರ ಬೆಟ್ಟ: ಪ್ರತಿ ಚುನಾವಣೆಯಲ್ಲೂ ಮತದಾನ ಬಹಿಷ್ಕಾರದ ಮಾತು

ಚುನಾವಣೆ ಬಂದಾಗಷ್ಟೇ ಕುಗ್ರಾಮ ನೆನಪು!

• ಬಿ.ಬಸವರಾಜು

ಹನೂರು (ಚಾಮರಾಜನಗರ ಜಿಲ್ಲೆ): ಸಂಪರ್ಕ ರಸ್ತೆ ಇಲ್ಲ. ಸಾರಿಗೆ ವ್ಯವಸ್ಥೆ, ವಿದ್ಯುತ್, ಆರೋಗ್ಯ ಸೇವೆ, ಪಡಿತರ ಸೌಕರ್ಯವೂ ಇಲ್ಲ. ಆರೋಗ್ಯದ ತುರ್ತು ಪರಿಸ್ಥಿತಿಯಲ್ಲಿ ರೋಗಿಗಳನ್ನು, ಗರ್ಭಿಣಿಯರನ್ನು ಡೋಲಿಯಲ್ಲಿ ಕರೆದೊಯ್ಯಬೇಕು. ಬಹುತೇಕ ಗ್ರಾಮಗಳಲ್ಲಿ ವಿದ್ಯುತ್ ಸೌಲಭ್ಯವಿಲ್ಲದೆ ಸೀಮೆಎಣ್ಣೆ ಬುಡ್ಡಿ ಬೆಳಕಿನಲ್ಲಿಯೇ ನಡೆಯುವ ಜೀವನ...

ರಾಜ್ಯದ ಪ್ರಮುಖ ಧಾರ್ಮಿಕ ಸ್ಥಳವಾದ, ತಾಲ್ಲೂಕಿನ ಮಹದೇಶ್ವರ ಬೆಟ್ಟದ ಆಸುಪಾಸಿನಲ್ಲಿ ಕಾಡಂಚಿನಲ್ಲಿರುವ ಮತ್ತು ದಟ್ಟಾರಣ್ಯದ ಒಳಗಿರುವ ಗ್ರಾಮಗಳ ದುಸ್ಥಿತಿ ಇದು.

ತುಳಸಿಕೆರೆ, ಇಂಡಿಗನತ್ತ, ಮೆಂದಾರೆ, ಮೆದಗನಾಣೆ, ಪಡಸಲನತ್ತ ತೋಕೆರೆ, ತೇಕಾಣೆ, ದೊಡ್ಡಾಣೆ ಸೇರಿದಂತೆ ಇಪ್ಪತ್ತು ಗ್ರಾಮಗಳಲ್ಲಿ ‘ಇಲ್ಲ’ಗಳದ್ದೇ ಕಾರುಬಾರು.



ಮಲೆ ಮಹದೇಶ್ವರ ವನ್ಯಧಾಮದ ವ್ಯಾಪ್ತಿಯೊಳಗಿರುವ ಮೂಲಸೌಕರ್ಯ ವಂಚಿತ ಪಡಸಲನತ್ತ ಗ್ರಾಮ

ಗ್ರಾಮಗಳು ರಕ್ಷಿತಾರಣ್ಯದ ಒಳಗಿರುವುದೇ ಜನರಿಗೆ ಶಾಪ. ಸೌಲಭ್ಯಕ್ಕಾಗಿ ಮನವಿ ಮಾಡಿ ಬೇಸತ್ತು, ಪ್ರತಿಭಟನೆ ನಡೆಸಿ, ಚುನಾವಣಾ ಬಹಿಷ್ಕರಿಸುವುದಾಗಿ ಹೇಳಿದರೂ ಪ್ರಯೋಜನವಾಗಿಲ್ಲ.

ಪ್ರತಿ ಬಾರಿ ಚುನಾವಣೆ ಬಂದಾಗ ಇಲ್ಲಿನ ಜನ ಮತದಾನ ಬಹಿಷ್ಕಾರದ ಬೆದರಿಕೆ ಒಡ್ಡುತ್ತಾರೆ. ಅಧಿಕಾರಿಗಳು, ರಾಜಕೀಯ ಮುಖಂಡರು ಭೇಟಿ ಮಾಡಿ ಮನವೊಲಿಸಲು ಪ್ರಯತ್ನಿಸುತ್ತಾರೆ.

‘ಮತದಾನ ಮುಗಿದು ಫಲಿತಾಂಶದ ನಂತರ ನಮ್ಮನ್ನು ಕೇಳುವವರೇ ಇರುವುದಿಲ್ಲ’ ಎಂದು ತುಳಸಿಕೆರೆ ಮಾದಪ್ಪ ‘ಪ್ರಜಾವಾಣಿ’ಯೊಂದಿಗೆ ಅಳಲು ತೋಡಿಕೊಂಡರು.

‘ಸೌಲಭ್ಯ ಕಲ್ಪಿಸದಿದ್ದರೆ ಮತದಾರ ಗುರುತಿನ ಚೀಟಿ, ಆಧಾರ್ ಕಾರ್ಡ್ ಹಾಗೂ ಪಡಿತರ ಚೀಟಿಗಳನ್ನು ವಾಪಸು ಕೊಡುವುದಾಗಿ ಹೇಳಿ 15 ದಿನಗಳ ಹಿಂದೆ ತಾಲ್ಲೂಕು ಕಚೇರಿ ಮುಂದೆ ಪ್ರತಿಭಟಿಸಿದ್ದೆವು. ಅಧಿಕಾರಿಗಳು ಭರವಸೆ ನೀಡಿದರು. ಆದರೆ ಇದುವರೆಗೂ ಪ್ರಯೋಜನವಾಗಿಲ್ಲ’ ಎಂದು ಇಂಡಿಗನತ್ತ ಗ್ರಾಮದ ಹುಚ್ಚಪ್ಪ ದೂರಿದರು.

‘ಮೂಲಸೌಕರ್ಯ ಕಲ್ಪಿಸುವ ಬಗ್ಗೆ ಗ್ರಾಮಕ್ಕೆ ಬಂದು ಭರವಸೆ ಕೊಡಬೇಕು ಎಂದು ಜಿಲ್ಲಾಧಿಕಾರಿಗಳಿಗೆ ನೇರವಾಗಿ ಮನವಿ ಮಾಡಿದ್ದೆವು. ಆದರೆ, ಅವರು ಬರಲಿಲ್ಲ. ತಹಶೀಲ್ದಾರ್ ಬಂದು ಮತದಾನ ಮಾಡುವಂತೆ ಕೇಳಿಕೊಂಡರು. ಆದರೆ ನಾವು ಜಿಲ್ಲಾಧಿಕಾರಿಗಳೇ ಬರಬೇಕೆಂದು ಪಟ್ಟು ಹಿಡಿದಿದ್ದೇವೆ’ ಎಂದು ಪಡಸಲನತ್ತ ಗ್ರಾಮದ ಮಾದೇಶ್ ತಿಳಿಸಿದರು.

‘ಚುನಾವಣೆ ಮುಗಿದ ಬಳಿಕ ಸೌಲಭ್ಯ ಕೊಡುತ್ತೇವೆ ಎನ್ನುತ್ತಾರೆ. ಆದರೆ, ನಂತರವೂ ನಮ್ಮ ಬದುಕು ಬದಲಾಗುವುದಿಲ್ಲ’ ಎಂದು ವಿಷಾದಿಸಿದರು.

ಹೊಸ ಮೂರು ಮತಗಟ್ಟೆ

ಈ ಗ್ರಾಮದ ಜನ ಮತದಾನಕ್ಕಾಗಿ ಕಿಲೋಮೀಟರುಗಟ್ಟಳೆ ನಡೆಯುವುದನ್ನು ತಪ್ಪಿಸಲು ಜಿಲ್ಲಾಡಳಿತ ಈ ಬಾರಿ ಅರಣ್ಯದೊಳಗಿನ ತುಳಸಿಕೆರೆ, ತೋಕೆರೆ ಹಾಗೂ ಪಾಲಾರ್ ಗ್ರಾಮದಲ್ಲಿ ಮತಗಟ್ಟೆಗಳನ್ನು ಸ್ಥಾಪಿಸಿದೆ.

ಈವರೆಗೂ ತುಳಸಿಕೆರೆ ಹಾಗೂ ತೋಕೆರೆ ಗ್ರಾಮಸ್ಥರು ಮತದಾನಕ್ಕಾಗಿ ನಾಲ್ಕೈದು ಕಿ.ಮೀ ದೂರದ ಇಂಡಿಗನತ್ತ ಗ್ರಾಮಕ್ಕೆ ಹಾಗೂ ಪಾಲಾರ್ ಗ್ರಾಮಸ್ಥರು 20 ಕಿ.ಮೀ ದೂರದ ಮಹದೇಶ್ವರ ಬೆಟ್ಟಕ್ಕೆ ಬರಬೇಕಿತ್ತು.

ಕಾಡಂಚಿನ ಪ್ರದೇಶದ ಜನರಿಗೆ ತೊಂದರೆಯಾಗದಂತೆ ಈ ಬಾರಿ ತೋಕರೆ, ತುಳಸಿಕೆರೆಗಳಲ್ಲಿ ಮತಗಟ್ಟೆಗಳನ್ನು ಸ್ಥಾಪಿಸಿದ್ದೇವೆ

ಡಿ.ಎಸ್.ರಮೇಶ್, ಜಿಲ್ಲಾಧಿಕಾರಿ

ಬೆಂಗಳೂರಿನಿಂದ ಬೀದರ್‌ಗೆ ವಿಶೇಷ ರೈಲು

ಬೀದರ್: ರಾಜ್ಯ ವಿಧಾನಸಭೆ ಚುನಾವಣೆ ಪ್ರಯುಕ್ತ ರಾಜಧಾನಿ ಬೆಂಗಳೂರಿನಿಂದ ಬೀದರ್‌ಗೆ ವಿಶೇಷ ರೈಲಿನ ವ್ಯವಸ್ಥೆ ಮಾಡಲಾಗಿದೆ ಎಂದು ಕೇಂದ್ರದ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬಾ ತಿಳಿಸಿದ್ದಾರೆ.

ರೈಲು ಸಂಖ್ಯೆ 06597 ಮೇ 9ರಂದು ಸಂಜೆ 5ಕ್ಕೆ ಬೆಂಗಳೂರಿನಿಂದ ಹೊರಟು ಯಶವಂತಪುರ, ಯಲಹಂಕ, ಧರ್ಮಾವರಂ ಜಂಕ್ಷನ್, ರಾಯಚೂರ, ಯಾದಗಿರಿ, ವಾಡಿ ಮತ್ತು ಕಲಬುರಗಿ ಮಾರ್ಗವಾಗಿ ಮೇ 10 ರಂದು ಬೆಳಿಗ್ಗೆ 6.09ಕ್ಕೆ ಹುಮನಾಬಾದ್, ಬೆಳಿಗ್ಗೆ 6.30ಕ್ಕೆ ಹಳ್ಳಿಖೇಡ (ಬಿ) ಹಾಗೂ ಬೆಳಿಗ್ಗೆ 7.20ಕ್ಕೆ ಬೀದರ್‌ಗೆ ತಲುಪಲಿದೆ ಎಂದು ಅವರು ಹೇಳಿದ್ದಾರೆ.

ಮೇ 10 ರಂದು ರಾತ್ರಿ 8ಕ್ಕೆ ರೈಲು ಸಂಖ್ಯೆ 06598 ಬೀದರ್‌ನಿಂದ ಹೊರಡಲಿದೆ. ರಾತ್ರಿ 8.55ಕ್ಕೆ ಹಳ್ಳಿಖೇಡ(ಬಿ), ರಾತ್ರಿ 9.15ಕ್ಕೆ ಹುಮನಾಬಾದ್‌ಗೆ ತಲುಪಲಿದೆ. ಬಂದ ಮಾರ್ಗವಾಗಿಯೇ ಮೇ 11 ರಂದು ಬೆಳಿಗ್ಗೆ 10ಕ್ಕೆ ಬೆಂಗಳೂರಿಗೆ ತಲುಪಲಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಂಗಳವಾರ, ಮೇ 9, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 128 | ಪುಟ 26

www.prajavani.net

prajavani.net | prajavani | prajavani | prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಚುನಾವಣೆ: ನಿಖರ ಭವಿಷ್ಯ ಹೇಳಿದರೆ ₹ 10 ಲಕ್ಷ ಬಹುಮಾನ 5

ಕೇರಳ ಸರ್ಕಾರದ ಆದೇಶ: ಲೈಸೆನ್ಸ್ ಇಲ್ಲದ ದೋಣಿ, ಸಾಮರ್ಥ್ಯ ಮೀರಿ ಜನರ ಭರ್ತಿ

'ಅಪಘಾತ: ವಿಮಾ ಪರಿಹಾರ ಏರಿಕೆ' 4

ದೋಣಿ ದುರಂತ: ನ್ಯಾಯಾಂಗ ತನಿಖೆ 6

ಬಹಿರಂಗಕ್ಕೆ ತೆರೆ–ಅಂತರಂಗಕ್ಕೆ ಮೊರೆ • ನಾಯಕರ ಅಬ್ಬರದ ಪ್ರಚಾರ ಮುಕ್ತಾಯ • ಗೆಲುವಿಗೆ ಕೊನೆಕ್ಷಣದ ತಂತ್ರ

ಮತಕ್ಕಾಗಿ ಇನ್ನು ತೆರೆಮರೆ 'ಸಮರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ಸೇರಿದಂತೆ ಕೇಂದ್ರ ಸರ್ಕಾರದ ಅತಿರಥ ಮಹಾರಥರು, ಎಐಸಿಸಿ ಅಧ್ಯಕ್ಷರೂ ಸೇರಿಕೊಂಡಂತೆ ಕಾಂಗ್ರೆಸ್‌ನ ರಾಷ್ಟ್ರೀಯ ನಾಯಕರು, ಜೆಡಿಎಸ್‌ನ ಪ್ರಮುಖರ ಆವಾಸಸ್ಥಾನ-ವಾಗಿದ್ದ ಕರ್ನಾಟಕ, ಚುನಾವಣಾ ಪ್ರಚಾರದ ಮಹಾ ಅಖಾಡವಾಗಿತ್ತು.

ಸೋಮವಾರ ಸಂಜೆ ಬಹಿರಂಗ ಪ್ರಚಾರಕ್ಕೆ ತೆರೆ ಬಿದ್ದಿದ್ದು, ಮತದಾರರ 'ಅಂತರಂಗ'ಕ್ಕೆ ಮೊರೆ ಹೋಗಲು 24ಗಂಟೆಯಷ್ಟೇ ಬಾಕಿ ಉಳಿದಿದೆ. ಇಲ್ಲಿ-ಯಯವರೆಗೆ ಪ್ರಚಾರಕ್ಕೆ ಸೀಮಿತವಾಗಿದ್ದ ರಾಜಕೀಯ ರಂಗ, ಮತದಾರರನ್ನು ದೊಡ್ಡ ಮಟ್ಟದಲ್ಲಿ ಸೆಳೆಯುವ 'ಕಾರ್ಯತಂತ್ರ'ಕ್ಕೆ, ಖರೀದಿಯ ಭರಾಟೆಗೆ ತೆರೆದುಕೊಳ್ಳಲಿದೆ.

'ಕ್ಷೇತ್ರಕ್ಕೆ ತಕ್ಕಂತೆ ದರ'

ರಾಜ್ಯದಲ್ಲಿ ಕೆಲವು ಕ್ಷೇತ್ರಗಳಲ್ಲಿ ಪ್ರತೀ ಮತಕ್ಕೆ ₹ 500ರಿಂದ ₹ 1,000ದವರೆಗೆ ಹಾಗೂ ಗಣಿಗಾರಿಕೆ ಪ್ರದೇಶಗಳು, ಮಹಾ ನಗರಗಳು ಸೇರಿದಂತೆ ಯಥೇಚ್ಛ ಸಂಪನ್ಮೂ-ಲವಿರುವ ಕ್ಷೇತ್ರಗಳಲ್ಲಿ ಪ್ರತೀ ಮತದಾರರಿಗೆ ₹ 10,000ದವರೆಗೂ ಆಮಿಷ ಒಡ್ಡಲು ಅಭ್ಯರ್ಥಿಗಳು ತಯಾರಿ ನಡೆಸಿದ್ದಾರೆ ಎಂಬ ಮಾಹಿತಿ ರಾಜಕೀಯ ಪಕ್ಷಗಳ ಕಾರ್ಯಕರ್ತರ ವಲಯದಲ್ಲೇ ಕೇಳಿಬರುತ್ತಿದೆ.

ಮಂಗಳವಾರ ಮನೆ, ಮನೆ ಪ್ರಚಾರಕ್ಕಷ್ಟೇ ಅವಕಾಶವಿದೆ. ಇಲ್ಲಿಯವರೆಗೆ ಕೊನೆಯ ಕ್ಷಣಗಳಲ್ಲಿ ಆಮಿಷವೊಡ್ಡಿ ಮತದಾರರನ್ನು ಸೆಳೆಯುವ ಪ್ರಯತ್ನ ಚುರುಕಾಗಲಿದೆ. ತೀವ್ರ ಸ್ಪರ್ಧೆ ಇರುವ ಕಣಗಳಲ್ಲಿ ಮತ ಖರೀದಿಯ ಮೂಲಕವೇ ಗೆಲುವನ್ನು ದಕ್ಕಿಸಿಕೊಳ್ಳಲು ರಾಜಕೀಯ ನಾಯಕರು ಪೈಪೋಟಿಗೆ ಇಳಿದಿದ್ದಾರೆ ಎಂಬ ಮಾಹಿತಿ ವಿವಿಧ ಕ್ಷೇತ್ರಗಳಿಂದ ಲಭ್ಯವಾಗಿದೆ.

ರಾಜಕೀಯ ಪಕ್ಷಗಳು ಕೆಲವು ತಿಂಗಳ ಹಿಂದಿನಿಂದಲೇ ಚುನಾವಣಾ ತಯಾರಿಗೆ ಇಳಿದಿದ್ದವು. ಜನಸಂಕಲ್ಪ ಯಾತ್ರೆ, ಪ್ರಜಾಧ್ವನಿ ಯಾತ್ರೆ, ಪಂಚರತ್ನ ಯಾತ್ರೆಗಳ ಮೂಲಕ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಮೂರೂ ಪಕ್ಷಗಳು ಮತದಾರರನ್ನು ತಲುಪುವ ಪ್ರಯತ್ನ ಆರಂಭಿಸಿದ್ದವು. ಕರ್ನಾಟಕ ರಾಷ್ಟ್ರ ಸಮಿತಿ, ಆಮ್ ಆದ್ಮಿ ಪಕ್ಷ (ಆಪ್) ಕೂಡ ವಿಭಿನ್ನ ಮಾದರಿಯಲ್ಲಿ ಪ್ರಚಾರಕ್ಕೆ ಚಾಲನೆ ನೀಡಿದ್ದವು.

ಮಾರ್ಚ್ 29ರಂದು ಚುನಾವಣಾ ವೇಳಾಪಟ್ಟಿ ಪ್ರಕಟವಾದ ಬಳಿಕ ಘಟಾನುಘಟಿ ನಾಯಕರ ರಂಗ-ಪ್ರವೇಶದೊಂದಿಗೆ ಚುನಾವಣಾ ಕಣ ರಂಗೇರಿತ್ತು. ಪ್ರಧಾನಿ ಸೇರಿದಂತೆ ಕೇಂದ್ರದ ಸಂಪುಟದ ಬಹುತೇಕ ಸದಸ್ಯರು, ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ರಾಜ್ಯದಲ್ಲಿ ಬಿಜೆಪಿ ಪರ ಅಲೆ ಎಬ್ಬಿಸುವ ಪ್ರಯತ್ನ ಮಾಡಿದ್ದರು. ಎಐಸಿಸಿ ಪ್ರಮುಖರ ಇಡೀ ತಂಡ, ಕಾಂಗ್ರೆಸ್ ಅಧಿಕಾರದಲ್ಲಿರುವ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು 'ಕೈ' ಪರ ಮತದಾರರನ್ನು ಸೆಳೆಯಲು ಯತ್ನಿಸಿದ್ದರು. ಜೆಡಿಎಸ್ ವರಿಷ್ಠರ ಕುಟುಂಬದ ಬಹುತೇಕರು ಎಡೆಬಿಡದ ಪ್ರಚಾರದಲ್ಲಿ ನಿರತರಾಗಿದ್ದರು.

ಹಲವು ತಿಂಗಳುಗಳಿಂದ ಚುನಾವಣಾ ಕಾರ್ಯತಂತ್ರ ರೂಪಿಸುವುದರಲ್ಲಿ ಮಗ್ನವಾಗಿದ್ದ ಕಾಂಗ್ರೆಸ್ ಮತ್ತು ಬಿಜೆಪಿಯ ಚುನಾವಣಾ 'ವಾರ್ ರೂಂ'ಗಳು ಪ್ರಚಾರದ ಕೊನೆಯ ಹಂತದಲ್ಲಿ ಮತದಾರರ ಮನ ಬದಲಿಸಲು ಹೊಸ ಹೊಸ ದಾಳಗಳನ್ನು ಉರುಳಿಸಿದವು.

ಆಮಿಷದ ಆತಂಕ: ಈ ಬಾರಿ ಮತದಾರರಿಗೆ ಆಮಿಷ ಒಡ್ಡಲು ಚುನಾವಣೆ ಘೋಷಣೆಗೂ ಮುನ್ನವೇ ಹಲವರು ತಯಾರಿ ಆರಂಭಿಸಿದ್ದರು. ವೇಳಾಪಟ್ಟಿ ಪ್ರಕಟವಾಗುವ ಮುನ್ನವೇ ರಾಜ್ಯದ ವಿವಿಧೆಡೆ ಕುಕ್ಕರ್, ತವಾ, ಸೀರೆ, ಟಿ.ವಿ, ಆಹಾರ ಪದಾರ್ಥಗಳ ಕಿಟ್, ನಗದು ವಶಪಡಿಸಿಕೊಳ್ಳಲಾಗಿತ್ತು.

ನೀತಿಸಂಹಿತೆ ಜಾರಿಯಾದ ಬಳಿಕ ಜಾಗೃತ ದಳಗಳು ಚುರುಕಾಗಿದ್ದವು. ಹಿಂದಿನ ಎಲ್ಲ ಚುನಾವಣೆಗಳಿಗೆ ಹೋಲಿಸಿದರೆ ಚುನಾವಣಾ ಅಕ್ರಮ ತಡೆ ಕಾರ್ಯಾಚರಣೆಯಲ್ಲಿ ಈ ಬಾರಿ ದಾಖಲೆ ಪ್ರಮಾಣದ ನಗದು, ಚಿನ್ನ, ಬೆಳ್ಳಿ, ಮದ್ಯ, ಮಾದಕವಸ್ತು ಮತ್ತು ಉಚಿತ ಕೊಡುಗೆಗೆ ಬಳಸುವ ವಿವಿಧ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ವಿವಿಧ ಇಲಾಖೆಗಳು ಮತ್ತು ಜಾಗೃತ ದಳಗಳ ತೀವ್ರ ಕಣ್ಗಾವಲಿನ ನಡುವೆಯೂ ಕೊನೆಯ ಕ್ಷಣಗಳಲ್ಲಿ ಹಣ, ಮದ್ಯ, ಕುಕ್ಕರ್ ಮತ್ತಿತರ ಆಮಿಷವೊಡ್ಡಿ 'ಮತ ಖರೀದಿ' ಪ್ರಯತ್ನ ರಾಜ್ಯದ ಬಹುತೇಕ ಕ್ಷೇತ್ರಗಳಲ್ಲಿ ಜೋರಾಗಿಯೇ ನಡೆಯಬಹುದು ಎಂಬ ಆತಂಕ ಇದೆ.

ಮತ ಖರೀದಿಗೆ ಭಾರಿ ಸಿದ್ಧತೆ ಮಾಡಿಕೊಂಡಿರುವ ಕುರಿತು ವಿವಿಧ ರಾಜಕೀಯ ಪಕ್ಷಗಳ ಕಾರ್ಯಕರ್ತರ ವಲಯದಲ್ಲಿ ಚರ್ಚೆ ಬಿರುಸಾಗಿದೆ. ಸೋಲು–ಗೆಲುವಿನ ಲೆಕ್ಕಾಚಾರ ಆಧರಿಸಿ ಮತದಾನದ ಮುನ್ನಾ ದಿನವಾದ ಮಂಗಳವಾರ ಬೃಹತ್ ಮೊತ್ತ ವ್ಯಯಿಸಲು ಹಲವು ಅಭ್ಯರ್ಥಿಗಳು ಸಿದ್ಧತೆ ಮಾಡಿಕೊಂಡಿದ್ದಾರೆ. ಕೊನೆಯ ಕ್ಷಣದಲ್ಲಿನ 'ಖರೀದಿ ಆಟ'ವೇ ಕೆಲವು ಕ್ಷೇತ್ರಗಳ ಫಲಿತಾಂಶ ಬದಲಿಸುವ ಸಾಧ್ಯತೆಯೂ ಇದೆ.

ಪ್ರಮುಖ ನಾಯಕರ ಚುನಾವಣಾ ಪ್ರಚಾರದ ಪರಿ

(ಸಾರ್ವಜನಿಕ ಸಭೆ / ರೋಡ್ ಶೋ)

ಪಕ್ಷ	ನಾಯಕ	ಸಾರ್ವಜನಿಕ ಸಭೆ	ರೋಡ್ ಶೋ
ಜೆಡಿಎಸ್	ದೇವೇಗೌಡ	50*	
ಜೆಡಿಎಸ್	ಕುಮಾರಸ್ವಾಮಿ	150*	
ಬಿಜೆಪಿ	ನರೇಂದ್ರ ಮೋದಿ	19	6
ಬಿಜೆಪಿ	ಜೆ.ಪಿ.ನಡ್ಡಾ	10	16
ಬಿಜೆಪಿ	ಅಮಿತ್ ಶಾ	16	15
ಬಿಜೆಪಿ	ಯೋಗಿ ಆದಿತ್ಯನಾಥ	9	3
ಬಿಜೆಪಿ	ಬಸವರಾಜ ಬೊಮ್ಮಾಯಿ	4	40
ಬಿಜೆಪಿ	ಯಡಿಯೂರಪ್ಪ	44	0
ಕಾಂಗ್ರೆಸ್	ಸೋನಿಯಾ ಗಾಂಧಿ	1	0
ಕಾಂಗ್ರೆಸ್	ರಾಹುಲ್ ಗಾಂಧಿ	14	4
ಕಾಂಗ್ರೆಸ್	ಪ್ರಿಯಾಂಕಾ ಗಾಂಧಿ	26	8
ಕಾಂಗ್ರೆಸ್	ಮಲ್ಲಿಕಾರ್ಜುನ ಖರ್ಗೆ	25	1
ಕಾಂಗ್ರೆಸ್	ಸಿದ್ದರಾಮಯ್ಯ	50	7
ಕಾಂಗ್ರೆಸ್	ಡಿ.ಕೆ. ಶಿವಕುಮಾರ್	57	35

*ಸಭೆ+ರೋಡ್ ಶೋ

ಚುನಾವಣಾ ಕಣ: ಚರ್ಚೆಯಾದ ಪ್ರಮುಖ ವಿಷಯಗಳು...

ಬಿಜೆಪಿ

- ಈ ಬಾರಿ ನಿರ್ಧಾರ ಬಹುಮತದ ಬಿಜೆಪಿ ಸರ್ಕಾರ
- ಕರ್ನಾಟಕವನ್ನು ದೇಶದ 'ನಂಬರ್ ಒನ್' ರಾಜ್ಯವಾಗಿ ಮಾಡಲು ನೀಲನಕ್ಷೆ
- 'ಡಬಲ್ ಎಂಜಿನ್' ಸರ್ಕಾರದಿಂದ ತ್ವರಿತಗತಿಯ ಅಭಿವೃದ್ಧಿ
- ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಶೇಕಡ 85ರಷ್ಟು ಭ್ರಷ್ಟಾಚಾರ
- ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಪಿಎಫ್‌ಐ ಮತ್ತೆ ಚಿಗುರಿಕೊಳ್ಳುತ್ತದೆ
- ಒಕ್ಕಲಿಗ–ಲಿಂಗಾಯತ ನೀಡಿದ ಮೀಸಲಾತಿ ಕಿತ್ತು ಮುಸ್ಲಿಮರಿಗೆ ನೀಡುವ ಕಾಂಗ್ರೆಸ್
- ಬಜರಂಗದಳ ನಿಷೇಧದ ಕಾಂಗ್ರೆಸ್ ಪ್ರಸ್ತಾವಕ್ಕೆ ತಿರುಗೇಟು
- ಲಿಂಗಾಯತ ಮುಖ್ಯಮಂತ್ರಿ ಪ್ರಸ್ತಾವ
- 'ನರೇಂದ್ರಮೋದಿ ವಿಷದ ಹಾವು ಎಂಬ ಖರ್ಗೆ ಹೇಳಿಕೆ ವಿವಾದ

ಕಾಂಗ್ರೆಸ್

- ಐದು ಗ್ಯಾರಂಟಿ ಯೋಜನೆಗಳು. ಮೊದಲ ಸಚಿವ ಸಂಪುಟ ಸಭೆಯಲ್ಲೇ ಜಾರಿ
- ಬಿಜೆಪಿ ನೇತೃತ್ವದ ಸರ್ಕಾರ 'ಶೇ 40ರ ಕಮಿಷನ್ ಸರ್ಕಾರ'
- ಬಿಜೆಪಿ ಸರ್ಕಾರದ ವಿರುದ್ಧ ಆಡಳಿತ ವಿರೋಧಿ ಅಲೆ
- ಬೆಲೆ ಏರಿಕೆ, ನಿರುದ್ಯೋಗ, ರೈತರ ಸಮಸ್ಯೆ
- ಬಿಜೆಪಿಯಿಂದ ಲಿಂಗಾಯತ ಸಮುದಾಯದ ನಿರ್ಲಕ್ಷ್ಯ
- ನಂದಿನಿ ಜಾಗದಲ್ಲಿ ಅಮೂಲ್ ಜತೆ ವಿಲೀನಕ್ಕೆ ಯತ್ನ
- ಮಲ್ಲಿಕಾರ್ಜುನ ಖರ್ಗೆ ಕುಟುಂಬದ ಹತ್ಯೆಗೆ ಬಿಜೆಪಿ ಅಭ್ಯರ್ಥಿ ಮಣಿಕಂಠ ರಾಠೋಡ್ ಸಂಚು
- ಡಬಲ್ ಎಂಜಿನ್ ಅಲ್ಲ ಟ್ರಬಲ್ ಎಂಜಿನ್ ಸರ್ಕಾರ
- ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಬಜರಂಗದಳ ನಿಷೇಧ ಉಲ್ಲೇಖ

ಜೆಡಿಎಸ್

- ಪಂಚರತ್ನ ಯೋಜನೆಗಳ ಅನುಷ್ಠಾನದ ಭರವಸೆ
- ಸ್ತ್ರೀ ಶಕ್ತಿ ಗುಂಪುಗಳ ಸಾಲ ಮನ್ನಾ ಭರವಸೆ
- ಬಡ ಕುಟುಂಬಗಳಿಗೆ ವರ್ಷಕ್ಕೆ ಐದು ಸಿಲಿಂಡರ್ ಉಚಿತ
- ಸಾಮಾಜಿಕ ಪಿಂಚಣಿ ಹೆಚ್ಚಳ ಮಾಡುವ ಭರವಸೆ
- ನಂದಿನಿ ನಮ್ಮದು, ಅದನ್ನು ಉಳಿಸುವುದು ನಮ್ಮ ಹೊಣೆ
- ಕರ್ನಾಟಕವನ್ನು ಶೋಷಣೆ ಮಾಡುತ್ತಿರುವಬಿಜೆಪಿ, ಕಾಂಗ್ರೆಸ್
- ಇರುವುದೊಂದೇ ಪರಿಹಾರ, ಪ್ರಾದೇಶಿಕ ಪಕ್ಷಕ್ಕೆ ಅಧಿಕಾರ ಎನ್ನುವ ಘೋಷವಾಕ್ಯ
- ಸರ್ವರಿಗೂ ಉಚಿತ ಆರೋಗ್ಯ, ಸರ್ವರ ಮಕ್ಕಳಿಗೂ ಪಿಯುಸಿ ವರೆಗೆ ಉಚಿತ ಶಿಕ್ಷಣದ ಭರವಸೆ

'ದಿ ಕೇರಳ ಸ್ಟೋರಿ' ತಗ್ಗದ ವಿವಾದ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿವಾದಿತ 'ದಿ ಕೇರಳ ಸ್ಟೋರಿ' ಚಲನಚಿತ್ರ ಪ್ರದರ್ಶನ-ಕ್ಕೆ ತಮಿಳುನಾಡಿನಲ್ಲಿ ನಿಷೇಧ ಹೇರಿದ ಬೆನ್ನಲ್ಲೇ, ಪಶ್ಚಿಮ ಬಂಗಾಳ ಸರ್ಕಾರವೂ ಸೋಮವಾರ ಚಿತ್ರ ಪ್ರದರ್ಶನಕ್ಕೆ ನಿಷೇಧ ಹೇರಿ ಆದೇಶ ಹೊರಡಿಸಿದೆ. ಕೇರಳ ಸೇರಿದಂತೆ ಉಳಿದ ರಾಜ್ಯಗಳಲ್ಲಿ ಚಿತ್ರಪ್ರ-ದರ್ಶನ ಸುಸೂತ್ರವಾಗಿ ಸಾಗಿದೆ.

'ನಾನು ಈ ಚಿತ್ರವನ್ನು ನೋಡಿದ್ದೇನೆ. ಜನರನ್ನು ವಿಭಜಿಸುವ, ಅವರನ್ನು ಅಪಮಾನಿಸುವ ಬಿಜೆಪಿಯ ಹಲವು ಯತ್ನಗಳಲ್ಲಿ ಇದೂ ಒಂದು' ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಪ್ರತಿಕ್ರಿಯಿಸಿದರು.

'ಅವರು 'ಕಾಶ್ಮೀರಿ ಫೈಲ್ಸ್' ಚಿತ್ರ ಮಾಡಿದ್ದೇಕೆ? ಸಮಾಜದ ಒಂದು ವರ್ಗ ಅವಮಾನಿಸಲು. ಇದೇನಿದು ಕೇರಳ ಫೈಲ್ಸ್? ಕಾಶ್ಮೀರ ಜನರಿಗೆ ಅಪಮಾನಿಸಲು ಕಾಶ್ಮೀರಿ ಫೈಲ್ಸ್ ಮಾಡಿದರು. ಈಗ ಕೇರಳದ ಹೆಸರು ಕೆಡಿಸುತ್ತಿದ್ದಾರೆ. ಅವಮಾನಿಸುವ ತಮ್ಮ ಶೈಲಿಯನ್ನು ನಿತ್ಯವು ಮುಂದು-ವರಿಸಿದ್ದಾರೆ' ಎಂದು ಬಿಜೆಪಿ ವಿರುದ್ಧ ಹರಿಹಾಯ್ದರು.

ಮುಖ್ಯಾಂಶಗಳು

- ಜನರ ಅಪಮಾನಿಸುವ ಯತ್ನ –ಮಮತಾ ಟೀಕೆ
- ಕೋರ್ಟ್‌ನಲ್ಲಿ ಪ್ರಶ್ನಿಸುತ್ತೇವೆ –ಚಿತ್ರ ನಿರ್ಮಾಪಕ
- ಕೇರಳದಲ್ಲಿ ಸುಸೂತ್ರ, ಗುಜರಾತ್‌ನಲ್ಲಿ ಸಿಗದ ಸ್ಪಂದನೆ

6ನೇ ಪುಟ ನೋಡಿ

ಪರಪ್ಪನ ಅಗ್ರಹಾರ ಕಾರಾಗೃಹ

ಊಟದ ಪ್ಲೇಟ್‌ನಿಂದ ಚಾಕು!

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮೇಲೆ ಸಿಸಿಬಿ ಪೊಲೀಸರು ಸೋಮವಾರ ಬೆಳಿಗ್ಗೆ ದಾಳಿ ಮಾಡಿದ್ದು, ಕೈದಿಗಳು ಅಕ್ರಮವಾಗಿ ಬಚ್ಚಿಟ್ಟಿದ್ದ ಹಲವು ನಿಷೇಧಿತ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ.

ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಅಪರಾಧ ಹಿನ್ನೆಲೆ-ಯುಳ್ಳವರು ಹಾಗೂ ರೌಡಿಗಳ ಮೇಲೆ ಸಿಸಿಬಿ ಪೊಲೀಸರು ನಿಗಾ ವಹಿಸಿದ್ದಾರೆ. ಕೆಲ ಕೈದಿಗಳು ಜೈಲಿನಿಂದಲೇ ಮತದಾರರಿಗೆ ಕರೆ ಮಾಡಿ ಬೆದರಿಸುವ ಹಾಗೂ ತಮ್ಮ ಪರ ಅಭ್ಯರ್ಥಿಗಳಿಗೆ ಮತ ಚಲಾಯಿಸುವಂತೆ ತಾಕೀತು ಮಾಡುವ ಸಾಧ್ಯತೆ ಬಗ್ಗೆ ಮಾಹಿತಿ ಸಂಗ್ರಹಿಸಿದ್ದ ಸಿಸಿಬಿ ಪೊಲೀಸರು, ಜಂಟಿ ಕಮಿಷನರ್ ಎಸ್‌.ಡಿ. ಶರಣಪ್ಪ ನೇತೃತ್ವದಲ್ಲಿ ದಾಳಿ ಮಾಡಿದರು.

'ವಿಶೇಷ ತಂಡಗಳನ್ನು ರಚಿಸಿ ಕಾರಾಗೃಹದ ಮೇಲೆ ದಾಳಿ ಮಾಡಲಾಯಿತು. ಜೈಲಿನೊಳಗಿನ ಎಲ್ಲ ಬ್ಯಾರಕ್‌ಗಳ ಕೊಠಡಿಗಳು, ಮೈದಾನ ಹಾಗೂ ಇತರೆ ಜಾಗಗಳಲ್ಲಿ ಶೋಧ ನಡೆಸಲಾಯಿತು. ಕೈದಿಗಳು ಇರುವ ಕೊಠಡಿಗಳಲ್ಲೂ ಪರಿಶೀಲನೆ ನಡೆಸಲಾಯಿತು' ಎಂದು ಸಿಸಿಬಿ ಅಧಿಕಾರಿಯೊಬ್ಬರು ಹೇಳಿದರು.

4ನೇ ಪುಟ ನೋಡಿ

ಓದುಗರ ಗಮನಕ್ಕೆ

ಇಂದಿನ ಸಂಚಿಕೆಯು ಎರಡು ಭಾಗಗಳಲ್ಲಿ ಪ್ರಕಟವಾಗಿದೆ.

ಸೋನಿಯಾ, ನಳಿನ್‌ಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣಾ ನೀತಿಸಂಹಿತೆ ಉಲ್ಲಂಘಿಸಿ ಹೇಳಿಕೆ ನೀಡಿರುವುದು ಹಾಗೂ ಜಾಹೀರಾತು ಪ್ರಕಟಿಸಿದ ಆರೋಪದ ಮೇಲೆ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರಿಗೆ ಕೇಂದ್ರ ಚುನಾವಣಾ ಆಯೋಗ ನೋಟಿಸ್ ಜಾರಿಗೊಳಿಸಿದೆ.

'ಸೋನಿಯಾ ಗಾಂಧಿ ಕರ್ನಾಟಕದ ಅಸ್ಮಿತೆ ಮತ್ತು ಸಾರ್ವಭೌಮತ್ವದ ವಿರುದ್ಧ ಮಾತನಾಡಿದ್ದು, ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದು ಒತ್ತಾಯಿಸಿ ಬಿಜೆಪಿ ಮುಖಂಡರಾದ ಭೂಪೇಂದರ್ ಯಾದವ್, ಡಾ. ಜಿತೇಂದ್ರ ಸಿಂಗ್, ತರುಣ್ ಸಿಂಗ್, ಅನಿಲ್ ಬಲೂನಿ ಮತ್ತು ಓಂ ಪಾಠಕ್ ನೇತೃತ್ವದ ನಿಯೋಗ ಆಯೋಗಕ್ಕೆ ದೂರು ನೀಡಿತ್ತು. ಬಿಜೆಪಿ ರಾಜ್ಯ ಚುನಾವಣಾ ನಿರ್ವಹಣಾ ಸಮಿತಿ ಸಂಚಾಲಕಿ ಶೋಭಾ ಕರಂದ್ಲಾಜೆ ಕೂಡ ರಾಜ್ಯ ಮುಖ್ಯ ಚುನಾವಣಾಧಿಕಾರಿಯವ-ರಿಗೆ ದೂರು ಸಲ್ಲಿಸಿದ್ದರು.

ಉತ್ತರಿಸಲು ಸೂಚನೆ: ವಿವಿಧ ಪತ್ರಿಕೆಗಳ ಸೋಮವಾರದ ಸಂಚಿಕೆಯಲ್ಲಿ ಬಿಜೆಪಿ ರಾಜ್ಯ ಘಟಕವು ಪ್ರಕಟಿಸಿದ್ದ ಜಾಹೀರಾತಿನಲ್ಲಿ ಮಾದರಿ ನೀತಿಸಂಹಿತೆ ಉಲ್ಲಂಘಿಸಿದೆ ಎಂದು ಕಾಂಗ್ರೆಸ್ ದೂರು ನೀಡಿದ್ದು, ಮಂಗಳವಾರ ರಾತ್ರಿ 8 ಗಂಟೆಯೊಳಗೆ ಉತ್ತರಿಸುವಂತೆ ಸೂಚಿಸಿದೆ.

'ಡೀಸೆಲ್ ವಾಹನ ನಿಷೇಧಿಸಿ'

ನವದೆಹಲಿ (ಪಿಟಿಐ): ದೊಡ್ಡ ನಗರಗಳಲ್ಲಿ ಡೀಸೆಲ್ ಚಾಲಿತ ವಾಹನಗಳ ಬಳಕೆಯನ್ನು 2027ಕ್ಕೂ ಮೊದಲು ನಿಷೇಧಿಸಬೇಕು ಎಂದು ಸಮಿತಿಯೊಂದು ಹೇಳಿದೆ.

8



ಮತದಾರರಿಗೆ ಕಾದಿಹೆನು

ಕೊಪ್ಪಳದ ಭಾಗ್ಯನಗರದಲ್ಲಿ ವರ್ಲಿ ಕಲೆಯಿಂದ ಅಲಂಕೃತಗೊಂಡ ಮತಗಟ್ಟೆಯ ನೋಟ

ಪ್ರಜಾವಾಣಿ ಚಿತ್ರ: ಭರತ್ ಕಂದಕೂರ

ನದಿಯಲ್ಲಿ ಮುಳುಗಿ ಇಬ್ಬರು ಬಾಲಕಿಯರ ಸಾವು

ಪ್ರಜಾವಾಣಿ ವಾರ್ತೆ

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ ಜಿಲ್ಲೆ): ಕಡಬ ತಾಲ್ಲೂಕಿನ ಬಳ್ಪ ಸಮೀಪದ ಕೇನ್ಯದ ಕಣ್ಕಲ್ ಕುಮಾರಧಾರ ನದಿಯಲ್ಲಿ ಮುಳುಗಿ ಬಾಲಕಿಯರಿಬ್ಬರು ಸೋಮವಾರ ಸಂಜೆ ಮೃತಪಟ್ಟಿದ್ದಾರೆ.

ಬೆಂಗಳೂರಿನ ಸತೀಶ್ ಅಮ್ಮಣ್ಣಾಯ ಅವರ ಪುತ್ರಿಯರಾದ ಆವಂತಿಕಾ (16) ಹಾಗೂ ಅಂಕಿತಾ (13) ಮೃತರು. ಇಬ್ಬರ ಮೃತದೇಹಗಳನ್ನು ಅಗ್ನಿಶಾಮಕ ದಳದ ಸಿಬ್ಬಂದಿ ನೀರಿನಿಂದ ಹೊರಗೆ ತೆಗೆದಿದ್ದಾರೆ.

ಘಟನೆ ವಿವರ: ಕೇನ್ಯ ಉದಯ ಅಮ್ಮಣ್ಣಾಯ ಅವರ ಸಹೋದರ ಸತೀಶ್ ಅಮ್ಮಣ್ಣಾಯ ಅವರು ಕೆಲ ವರ್ಷಗಳಿಂದ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಸತೀಶ್ ಅವರ ಇಬ್ಬರು ಹೆಣ್ಣು ಮಕ್ಕಳು ಶಾಲೆಗೆ ರಜೆ ಇದ್ದುದರಿಂದ ಬಳ್ಪದ ಚಿಕ್ಕಪ್ಪನ ಮನೆಗೆ ಬಂದಿದ್ದರು.

4ನೇ ಪುಟ ನೋಡಿ

2020ನೇ ಸಾಲಿನ ಪುಸ್ತಕ ಆಯ್ಕೆ ಅಂತಿಮಗೊಳಿಸಿದ್ದ ಸಮಿತಿ

ವರ್ಷ ಕಳೆದರೂ ಪುಸ್ತಕ ಖರೀದಿ ಇಲ್ಲ

• ವರುಣ ಹೆಗಡೆ

ಬೆಂಗಳೂರು: ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಏಕಗವಾಕ್ಷಿ ಯೋಜನೆಯಡಿ 2020ನೇ ಸಾಲಿನ ಪುಸ್ತಕಗಳ ಆಯ್ಕೆ ಪ್ರಕ್ರಿಯೆ ನಡೆದು ವರ್ಷವಾದರೂ ಖರೀದಿ ನಡೆದಿಲ್ಲ. ಇದರಿಂದ ಪ್ರಕಾಶಕರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಸಾಹಿತಿ ದೊಡ್ಡರಂಗೇಗೌಡ ನೇತೃತ್ವದ ಪುಸ್ತಕ ಆಯ್ಕೆ ಸಮಿತಿ ಕಳೆದ ವರ್ಷವೇ ಪುಸ್ತಕಗಳ ಪಟ್ಟಿಯನ್ನು ಅಂತಿಮಗೊಳಿಸಿ, ಇಲಾಖೆಗೆ ಸಲ್ಲಿಸಿತ್ತು. ಇದಕ್ಕೆ ಅನುಮೋದನೆ ನೀಡಿ, ಅನುದಾನ ಬಿಡುಗಡೆಗೆ ಸಾಹಿತಿಗಳು ಹಾಗೂ ಪ್ರಕಾಶಕರು ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದರು.

ಮೀಸಲು ಅನುದಾನ ಅನ್ಯ ಕಾರ್ಯಗಳಿಗೆ ಬಳಕೆ ಸೇರಿ ವಿವಿಧ ಕಾರಣಗಳಿಂದ ಪುಸ್ತಕ ಖರೀದಿ ಪ್ರಕ್ರಿಯೆಯನ್ನು ಮುಂದೂಡುತ್ತಾ ಬರಲಾಗಿತ್ತು. ದೊಡ್ಡರಂಗೇಗೌಡ ಅವರ ಸಮಿತಿಯ ಕಾರ್ಯಾವಧಿ ಮುಗಿದಿದ್ದು, 2023ರ ಜನವರಿಯಿಂದ ಹೊಸ ಸಮಿತಿ ರಚನೆಯಾಗಿದೆ. ಈ ಸಮಿತಿ 2021ನೇ ಸಾಲಿನ ಆಯ್ಕೆ ಪ್ರಕ್ರಿಯೆ ನಡೆಸಬೇಕಿದೆ.

ಸರ್ಕಾರದ ಮುಂದಿರುವ ಪುಸ್ತಕ ಪಟ್ಟಿಗೆ ಈಗ ಚುನಾವಣೆ ನೀತಿ ಸಂಹಿತೆ ಕಾರಣ ನೀಡಿ, ತಡೆ ಹಿಡಿಯಲಾಗಿದೆ. ಹೊಸ ಸರ್ಕಾರ ರಚನೆಯಾದ ಬಳಿಕ ಅನುಮೋದನೆ ಪಡೆದು, ಖರೀದಿ ಪ್ರಕ್ರಿಯೆ ನಡೆಸಬೇಕಿದೆ. ಇದರಿಂದ 2021ನೇ ಸಾಲಿನ ಪುಸ್ತಕ ಖರೀದಿ ಪ್ರಕ್ರಿಯೆಗೂ ಹಿನ್ನಡೆಯಾಗಬಹುದು ಎಂಬ ಕಳವಳವನ್ನು ಪ್ರಕಾಶಕರು ವ್ಯಕ್ತ-ಪಡಿಸಿದ್ದಾರೆ.

ಪರಿಷ್ಕರಣೆಯಾಗದ ದರ: ಕಾಗದ ಹಾಗೂ ಮುದ್ರಣದ ದರ ಏರಿಕೆಯ ಕಾರಣ ಪ್ರಕಾಶಕರು, ಗ್ರಂಥಾಲಯ ಇಲಾಖೆ ಖರೀದಿಸುವ ಪುಸ್ತಕಗಳ ಪುಟದ ದರ ಪರಿಷ್ಕರಿಸುವಂತೆ ಸರ್ಕಾರವನ್ನು ಆಗ್ರಹಿಸುತ್ತಾ ಬಂದಿದ್ದಾರೆ. ಸದ್ಯ ಪುಟವೊಂದಕ್ಕೆ 70 ಪೈಸೆಯಿದ್ದು, 30 ಪೈಸೆ ಹೆಚ್ಚಿಸಬೇಕು ಎನ್ನುವುದು ಪ್ರಕಾಶಕರ ಒತ್ತಾಯ. ಆಗ ಪುಟವೊಂದಕ್ಕೆ ₹1 ನಿಗದಿಯಾಗಲಿದೆ.ಆದರೆ, ಸರ್ಕಾರವು ಈ ಪ್ರಸ್ತಾವ ತಿರಸ್ಕರಿಸಿತ್ತು.

'ಕನ್ನಡ ಪುಸ್ತಕೋದ್ಯಮ ಸಂಕಷ್ಟದಲ್ಲಿದೆ. ಸದ್ಯದ ಸ್ಥಿತಿಯಲ್ಲಿ, ಹಾಕಿದ ಬಂಡವಾಳ ವರ್ಷಗಳ ಬಳಿಕ ಆದಾಯವಾಗಿ ಮರಳಿ ಬಂದರೆ ಪುಣ್ಯ ಎಂಬ ವಾತಾವರಣವಿದೆ. 2020ನೇ ಸಾಲಿನ ಪಟ್ಟಿಗೆ ಈಗ ನೀತಿ ಸಂಹಿತೆ ಕಾರಣ ನೀಡಲಾಗುತ್ತಿದೆ' ಎಂದು ಕರ್ನಾಟಕ ಪ್ರಕಾಶಕರ ಸಂಘದ ಜಂಟಿ ಕಾರ್ಯದರ್ಶಿ ಸೃಷ್ಟಿ ನಾಗೇಶ್ ಅಸಮಾಧಾನ ವ್ಯಕ್ತಪಡಿಸಿದರು.

'2020ನೇ ಸಾಲಿನ ಪುಸ್ತಕ ಆಯ್ಕೆ ಪಟ್ಟಿ ಸರ್ಕಾರದ ಮಟ್ಟದಲ್ಲಿದೆ. ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದೆ. ಹೊಸ ಸರ್ಕಾರ ರಚನೆ ಬಳಿಕ ಅನುಮೋದನೆ ಸಿಗಬಹುದು' ಎಂದು ಗ್ರಂಥಾಲಯ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

₹15 ಕೋಟಿ ಅಗತ್ಯ

ರಾಜ್ಯದಲ್ಲಿ ಸುಮಾರು 500 ಪ್ರಕಾಶನ ಸಂಸ್ಥೆಗಳಿವೆ. ಕೆಲ ಲೇಖಕರೂ ಪ್ರಕಾಶನ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ವಾರ್ಷಿಕ ಸುಮಾರು 8 ಸಾವಿರ ಪುಸ್ತಕಗಳು ಪ್ರಕಟವಾಗುತ್ತಿವೆ. ಹೆಚ್ಚಿನ ಪ್ರಕಾಶಕರು ಇಲಾಖೆಯ ಸಗಟು ಖರೀದಿಯನ್ನೇ ಅವಲಂಬಿಸಿದ್ದಾರೆ. ಏಕಗವಾಕ್ಷಿ ಯೋಜನೆಯಡಿ ಆಯ್ಕೆಯಾದ ಪ್ರತಿ ಶೀರ್ಷಿಕೆಯ 300 ಪ್ರತಿಗಳನ್ನು ಇಲಾಖೆ ಖರೀದಿಸಲಿದೆ. ಇದಕ್ಕಾಗಿ ಪ್ರತಿವರ್ಷ ₹15 ಕೋಟಿ ವೆಚ್ಚ ಮಾಡಲಾಗುತ್ತಿದೆ. ನೆರೆಯ ರಾಜ್ಯಗಳಾದ ತಮಿಳುನಾಡು ಹಾಗೂ ಕೇರಳದಲ್ಲಿ 500 ಪ್ರತಿಗಳನ್ನು ಖರೀದಿ ಮಾಡಲಾಗುತ್ತಿದೆ.



ಪಟ್ಟಿಯನ್ನು ಗ್ರಂಥಾಲಯ ಇಲಾಖೆಗೆ ಸಲ್ಲಿಸಿ, ಅನುದಾನ ಬಿಡುಗಡೆಗೆ ಮನವಿ ಮಾಡಿಕೊಳ್ಳಲಾಗಿತ್ತು. ಆಡಳಿತಾ ರೂಢರಿಗೆ ಸಾಹಿತ್ಯ ಕಾಳಜಿ ಇರಬೇಕು

ದೊಡ್ಡರಂಗೇಗೌಡ, ಗ್ರಂಥಾಲಯ ಇಲಾಖೆ ಆಯ್ಕೆ ಸಮಿತಿಯ ನಿಕಟಪೂರ್ವ ಅಧ್ಯಕ್ಷ



ಹೆಚ್ಚಿನ ಪ್ರಕಾಶಕರು ಗ್ರಂಥಾಲಯ ಇಲಾಖೆಯ ಪುಸ್ತಕ ಖರೀದಿಯನ್ನೇ ಅವಲಂಬಿಸಿದ್ದಾರೆ. ಖರೀದಿಯನ್ನು ಈ ರೀತಿ ವಿಳಂಬ ಮಾಡಿದಲ್ಲಿ ಪ್ರಕಾಶಕರು ಸಂಕಷ್ಟಕ್ಕೆ ಸಿಲುಕುತ್ತಾರೆ

ಪ್ರಕಾಶ್ ಕಂಬತ್ತಳ್ಳಿ, ಕರ್ನಾಟಕ ಪ್ರಕಾಶಕರ ಸಂಘದ ಅಧ್ಯಕ್ಷ

ವೃದ್ಧರ ಆರೈಕೆಗೆ ಆದ್ಯತೆ ಅಗತ್ಯ: ಡಾ. ದೇವಿಪ್ರಸಾದ್ ಶೆಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದಲ್ಲಿ 2050ರ ವೇಳೆಗೆ 60 ವರ್ಷ ಮೇಲ್ಪಟ್ಟವರ ಸಂಖ್ಯೆ ಮೂರು ಪಟ್ಟು ಹೆಚ್ಚಾಗಲಿದೆ. ಆದ್ದರಿಂದ ವೃದ್ಧರ ಆರೈಕೆ ವ್ಯವಸ್ಥೆ ಬಲಪಡಿಸಲು ಆದ್ಯತೆ ನೀಡಬೇಕು' ಎಂದು ನಾರಾಯಣ ಹೆಲ್ತ್ ಅಧ್ಯಕ್ಷ ಡಾ. ದೇವಿಪ್ರಸಾದ್ ಶೆಟ್ಟಿ ಹೇಳಿದರು.

ನಾರಾಯಣ ಹೆಲ್ತ್, ಅಸೋಸಿಯೇಷನ್ ಆಫ್ ಹೆಲ್ತ್‌ಕೇರ್ ಪ್ರೊವೈಡರ್ಸ್ ಇಂಡಿಯಾ (ಎಎಚ್‌ಪಿಐ) ಹಾಗೂ ವಯಾ ವಿಕಾಸ್ ಜಂಟಿಯಾಗಿ ಹಮ್ಮಿಕೊಂಡ ರಾಷ್ಟ್ರೀಯ ಆರೋಗ್ಯ ಸಮಾವೇಶದಲ್ಲಿ ಭಾಗವಹಿಸಿ, ಮಾತನಾಡಿದರು. 'ಗ್ರಾಮೀಣ ಭಾಗದಲ್ಲಿ ವೃದ್ಧರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅವರು ಆರೋಗ್ಯ ಕಾಪಾಡಿಕೊಳ್ಳಲು ಉತ್ತಮ ವೈದ್ಯಕೀಯ ಸೌಲಭ್ಯ ಒದಗಿಸಬೇಕು' ಎಂದರು.

ಎಎಚ್‌ಪಿಐ ಅಧ್ಯಕ್ಷ ಡಾ. ಅಲೆಕ್ಸಾಂಡರ್ ಥಾಮಸ್ ಅವರು ಮಾತನಾಡಿದರು.

ಪಿಂಚಣಿದಾರರ ಮಾಸಿಕ ಸಭೆ 'ಸುಪ್ರೀಂ' ತೀರ್ಪು ಜಾರಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಲ್‌ಬಾಗ್ ಆವರಣದಲ್ಲಿ ಭಾನುವಾರ 'ಇಪಿಎಸ್-95' ಪಿಂಚಣಿದಾರರ ಮಾಸಿಕ ಸಭೆ ನಡೆಯಿತು.

ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಎಸ್ ನಿವೃತ್ತ ನೌಕರರ ಸಂಘದ ಕಾರ್ಯಾಧ್ಯಕ್ಷ ನಂಜುಂಡೇಗೌಡ ಮಾತನಾಡಿ, 'ಇಪಿಎಫ್‌ಒ ಅಧಿಕಾರಿಗಳು ಸುಪ್ರೀಂ ಕೋರ್ಟ್ ತೀರ್ಪನ್ನು ಅನುಷ್ಠಾನಗೊಳಿಸದೇ, ಹತ್ತಾರು ಸುತ್ತೋಲೆಗಳನ್ನು ಹೊರಡಿಸುವ ಮೂಲಕ ತಮ್ಮ ನ್ಯೂನತೆಗಳನ್ನು ಮುಚ್ಚಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ' ಎಂದು ಆರೋಪಿಸಿದರು.



'ನಿವೃತ್ತರ ಬದುಕಿಗೆ ಕನಿಷ್ಠ ಪಿಂಚಣಿ ಸೌಲಭ್ಯ ಸಿಗಬೇಕೆಂದು ದೇಶದಾದ್ಯಂತ ಹೋರಾಟ ನಡೆಸುತ್ತಿರುವ ರಾಷ್ಟ್ರೀಯ ಸಂಘರ್ಷ ಸಮಿತಿಯ ಅಧ್ಯಕ್ಷ ಅಶೋಕ್ ರಾಹುತ್ ಅವರೊಂದಿಗೆ ನಮ್ಮ ಸಂಘಟನೆ ಕೈ ಜೋಡಿಸಿದೆ' ಎಂದರು.

ಸಂಘದ ಉಪಾಧ್ಯಕ್ಷ ಆರ್. ಸುಬ್ಬಣ್ಣ ಮಾತನಾಡಿ, 'ಇಪಿಎಫ್‌ಒ ಅಧಿಕಾರಿಗಳು ಎರಡನೇ ಬಾರಿಗೆ ಆನ್‌ಲೈನ್ ಅರ್ಜಿ ಸಲ್ಲಿಸಲು ಕಾಲಾವಕಾಶ ವಿಸ್ತರಿಸಿದ್ದು, ಅರ್ಜಿ ಸಲ್ಲಿಸದೇ ಇರುವ ನಿವೃತ್ತರೆಲ್ಲರೂ ಅರ್ಜಿ ಸಲ್ಲಿಸಬೇಕು. ಈ ಹಿಂದೆ ತಪ್ಪಾಗಿ ಅರ್ಜಿ ಸಲ್ಲಿಸಿದ್ದರೂ ಅದನ್ನು ಸರಿಪಡಿಸಲು ಅವಕಾಶವಿದೆ. ಪಿಂಚಣಿ ವಿಷಯದಲ್ಲಿ ತಾರ್ಕಿಕ ಅಂತ್ಯ ಕಾಣುವವರೆಗೂ ಹೋರಾಟ ಮುಂದುವರೆಯಲಿದೆ' ಎಂದು ಹೇಳಿದರು.

ಆರ್ ನಾಗರಾಜು, ರುಕ್ಮಿಶ್, ಇದ್ದರು.



ಹೆಬ್ಬಾಳದ ಏಟ್ರಿಯಾ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ 19ನೇ ಘಟಿಕೋತ್ಸವ ಸಮಾರಂಭದಲ್ಲಿ ವಿಟಿಯು ಮಟ್ಟದಲ್ಲಿ 6ನೇ ರ‍್ಯಾಂಕ್ ಗಳಿಸಿದ ವಿದ್ಯಾರ್ಥಿನಿ ಉಜ್ಮಾ ಫಹ್ರೀನ್ ಅವರಿಗೆ ಚಿನ್ನದ ಪದಕ ವಿತರಿಸಲಾಯಿತು. ಡೆಲ್ ಟೆಕ್ನಾಲಜೀಸ್‌ನ ಸಾಫ್ಟ್‌ವೇರ್ ಎಂಜಿನಿಯರಿಂಗ್ ವಿಭಾಗದ ನಿರ್ದೇಶಕ ಸುದಾಂಶು ಸಾಹು, ಏಟ್ರಿಯಾ ಕಾಲೇಜಿನ ಟ್ರಸ್ಟಿ ಕೆ. ನಾಗರಾಜು, ಕುಲಸಚಿವ ಕೆ.ವಿ. ನಾರಾಯಣಸ್ವಾಮಿ, ಪ್ರಾಂಶುಪಾಲ ಡಾ.ವೈ. ವಿಜಯಕುಮಾರ್, ಮೈಕ್ರೋಸಾಫ್ಟ್ ಟೆಕ್ನಾಲಜೀಸ್‌ನ ಕಾರ್ಯಕ್ರಮ ವ್ಯವಸ್ಥಾಪಕಿ ಚಂದ್ರಶ್ರೀ ಸಿ ಇದ್ದರು

518 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಯಲಹಂಕ: ಹೆಬ್ಬಾಳದ ಏಟ್ರಿಯಾ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ 19ನೇ ಘಟಿಕೋತ್ಸವ ಸಮಾರಂಭದಲ್ಲಿ ವಿವಿಧ ವಿಭಾಗಗಳಲ್ಲಿ ಪದವಿ ಹಾಗೂ ಸ್ನಾತಕ ಪದವಿ ಪೂರ್ಣಗೊಳಿಸಿದ 518 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ರ‍್ಯಾಂಕ್ ಗಳಿಸಿದ ಇಬ್ಬರು ವಿದ್ಯಾರ್ಥಿಗಳಿಗೆ ಚಿನ್ನದ ಪದಕ ನೀಡುವ ಜತೆಗೆ ಪ್ರತಿಭಾವಂತ 6 ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಎಂಬಿಎ ಪದವಿ ಪೂರ್ಣಗೊಳಿಸಿದ 40 ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರ ವಿತರಿಸಲಾಯಿತು.

ಈ ವೇಳೆ ಮಾತನಾಡಿದ ಡೆಲ್ ಟೆಕ್ನಾಲಜೀಸ್‌ನ ಸಾಫ್ಟ್‌ವೇರ್ ಎಂಜಿನಿಯರಿಂಗ್ ವಿಭಾಗದ ನಿರ್ದೇಶಕ ಸುದಾಂಶು ಸಾಹು, 'ವಿದ್ಯಾರ್ಥಿಗಳು ಪದವಿಗಳನ್ನು ಪೂರ್ಣಗೊಳಿಸಿ, ವಾಸ್ತವಪ್ರಪಂಚಕ್ಕೆ ಕಾಲಿಟ್ಟ ನಂತರ ಹಲವಾರು ಸ್ಪರ್ಧೆ ಮತ್ತು ಸವಾಲುಗಳು ಎದುರಾಗುತ್ತವೆ. ನಿರಂತರ ಕಲಿಕೆಯ ಮೂಲಕ ಜಗತ್ತಿನಲ್ಲಿ ನಡೆಯುತ್ತಿರುವ ಪ್ರಚಲಿತ ವಿದ್ಯಮಾನಗಳು ಹಾಗೂ ಬೆಳವಣಿಗೆಗಳನ್ನು ಗಮನಿಸಬೇಕು' ಎಂದು ಸಲಹೆ ನೀಡಿದರು.

ಹಾಲಿನ ಪುಡಿ ಪೂರೈಕೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಅಂಗನವಾಡಿ ಕೇಂದ್ರಗಳಿಗೆ ನಾಲ್ಕು ತಿಂಗಳಿನಿಂದ ಹಾಲಿನ ಪುಡಿ ಪೂರೈಕೆ ಸ್ಥಗಿತಗೊಳಿಸಿರುವ ಸರ್ಕಾರದ ಕ್ರಮವನ್ನು ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಖಂಡಿಸಿದ್ದಾರೆ.

'ಮಕ್ಕಳಲ್ಲಿನ ಅಪೌಷ್ಟಿಕತೆ ನಿವಾರಣೆಗೆ ಹಾಲಿನ ಸೇವನೆ ಅವಶ್ಯಕವಾಗಿದೆ. ರಾಜ್ಯದಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣ ಪಡೆಯುತ್ತಿರುವ 36 ಲಕ್ಷಕ್ಕೂ ಹೆಚ್ಚು ಮಕ್ಕಳನ್ನು ಹಾಗೂ 6 ಲಕ್ಷಕ್ಕೂ ಹೆಚ್ಚು ಗರ್ಭಿಣಿ ಹಾಗೂ ಬಾಣಂತಿಯರಿದ್ದಾರೆ' ಎಂದು ತಿಳಿಸಿದ್ದಾರೆ.

'ಈಗಾಗಲೇ ಸರ್ಕಾರವು ಅವಶ್ಯಕತೆ ಇರುವುದಕ್ಕಿಂತ 5 ಪಟ್ಟು ಕಡಿಮೆ ಹಾಲಿನ ಪುಡಿಯನ್ನು ಪೂರೈಕೆ ಮಾಡುತ್ತಿದೆ. 3-6 ವರ್ಷದೊಳಗಿನ ಮಗುವೊಂದರ ಬೆಳವಣಿಗೆಗೆ ದಿನಕ್ಕೆ ಕನಿಷ್ಠ 450 ಮಿಲಿ ಲೀಟರ್ ಹಾಲಿನ ಅವಶ್ಯಕತೆ ಇದೆ. ಅಂದರೆ 70 ಗ್ರಾಂ ಹಾಲಿನ ಪೌಡರ್ ಬದಲಿಗೆ ಸರ್ಕಾರ ಕೇವಲ 15 ಗ್ರಾಂ ಮಾತ್ರ ನೀಡುತ್ತಿದೆ. ಬಡತನ ಮತ್ತು ಆರ್ಥಿಕ ಬಿಕ್ಕಟಿನಿಂದಾಗಿ ರಾಜ್ಯದಲ್ಲಿ ಅಪೌಷ್ಟಿಕತೆಯ ಪ್ರಮಾಣ ಹೆಚ್ಚಿದೆ' ಎಂದರು.

'ಏಕಾಏಕಿ ಹಾಲಿನ ಪುಡಿ ಪೂರೈಕೆ ನಿಲ್ಲಿಸಿರುವುದು ಸರ್ಕಾರವು ಮಕ್ಕಳಿಗೆ ಮಾಡಿರುವ ದ್ರೋಹ. ಹಾಲಿನ ಕೊರತೆಯು ಲಕ್ಷಾಂತರ ಮಕ್ಕಳ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. ಒಂದು ವೇಳೆ ರಾಜ್ಯದಲ್ಲಿ ಹಾಲಿನ ಪೂರೈಕೆಯಲ್ಲಿ ಕೊರತೆ ಇದ್ದರೆ ನೆರೆ ರಾಜ್ಯಗಳ ನೆರವು ಪಡೆಯಬಹುದು. ಈ ಕೂಡಲೇ ರಾಜ್ಯದ ಅಂಗನವಾಡಿ ಕೇಂದ್ರಗಳಿಗೆ ಹಾಲಿನ ಪುಡಿ ಪೂರೈಸಬೇಕು ಎಂದು' ಆಗ್ರಹಿಸಿದ್ದಾರೆ.

ಮಾದರಿ ಸಂಚಾರ: ನಗರಕ್ಕೆ ವಿದೇಶಿ ಪೊಲೀಸರ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಂಚಾರ ನಿರ್ವಹಣೆ ಹಾಗೂ ನಿಯಮ ಉಲ್ಲಂಘನೆ ಪತ್ತೆ ವ್ಯವಸ್ಥೆ ಬಗ್ಗೆ ತಿಳಿದುಕೊಳ್ಳಲು ವಿದೇಶಿ ಪೊಲೀಸರು ನಗರಕ್ಕೆ ಬಂದಿದ್ದು, ಸಂಚಾರ ನಿರ್ವಹಣಾ ಘಟಕಕ್ಕೆ (ಟಿಎಂಸಿ) ಭೇಟಿ ನೀಡಿದರು.

ಮಾಲ್ಡಿವ್ಸ್, ನೇಪಾಳ, ಭೂತಾನ್ ಹಾಗೂ ಮಾರಿಷಸ್ ದೇಶಗಳ ಪೊಲೀಸರ ತಂಡ ಇತ್ತೀಚೆಗೆ ನಗರಕ್ಕೆ ಬಂದಿದೆ. ಇನ್ಫೆಂಟ್ರಿ ರಸ್ತೆಯಲ್ಲಿರುವ ಸಂಚಾರ ವಿಭಾಗದ ಟಿಎಂಸಿ ಕಟ್ಟಡದಲ್ಲಿರುವ ನಿಯಂತ್ರಣ ಕೊಠಡಿಗೆ ಭೇಟಿ ನೀಡಿ, ಅಲ್ಲಿಯ ವ್ಯವಸ್ಥೆ ಬಗ್ಗೆ ಮಾಹಿತಿ ಪಡೆದುಕೊಂಡರು.

'ನಗರದಲ್ಲಿ ನಿತ್ಯವೂ ಸಂಚಾರ ದಟ್ಟಣೆ ಹೆಚ್ಚಿರುತ್ತದೆ. ಹೀಗಾಗಿ, ಸಂಚಾರ ನಿರ್ವಹಣೆ ಬಗ್ಗೆ ವಿದೇಶಿ ಪೊಲೀಸರಿಗೆ ಕುತೂಹಲವಿದೆ. ಅದೇ ಕಾರಣಕ್ಕೆ ನಾಲ್ಕು ದೇಶಗಳ ಪೊಲೀಸ್ ತಂಡಗಳು ಟಿಎಂಸಿಗೆ ಬಂದಿದ್ದವು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ದಟ್ಟಣೆ ನಿರ್ವಹಣೆ, ಸಿಬ್ಬಂದಿ ಕಾರ್ಯವೈಖರಿ, ನಿಯಮ ಉಲ್ಲಂಘನೆ ಪತ್ತೆಗಾಗಿ ಅಳವಡಿಸಿರುವ ಕ್ಯಾಮೆರಾ ಕಾರ್ಯಾಚರಣೆ, ದಂಡ ಪಾವತಿ ವಿಧಾನ ಸೇರಿದಂತೆ ಎಲ್ಲ ಮಾಹಿತಿಯನ್ನು ಪೊಲೀಸರು ಪಡೆದುಕೊಂಡರು. ಸಂಚಾರ ಹಾಗೂ ಯೋಜನೆ ಇನ್‌ಸ್ಪೆಕ್ಟರ್ ಡಾ. ಅನಿಲ್‌ಕುಮಾರ್ ಗ್ರಾಮಪುರೋಹಿತ ಅವರು ಮಾಹಿತಿ ಹಂಚಿಕೊಂಡರು' ಎಂದರು.

'ವ್ಯವಸ್ಥೆ ಬಗ್ಗೆ ಕೂಲಂಕಷವಾಗಿ ತಿಳಿದುಕೊಂಡ ಪೊಲೀಸ್ ತಂಡ, ಸಂಚಾರ ನಿರ್ವಹಣೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿತು' ಎಂದು ಅವರು ಮಾಹಿತಿ ನೀಡಿದರು.



ನಗರದ ಸಂಚಾರ ನಿರ್ವಹಣಾ ಕೇಂದ್ರಕ್ಕೆ (ಟಿಎಂಸಿ) ಭೇಟಿ ನೀಡಿದ್ದ ವಿದೇಶಿ ಪೊಲೀಸರು, ವಾಹನ ಓಡಾಟ ಹಾಗೂ ದಟ್ಟಣೆ ಕುರಿತ ಮಾಹಿತಿಯನ್ನು ಎಲ್‌ಸಿಡಿ ಪರದೆಯಲ್ಲಿ ವೀಕ್ಷಿಸಿದರು

ತಂಬಾಕು ಉತ್ಪನ್ನ: ಬಸ್‌ಗಳಲ್ಲಿ ಜಾಹೀರಾತು ಹಾಕದಂತೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಂಬಾಕು ಹಾಗೂ ಪಾನ್ ಮಸಾಲ ಉತ್ಪನ್ನಗಳ ಸೇವನೆಯನ್ನು ಪ್ರಚೋದಿಸುವ ಜಾಹೀರಾತುಗಳನ್ನು ಬಸ್‌ಗಳಿಗೆ ಹಾಕದಂತೆ ಕ್ರಮವಹಿಸಿ ಎಂದು ಆರೋಗ್ಯ ಇಲಾಖೆಯು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ (ಕೆಎಸ್‌ಆರ್‌ಟಿಸಿ) ಮನವಿ ಮಾಡಿಕೊಂಡಿದೆ.

ಈ ಬಗ್ಗೆ ಇಲಾಖೆಯ ಆಯುಕ್ತ ಡಿ. ರಂದೀಪ್ ಅವರು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆದಿದ್ದಾರೆ. 'ಇಲಾಖೆಯು ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದೆ. ಸಿಗರೇಟು ಮತ್ತು ಇತರೆ ತಂಬಾಕು ಉತ್ಪನ್ನಗಳ ನಿಯಂತ್ರಣ (ಕೋಟ್ಪಾ) ಕಾಯ್ದೆಯಡಿ ತಂಬಾಕು ಉತ್ಪನ್ನಗಳ ಸೇವನೆಗೆ ಕಡಿವಾಣ ಹಾಕಲಾಗುತ್ತಿದೆ. ಆದರೆ, ಇತ್ತೀಚೆಗೆ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ವಿಮಲ್, ಕೂಲ್ ಲಿಪ್, ಆರ್‌ಎಂಡಿ ಸೇರಿ ವಿವಿಧ ತಂಬಾಕು ಉತ್ಪನ್ನಗಳು ಹಾಗೂ ಪಾನ್ ಮಸಾಲ ಉತ್ಪನ್ನಗಳ ಜಾಹೀರಾತು ಹಾಕಲಾಗುತ್ತಿದೆ' ಎಂದು ಹೇಳಿದ್ದಾರೆ.

'ತಂಬಾಕು ಉತ್ಪನ್ನಗಳ ನೇರ ಮತ್ತು ಪರೋಕ್ಷ ಜಾಹೀರಾತು ನೀಡುವುದು ಕೋಟ್ಪಾ ಕಾಯ್ದೆ ಸೆಕ್ಷನ್ 5ರ ಉಲ್ಲಂಘನೆಯಾಗಿದೆ. ಬಸ್‌ಗಳಲ್ಲಿ ಹಾಕುವ ಜಾಹೀರಾತುಗಳಿಂದ ಯುವಕರು ಉತ್ತೇಜನಗೊಂಡು, ತಂಬಾಕು ಉತ್ಪನ್ನಗಳನ್ನು ಸೇವಿಸುವ ಸಾಧ್ಯತೆ ಇರುತ್ತದೆ. ಆದ್ದರಿಂದ ತಂಬಾಕು ನಿಯಂತ್ರಣ ಕಾರ್ಯಕ್ರಮದ ಪ್ರಮುಖ ಭಾಗಿದಾರರಾದ ಸಾರಿಗೆ ಇಲಾಖೆ ಈ ಬಗ್ಗೆ ಅಗತ್ಯ ಕ್ರಮ ಕೈಗೊಂಡು, ತಂಬಾಕು ಹಾಗೂ ಪಾನ್ ಮಸಾಲ ಉತ್ಪನ್ನಗಳ ಸೇವನೆ ಪ್ರಚೋದಿಸುವ ಜಾಹೀರಾತುಗಳನ್ನು ಬಸ್‌ಗಳಲ್ಲಿ ಹಾಕಬಾರದು' ಎಂದು ಮನವಿ ಮಾಡಿಕೊಂಡಿದ್ದಾರೆ.

ಅತ್ಯಾಚಾರ: ಅಂಗವಿಕಲ ಆರೋಪಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲಕಿಯನ್ನು ಮದುವೆಯಾಗಿ, ಆಕೆಯೊಂದಿಗೆ ಲೈಂಗಿಕ ಸಂಪರ್ಕ ಬೆಳೆಸಿದ ಆರೋಪದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಅಂಗವಿಕಲ ವ್ಯಕ್ತಿಯೊಬ್ಬರಿಗೆ ಹೈಕೋರ್ಟ್, ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕಿನ 23 ವರ್ಷದ ಅಂಗವಿಕಲ ವ್ಯಕ್ತಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಕೆ. ನಟರಾಜನ್ ಅವರಿದ್ದ ಏಕಸದಸ್ಯ ಪೀಠ ಮಾನ್ಯ ಮಾಡಿದೆ.

'ಬಾಲಕಿಯು ವಿಚಾರಣಾ ನ್ಯಾಯಾಲಯದ ಮುಂದೆ ಅಪರಾಧ ದಂಡ ಪ್ರಕ್ರಿಯಾ ಸಂಹಿತೆ-1973ರ (ಸಿಆರ್‌ಪಿಸಿ) ಕಲಂ 164ರ ಅಡಿಯಲ್ಲಿ ಸ್ವಯಂ ಹೇಳಿಕೆ ದಾಖಲಿಸುವಾಗ ತನ್ನ ಮೇಲೆ ಲೈಂಗಿಕ ದೌರ್ಜನ್ಯ ನಡೆದಿರುವ ಬಗ್ಗೆ ಎಲ್ಲೂ ಉಲ್ಲೇಖಿಸಿಲ್ಲ. ಅರ್ಜಿದಾರರ ವಿರುದ್ಧ ಬಾಲ್ಯ ವಿವಾಹ ತಡೆ ಕಾಯ್ದೆ ಅಡಿಯಲ್ಲಿನ ಅಪರಾಧ ಕೃತ್ಯವನ್ನು ಹೊರತುಪಡಿಸಿ ಬೇರಾವುದೇ ಅಪರಾಧ ಕೃತ್ಯವೂ ಸಾಬೀತಾಗಿಲ್ಲ. ಅರ್ಜಿದಾರ ಒಬ್ಬ ಅಂಗವಿಕಲ ವ್ಯಕ್ತಿಯಾಗಿದ್ದು, ಕಳೆದ 1 ವರ್ಷಕ್ಕೂ ಹೆಚ್ಚು ಸಮಯದಿಂದ ಜೈಲಿನಲ್ಲಿದ್ದಾರೆ. ಹೀಗಾಗಿ, ಜಾಮೀನು ಪಡೆಯಲು ಅರ್ಹರಾಗಿದ್ದಾರೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಪ್ರಕರಣವೇನು?: 'ಅರ್ಜಿದಾರ ಆರೋಪಿಯು 11 ವರ್ಷದ ಬಾಲಕಿಯನ್ನು ಮದುವೆಯಾಗಿದ್ದಾರೆ' ಎಂದು ಆರೋಪಿಸಿ ಚಿಕ್ಕಬಳ್ಳಾಪುರದ ಸರ್ಕಾರಿ ಶಾಲೆಯ ಶಿಕ್ಷಕರೊಬ್ಬರು 2021ರ ಡಿಸೆಂಬರ್ 27ರಂದು ಗುಡಿಬಂಡೆ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ದೂರಿನನ್ವಯ ಆರೋಪಿಯನ್ನು ಬಂಧಿಸಲಾಗಿತ್ತು.

ಪೊಲೀಸರು ಆರೋಪಿ ವಿರುದ್ಧ ಅತ್ಯಾಚಾರ, ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಮತ್ತು ಬಾಲ್ಯ ವಿವಾಹ ತಡೆ ಕಾಯ್ದೆಯ ವಿವಿಧ ಕಲಂಗಳಡಿ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಒಂದು ವರ್ಷ 3 ತಿಂಗಳಿನಿಂದ ನ್ಯಾಯಾಂಗ ಬಂಧನದಲ್ಲಿರುವ ಆರೋಪಿ ಜಾಮೀನು ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಸಂಯೋಜನಾ ಅರ್ಜಿ: ಅವಧಿ ವಿಸ್ತರಣೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯವು 2023-24ನೇ ಸಾಲಿಗೆ ಕಾಲೇಜುಗಳು ವಿವಿಧ ರೀತಿಯ ಸಂಯೋಜನಾ ಅರ್ಜಿಗಳನ್ನು ಸಲ್ಲಿಸಲು ಕೊನೆ ದಿನಾಂಕವನ್ನು ಶುಲ್ಕ ರಹಿತವಾಗಿ ಮೇ 15ಕ್ಕೆ ನಿಗದಿಪಡಿಸಿದೆ. ₹1,000 ದಂಡ ಶುಲ್ಕದೊಂದಿಗೆ ಮೇ 19ರವರೆಗೆ ವಿಸ್ತರಿಸಲಾಗಿದೆ ಎಂದು ಪ್ರಕಟಣೆ ಹೇಳಿದೆ.

ರಾಮ ಕುಮಾರ, ವಿಜಯಮಾಲಾಗೆ 'ಕಸಾಪ ದತ್ತಿ ಪ್ರಶಸ್ತಿ'



ರಾಮಕುಮಾರ



ವಿಜಯಮಾಲಾ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 2022ನೇ ಸಾಲಿನ 'ಸತ್ಯವತಿ ವಿಜಯರಾಘವ ಚಾರಿಟಬಲ್ ಟ್ರಸ್ಟ್ ಧರ್ಮದರ್ಶಿಗಳ ದತ್ತಿ ಪ್ರಶಸ್ತಿ'ಗೆ ಕನ್ನಡಪರ ಹೋರಾಟಗಾರ ಭೇರ್ಯ ರಾಮ ಕುಮಾರ ಮತ್ತು ಲೇಖಕಿ ವಿಜಯಮಾಲಾ ರಂಗನಾಥ ಆಯ್ಕೆಯಾಗಿದ್ದಾರೆ. ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಪ್ರಶಸ್ತಿಯು ತಲಾ ₹ 10 ಸಾವಿರ ನಗದು ಒಳಗೊಂಡಿದೆ ಎಂದು ಕಸಾಪ ಪ್ರಕಟಣೆ ತಿಳಿಸಿದೆ.

'ಒಡೆಯರ್ ಇತಿಹಾಸ ಸಾರುವ ಕೃತಿ'


ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ಒಡೆಯರ್ ಅವರ ಇತಿಹಾಸ ಸಾರುವ 'ದ ಗ್ಲೋರಿ ದಟ್ ವಾಸ್ ದ ಒಡೆಯರ್ಸ್ ಆಫ್ ಮೈಸೂರು' ಪುಸ್ತಕವನ್ನು ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಬಿಡುಗಡೆ ಮಾಡಿದರು.

ಜ್ಞಾನ ದೀಪಿಕಾ ಎಜುಕೇಷನ್ ಟ್ರಸ್ಟ್ ನಗರದಲ್ಲಿ ಇತ್ತೀಚೆಗೆ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಮೈಸೂರಿನ ಇತಿಹಾಸ ಅಗೆದಷ್ಟು ಸಿಗುತ್ತದೆ. ಮೈಸೂರು ಸಂಸ್ಥಾನದ ಕೊಡುಗೆಗಳನ್ನು ಜನರು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ಭಾಷೆ, ಸಾಹಿತ್ಯ ಹಾಗೂ ಕಲೆ ಉಳಿವಿಗೆ ಮೈಸೂರು ಸಂಸ್ಥಾನ ಅಪಾರ ಕೊಡುಗೆ ನೀಡಿದೆ' ಎಂದು ಯದುವೀರ್ ಹೇಳಿದರು.

ಶಿಕ್ಷಣ ತಜ್ಞ ಗುರುರಾಜ ಕರಜಗಿ, 'ಮೈಸೂರು ಸಂಸ್ಥಾನ ಉತ್ತಮ ಆಡಳಿತ ನೀಡುವ ಮೂಲಕ ಇಡೀ ದೇಶದಲ್ಲಿ ಹೆಸರು ವಾಸಿಯಾಗಿದೆ. ಆಧುನಿಕ ಮೈಸೂರು ನಿರ್ಮಾಣಕ್ಕೆ, ಕರುನಾಡ ಅಭಿವೃದ್ಧಿಗೆ ಒಡೆಯರ್ ಕೊಡುಗೆ ಅಪಾರ' ಎಂದು ಶ್ಲಾಘಿಸಿದರು.

ಲೇಖಕ ಎನ್. ಸತ್ಯಪ್ರಕಾಶ್, 'ಮೈಸೂರು ಒಡೆಯರ ಪರಂಪರೆಯ ಸಮಸ್ತ ವಿವರಗಳು, ಇತಿಹಾಸ, ಕಲೆ ಸಾಹಿತ್ಯ ಸಂಗೀತದ ಎಲ್ಲ ಆಯಾಮಗಳನ್ನು ಈ ಕೃತಿ ಒಳಗೊಂಡಿದೆ. ಮೈಸೂರು ಸಂಸ್ಥಾನವನ್ನು ಆಳಿದ ರಾಜರ ಬಗ್ಗೆ ಮಾಹಿತಿ ಇದೆ. ರಾಜಕೀಯ ಇತಿಹಾಸದ ಜತೆಗೆ ಒಡೆಯರ ಕಾಲದ ಸಾಂಸ್ಕೃತಿಕ ವೈಭವದ ಬಗ್ಗೆ ಈ ಕೃತಿಯಲ್ಲಿ ಬೆಳಕು ಚೆಲ್ಲಲಾಗಿದೆ' ಎಂದು ತಿಳಿಸಿದರು.



ಕಾರ್ಯಕ್ರಮದಲ್ಲಿ 'ದ ಗ್ಲೋರಿ ದಟ್ ವಾಸ್ ದ ಒಡೆಯರ್ಸ್ ಆಫ್ ಮೈಸೂರು' ಪುಸ್ತಕವನ್ನು ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ (ಎಡದಿಂದ ಮೂರನೆಯವರು) ಬಿಡುಗಡೆ ಮಾಡಿದರು. ತುಮಕೂರು ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಮುಖ್ಯಸ್ಥ ಪ್ರೊ.ಎಲ್‌.ಪಿ. ರಾಜು, ಗುರುರಾಜ ಕರಜಗಿ, ಬಬ್ಬೂರುಕಮ್ಮೆ ಸೇವಾ ಸಮಿತಿ ಅಧ್ಯಕ್ಷ ಎ.ವಿ. ಪ್ರಸನ್ನ ಹಾಗೂ ಎನ್‌. ಸತ್ಯಪ್ರಕಾಶ್ ಇದ್ದಾರೆ – ಪ್ರಜಾವಾಣಿ ಚಿತ್ರ

ಕ್ಷೇತ್ರವಾರು ಪಥಸಂಚಲನ • 7,493 ಮಂದಿಗೆ ಎಚ್ಚರಿಕೆ ನೀಡಿ ಮುಚ್ಚಳಿಕೆ

₹ 10.93 ಕೋಟಿ ನಗದು ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆ ನೀತಿ ಸಂಹಿತೆ ಜಾರಿಯಾದ ದಿನದಿಂದ ಮೇ 8ರವರೆಗೆ ನಗರದ ಹಲವೆಡೆ ಕಾರ್ಯಾಚರಣೆ ನಡೆಸಿರುವ ಪೊಲೀಸರು, ₹ 10.93 ಕೋಟಿ ನಗದು ಜಪ್ತಿ ಮಾಡಿದ್ದಾರೆ.

'ಬೆಂಗಳೂರು ಕಮಿಷನರೇಟ್ ವ್ಯಾಪ್ತಿಯ 28 ವಿಧಾನಸಭಾ ಕ್ಷೇತ್ರಗಳಲ್ಲಿ 123 ಚೆಕ್‌ಪೋಸ್ಟ್‌ಗಳನ್ನು ನಿರ್ಮಿಸಲಾಗಿದೆ. ಖಚಿತ ಮಾಹಿತಿ ಮೇರೆಗೆ ಚುನಾವಣೆ ಅಧಿಕಾರಿಗಳ ತಂಡದ ಜೊತೆಯಲ್ಲಿ ದಾಳಿಗಳನ್ನೂ ಮಾಡಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ದಾಖಲೆ ಇಲ್ಲದೇ ಅಕ್ರಮವಾಗಿ ಸಾಗಿಸುತ್ತಿದ್ದ ₹ 10.93 ಕೋಟಿ ನಗದು ಜಪ್ತಿ ಮಾಡಿ, ತಪ್ಪಿತಸ್ಥರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. 28.50 ಕೆ.ಜಿ ಚಿನ್ನಾಭರಣ, 140 ಕೆ.ಜಿ ಬೆಳ್ಳಿ ಸಾಮಗ್ರಿ, ₹ 9.72 ಕೋಟಿ ಮೌಲ್ಯದ ಉಡುಗೊರೆಗಳು ಹಾಗೂ ₹ 29.51 ಕೋಟಿ ಮೌಲ್ಯದ ಡ್ರಗ್ಸ್ ಸಹ ಜಪ್ತಿ ಮಾಡಲಾಗಿದೆ. ಇವುಗಳ ಒಟ್ಟು ಮೌಲ್ಯ ₹ 64 ಕೋಟಿ' ಎಂದು ತಿಳಿಸಿದರು.

ಕ್ಷೇತ್ರವಾರು ಪಥಸಂಚಲನ, 7,493 ಮಂದಿಗೆ ಎಚ್ಚರಿಕೆ: ಮತದಾನ ದಿನದಂದು ಅಹಿತಕರ ಘಟನೆಗಳು ನಡೆಯದಂತೆ ಮುಂಜಾಗ್ರತಾ ಕ್ರಮ ಕೈಗೊಂಡಿರುವ ಪೊಲೀಸರು, ಕೆಲದಿನಗಳಿಂದ ಪ್ರತಿ ಕ್ಷೇತ್ರದಲ್ಲಿ ಶಸ್ತ್ರಸಜ್ಜಿತ ಸಿಬ್ಬಂದಿ ಜೊತೆ ಪಥ ಸಂಚಲನ ನಡೆಸುತ್ತಿದ್ದಾರೆ.

ಪ್ರತಿ ಮತಗಟ್ಟೆ ಬಳಿಯೂ ಬಿಗಿ ಭದ್ರತೆಗೆ ಪೊಲೀಸರು ಒತ್ತು ನೀಡಿದ್ದಾರೆ. ಸೂಕ್ಷ್ಮ ಮತಗಟ್ಟೆ ಇರುವ ಪ್ರದೇಶಗಳಲ್ಲಿ ಹೆಚ್ಚಿನ ನಿಗಾ ವಹಿಸಿರುವ ಪೊಲೀಸರು, ಅಲ್ಲಲ್ಲ ಹೆಚ್ಚುವರಿ ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಲಿದ್ದಾರೆ.

'ರೌಡಿಗಳು ಹಾಗೂ ಅಪರಾಧ ಹಿನ್ನೆಲೆಯುಳ್ಳ 7,493 ಮಂದಿಯನ್ನು ವಶಕ್ಕೆ ಪಡೆದು, ಅಪರಾಧ ಕೃತ್ಯಗಳಲ್ಲಿ ತೊಡಗದಂತೆ ಹಾಗೂ ಮತದಾರರನ್ನು ಬೆದರಿಸದಂತೆ ಎಚ್ಚರಿಕೆ ನೀಡಲಾಗಿದೆ. ಎಲ್ಲರಿಂದಲೂ ಮುಚ್ಚಳಿಕೆ ಬರೆಸಿಕೊಳ್ಳಲಾಗಿದೆ. ಗೂಂಡಾ ಕಾಯ್ದೆಯಡಿ ಬಂಧನದಲ್ಲಿರುವ 28 ಮಂದಿಗೂ ಕಠಿಣ ಕ್ರಮದ ಎಚ್ಚರಿಕೆ ರವಾನಿಸಲಾಗಿದೆ. ಚುನಾವಣೆ ನಿಮಿತ್ತ ನಗರದ ಹಲವು ಜನರಿಂದ 7,761 ಶಸ್ತ್ರಾಸ್ತ್ರಗಳನ್ನು ಆಯಾ ಠಾಣೆಗಳಲ್ಲಿ ಜಮೆ ಮಾಡಿಕೊಳ್ಳಲಾಗಿದೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

15 ಸಾವಿರ ಪೊಲೀಸರ ನಿಯೋಜನೆ

ಪ್ರತಿಯೊಂದು ಮತಗಟ್ಟೆ ಮೇಲೂ ಪೊಲೀಸರು ವಿಶೇಷ ನಿಗಾ ವಹಿಸಲಿದ್ದಾರೆ. ಮತದಾನ ದಿನದಂದು ನಗರದೆಲ್ಲೆಡೆ 15 ಸಾವಿರಕ್ಕೂ ಹೆಚ್ಚು ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗುತ್ತಿದೆ.


'24 ಡಿಸಿಪಿ, 67 ಎಸಿಪಿ, 248 ಇನ್‌ಸ್ಪೆಕ್ಟರ್, 881 ಪಿಎಸ್‌ಐ, 1,020 ಎಎಸ್‌ಐ, 9,971 ಕಾನ್‌ಸ್ಟೆಬಲ್/ಹೆಡ್ ಕಾನ್‌ಸ್ಟೆಬಲ್, 2,565 ಗೃಹ ರಕ್ಷಕರು ಭದ್ರತೆಯಲ್ಲಿರಲಿದ್ದಾರೆ. ಕೇಂದ್ರ ಸಶಸ್ತ್ರ ಮೀಸಲು ಪಡೆಯ 1,000ಕ್ಕೂ ಹೆಚ್ಚು ಮಂದಿ ಭದ್ರತೆಗೆ ಬಳಸಿಕೊಳ್ಳಲಾಗುತ್ತಿದೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

ಮದ್ಯ ಮಾರಾಟ ನಿಷೇಧ

'ನಗರದಲ್ಲಿ ಮೇ 8ರಿಂದ ಮೇ 10ರ ತಡರಾತ್ರಿವರೆಗೆ ಮದ್ಯ ಮಾರಾಟ ನಿಷೇಧಿಸಲಾಗಿದೆ. ಎಲ್ಲ ಬಾರ್ ಹಾಗೂ ಮದ್ಯದಂಗಡಿಗಳು ಬಂದ್ ಮಾಡಬೇಕು. ನಿಯಮ ಉಲ್ಲಂಘಿಸಿದರೆ ಕಠಿಣ ಕ್ರಮ ಜರುಗಿಸಲಾಗುವುದು' ಎಂದು ಪೊಲೀಸರು ಎಚ್ಚರಿಸಿದ್ದಾರೆ.

ಮತ ಎಣಿಕೆ ಕೇಂದ್ರಗಳು

ಬೆಂಗಳೂರು ಕೇಂದ್ರ	ಬಿಎಂಎಸ್ ಕಾಲೇಜು, ಬ್ಯೂಗಲ್ ರಾಕ್ ರಸ್ತೆ, ಗಾಂಧಿ ಬಜಾರ್, ಬಸವನಗುಡಿ
ಬೆಂಗಳೂರು ದಕ್ಷಿಣ	ಎಸ್.ಎಸ್.ಎಂ.ಆರ್.ವಿ ಪಿಯು ಕಾಲೇಜು, 26ನೇ ಮುಖ್ಯರಸ್ತೆ, 4ನೇ ಬ್ಲಾಕ್, ಜಯನಗರ
ಬೆಂಗಳೂರು ಉತ್ತರ	ಮೌಂಟ್ ಕಾರ್ಮೆಲ್ ಕಾಲೇಜು, ಪ್ಯಾಲೆಸ್ ರಸ್ತೆ, ವಸಂತನಗರ
ಬೆಂಗಳೂರು ನಗರ	ಸೇಂಟ್ ಜೋಸೆಫ್ ಇಂಡಿಯನ್ ಹೈಸ್ಕೂಲ್, ವಿಠ್ಠಲ್ ಮಲ್ಯ ರಸ್ತೆ





ವಿಧಾನಸಭಾ ಚುನಾವಣೆಗೆ ಮುನ್ನ ಸೋಮವಾರ ಬೆಂಗಳೂರಿನ ಗೃಹ ವಿಜ್ಞಾನ ಕಾಲೇಜಿನ ಆವರಣದಲ್ಲಿ ಎಲೆಕ್ಟ್ರಾನಿಕ್ ಮತಯಂತ್ರಗಳನ್ನು ಸಂಗ್ರಹಿಸಿ ಮೊಹರು ಹಾಕಿರುವ ಕೊಠಡಿಯನ್ನು ಭಾರತೀಯ ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಸಿಬ್ಬಂದಿ ಕಾವಲು ಕಾಯುತ್ತಿದ್ದರು —ಪ್ರಜಾವಾಣಿ ಚಿತ್ರ/ ರಂಜು ಪಿ

ಮತ ಎಣಿಕೆ ಕೇಂದ್ರಗಳ ಪರಿಶೀಲನೆ

ಬೆಂಗಳೂರು: ನಗರ ವ್ಯಾಪ್ತಿಯಲ್ಲಿ 28 ವಿಧಾನಸಭಾ ಕ್ಷೇತ್ರಗಳ ಮತ ಎಣಿಕೆ ನಾಲ್ಕು ಕೇಂದ್ರಗಳಲ್ಲಿ ನಡೆಯಲಿದೆ. ಇಲ್ಲಿನ ಸಿದ್ಧತೆಯನ್ನು ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಸೋಮವಾರ ಪರಿಶೀಲಿಸಿದರು.

ವಿಠ್ಠಲ ಮಲ್ಯ ರಸ್ತೆಯಲ್ಲಿರುವ ಸೇಂಟ್ ಜೋಸೆಫ್ ಇಂಡಿಯನ್ ಹೈಸ್ಕೂಲ್‌ನಲ್ಲಿರುವ ಮತ ಎಣಿಕೆ ಕೇಂದ್ರಕ್ಕೆ ಭೇಟಿ ನೀಡಿ ಸಿದ್ಧತೆಗಳನ್ನು ವೀಕ್ಷಿಸಿದರು.

ಮತ ಎಣಿಕೆಯ ಸಿಬ್ಬಂದಿ 3 ವರ್ಗದಲ್ಲಿ ಇರಲಿದ್ದಾರೆ. ಪ್ರತಿ ಟೇಬಲ್‌ಗೆ ಮೈಕ್ರೋ ಅಬ್ಸರ್ವರ್, ಮತ ಎಣಿಕೆ ಮೇಲ್ವಿಚಾರಕರು ಮತ್ತು ಮತ ಎಣಿಕೆ ಸಹಾಯಕರನ್ನು ನಿಯೋಜನೆ ಮಾಡಲಾಗುತ್ತದೆ. ಪ್ರತಿ ಎಣಿಕೆ ಕೊಠಡಿಗೆ ಸಾಮಾನ್ಯವಾಗಿ 10ರಿಂದ 14 ಟೇಬಲ್‌ಗಳ ವ್ಯವಸ್ಥೆ ಮಾಡಲಾಗಿರುತ್ತದೆ. ಅದರಲ್ಲಿ 2 ಟೇಬಲ್‌ಗಳನ್ನು ಪೋಸ್ಟಲ್ ಬ್ಯಾಲೆಟ್ ಮತಗಳ ಎಣಿಕೆಗೆ ಮೀಸಲಿಡಲಾಗಿರುತ್ತದೆ ಎಂದು ತುಷಾರ್ ಗಿರಿನಾಥ್ ವಿವರ ನೀಡಿದರು.

ಬೆಂಗಳೂರು ನಗರದ ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿ ದಯಾನಂದ್ ಮಾತನಾಡಿ, ಸಾರ್ವತ್ರಿಕ ವಿಧಾನಸಭೆ ಚುನಾವಣೆಯ ಮತ ಎಣಿಕೆ ಕಾರ್ಯವು ಮೇ 13 ರಂದು ನಡೆಯಲಿದ್ದು, ಎಲ್ಲಾ ರೀತಿಯ ಸಿದ್ದತೆಗಳನ್ನು ಮಾಡಿಕೊಳ್ಳಲಾಗಿದೆ. ಪ್ರತಿ ಟೇಬಲ್‌ಗಳಿಗೂ ವೆಬ್ ಕಾಸ್ಟಿಂಗ್ ವ್ಯವಸ್ಥೆಯಿರುತ್ತದೆ. ಎಣಿಕಾ ಮೇಲ್ವಿಚಾರಕರು ಹಾಗೂ ಎಣಿಕಾ ಸಹಾಯಕರಿಗೆ ಈಗಾಗಲೇ ತರಬೇತಿ ನೀಡಲಾಗಿದೆ. ಮೇ 12ರಂದು, ಮೈಕ್ರೋ ಅಬ್ಸರ್ವರ್ಸ್, ಎಣಿಕಾ ಮೇಲ್ವಿಚಾರಕರು ಹಾಗೂ ಎಣಿಕಾ ಸಹಾಯಕರಿಗೆ ಮತ್ತೊಂದು ಬಾರಿ ತರಬೇತಿ ನೀಡಲಾಗುವುದು. ಎಲ್ಲಾ ಕಡೆ ಸಿಸಿ ಟಿವಿ ಕ್ಯಾಮೆರಾಗಳ ಅಳವಡಿಕೆ ಮಾಡಿದ್ದು, ಮೂರು ಹಂತದದಲ್ಲಿ ಪೊಲೀಸ್ ಭದ್ರತಾ ವ್ಯವಸ್ಥೆ ಮಾಡಲಾಗುತ್ತದೆ ಎಂದು ಹೇಳಿದರು.

ಕಾಂಗ್ರೆಸ್– ಬಿಜೆಪಿ ಜಟಾಪಟಿ

ಬಿಟಿಎಂ ವಿಧಾನಸಭಾ ಕ್ಷೇತ್ರ: ಠಾಣೆ ಎದುರು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟಿಎಂ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಕಾರ್ಯಕರ್ತರ ನಡುವೆ ಭಾನುವಾರ ರಾತ್ರಿ ಜಟಾಪಟಿ ನಡೆದಿದ್ದು, ಈ ಸಂಬಂಧ ಮಡಿವಾಳ ಠಾಣೆಯಲ್ಲಿ ಎರಡು ಎಫ್‌ಐಆರ್ ದಾಖಲಾಗಿವೆ.

ಆರೋಪ-ಪ್ರತ್ಯಾರೋಪ ಮಾಡಿ ಎರಡೂ ಪಕ್ಷಗಳ ಕಾರ್ಯಕರ್ತರು, ಠಾಣೆ ಎದುರು ಸೋಮವಾರ ಪ್ರತಿಭಟನೆ ನಡೆಸಿದರು.

'ಹಲ್ಲೆ ಸಂಬಂಧ ಕಾಂಗ್ರೆಸ್ ಕಾರ್ಯಕರ್ತ ಎಂ.ವೈ. ಲೋಕೇಶ್ ಹಾಗೂ ಬಿಜೆಪಿ ಕಾರ್ಯಕರ್ತ ಹರಿನಾಥ್ ಪ್ರತ್ಯೇಕವಾಗಿ ದೂರು ನೀಡಿದ್ದಾರೆ. ಎರಡು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಬಿಜೆಪಿ ಪ್ರತಿಭಟನೆ: 'ಪ್ರಚಾರಕ್ಕೆಂದು ಹೋಗಿದ್ದ ಕಾರ್ಯಕರ್ತ ಹರಿನಾಥ್ ಮೇಲೆ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಹಲ್ಲೆ ಮಾಡಿದ್ದಾರೆ. ತಪ್ಪಿತಸ್ಥರನ್ನು ಬಂಧಿಸಬೇಕು' ಎಂದು ಆಗ್ರಹಿಸಿ ಬಿಜೆಪಿ ಕಾರ್ಯಕರ್ತರು ಮಡಿವಾಳ ಠಾಣೆ ಎದುರು ಪ್ರತಿಭಟನೆ ನಡೆಸಿದರು.

ಸಂಸದ ತೇಜಸ್ವಿ ಸೂರ್ಯ ಹಾಗೂ ಚುನಾವಣಾ ಸಹ ಉಸ್ತುವಾರಿ ಅಣ್ಣಾಮಲೈ ನೇತೃತ್ವದಲ್ಲಿ ಸೇರಿದ್ದ ಕಾರ್ಯಕರ್ತರು, 'ಮಾಜಿ ಮೇಯರ್ ಮಂಜುನಾಥ್ ರೆಡ್ಡಿ, ಅವರ ಮಗ ಲಿತೇಶ್ ಹಾಗೂ ಇತರರು ಗಲಾಟೆಗೆ ಕಾರಣ. ಅವರೆಲ್ಲರೂ ಸೇರಿ ಹರಿನಾಥ್ ಅವರಿಗೆ ಹೊಡೆದಿದ್ದಾರೆ' ಎಂದು ಆರೋಪಿಸಿದರು.

ತೇಜಸ್ವಿ ಸೂರ್ಯ ಮಾತನಾಡಿ, 'ಪೊಲೀಸರು ಆರೋಪಿಗಳನ್ನು ಕೂಡಲೇ ಬಂಧಿಸಬೇಕು. ಇಲ್ಲದಿದ್ದರೆ, ಬಿಟಿಎಂ ಲೇಔಟ್ ಮತ್ತು ಜಯನಗರ ವಿಧಾನಸಭಾ ಕ್ಷೇತ್ರಗಳಲ್ಲಿ ಗಂಭೀರ ಸ್ವರೂಪದ ಪ್ರತಿಭಟನೆ ನಡೆಸಲಾಗುವುದು' ಎಂದು ಎಚ್ಚರಿಸಿದರು.



ನಗರದ ಮಡಿವಾಳ ಠಾಣೆ ಎದುರು ಬಿಜೆಪಿ ಕಾರ್ಯಕರ್ತರು ಸೋಮವಾರ ಪ್ರತಿಭಟನೆ ನಡೆಸಿದರು



ಮಡಿವಾಳ ಠಾಣೆ ಎದುರು ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು

ಕಾಂಗ್ರೆಸ್ ಪ್ರತಿಭಟನೆ: ಮಡಿವಾಳ ಠಾಣೆ ಎದುರು ಕಾಂಗ್ರೆಸ್ ಕಾರ್ಯಕರ್ತರೂ ಪ್ರತಿಭಟನೆ ನಡೆಸಿದರು.

ಕಾಂಗ್ರೆಸ್ ಅಭ್ಯರ್ಥಿ ರಾಮಲಿಂಗಾ ರೆಡ್ಡಿ, 'ಕಾಂಗ್ರೆಸ್ ಕಾರ್ಯಕರ್ತರು ಯಾವುದೇ ಹಲ್ಲೆ ಮಾಡಿಲ್ಲ. ಬಿಜೆಪಿಯ ಹರಿನಾಥ್ ಹಾಗೂ ಇತರರು ಮತದಾರರಿಗೆ ಹಣ ಹಂಚಲು ಹೊರಟಿದ್ದರು. ಅದನ್ನು ನೋಡಿದ್ದ ಕಾಂಗ್ರೆಸ್ ಕಾರ್ಯಕರ್ತರು ಹಿಡಿಯಲು ಹೋಗಿದ್ದರು. ಹೆದರಿ ಪರಾರಿಯಾಗುವ ವೇಳೆ ಹರಿನಾಥ್ ಮಾರ್ಗಮಧ್ಯೆಯೇ ಬಿದ್ದು ಗಾಯಗೊಂಡಿದ್ದಾರೆ. ರಾಜಕೀಯ ಲಾಭ ಪಡೆಯಲು ಬಿಜೆಪಿಯವರು ದೂರು ದಾಖಲಿಸಿದ್ದಾರೆ' ಎಂದರು.

'ಕ್ಷೇತ್ರದಲ್ಲಿ ಬಿಜೆಪಿ ದೌರ್ಜನ್ಯ ಹೆಚ್ಚಾಗಿದೆ. ಕ್ಷೇತ್ರದಲ್ಲಿ ಮತದಾರರನ್ನು ಸೆಳೆಯಲು ಹಣ, ಮದ್ಯ, ಸೀರೆ ಹಂಚುತ್ತಿದ್ದಾರೆ' ಎಂದು ಆರೋಪಿಸಿದರು.





ಮಲ್ಲೇಶ್ವರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಸಿ.ಎನ್. ಅಶ್ವತ್ಥನಾರಾಯಣ ನಗರದ ವಿವಿಧ ಪ್ರದೇಶಗಳಲ್ಲಿ ಮತಯಾಚನೆ ಮಾಡಿದರು (ಎಡಚಿತ್ರ). ಬಸವನಗುಡಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಅರಮನೆ ಶಂಕರ್ ಪರ ಸೋಮವಾರ ಶ್ರೀನಿವಾಸ ನಗರದಲ್ಲಿ ನಡೆದ ಪ್ರಚಾರದಲ್ಲಿ ಜೆಡಿಎಸ್ ಮುಖಂಡ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಹಾಕಿದ್ದ ಬೃಹತ್ ಹಾರದಲ್ಲಿನ ಸೇಬು ಹಣ್ಣಿಗೆ ಕಾರ್ಯಕರ್ತರು ಮುಗಿಬಿದ್ದರು —ಪ್ರಜಾವಾಣಿ ಚಿತ್ರ

ಎಫ್‌ಐಆರ್ ವಾಪಸ್ ಪಡೆಯಲು ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪತ್ರಕರ್ತ ದಿನೇಶ್ ಅಮಿನ್ ಮಟ್ಟು, ಹೋರಾಟಗಾರರಾದ ಬಿ. ಹರೀಶ್‌ಕುಮಾರ್ ಬೈರಪ್ಪ, ಹೇಮಂತ್‌ಕುಮಾರ್, ಬಿಂದುಗೌಡ, ದಿಲೀಪ್‌ಗೌಡ ಅವರ ಮೇಲೆ ಸುಳ್ಳು ಆರೋಪ ಹೊರಿಸಿ ದಾಖಲಿಸಿರುವ ಎಫ್‌ಐಆರ್ ಅನ್ನು ಹಿಂಪಡೆಯಬೇಕು' ಎಂದು ಸಮಾನ ಮನಸ್ಕರ ವೇದಿಕೆಯ ಪದಾಧಿಕಾರಿಗಳು ಆಗ್ರಹಿಸಿದ್ದಾರೆ.

'ದಿನೇಶ್ ಮತ್ತಿತರರು ತಮ್ಮ ಫೇಸ್‌ಬುಕ್‌ನಲ್ಲಿ 'ಬಿ.ಎಲ್.ಸಂತೋಷ್ ಮಾತನಾಡಿದ್ದಾರೆ ಎನ್ನಲಾದ ವರದಿಯನ್ನು ಪೋಸ್ಟ್ ಮಾಡಿ 'ಇದು ನಿಜವೇ? ಅಲ್ಲವೇ? ಎಂದು ಸಂತೋಷ್ ಸ್ಪಷ್ಟೀಕರಣ ಕೊಡಲಿ' ಎಂದು ಹೇಳಿದ್ದರು. ತಮಗಿರುವ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಬಳಸಿಕೊಂಡು ಪ್ರಶ್ನೆ ಮಾಡಿದ್ದಾರೆ. ಅವರು ವರದಿಯ ಸಮರ್ಥನೆ ಮಾಡಿಲ್ಲ. ಇದು ನಿಜವೆಂದೂ ಪ್ರಚಾರ ಮಾಡಿಲ್ಲ' ಎಂದು ಒಕ್ಕೂಟದ ಅಧ್ಯಕ್ಷ ಪ್ರೊ.ಎಸ್.ಜಿ.ಸಿದ್ದರಾಮಯ್ಯ, ಒಕ್ಕೂಟದ ಎಲ್.ಎನ್. ಮುಕುಂದರಾಜ್, ಜಾಣಗೆರೆ ವೆಂಕಟರಾಮಯ್ಯ, ಕೆ.ಎಸ್.ವಿಮಲಾ, ವಸುಂಧರಾ ಭೂಪತಿ ಹೇಳಿದ್ದಾರೆ.'ಅವರ ಮೇಲೆ ದುರುದ್ದೇಶ, ಹಗೆತನದ ಭಾಗವಾಗಿ ದೂರು ನೀಡಲಾಗಿದೆ' ಎಂದಿದ್ದಾರೆ.

'ಚಿತ್ತಾಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮಣಿಕಂಠ ಅವರು ಖರ್ಗೆ ಕುಟುಂಬಕ್ಕೆ ಬೆದರಿಕೆ ಹಾಕಿರುವ ಆಡಿಯೊದ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿದೆ. ಮಣಿಕಂಠ ಅವರ ಮೇಲೆ ಎಫ್‌ಐಆರ್ ದಾಖಲಿಸಿ ಆಗಲೇ ಬಂಧಿಸಬೇಕಿತ್ತು. ಸಂಬಂಧಪಟ್ಟವರ ಮೌನವು ಆತಂಕ ತಂದಿದೆ. ವಿಜಯಪುರದ ಬಿಜೆಪಿ ಅಭ್ಯರ್ಥಿ ಬಸನಗೌಡ ಪಾಟೀಲ ಯತ್ನಾಳ್ ಸಹ ಜನರನ್ನು ಪ್ರಚೋದಿಸುವ ಹೇಳಿಕೆ ಕೊಟ್ಟಿದ್ದಾರೆ. ಅವರ ವಿರುದ್ಧವೂ ಕ್ರಮವಾಗಿಲ್ಲ' ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

'ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ಸಿಪಿಎಂ ಅಭ್ಯರ್ಥಿ ಡಾ.ಅನಿಲ್‌ಕುಮಾರ್ ಅವರ ಮನೆ ಮೇಲೆ ಗೂಂಡಾಗಳು ದಾಳಿ ಮಾಡಲು ಯತ್ನಿಸಿರುವುದು ಖಂಡನೀಯ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ರಮಕ್ಕೆ ಆಗ್ರಹಿಸಿ ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಹಾಗೂ ಚುನಾವಣಾ ಆಯೋಗಕ್ಕೆ ಮನವಿ ಸಲ್ಲಿಸಿದ್ದಾರೆ.

ಮತದಾರರ ಓಲೈಕೆಗೆ ಅಂತಿಮ ಕಸರತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆಯ ಬಹಿರಂಗ ಪ್ರಚಾರಕ್ಕೆ ಸೋಮವಾರ ಸಂಜೆ ತೆರೆ ಬಿದ್ದಿದ್ದು, ಅಭ್ಯರ್ಥಿಗಳು ಮನೆ-ಮನೆಗೆ ತೆರಳಿ ಮತ ಯಾಚನೆ ಮಾಡಿದರು.

ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು, ಮಲ್ಲೇಶ್ವರ, ಸುಬ್ರಹ್ಮಣ್ಯನಗರದಲ್ಲಿ ಕಾರ್ಯಕರ್ತರೊಂದಿಗೆ ಪ್ರಚಾರ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅಶ್ವತ್ಥನಾರಾಯಣ 'ಮಲ್ಲೇಶ್ವರ ಕ್ಷೇತ್ರವನ್ನು ಆರೋಗ್ಯ, ಶಿಕ್ಷಣ, ಮೂಲಸೌಕರ್ಯ ಮತ್ತು ಸಾರ್ವಜನಿಕ ಸೇವೆಗಳ ವಿಚಾರದಲ್ಲಿ ಮಾದರಿ ಎನ್ನುವಂತೆ ಅಭಿವೃದ್ಧಿಪಡಿಸಲಾಗಿದೆ. ಜತೆಗೆ ಉದ್ಯಾನ ಮತ್ತು ಆಟದ ಮೈದಾನಗಳ ಅಭಿವೃದ್ಧಿ ಮೂಲಕ ಕ್ಷೇತ್ರದ ಸೌಂದರ್ಯ ವೃದ್ಧಿಸಲಾಗಿದೆ. ಈ ಮಾದರಿಯನ್ನು ಇಡೀ ಬೆಂಗಳೂರಿನಲ್ಲಿ ಅಳವಡಿಸಿಕೊಳ್ಳಲು ಇದರಿಂದ ಪ್ರೇರಣೆ ಸಿಕ್ಕಿದೆ' ಎಂದರು.



ಚಿಕ್ಕಪೇಟೆ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಆರ್.ವಿ. ದೇವರಾಜ್ ಅವರು ಭರ್ಜರಿ ರೋಡ್ ಶೋ ನಡೆಸಿದರು —ಪ್ರಜಾವಾಣಿ ಚಿತ್ರ

ಬಸವನಗುಡಿ ವಿಧಾನಸಭೆ ಕ್ಷೇತ್ರ ಜೆಡಿಎಸ್ ಅಭ್ಯರ್ಥಿ ಪರ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಪ್ರಚಾರ ನಡೆಸಿದರು. ಕಾರ್ಯಕರ್ತರು ಬೃಹತ್ ಹಣ್ಣು ಮತ್ತು ಬೆಲ್ಲದ ಅಚ್ಚುಗಳ ಹಾರವನ್ನು ಹಾಕುವ ಮೂಲಕ ಕುಮಾರಸ್ವಾಮಿ ಅವರನ್ನು ಸ್ವಾಗತಿಸಿದರು.

ಆರ್.ವಿ. ದೇವರಾಜ್ ಅವರು ತಮ್ಮ ಚಿಕ್ಕಪೇಟೆ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ವಿವಿಧೆಡೆ ಭರ್ಜರಿ ರೋಡ್ ಶೋ ಮಾಡುವುದರ ಮೂಲಕ ಮತಬೇಟೆಯಾಡಿದರು.

ಮತದಾರರಿಗೆ ಹಣ ಹಂಚಿಕೆ: ₹ 2.32 ಲಕ್ಷ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಅಶ್ವತ್ಥನಗರದಲ್ಲಿ ಮತದಾರರಿಗೆ ಹಣ ಹಂಚುತ್ತಿದ್ದ ನಾಲ್ವರನ್ನು ಭಾನುವಾರ ರಾತ್ರಿ ವಶಕ್ಕೆ ಪಡೆಯಲಾಗಿದ್ದು, ಅವರಿಂದ ₹ 2.32 ಲಕ್ಷ ಜಪ್ತಿ ಮಾಡಲಾಗಿದೆ.

ಚುನಾವಣಾ ಅಧಿಕಾರಿಗಳು ಹಾಗೂ ಸದಾಶಿನಗರ ಠಾಣೆ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಅಕ್ರಮ ಪತ್ತೆ ಮಾಡಿದ್ದಾರೆ.

'ಪುರುಷ ಹಾಗೂ ಮೂವರು ಮಹಿಳೆಯರು ಮನೆ ಮನೆಗೆ ಹೋಗಿ ಹಣ ಹಂಚುತ್ತಿದ್ದರು. ಮಾಹಿತಿ ಬರುತ್ತಿದ್ದಂತೆ ಸ್ಥಳಕ್ಕೆ ಹೋಗಿ ನಾಲ್ವರನ್ನು ವಶಕ್ಕೆ ಪಡೆಯಲಾಯಿತು. ಅವರ ಬಳಿ ₹ 2.32 ಲಕ್ಷ ನಗದು, ಕಾಂಗ್ರೆಸ್ ಅಭ್ಯರ್ಥಿ ಅನೂಪ್ ಅಯ್ಯಂಗಾರ್ ಭಾವಚಿತ್ರವಿರುವ ಕರಪತ್ರಗಳು, ಮತದಾನ ಗುರುತಿನ ಚೀಟಿಗಳು ಪತ್ತೆಯಾದವು' ಎಂದು ಮೂಲಗಳು ತಿಳಿಸಿವೆ.

'ಇದೊಂದು ಜಾಮೀನು ಸಹಿತ ಪ್ರಕರಣ. ಆರೋಪಿಗಳನ್ನು ವಿಚಾರಣೆ ಮಾಡಿ ಬಿಟ್ಟು ಕಳುಹಿಸಲಾಗಿದೆ. ಹಣ ಹಂಚಿಕೆ ಸಂಬಂಧ ಪ್ರಕರಣ ದಾಖಲಿಸಿಕೊಂಡು ಆರೋಪಿಗಳಿಗೆ ನೋಟಿಸ್ ನೀಡಲಾಗಿದೆ. ಕಾಂಗ್ರೆಸ್ ಅಭ್ಯರ್ಥಿಯನ್ನೂ ವಿಚಾರಣೆ ನಡೆಸಲಾಗುವುದು' ಎಂದು ಹೇಳಿವೆ.

ಮತದಾನ: 'ಮೆಟ್ರೊ' ರೈಲು ಸಮಯ ವಿಸ್ತರಣೆ

ಬೆಂಗಳೂರು: ವಿಧಾನಸಭೆ ಚುನಾವಣೆಯ ಮತದಾನವು ಮೇ 10ರಂದು ನಡೆಯಲಿದ್ದು, ಅಂದು 'ಮೆಟ್ರೊ' ರೈಲು ಸೇವೆಯನ್ನು ಮಧ್ಯರಾತ್ರಿವರೆಗೆ ವಿಸ್ತರಿಸಲಾಗಿದೆ.

ಟರ್ಮಿನಲ್ ನಿಲ್ದಾಣಗಳಾದ ಬೈಯಪ್ಪನಹಳ್ಳಿ, ಕೆಂಗೇರಿ, ನಾಗಸಂದ್ರ, ರೇಷ್ಮೆ ಸಂಸ್ಥೆ, ಕೃಷ್ಣರಾಜಪುರ, ವೈಟ್‌ಫೀಲ್ಡ್ (ಕಾಡುಗೋಡಿ)ಗಳಿಂದ ಕೊನೆಯ ನಿಲ್ದಾಣಗಳಿಂದ ಅಂದು ರಾತ್ರಿ 12.05ಕ್ಕೆ ಹೊರಡಲಿವೆ. ನಾಡಪ್ರಭು ಕೆಂಪೇಗೌಡ ನಿಲ್ದಾಣ ಮೆಜೆಸ್ಟಿಕ್‌ನಿಂದ ಕೊನೆಯ ಮೆಟ್ರೊ ರೈಲುಗಳು ಮಧ್ಯರಾತ್ರಿ 12.35ಕ್ಕೆ ಬೈಯಪ್ಪನಹಳ್ಳಿ, ಕೆಂಗೇರಿ, ನಾಗಸಂದ್ರ ಹಾಗೂ ರೇಷ್ಮೆಸಂಸ್ಥೆಗೆ ಕಡೆಗೆ ಹೊರಡಲಿವೆ ಎಂದು ಬಿಎಂಆರ್‌ಸಿಎಲ್ ಪ್ರಕಟಣೆಯಲ್ಲಿ ತಿಳಿಸಿದೆ.

ಮತದಾನಕ್ಕೂ ಮುನ್ನ 132 ಮಂದಿ ಸಾವು

ಪ್ರಜಾವಾಣಿ ವಾರ್ತೆ

ತುಮಕೂರು: ಜಿಲ್ಲೆಯಲ್ಲಿ ಮನೆಯಿಂದಲೇ ಮತದಾನ ಮಾಡಲು ಒಪ್ಪಿಗೆ ಸೂಚಿಸಿದವರ ಪೈಕಿ 132 ಮಂದಿ ಮತದಾನಕ್ಕೂ ಮೊದಲೇ ಮರಣ ಹೊಂದಿದ್ದಾರೆ.

80 ವರ್ಷ ಮೇಲ್ಪಟ್ಟವರು ಹಾಗೂ ಅಂಗವಿಕಲರು ಮನೆಯಿಂದಲೇ ಮತದಾನ ಮಾಡಲು ಇದೇ ಮೊದಲ ಬಾರಿಗೆ ಅವಕಾಶ ಕಲ್ಪಿಸಲಾಗಿತ್ತು. ಚುನಾವಣೆ ಸಿಬ್ಬಂದಿ ಮನೆಮನೆಗೆ ಭೇಟಿ ಕೊಟ್ಟು 12–ಡಿ ಅರ್ಜಿ ನೀಡಿ ಅಂಚೆ ಮತದಾನಕ್ಕೆ ಒಪ್ಪಿಗೆ ಪಡೆದುಕೊಂಡಿದ್ದರು.

ಏ. 29ರಿಂದ ಮೇ 6ರ ವರೆಗೆ ಮನೆಗಳಲ್ಲಿ ಮತದಾನ ನಡೆದಿತ್ತು. ಒಟ್ಟು 9,440 ಮತದಾರರು ಮನೆಯಿಂದ ಮತದಾನ ಮಾಡಲು ಒಪ್ಪಿಗೆ ಸೂಚಿಸಿದ್ದರು. 80 ವರ್ಷ ಮೇಲ್ಪಟ್ಟ 6,333 ಮಂದಿ ಹಾಗೂ 2,788 ಅಂಗವಿಕಲರು ಸೇರಿ 9,121 ಮತದಾರರು ಮನೆಯಿಂದಲೇ ಅಂಚೆ ಮೂಲಕ ಮತದಾನ ಮಾಡಿದ್ದಾರೆ. 187 ಮಂದಿ ಮತದಾನ ಮಾಡಿಲ್ಲ.

ಕಾಂಗ್ರೆಸ್ ಮುಖಂಡರ ಮನೆ ಮೇಲೆ ಮುಂದುವರಿದ ಐಟಿ ದಾಳಿ

ಪ್ರಜಾವಾಣಿ ವಾರ್ತೆ

ಧಾರವಾಡ: ಜಿಲ್ಲೆಯಲ್ಲಿ ಕಾಂಗ್ರೆಸ್ ಮುಖಂಡರ ಮನೆ ಮೇಲೆ ಐಟಿ ದಾಳಿ ಮುಂದುವರಿದಿದ್ದು, ಕೆಪಿಸಿಸಿ ಸದಸ್ಯ ರಾಬರ್ಟ್ ದದ್ದಾಪುರಿ ಮನೆಗೆ ಸೋಮವಾರ ಸಂಜೆ ಭೇಟಿ ನೀಡಿದ ಆದಾಯ ತೆರಿಗೆ ಅಧಿಕಾರಿಗಳು ಶೋಧ ಕಾರ್ಯ ನಡೆಸಿದರು.

ಸಂಜೆ ಮೂರು ಕಾರುಗಳಲ್ಲಿ ಬಂದ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಶೋಧ ಕಾರ್ಯ ಆರಂಭಿಸಿದರು. ಮನೆ ಎದುರು ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಹುಬ್ಬಳ್ಳಿ-ಧಾರವಾಡ ಪಶ್ಚಿಮ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ದೀಪಕ ಚಿಂಚೋರೆ ಪರವಾಗಿ ರಾಬರ್ಟ್ ದದ್ದಾಪುರಿ ಸೋಮವಾರ ಪ್ರಚಾರದಲ್ಲಿ ತೊಡಗಿದ್ದರು. ಅವರನ್ನು ಮನೆಗೆ ಕರೆಯಿಸಿಕೊಂಡ ಅಧಿಕಾರಿಗಳು ಶೋಧ ಕಾರ್ಯ ಆರಂಭಿಸಿದರು. ತಡರಾತ್ರಿಯವರೆಗೂ ಶೋಧ ಮುಂದುವರಿದಿತ್ತು.

ಕಾಂಗ್ರೆಸ್ ಅಭ್ಯರ್ಥಿ ಹೋಟೆಲ್ ಮೇಲೆ ಫ್ಲೈಯಿಂಗ್ ಸ್ಕ್ವಾಡ್ ದಾಳಿ

ಹಾವೇರಿ: ಶಿಗ್ಗಾವಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಯಾಸಿರ್ ಖಾನ್ ಪಠಾಣ್ ಮಾಲೀಕತ್ವದ ಹೋಟೆಲ್ ಮೇಲೆ ಸೋಮವಾರ ರಾತ್ರಿ ಚುನಾವಣೆ ಅಧಿಕಾರಿಗಳು (ಫ್ಲೈಯಿಂಗ್ ಸ್ಕ್ವಾಡ್) ದಾಳಿ ನಡೆಸಿದ್ದಾರೆ.

ಶಿಗ್ಗಾಂವಿ ತಾಲ್ಲೂಕಿನ ಬಂಕಾಪುರ ಟೋಲ್ ನಾಕಾ ಬಳಿ ಇರುವ ಎನ್.ಎಚ್-4 ಗ್ರ್ಯಾಂಡ್ ಹೋಟೆಲ್ ಮೇಲೆ ದಾಳಿ ನಡೆದಿದೆ.

ಮತದಾರರಿಗೆ ಹಂಚಲು ಕವರ್‌ಗಳಲ್ಲಿ ಇಟ್ಟಿದ್ದ ಸುಮಾರು ₹6 ಲಕ್ಷ ನಗದನ್ನು ಜಪ್ತಿ ಮಾಡಲಾಗಿದೆ. ತಲಾ ಕವರ್‌ನಲ್ಲಿ ₹3 ಸಾವಿರ ನಗದು ಇತ್ತು ಎನ್ನಲಾಗಿದೆ.

ಹಣ ಜಪ್ತಿ ಮಾಡಿದ ಚುನಾವಣಾ ಅಧಿಕಾರಿಗಳು ಬಂಕಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲು ತೆರಳಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿರುದ್ಧ ಸ್ಪರ್ಧಿಸಿದ್ದ ಯಾಸಿರ್ ಖಾನ್ ಪಠಾಣ್ ಒಡೆತನದ ಹೋಟೆಲ್ ಮೇಲೆ ಚುನಾವಣೆ ಸಂದರ್ಭ ದಾಳಿ ನಡೆದಿರುವುದು ಜಿಲ್ಲೆಯಲ್ಲಿ ಸಂಚಲನ ಮೂಡಿಸಿದೆ.

ಶಾಸಕ ನಾರಾಯಣಸ್ವಾಮಿಗೆ ಐ.ಟಿ ನೋಟಿಸ್

ಪ್ರಜಾವಾಣಿ ವಾರ್ತೆ

ಬಂಗಾರಪೇಟೆ (ಕೋಲಾರ ಜಿಲ್ಲೆ): ಶಾಸಕ ಹಾಗೂ ಬಂಗಾರಪೇಟೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್.ಎನ್. ನಾರಾಯಣಸ್ವಾಮಿ ಅವರಿಗೆ ಆದಾಯ ತೆರಿಗೆ (ಐ.ಟಿ) ಇಲಾಖೆ ನೋಟಿಸ್ ನೀಡಿರುವುದು ತಿಳಿದುಬಂದಿದೆ.

ಮೇ 9ರಂದು (ಮಂಗಳವಾರ) 3.30ಕ್ಕೆ ಕಚೇರಿಗೆ ಹಾಜರಾಗುವಂತೆ ಅವರಿಗೆ ಇಲಾಖೆ ನಿರ್ದೇಶಿಸಿರುವುದು ಗೊತ್ತಾಗಿದೆ.

'ನೋಟಿಸ್ ಬಂದಿರುವುದು ನಿಜ' ಎಂದು ಶಾಸಕರ ಆಪ್ತ ಮೂಲಗಳು ತಿಳಿಸಿವೆ.

ತಾಲ್ಲೂಕಿನ ಜಿಯೋನ್ ಹಿಲ್ಸ್ ಗಾಲ್ಸ್ ರೆಸಾರ್ಟ್‌ನ ವಿಲ್ಲಾ ಮೇಲೆ ಕೆಜಿಎಫ್ ಪೊಲೀಸರು ಈಚೆಗೆ ದಾಳಿ ನಡೆಸಿ ಅಕ್ರಮವಾಗಿ ಇಟ್ಟಿದ್ದ ₹ 4.04 ಕೋಟಿ ವಶಕ್ಕೆ ಪಡೆದಿದ್ದರು. ಅಲ್ಲದೇ, ಶಾಸಕ ನಾರಾಯಣಸ್ವಾಮಿ ಹಾಗೂ ಉದ್ಯಮಿ ರಮೇಶ್ ಯಾದವ್ ಅವರ ಮೇಲೆ ಬಂಗಾರಪೇಟೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿದ್ದರು.

ಸೌಲಭ್ಯ ಒದಗಿಸುವುದೇ ಶಾಲಾ ಮುಖ್ಯಸ್ಥರಿಗೆ ಸವಾಲಿನ ಕಾರ್ಯ

ಮತಗಟ್ಟೆ ಸಿಬ್ಬಂದಿ ಊಟೋಪಚಾರಕ್ಕೆ ಬರೀ ₹ 150 ನಿಗದಿ

• ಬಾಲಕೃಷ್ಣ ಪಿ.ಎಚ್.

ದಾವಣಗೆರೆ: ಚುನಾವಣಾ ಸಿಬ್ಬಂದಿಯ ನಾಲ್ಕು ಹೊತ್ತಿನ ಊಟ, ಉಪಾಹಾರಕ್ಕೆ ಚುನಾವಣಾ ಆಯೋಗವು ಕೇವಲ ₹ 150 ನಿಗದಿ ಮಾಡಿದೆ. ಆ ಮೊತ್ತದಲ್ಲಿ ಆಹಾರ ತಯಾರಿಸಿ ಒದಗಿಸಬೇಕಾದ ಸವಾಲು ಆಯಾ ಮತಗಟ್ಟೆ ಸ್ಥಾಪನೆಯಾಗಿರುವ ಶಾಲೆಗಳ ಮುಖ್ಯಸ್ಥರಿಗೆ ಎದುರಾಗಿದೆ.

'ಒಂದು ಮತಗಟ್ಟೆ ಸಿಬ್ಬಂದಿಗೆ ಕೇವಲ ₹ 600 ನೀಗದಿಪಡಿಸಲಾಗಿದೆ. ಈ ಮೊತ್ತದ ನೆರವಿನೊಂದಿಗೆ, ಅಕ್ಷರ ದಾಸೋಹದ ಮೂಲಕ ಊಟೋಪಚಾರ ನಿರ್ವಹಿಸಬೇಕು' ಎಂದು ಚುನಾವಣಾ ಆಯೋಗ ಹೊರಡಿಸಿರುವ ಆದೇಶದ ಮೇರೆಗೆ ಜಿಲ್ಲಾ ಚುನಾವಣಾಧಿಕಾರಿ ಮತ್ತು ಹೆಚ್ಚುವರಿ ಚುನಾವಣಾಧಿಕಾರಿ ಶಾಲಾ ಮುಖ್ಯಸ್ಥರಿಗೆ ಸೂಚಿಸಿದ್ದಾರೆ.



ಚುನಾವಣಾ ಆಯೋಗ ನಿಗದಿಪಡಿಸಿದ್ದಷ್ಟೇ ಜಿಲ್ಲಾಡಳಿತ ನೀಡಲು ಸಾಧ್ಯ. ಆಯೋಗವು ದರವನ್ನು ಪುನರ್ ಪರಿಶೀಲಿಸಿ ಹೆಚ್ಚಿಸಿದರೆ ಅದನ್ನು ಪರಿಗಣಿಸಲಾಗುವುದು

ಪಿ.ಎನ್. ಲೋಕೇಶ್
ಹೆಚ್ಚುವರಿ ಜಿಲ್ಲಾಧಿಕಾರಿ, ದಾವಣಗೆರೆ

ಪ್ರತಿ ಮತಗಟ್ಟೆಯಲ್ಲಿ ನಾಲ್ವರು ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಾರೆ. ಮತದಾನದ ಹಿಂದಿನ ದಿನವೇ ಅವರು ಮತಯಂತ್ರ ಸಹಿತ ಸಂಬಂಧಿಸಿದ ಪರಿಕರಗಳ ಸಮೇತ ಮತಗಟ್ಟೆ ತಲುಪಲಿದ್ದಾರೆ. ಮೇ 9ರ ರಾತ್ರಿಯ ಊಟ, ಚುನಾವಣೆಯ ದಿನವಾದ ಮೇ 10ರಂದು ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ಸಂಜೆ ಲಘು ಉಪಾಹಾರವನ್ನು ಈ ಹಣದಲ್ಲಿಯೇ ಭರಿಸಬೇಕು ಎಂಬುದು ಈ ಸೂಚನೆ.

ಅಲ್ಲದೇ, ಮತದಾನದ ದಿನ ಭದ್ರತಾ ವ್ಯವಸ್ಥೆಗೆ ನಿಯುಕ್ತರಾಗುವ ಪೊಲೀಸ್ ಇಲಾಖೆಯ ಸಿಬ್ಬಂದಿಯ ಊಟ–ಉಪಾಹಾರಕ್ಕೆ ಪ್ರತ್ಯೇಕವಾಗಿ ದರ ನಿಗದಿ ಮಾಡಲಾಗಿದೆ. ಪೊಲೀಸ್ ಇಲಾಖೆ ಒಬ್ಬ ಸಿಬ್ಬಂದಿಗೆ ತಲಾ ₹ 250ರಂತೆ ನಿಗದಿಪಡಿಸಿದೆ. ಈ ಹಣದ ನೆರವಿನಿಂದ ಅವರಿಗೂ ಅಕ್ಷರ ದಾಸೋಹ ಯೋಜನೆ ಅಡಿ ಊಟೋಪಚಾರ ಸಿದ್ಧಪಡಿಸುವ ಜವಾಬ್ದಾರಿ ವಹಿಸಲಾಗಿದೆ.

₹ 150ಕ್ಕೆ ಗುಣಮಟ್ಟದ ಆಹಾರವನ್ನು ನಾಲ್ಕು ಹೊತ್ತು ನೀಡುವುದು ಕಷ್ಟ. ಸಿಬ್ಬಂದಿ ಬಗ್ಗೆ ಕಾಳಜಿ ಇದ್ದರೆ, ಪೊಲೀಸ್ ಸಿಬ್ಬಂದಿಗೆ ನಿಗದಿಪಡಿಸಿದಂತೆ ಒಬ್ಬರಿಗೆ ಕನಿಷ್ಠ ₹ 250 ನೀಡಬೇಕು. ಆಹಾರದ ವೆಚ್ಚ ನಿಗದಿ ಮಾಡುವಾಗ ಈ ತಾರತಮ್ಯ ಏಕೆ ಎಂಬುದು ತಿಳಿಯುತ್ತಿಲ್ಲ ಎಂದು ದಾವಣಗೆರೆ ಜಿಲ್ಲೆಯ ಶಾಲೆಯೊಂದರ ಮುಖ್ಯಸ್ಥರೊಬ್ಬರು 'ಪ್ರಜಾವಾಣಿ' ಎದುರು ಅಳಲು ತೋಡಿಕೊಂಡರು.

ಶಾಲೆಯ ಮುಖ್ಯಸ್ಥರು ತಮ್ಮ ಕಿಸೆಯಿಂದ ಹಣ ಹಾಕಿ ಒಳ್ಳೆಯ ಆಹಾರ ನೀಡಬೇಕಾಗುತ್ತದೆ. ಇಲ್ಲದಿದ್ದರೆ ಆಯಾ ಶಾಲೆಯವರಿಗೆ ಕೆಟ್ಟ ಹೆಸರು ಬರುತ್ತದೆ. ಇದನ್ನು ಪರಿಗಣಿಸಿ ಚುನಾವಣಾ ಆಯೋಗವು ದರ ಹೆಚ್ಚಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಈ ಬಗ್ಗೆ ಸರ್ಕಾರಿ ನೌಕರರ ಸಂಘವೂ ಆಕ್ಷೇಪ ವ್ಯಕ್ತಪಡಿಸಿದೆ. ಚುನಾವಣಾ ಆಯೋಗವು ಗಮನಹರಿಸಿ ಈ ಸಮಸ್ಯೆಯನ್ನು ಸರಿಪಡಿಸಬೇಕು ಎಂದು ಜಿಲ್ಲಾಧಿಕಾರಿ ಮೂಲಕ ಚುನಾವಣಾ ಆಯೋಗಕ್ಕೆ ಸಂಘ ಮನವಿ ಮಾಡಿದೆ.

'ಅಭಿವೃದ್ಧಿ ಕಾರ್ಯಗಳೇ ಶ್ರೀರಕ್ಷೆ'

ಪ್ರಜಾವಾಣಿ ವಾರ್ತೆ

ಕೆಂಗೇರಿ: 'ಕ್ಷೇತ್ರದಲ್ಲಿ ಕೈಗೊಂಡಿರುವ ಜನಪರ ಯೋಜನೆಗಳಿಗೆ ಮತದಾರರು ಬೆಂಬಲ ನೀಡಲಿದ್ದಾರೆ' ಎಂದು ಯಶವಂತಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ಟಿ.ಸೋಮಶೇಖರ್ ವಿಶ್ವಾಸ ವ್ಯಕ್ತಪಡಿಸಿದರು.

ಹೆಮ್ಮಿಗೆಪುರ ವಾರ್ಡಿನ ರಘುವನಹಳ್ಳಿ, ತಲಘಟ್ಟಪುರ, ವಾಜರಹಳ್ಳಿ, ಗಾಣಿಗರಪಾಳ್ಯ, ಚಿಕ್ಕೇಗೌಡನ ಪಾಳ್ಯ, ಶ್ರೀನಿವಾಸಪುರ ಕಾಲೋನಿ ಹಾಗೂ ಕೆಂಗೇರಿ ವಾರ್ಡ್‌ನಲ್ಲಿ ರೋಡ್ ಶೋ ನಡೆಸಿ ಅವರು ಮಾತನಾಡಿದರು.

'ಕೋವಿಡ್ ಸಮಯದಲ್ಲಿ ಫುಡ್ ಕಿಟ್, ವ್ಯಾಕ್ಸಿನ್ ಪೂರೈಸಿದ್ದೇನೆ. ಮೃತರ ಕುಟುಂಬದ ಸದಸ್ಯರಿಗೆ ವೈಯಕ್ತಿಕವಾಗಿ ಧನ ಸಹಾಯ ಮಾಡಿದ್ದೇನೆ. ಕ್ಷೇತ್ರದಲ್ಲಿ ಮೂಲಸೌಕರ್ಯಕ್ಕೆ ಒತ್ತು ನೀಡಿರುವುದರಿಂದ ಕ್ಷೇತ್ರದ ಜನತೆ ಅಭಿವೃದ್ಧಿಗೆ ಮಣೆ ಹಾಕಲಿದ್ದಾರೆಯೇ ಹೊರತು ಕಣ್ಣೀರು ಹಾಕುತ್ತ ಬರುವ ವ್ಯಕ್ತಿಗಲ್ಲ. ಕೋವಿಡ್ ಸಂಕಷ್ಟದ ಸಮಯದಲ್ಲಿ ಮನೆ ಸೇರಿಕೊಂಡಿದ್ದ ಜೆಡಿಎಸ್ ಅಭ್ಯರ್ಥಿ ಈಗ ಜನರ ಬಳಿಗೆ ಬಂದು ಕಣ್ಣೀರು ಹಾಕುತ್ತಿದ್ದಾರೆ' ಎಂದು ಟೀಕಿಸಿದರು.



ಹೆಮ್ಮಿಗೆಪುರ ವಾರ್ಡಿನಲ್ಲಿ ಬಿಜೆಪಿ ಅಭ್ಯರ್ಥಿ ಎಸ್.ಟಿ.ಸೋಮಶೇಖರ್ ಪ್ರಚಾರ ನಡೆಸಿದರು. ಮುಖಂಡರಾದ ಆರ್ಯ ಶ್ರೀನಿವಾಸ್, ವಾಜರಹಳ್ಳಿ ಶಶಿಕುಮಾರ್ ಇದ್ದರು

ಎಸ್‌ಎಸ್‌ಎಂ ಶಾಲೆಗೆ ಶೇ 100 ಫಲಿತಾಂಶ


ಅಕ್ಷಯಾ ಎಸ್. ಅರ್ಶಿ

ಬೆಂಗಳೂರು: ಪಿಇಎಸ್ ಶಿಕ್ಷಣ ಸಂಸ್ಥೆಯ ಎಸ್‌ಎಸ್‌ಎಂ ಪಬ್ಲಿಕ್ ಶಾಲೆಯ ವಿದ್ಯಾರ್ಥಿ ಅಕ್ಷಯಾ ಎಸ್. ಅರ್ಶಿ (ಶೇ 99.04) ಅಂಕ ಪಡೆದು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ 6ನೇ ಸ್ಥಾನ ಪಡೆದಿದ್ದಾರೆ. ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶಾಲೆಯ 40 ವಿದ್ಯಾರ್ಥಿಗಳು ಶೇ 85ಕ್ಕೂ ಹೆಚ್ಚು ಅಂಕಗಳನ್ನು ಪಡೆದಿದ್ದು, ಶಾಲೆಯ ಎಲ್ಲ ವಿದ್ಯಾರ್ಥಿಗಳು ತೇರ್ಗಡೆಯಾಗುವ ಮೂಲಕ ಶೇ 100 ರಷ್ಟು ಫಲಿತಾಂಶ ಬಂದಿದೆ. ಪಿಇಎಸ್ ವಿಶ್ವವಿದ್ಯಾಲಯದ ಸಂಸ್ಥಾಪಕ ಮತ್ತು ಕುಲಾಧಿಪತಿ ಡಾ. ಎಂ.ಆರ್. ದೊರೆಸ್ವಾಮಿ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

ಶೇ 3.84 ಕುಸಿತ • ಕಳೆದ ಸಾಲಿನಲ್ಲಿ ಶೇ 71.37 ಫಲಿತಾಂಶ • ಉನ್ನತ ಶ್ರೇಣಿಯಲ್ಲಿ 73 ವಿದ್ಯಾರ್ಥಿಗಳು ತೇರ್ಗಡೆ

ಬಿಬಿಎಂಪಿ ಶಾಲೆ: ಶೇ 67.53ರಷ್ಟು ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ 33 ಪ್ರೌಢಶಾಲೆಗಳು 2022-23ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ 67.53ರಷ್ಟು ಫಲಿತಾಂಶ ಪಡೆದಿವೆ.

33 ಪ್ರೌಢಶಾಲೆಗಳಿಂದ ಒಟ್ಟು 2,270 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಇದರಲ್ಲಿ 1,533 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 73 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ಪಾಸಾಗಿದ್ದಾರೆ. 2021-22ನೇ ಸಾಲಿನಲ್ಲಿ ಶೇ 71.37 ಫಲಿತಾಂಶ ಬಂದಿತ್ತು.

ಪ್ರಸಕ್ತ ಸಾಲಿನಲ್ಲಿ ಬಸವನಗುಡಿಯ ಶಾಲೆ ಶೇ 100ರಷ್ಟು ಫಲಿತಾಂಶ ಗಳಿಸಿದೆ. ಈ ಶಾಲೆ 12 ವಿದ್ಯಾರ್ಥಿಗಳೂ ಉತ್ತೀರ್ಣರಾಗಿದ್ದಾರೆ. ವಿಜಯನಗರ ಶೇ 96.47, ಮತ್ತಿಕೆರೆ ಶೇ 91.95, ಹೇರೋಹಳ್ಳಿ ಶೇ 88.34, ಶ್ರೀರಾಮಪುರ ಶಾಲೆ ಶೇ 84.06ರಷ್ಟು ಫಲಿತಾಂಶ ಗಳಿಸಿದೆ. ಹೇರೋಹಳ್ಳಿ ಶಾಲೆಯಲ್ಲಿ 15, ಲಗ್ಗೆರೆಯಲ್ಲಿ 14, ಬೈರವೇಶ್ವರನಗರ ಶಾಲೆಯಲ್ಲಿ 13 ವಿದ್ಯಾರ್ಥಿಗಳು ಉನ್ನತ ಶ್ರೇಣಿ ಪಡೆದಿದ್ದಾರೆ.

ಬೈರವೇಶ್ವರನಗರದ ಶಾಲೆ ಯಿಂದ ಅತಿಹೆಚ್ಚು ಅಂದರೆ 273 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಹೇರೋ ಹಳ್ಳಿಯಿಂದ 223, ಕ್ಲೀವ್‌ಲ್ಯಾಂಡ್‌ಟೌನ್ ಶಾಲೆಯಿಂದ 219 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಬೈರವೇಶ್ವರ ಶಾಲೆಯಲ್ಲಿ ಅತಿಹೆಚ್ಚು ಅಂದರೆ 220 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಕೆ.ಜಿ.ನಗರದ ಶಾಲೆಯಲ್ಲಿ ಆರೂ ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ. ಪಾದರಾಯನಪುರ ಶಾಲೆಯ 119 ಹಾಗೂ ಕ್ಲೀವ್ ಲ್ಯಾಂಡ್‌ಟೌನ್ ಶಾಲೆಯ 86 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ.

ಕುಸಿದ ಫಲಿತಾಂಶ: ಕಳೆದ ಸಾಲಿನಲ್ಲಿ ಶೇ 71.37ರಷ್ಟು ಫಲಿತಾಂಶ ಕಂಡಿದ್ದ ಬಿಬಿಎಂಪಿ ಶಾಲೆಗಳು ಈ ಬಾರಿ ಶೇ 3.84ರಷ್ಟು ಕುಸಿತ ಕಂಡಿವೆ.

ವರ್ಷದಿಂದ ವರ್ಷಕ್ಕೆ ಹೆಚ್ಚಿನ ಸೌಲಭ್ಯ, ಸ್ಮಾರ್ಟ್ ಕ್ಲಾಸ್ ಹಾಗೂ ಗುಣಮಟ್ಟದ ಶಿಕ್ಷಣ ನೀಡುವ ಭರವಸೆ ನೀಡುತ್ತಿರುವ ಬಿಬಿಎಂಪಿ, ಫಲಿತಾಂಶದಲ್ಲಿ ಮಾತ್ರ ಕುಸಿತ ಕಂಡಿದೆ. ಶಿಕ್ಷಕರ ಕೊರತೆ, ಶಿಕ್ಷಕರಿಗೆ ಬೇರೆ ವಿಭಾಗಗಳಲ್ಲಿ ಕೆಲಸ ನೀಡಿರುವುದರಿಂದ ಬೋಧನೆಯಲ್ಲಿ ಆಸಕ್ತಿ ಕಡಿಮೆಯಾಗಿದೆ. ಹೀಗಾಗಿ ಫಲಿತಾಂಶ ಕುಸಿಯುತ್ತಿದೆ ಎಂದು ಪೋಷಕರು ದೂರುತ್ತಾರೆ. 2018-19ನೇ ಸಾಲಿನಲ್ಲಿ ಶೇ 52.24 ಹಾಗೂ 2019-20ನೇ ಸಾಲಿನಲ್ಲಿ ಶೇ 50.16 ರಷ್ಟು ಫಲಿತಾಂಶ ಕಂಡಿತ್ತು.

ಬೆಂಗಳೂರು ಉತ್ತರ 32, ದಕ್ಷಿಣಕ್ಕೆ 33ನೇ ಸ್ಥಾನ

ಬೆಂಗಳೂರು: 2022-23ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಫಲಿತಾಂಶವು ಸೋಮವಾರ ಪ್ರಕಟವಾಗಿದ್ದು, ಬೆಂಗಳೂರಿನ ಉತ್ತರ ಹಾಗೂ ದಕ್ಷಿಣ ಶೈಕ್ಷಣಿಕ ಜಿಲ್ಲೆಗಳಲ್ಲಿ ಈ ವರ್ಷವೂ ಫಲಿತಾಂಶದಲ್ಲಿ ಸುಧಾರಣೆ ಕಂಡಿಲ್ಲ.

35 ಶೈಕ್ಷಣಿಕ ಜಿಲ್ಲೆಗಳ ಪೈಕಿ ಬೆಂಗಳೂರು ಉತ್ತರ ಜಿಲ್ಲೆಗೆ 32ನೇ ಸ್ಥಾನ (ಶೇ 80.93) ಹಾಗೂ ದಕ್ಷಿಣ ಜಿಲ್ಲೆಗೆ 33ನೇ ಸ್ಥಾನ (ಶೇ 78.95) ಬಂದಿದೆ.

2021-22ರಲ್ಲಿ 34 ಶೈಕ್ಷಣಿಕ ಜಿಲ್ಲೆಗಳಿದ್ದವು. ಆಗ ದಕ್ಷಿಣ ಜಿಲ್ಲೆಯು 33ನೇ (79.44) ಸ್ಥಾನದಲ್ಲಿತ್ತು. ಈ ಬಾರಿ 35 ಶೈಕ್ಷಣಿಕ ಜಿಲ್ಲೆಗಳಿದ್ದು 33ನೇ ಸ್ಥಾನದಲ್ಲೇ ಇದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಇಲ್ಲಿ 0.49ರಷ್ಟು ಫಲಿತಾಶ ಕುಸಿತವಾಗಿದೆ.

ದಕ್ಷಿಣ ಜಿಲ್ಲೆಯಲ್ಲಿ 54,336 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಆ ಪೈಕಿ 42,524 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ ಎಂದು ದಕ್ಷಿಣ ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಪಿ. ಬೈಲಾಂಜಿನಪ್ಪ ತಿಳಿಸಿದ್ದಾರೆ.

ಸರ್ಕಾರಿಯ ಶಾಲೆಯ 7,097 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಅದರಲ್ಲಿ 4,564 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. 2,533 ವಿದ್ಯಾರ್ಥಿಗಳು ಅನುತ್ತೀರ್ಣಗೊಂಡಿದ್ದಾರೆ.

ಅನುದಾನಿತ ಶಾಲೆಗಳ 9,805 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಅದರಲ್ಲಿ 6,759 ಉತ್ತೀರ್ಣರಾಗಿ, 3,044 ಅನುತ್ತೀರ್ಣಗೊಂಡಿದ್ದಾರೆ. ಅನುದಾನರಹಿತ ಶಾಲೆಗಳಿಂದ 37,434 ವಿದ್ಯಾರ್ಥಿಗಳು ಹಾಜರಾಗಿದ್ದರು. ಅದರಲ್ಲಿ 31,201 ತೇರ್ಗಡೆಗೊಂಡಿದ್ದಾರೆ. ಅದರಲ್ಲಿ 6,226 ಅನುತ್ತೀರ್ಣವಾಗಿದ್ದಾರೆ. ಒಟ್ಟು 11,803 ವಿದ್ಯಾರ್ಥಿಗಳು ಅನುತ್ತೀರ್ಣವಾಗಿದ್ದಾರೆ.

'ಫಲಿತಾಂಶ ಸುಧಾರಣೆಗೆ ಹಲವು ಕ್ರಮ ಕೈಗೊಳ್ಳಲಾಗುವುದು. ಮುಂದಿನ ವರ್ಷ 15ರ ಒಳಗಿನ ಸ್ಥಾನ ತಲುಪಲು ವಿಶೇಷ ವಿಶೇಷ ತರಗತಿ ನಡೆಸಲಾಗುವುದು' ಎಂದು ಬೈಲಾಂಜಿನಪ್ಪ ತಿಳಿಸಿದರು.

ರಾಜ್ಯಕ್ಕೆ ಸ್ಫೂರ್ತಿ ತೃತೀಯ ಸ್ಥಾನ


ಸ್ಫೂರ್ತಿ ಎಸ್.

ಪೀಣ್ಯ ದಾಸರಹಳ್ಳಿ: ಸಮೀಪದ ಹಾವನೂರು ಬಡಾವಣೆಯ ಸೌಂದರ್ಯ ಶಾಲೆಯ ವಿದ್ಯಾರ್ಥಿನಿ ಸ್ಫೂರ್ತಿ ಎಸ್. ಅವರು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 625ಕ್ಕೆ 623 (ಶೇ 99.68) ಅಂಕಗಳನ್ನು ಪಡೆದು ರಾಜ್ಯಕ್ಕೆ ಮೂರನೇ ಸ್ಥಾನ ಪಡೆದಿದ್ದಾರೆ.

'ಶಾಲೆಗೆ ಈ ಬಾರಿ ಶೇ100 ಫಲಿತಾಂಶ ದೊರೆತಿದೆ. 85 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 61 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ' ಎಂದು ಪ್ರಾಂಶುಪಾಲರಾದ ಚಿನ್ನಮ್ಮ ಕಾವೇರಪ್ಪ, ಕಾಲೇಜಿನ ಪ್ರಾಂಶುಪಾಲ ಮಹಾಬಲೇಶ್ವರ ತುಂಗ ತಿಳಿಸಿದ್ದಾರೆ.





ನಗರದಲ್ಲಿ ಸೋಮವಾರ ಸಂಜೆ ಸುರಿದ ಮಳೆಯಿಂದ ಹೊಸೂರು ರಸ್ತೆಯಲ್ಲಿ ಆವರಿಸಿದ್ದ ಮಳೆ ನೀರು (ಎಡಚಿತ್ರ). ಹೊಸೂರು ರಸ್ತೆಯಲ್ಲಿ ತುಂಬಿದ ನೀರನ್ನು ಚರಂಡಿಗೆ ಹರಿಯುವಂತೆ ಮಾಡಿದ ಸಾರ್ವಜನಿಕರು. –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ನಗರದಲ್ಲಿ ಮೇ 12ರ ತನಕ ಮಳೆ • ಹೊಸಕೆರೆಹಳ್ಳಿ ವ್ಯಾಪ್ತಿಯಲ್ಲಿ ಭಾರಿ ಮಳೆಗೆ ಅಪಾರ ಹಾನಿ

ಧಾರಾಕಾರ ಮಳೆ: ಕುಸಿದ ಮನೆ, ಕಾರುಗಳು ಜಖಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸೋಮವಾರ ಮಧ್ಯಾಹ್ನ ಹಾಗೂ ರಾತ್ರಿ ಧಾರಾಕಾರ ಮಳೆ ಸುರಿದ ಪರಿಣಾಮ ಬಹುತೇಕ ರಸ್ತೆಗಳು ಹೊಳೆಯಂತಾಗಿದ್ದವು. ಬಿರುಗಾಳಿಗೆ ನಗರದ ಕೆಲವು ಪ್ರದೇಶದಲ್ಲಿ ಮರಗಳು ಧರೆಗುರುಳಿ ವಾಹನ ಸಂಚಾರಕ್ಕೆ ಅಡಚಣೆ ಉಂಟಾಯಿತು.

ವೀರಭದ್ರೇಶ್ವರ ನಗರದಲ್ಲಿ ಗೋಪಾಲ್ ಅವರ ಮನೆ ಭಾರಿ ಮಳೆಗೆ ಕುಸಿದಿದೆ. ಪಕ್ಕದಲ್ಲಿದ್ದ ಅಪಾರ್ಟ್‌ಮೆಂಟ್‌ವೊಂದರ ತಡೆಗೋಡೆ ಕುಸಿದು ಮನೆಯ ಬಿದ್ದು ಮನೆ ನೆಲಸಮವಾಗಿದೆ. ತಡೆಗೋಡೆ ಪಕ್ಕದಲ್ಲಿದ್ದ ಎರಡು ಕಾರುಗಳು ಸಂಪೂರ್ಣ ಜಖಂಗೊಂಡಿವೆ. ಮತ್ತೆರಡು ಕಾರುಗಳಿಗೂ ಹಾನಿಯಾಗಿದೆ.

ಹೊಸಕೆರೆಹಳ್ಳಿ ಭಾಗದಲ್ಲಿ ಭಾರಿ ಮಳೆಯಿಂದ ರಾಜಕಾಲುವೆ ತುಂಬಿ ಹರಿಯಿತು. ಸುತ್ತಮುತ್ತಲ ಬಡಾವಣೆಗಳಲ್ಲಿ ನಿಲುಗಡೆ ಮಾಡಿದ್ದ ವಾಹನಗಳು ಜಲಾವೃತಗೊಂಡವು. ಅಂಗಡಿ ಹಾಗೂ ಮನೆಗಳಿಗೂ ನೀರು ನುಗ್ಗಿ ಅಪಾರ ಹಾನಿ ಸಂಭವಿಸಿದೆ.

ದಿಢೀರ್ ಸುರಿದ ಮಳೆಯಿಂದ ರಸ್ತೆಗಳ ಮೇಲೆ ಅಪಾರ ಪ್ರಮಾಣದ ನೀರು ಹರಿಯಿತು. ಕೆಳಸೇತುವೆಯಲ್ಲಿ ಮಳೆಯ ನೀರು ಸಂಗ್ರಹಗೊಂಡು ವಾಹನ ಸಂಚಾರಕ್ಕೆ ಅಡ್ಡಿ ಪಡಿಸಿತು. ತಗ್ಗುಪ್ರದೇಶಕ್ಕೆ ನೀರು ನುಗ್ಗಿ ಸಮಸ್ಯೆ ಉಂಟಾಗಿದೆ. ಚರಂಡಿಗಳಲ್ಲಿ ಪ್ಲಾಸ್ಟಿಕ್ ಬಾಟಲಿಗಳು ಸಂಗ್ರಹಗೊಂಡು ಮಳೆಯ ನೀರು ಸರಾಗವಾಗಿ ಹರಿಯಲು ಸಾಧ್ಯವಾಗಲಿಲ್ಲ. ಇದರಿಂದ ರಸ್ತೆ ಹಾಗೂ ಬಡಾವಣೆಗೆ ನೀರು ನುಗ್ಗಿದೆ.



ಧಾರಾಕಾರ ಮಳೆ ಸುರಿದ ಕಾರಣ ಮೈಸೂರು ರಸ್ತೆ ಸಂಪೂರ್ಣ ಜಲಾವೃತಗೊಂಡಿತ್ತು. –ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ದಿನವಿಡೀ ಮೋಡ ಕವಿದ ವಾತಾವರಣ ಇತ್ತು. ಆಗಾಗ ಜಿಟಿಜಿಟಿ ಮಳೆಯಾಗುತ್ತಿತ್ತು. ಆದರೆ, ರಾತ್ರಿ ಧಾರಾಕಾರವಾಗಿ ಸುರಿದ ಮಳೆಯಿಂದ ವಾತಾವರಣ ಮತ್ತಷ್ಟು ತಂಪಾಯಿತು.

ನಗರದಲ್ಲಿ ಒಂದು ವಾರದಿಂದ ಮಳೆಯಾಗುತ್ತಿದ್ದು, ಉಷ್ಣಾಂಶವು ಕುಸಿದಿದೆ. ಏಪ್ರಿಲ್ 15ರ ವೇಳೆಯಲ್ಲಿ ನಗರದ ಉಷ್ಣಾಂಶವು 36 ಡಿಗ್ರಿ ಸೆಲ್ಸಿಯಸ್‌ಗೆ ತಲುಪಿ, ಧಗೆ ಹೆಚ್ಚಿತ್ತು. ಜನರು ಕೂಲರ್, ಎ.ಸಿ ಹಾಗೂ ಫ್ಯಾನ್ ಮೊರೆ ಹೋಗಿದ್ದರು. ಈಗ ವಾತಾವರಣ ತಂಪಾಗಿದೆ.

ನಗರದಲ್ಲಿ ಸೋಮವಾರ ಗರಿಷ್ಠ 29 ಹಾಗೂ ಕನಿಷ್ಠ 21 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು. ಮೇ 12ರ ವರೆಗೂ ಇದೇ ವಾತಾವರಣ ಇರಲಿದ್ದು, ಸಂಜೆ ವೇಳೆಯಲ್ಲಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಸೂಚನೆ ನೀಡಿದೆ.

ನಾಗಸಂದ್ರ, ಜಾಲಹಳ್ಳಿ, ಪೀಣ್ಯ, ಪೀಣ್ಯ ಕೈಗಾರಿಕಾ ಪ್ರದೇಶ, ಸುಂಕದಕಟ್ಟೆ, ಬ್ಯಾಡರಹಳ್ಳಿ, ಸುಮನಹಳ್ಳಿ, ಕೊಟ್ಟಿಗೆ ಪಾಳ್ಯ, ಹೇರೋಹಳ್ಳಿ, ಕೆಂಗೇರಿ, ವಿಜಯನಗರ, ವಿಧಾನಸೌಧ ಸುತ್ತಮುತ್ತ, ಸದಾಶಿವನಗರ, ಯಶವಂತಪುರ, ರಾಜರಾಜೇಶ್ವರಿ ನಗರ, ರಾಜಾಜಿನಗರ, ಮಹಾಲಕ್ಷ್ಮಿಲೇಔಟ್ ಭಾಗದಲ್ಲಿ ಜೋರು ಮಳೆ ಸುರಿದಿದೆ.

ಚಾಮರಾಜಪೇಟೆ, ಅಶೋಕನಗರ, ಹಲಸೂರು, ದೊಡ್ಡಬೊಮ್ಮಸಂದ್ರ, ಕೆ.ಆರ್.ಮಾರುಕಟ್ಟೆ, ಚಿಕ್ಕಪೇಟೆ, ಮೆಜೆಸ್ಟಿಕ್, ಗಾಂಧಿನಗರ, ದೀಪಾಂಜಲಿ ನಗರ, ಕಾಮಾಕ್ಷಿಪಾಳ್ಯ, ಮಲ್ಲೇಶ್ವರ, ಸ್ಯಾಟಲೈಟ್ ಬಸ್ ನಿಲ್ದಾಣ, ಗಿರಿನಗರ, ಹನುಮಂತನಗರ, ಜಯನಗರ, ಬನಶಂಕರಿ, ಶಿವಾಜಿನಗರ, ಕೋರ ಮಂಗಲ, ವಿವೇಕನಗರ, ಇಂದಿರಾ ನಗರ, ವಸಂತನಗರ, ಸಂಪಂಗಿರಾಮನಗರದ ವ್ಯಾಪ್ತಿಯಲ್ಲೂ ಜೋರು ಮಳೆಯಾಗಿದೆ.

ಮಳೆಯಿಂದ ದ್ವಿಚಕ್ರ ಸವಾರರು ಪರದಾಡಿದರು. ಕೆಲಸ ಮುಗಿಸಿ ಮನೆಗೆ ಹೊರಟವರು ಮಾರ್ಗಮಧ್ಯದಲ್ಲಿ ಬಸ್ ತಂಗುದಾಣ ಹಾಗೂ ಅಂಗಡಿಗಳ ಎದುರು ಆಶ್ರಯ ಪಡೆದಿದ್ದರು. ಮಳೆ ನಿಂತ ಮೇಲೆ ಮನೆಯತ್ತ ಹೆಜ್ಜೆ ಹಾಕಿದರು.



ಕಾರ್ಯಕ್ರಮದಲ್ಲಿ ಎಲ್. ಹರ್ಷ, ಶ್ರ.ದೇ. ಪಾರ್ಶ್ವನಾಥ, ಶ್ರೀರಾಮೇಗೌಡ ಹಾಗೂ ಪ್ರಕಾಶಮೂರ್ತಿ ಅವರು ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್.ಎಂ. ವಿಶ್ವೇಶ್ವರಯ್ಯ ಹಾಗೂ ಸರ್. ಮಿರ್ಜಾ ಇಸ್ಮಾಯಿಲ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

'ಕನ್ನಡ ಅಸ್ಮಿತೆ ಮರೆಯುತ್ತಿರುವ ಕಸಾಪ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇವರನ್ನೇ ಪ್ರಶ್ನಿಸುವ ಕೆಲಸವನ್ನು ನಮ್ಮ ಜನಪದರು ಮಾಡಿದ್ದಾರೆ. ಅದು ಕನ್ನಡಿಗರ ಅಸ್ಮಿತೆ. ಆದರೆ, ಸದಸ್ಯರಿಂದ ಗೆದ್ದ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷರು ಪ್ರಶ್ನಿಸುವವರ ಮೇಲೆ ಮೊಕದ್ದಮೆ ಹೂಡುವ ಬೆದರಿಕೆ ತಂತ್ರ ಅನುಸರಿಸುತ್ತಿದ್ದಾರೆ' ಎಂದು ಕನ್ನಡ ಪರ ಹೋರಾಟಗಾರ ಶ್ರ. ದೇ.ಪಾರ್ಶ್ವನಾಥ್ ಆರೋಪಿಸಿದರು.

ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ನಗರದಲ್ಲಿ ಹಮ್ಮಿಕೊಂಡ ಸಂಸ್ಥಾಪನಾ ದಿನಾಚರಣೆಯಲ್ಲಿ 'ಕನ್ನಡದ ಅಸ್ಮಿತೆ–ಕನ್ನಡ ಸಾಹಿತ್ಯ ಪರಿಷತ್ತು' ಎಂಬ ವಿಷಯದ ಮೇಲೆ ಉಪನ್ಯಾಸ ನೀಡಿದರು.

ಕಸಾಪ ಅಧ್ಯಕ್ಷ ಮಹೇಶ ಜೋಶಿ ಅವರ ವಿರುದ್ಧ ಪರೋಕ್ಷವಾಗಿ ಅಸಮಾಧಾನ ವ್ಯಕ್ತಪಡಿಸಿದ ಅವರು, 'ಕನ್ನಡ ಆದಿಕವಿ ಪಂಪನ 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಸಾಲುಗಳು ಪರಿಷತ್ತಿನ ಅಸ್ಮಿತೆಯಾಗಿತ್ತು. ಇದು ವೈವಿಧ್ಯತೆಯಲ್ಲಿ ಏಕತೆಯನ್ನು ಮೂಡಿಸುವಂತಹ ಮಾತು. ಈಗ ಕನ್ನಡ ಅಸ್ಮಿತೆಯ ಈ ನುಡಿ ಪರಿಷತ್ತಿನ ದ್ವಾರ ಫಲಕದಿಂದಲೇ ಕಣ್ಮರೆಯಾಗಿದೆ. ಕನ್ನಡ ಅಸ್ಮಿತೆಯನ್ನು ಸಾಹಿತ್ಯ ಪರಿಷತ್ತು ಮರೆಯುತ್ತಿರುವುದು ದುರದೃಷ್ಟಕರ. ಸದಸ್ಯರಿಂದ ಗೆದ್ದವರು ಸದಸ್ಯರಿಗೆ ಕೃತಜ್ಞತೆಯಿಂದ ಇರಬೇಕು. ಆದರೆ, ಸರ್ವಾಧಿಕಾರಿಯಾಗಿ ವರ್ತಿಸುವುದು ಕನ್ನಡದ ಅಸ್ಮಿತೆಯಲ್ಲ' ಎಂದರು.

ಕನ್ನಡಪರ ಚಿಂತಕ ಶ್ರೀರಾಮೇಗೌಡ, ಪದಾಧಿಕಾರಿಗಳಾದ ಎಲ್. ಹರ್ಷ, ಹಂ.ಗು.ರಾಜೇಶ್, ಮಾಗಡಿ ಗಿರೀಶ್, ವಿಜಯಲಕ್ಷ್ಮಿ, ಸತ್ಯಮೂರ್ತಿ ಇದ್ದರು.

'ಡಾ. ಅನುಪಮಾ ನಿರಂಜನ' ಪ್ರಶಸ್ತಿಗೆ ನಿರ್ಮಲಾ ಆಯ್ಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕನ್ನಡ ಸಂಘರ್ಷ ಸಮಿತಿ ನೀಡುವ 'ಡಾ. ಅನುಪಮಾ ನಿರಂಜನ' ಪ್ರಶಸ್ತಿಗೆ ದೂರದರ್ಶನ ಕೇಂದ್ರದ ಸಹಾಯಕ ನಿರ್ದೇಶಕಿ, ಲೇಖಕಿ ನಿರ್ಮಲಾ ಎಲಿಗಾರ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹5 ಸಾವಿರ ನಗದು, ಪ್ರಶಸ್ತಿ ಪತ್ರ ಹಾಗೂ ಫಲಕ ಒಳಗೊಂಡಿದೆ. ಮೇ 17ರಂದು ಬೆಂಗಳೂರಿನ ಎನ್.ಆರ್. ಕಾಲೊನಿಯ ಬಿ.ಎಂ.ಶ್ರೀ ಕಲಾಭವನದಲ್ಲಿ ನಡೆಯುವ ಡಾ. ಅನುಪಮಾ ನಿರಂಜನ ಅವರ ಜನ್ಮದಿನದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಡಾ. ಅನುಪಮಾ ನಿರಂಜನ ಅವರ ಜನ್ಮದಿನದ ಅಂಗವಾಗಿ ನಡೆದ ರಾಜ್ಯಮಟ್ಟದ ಮಹಿಳಾ ಕಥಾ ಸ್ಪರ್ಧೆಯಲ್ಲಿ ವಿದ್ಯಾ ಶಿರಹಟ್ಟಿ (ಪ್ರಥಮ ಸ್ಥಾನ, ₹2,500), ಆಶಾ ನಾಗರಾಜ್ (ದ್ವಿತೀಯ ಸ್ಥಾನ, ₹2,000) ಮತ್ತು ವಿಜಯಲಕ್ಷ್ಮಿ ನುಗ್ಗೇಹಳ್ಳಿ ಅವರಿಗೆ (ತೃತೀಯ ಸ್ಥಾನ, ₹1,500) ಆಯ್ಕೆಯಾಗಿದ್ದಾರೆ ಎಂದು ಸಮಿತಿಯ ಅಧ್ಯಕ್ಷ ಎ.ಎಸ್. ನಾಗರಾಜಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದಲ್ಲಿ ಇಂದು

'ಆರ್. ಕಲ್ಯಾಣಮ್ಮ ಮತ್ತು ಕೆ.ಟಿ. ಬನಶಂಕರಮ್ಮ' ಪ್ರಶಸ್ತಿ ಪ್ರದಾನ: ಅಧ್ಯಕ್ಷತೆ: ಕೆ. ಮೋಹನ್ ದೇವ್ ಆಳ್ವ, ಅತಿಥಿಗಳು: ಎಂ. ನರಸಿಂಹ, ಎಲ್. ಬಿಂದು ಮಾಧವ, ಪ್ರಶಸ್ತಿ ಪುರಸ್ಕೃತರು: ಎ. ಮಂಜುಳಾ, ಶಾಂತರಾಜು, ಆಯೋಜನೆ: ಅಖಿಲ ಕರ್ನಾಟಕ ಮಕ್ಕಳ ಕೂಟ, ಸ್ಥಳ: ಆರ್. ಕಲ್ಯಾಣಮ್ಮ ಮಕ್ಕಳ ಆಟದ ಮೈದಾನ, ಕೋಟೆ, ಬೆಳಿಗ್ಗೆ 10

ಬಿ.ಎಸ್. ಚಂದ್ರಶೇಖರ್ ಮತ್ತು ಬಿ.ಆರ್. ಪ್ರಭಾಕರ್ ಅವರು 'ಮಹಾನಾರಾಯಣ ಉಪನಿಷತ್' ಪುಸ್ತಕ ಬಿಡುಗಡೆ: ಸ್ಥಳ: ಭ್ರಮರಾಂಬ ಹಾಲ್, ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನ, ಬಸವನಗುಡಿ, ಬೆಳಿಗ್ಗೆ 10–15

ಎಂ. ಚಿದಾನಂದಮೂರ್ತಿ ದತ್ತಿ ಉಪನ್ಯಾಸ: 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಕುರಿತು: ದೇವರಕೊಂಡಾರೆಡ್ಡಿ, ಉಪಸ್ಥಿತಿ: ರಫಾಯಲ್ ರಾಜ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನದ ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

ಪ್ರವಚನ ವಾಹಿನಿ: 'ಭಗವದ್ಗೀತೆಯಲ್ಲಿ ಮನೋವಿಜ್ಞಾನ' ಕುರಿತು ಉಪನ್ಯಾಸ: ಗ.ನ. ಭಟ್ಟ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ nagaradalli_indu@prajavani.co.in



ಕುಸ್ತಿಪಟುಗಳಿಗೆ ಬೆಂಬಲ

ಲೈಂಗಿಕ ಕಿರುಕುಳದ ವಿರುದ್ಧ ಕುಸ್ತಿಪಟುಗಳು ದೆಹಲಿಯ ಜಂತರ್ ಮಂತರ್‌ನಲ್ಲಿ ನಡೆಸುತ್ತಿರುವ ಪ್ರತಿಭಟನೆಗೆ ಬೆಂಬಲ ಸೂಚಿಸಿ ಹಾಗೂ ಬಿಜೆಪಿಯ ಸಂಸದ, ಭಾರತೀಯ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಸಿಂಗ್ ಮೇಲೆ ಕ್ರಮಕ್ಕೆ ಒತ್ತಾಯಿಸಿ ಜನವಾದಿ ಮಹಿಳಾ ಸಂಘಟನೆ ಸದಸ್ಯರು ಪ್ರತಿಭಟನೆ ನಡೆಸಿದರು. ಸಂಘಟನೆಯ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷೆ ಬಸಮ್ಮ, ಕಾರ್ಯದರ್ಶಿ ಪಾರ್ವತಮ್ಮ, ಉಪಾಧ್ಯಕ್ಷರಾದ ಸೆಲ್ವಿ, ಲತಾ, ರೇವಮ್ಮ ಇದ್ದರು

ರಿಲಯನ್ಸ್ ಜೊತೆ ನಂದಿನಿ ವಿಲೀನಕ್ಕೆ ಯತ್ನ: ನಾಗರಾಜು

ಪ್ರಜಾವಾಣಿ ವಾರ್ತೆ

ರಾಮನಗರ: ಡೇರಿ ಉದ್ಯಮಕ್ಕೆ ಕಾಲಿಡಲು ರಿಲಯನ್ಸ್ ಉತ್ಸುಕವಾಗಿದ್ದು, 2027ರ ವೇಳೆಗೆ ಅಮೂಲ್ ಮತ್ತು ನಂದಿನಿ ರಿಲಯನ್ಸ್ ಜೊತೆ ಒಗ್ಗೂಡಬಹುದು ಎಂದು ಕೆಎಂಎಫ್ ಮಾಜಿ ಅಧ್ಯಕ್ಷ ಪಿ. ನಾಗರಾಜು ಹೇಳಿದರು.

ತಾಲ್ಲೂಕಿನ ಮಾಯಗಾನ ಹಳ್ಳಿಯಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಈಗಾಗಲೇ ಅಮೂಲ್ ರಿಲಯನ್ಸ್ ನೊಂದಿಗೆ ಸಹಭಾಗಿತ್ವ ಹೊಂದಿದೆ. ನಂದಿನಿ ಮತ್ತು ಅಮೂಲ್ ಎರಡರ ವಾರ್ಷಿಕ ವಹಿವಾಟು ₹13 ಲಕ್ಷ ಕೋಟಿ ದಾಟಿದೆ. ಇದು 2027ಕ್ಕೆ ₹37 ಲಕ್ಷ ಕೋಟಿ ದಾಟುವ ನಿರೀಕ್ಷೆ ಇದೆ. ಹಿಂದೆ ಅಮೂಲ್ ಎಂ.ಡಿ ಆಗಿದ್ದ ಆರ್.ಎಸ್. ಸೌದಿ ಈಗಾಗಲೇ ರಿಲಯನ್ಸ್ ಹೆಸರಿನ ಡೇರಿ ಸಂಸ್ಥೆಗೆ ನೇಮಕವಾಗಿದ್ದಾರೆ ಎಂದು ಅವರು ವಿವರಿಸಿದರು.

ಜಿಲ್ಲೆಯಲ್ಲಿ ಬಹುಕೋಟಿ ವೆಚ್ಚದಲ್ಲಿ ಶಿವನಹಳ್ಳಿ ಮತ್ತು ರಾಮನಗರದ ಕಣ್ವ ಬಳಿ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಸಹಕಾರ ನೀಡಿದ್ದರು ಎಂದು ಹೇಳಿದರು.

ಕರ್ನಾಟಕದಲ್ಲಿ ಚುನಾವಣೆ: ರಜೆ ಘೋಷಿಸಿದ ಗೋವಾ

ಪಣಜಿ(ಪಿಟಿಐ): ಕರ್ನಾಟಕದಲ್ಲಿ ಮೇ 10ರಂದು ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಮತದಾನ ಮಾಡಲು ಅನುಕೂಲವಾಗುವಂತೆ ಖಾಸಗಿ ಸಂಸ್ಥೆಗಳು ಮತ್ತು ಕಾರ್ಖಾನೆಗಳ ಕಾರ್ಮಿಕರಿಗೆ ವೇತನಸಹಿತ ರಜೆ ಘೋಷಿಸಿ ಗೋವಾ ರಾಜ್ಯ ಸರ್ಕಾರ ಸೋಮವಾರ ಆದೇಶ ಹೊರಡಿಸಿದೆ.

ಸರ್ಕಾರಿ ನೌಕರರಿಗೂ ಈ ರಜಾ ಸೌಲಭ್ಯವನ್ನು ವಿಸ್ತರಿಸಲಾಗಿದೆ. ಈ ನಿರ್ಧಾರವನ್ನು ಗೋವಾ ಕೈಗಾರಿಕೆಗಳ ಒಕ್ಕೂಟದ ಅಧ್ಯಕ್ಷ ದಾಮೋದರ್ ಕೋಚ್ಕರ್ ಅಸಂಬದ್ಧ ಹಾಗೂ ಮೂರ್ಖತನದ ನಿರ್ಧಾರ ಎಂದು ಟೀಕಿಸಿದ್ದಾರೆ.

'ನೆರೆ ರಾಜ್ಯಗಳಲ್ಲಿ ಚುನಾವಣೆಯಂದು ಗೋವಾದಲ್ಲಿ ರಜೆ ನೀಡುವ ಪದ್ಧತಿ ನಡೆದುಕೊಂಡು ಬಂದಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವನಮಾಲಾ ಸೇರಿ ಮೂವರಿಗೆ 'ಜಾಕಿಯಾ ಶಂಕರ್ ಪಾಠಕ್ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ


ವನಮಾಲಾ ವಿಶ್ವನಾಥ್


ಎಚ್‌.ಎಂ. ವನಿತಾ


ಪ್ರಿನ್ಸಿ ಬಿಲ್ಲಾ

ಬೆಂಗಳೂರು: ಭಾರತೀಯ ವಿದ್ಯಾಭವನ ನೀಡುವ 'ಜಾಕಿಯಾ ಶಂಕರ್ ಪಾಠಕ್ ಪ್ರಶಸ್ತಿ'ಗೆ ಲೇಖಕಿ ವನಮಾಲಾ ವಿಶ್ವನಾಥ್ ಸೇರಿ ಮೂವರು ಆಯ್ಕೆಯಾಗಿದ್ದಾರೆ.

ದೆಹಲಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿದ್ದ ಜಾಕಿಯಾ ಶಂಕರ್ ಪಾಠಕ್ ಸ್ಮರಣಾರ್ಥ ಅವರ ಕುಟುಂಬ ದತ್ತಿ ಸ್ಥಾಪಿಸಿದೆ. ಸಾಹಿತ್ಯ, ಶಿಕ್ಷಣ ಹಾಗೂ ವಿದ್ಯಾರ್ಥಿ ವಿಭಾಗದಲ್ಲಿ ಪ್ರಶಸ್ತಿ ನೀಡಲಾಗುತ್ತಿದೆ.

ಸಾಹಿತ್ಯ ವಿಭಾಗದಲ್ಲಿ ಆಯ್ಕೆಯಾದ ವನಮಾಲಾ ವಿಶ್ವನಾಥ್, ಬೆಂಗಳೂರು ವಿಶ್ವ ವಿದ್ಯಾಲಯ ಹಾಗೂ ಅಜೀಂ ಪ್ರೇಮ್ ಜೀ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. 'ಹರಿಶ್ಚಂದ್ರ ಕಾವ್ಯ', 'ಮಲೆಗಳಲ್ಲಿ ಮದುಮಗಳು' ಸೇರಿ ಮುಂತಾದ ಕೃತಿಗಳನ್ನು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ. ಶಿಕ್ಷಣ ವಿಭಾಗದಲ್ಲಿ ಬಳ್ಳಾರಿಯ ಹಗರಿಬೊಮ್ಮನಹಳ್ಳಿಯ ಬನ್ನಿಗೋಳ ಸರ್ಕಾರಿ ಪ್ರೌಢಶಾಲೆಯಲ್ಲಿ ಶಿಕ್ಷಕಿಯಾಗಿರುವ ಎಚ್‌.ಎಂ. ವನಿತಾ ಆಯ್ಕೆಯಾಗಿದ್ದಾರೆ. ವಿದ್ಯಾರ್ಥಿ ವಿಭಾಗದಲ್ಲಿ ಬೆಂಗಳೂರಿನ ಶ್ರೀರಾಮಪುರದ ಭವನ್ ಬಿಬಿಎಂಪಿ ಶಾಲೆಯ ವಿದ್ಯಾರ್ಥಿನಿ ಪ್ರಿನ್ಸಿ ಬಿಲ್ಲಾ ಅವರು ಪ್ರಶಸ್ತಿಗೆ ಭಾಜನರಾಗಿದ್ದಾರೆ. ಈ ಪ್ರಶಸ್ತಿ ಸಾಹಿತ್ಯ ವಿಭಾಗದಲ್ಲಿ ₹ 10 ಸಾವಿರ, ಶಿಕ್ಷಣ ವಿಭಾಗದಲ್ಲಿ ₹ 5 ಸಾವಿರ ಹಾಗೂ ವಿದ್ಯಾರ್ಥಿ ವಿಭಾಗದಲ್ಲಿ ₹ 3 ಸಾವಿರ ನಗದು ಒಳಗೊಂಡಿದೆ.

ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್, ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್‌.ಎನ್. ಸುರೇಶ್, ಜಂಟಿ ನಿರ್ದೇಶಕಿ ನಾಗಲಕ್ಷ್ಮಿ ಕೆ. ರಾವ್, ಕಾರ್ಯಕಾರಿ ಸಮಿತಿ ಸದಸ್ಯ ಅಭಿನವ ರವಿಕುಮಾರ್ ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿದ್ದರು. ಮೇ ಕೊನೆಯ ವಾರ ಬೆಂಗಳೂರಿನಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಸಿರುಗುಪ್ಪ ಬಳಿ ಸಿಡಿಲಿಗೆ ಕೃಷಿ ಕಾರ್ಮಿಕ ಮಹಿಳೆ ಬಲಿ: ಮನೆಗಳಿಗೆ ನುಗ್ಗಿದ ಮಳೆ ನೀರು

ಕೊಡಗು ಸೇರಿ ವಿವಿಧೆಡೆ ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ



ಬೆಂಗಳೂರು ನಗರದ ಬಿನ್ನಿಪೇಟೆ ಬಳಿ ಸೋಮವಾರ ಮಳೆ ಸುರಿದ ಪರಿಣಾಮ ಮಳೆಯಲ್ಲೇ ಸಾಗಿದ ಜನರು
—ಪ್ರಜಾವಾಣಿ ಚಿತ್ರ/ ರಂಜು ಪಿ.

ಬೆಂಗಳೂರು: ರಾಜ್ಯದ ಮೈಸೂರು, ಬೆಂಗಳೂರು ನಗರ, ಕೊಡಗು, ಹಾಸನ, ರಾಮನಗರ, ಕೋಲಾರ ಜಿಲ್ಲೆ ಸೇರಿದಂತೆ ವಿವಿಧೆಡೆ ಸೋಮವಾರ ಗುಡುಗು, ಸಿಡಿಲಿನಿಂದ ಕೂಡಿದ ಧಾರಾಕಾರ ಮಳೆಯಾಗಿದೆ.

ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ ಹೊನ್ನರಹಳ್ಳಿ, ಶ್ರೀಧರಗಡ್ಡೆ ಗ್ರಾಮದಲ್ಲಿ ಸಂಜೆ ಸಿಡಿಲು ಬಡಿದು ಕೃಷಿ ಕಾರ್ಮಿಕ ಮಹಿಳೆ ಮಂಗಮ್ಮ (40) ಎಂಬುವರು ಮೃತಪಟ್ಟಿದ್ದಾರೆ. ಮತ್ತೊಬ್ಬ ಮಹಿಳೆ, ಕುರಿಗಾಹಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಕೋಲಾರ ಜಿಲ್ಲೆಯಲ್ಲಿ ಕಳೆದ ನಾಲ್ಕು ದಿನಗಳಿಂದ ಮಳೆಯಾಗುತ್ತಿದೆ. ಮಾಲೂರು ತಾಲ್ಲೂಕಿನ ಸಂತೇಹಳ್ಳಿ ವ್ಯಾಪ್ತಿಯಲ್ಲಿ 5.3 ಸೆ.ಮೀ., ಕೋಲಾರ ತಾಲ್ಲೂಕಿನಲ್ಲಿ ಐತರಾಸನಹಳ್ಳಿಯಲ್ಲಿ 4 ಸೆ.ಮೀ, ಶ್ರೀನಿವಾಸಪುರ ತಾಲ್ಲೂಕಿನ ಚಲ್ದಿಗಾನಹಳ್ಳಿ ವ್ಯಾಪ್ತಿಯಲ್ಲಿ 4 ಸೆ.ಮೀ ಮಳೆಯಾಗಿದೆ. ಹಾಸನ ಭಾಗದಲ್ಲಿ ದಿನ ಬಿಟ್ಟು ದಿನ ಮಳೆಯಾಗುತ್ತಿದೆ. ಇದರಿಂದ ಕಾಫಿ ಬೆಳೆಗಾರರಲ್ಲಿ ಸಂತಸ ಮನೆ ಮಾಡಿದೆ. ರಾಮನಗರ ಜಿಲ್ಲೆಯ ಕುದೂರು ಪಟ್ಟಣದಲ್ಲಿ ಒಳ ಚರಂಡಿ ಕಟ್ಟಿಕೊಂಡಿದ್ದರಿಂದ ಮಳೆ ನೀರು ಕೆಲವು ಮನೆಗಳಿಗೆ ನುಗ್ಗಿದ್ದು, ಜನರು ತೊಂದರೆ ಅನುಭವಿಸಿದರು.

ಚಿಕ್ಕಮಗಳೂರು ಜಿಲ್ಲೆ ಆಲ್ದೂರು ಬಳಿಯ ಹೆಡದಾಳು ಗ್ರಾಮದಲ್ಲಿ ನಿಧೀಶ್ ಗೌಡ ಎಂಬುವರ ಮನೆಗೆ ಸಿಡಿಲು ಬಡಿದಿದೆ. ಮನೆಯ ಚಾವಣಿಗೆ ಭಾಗಶಃ ಹಾಗೂ ಟಿ.ವಿ, ಸ್ಟೌ ಮೊದಲಾದ ವಸ್ತುಗಳಿಗೆ ಹಾನಿಯಾಗಿದೆ. ಜಿಲ್ಲೆಯಲ್ಲಿ ಸಾಧಾರಣ ಮಳೆಯಾಗಿದೆ. ಬೆಂಗಳೂರು ನಗರದಲ್ಲಿಯೂ ಧಾರಾಕಾರ ಮಳೆ ಸುರಿಯಿತು. ಬಿರುಗಾಳಿಗೆ ಕೆಲವು ಪ್ರದೇಶಗಳಲ್ಲಿ ಮರಗಳು ಧರೆಗುರುಳಿ ವಾಹನಗಳ ಸಂಚಾರ ಅಸ್ತವ್ಯಸ್ತಗೊಂಡಿತು. ಹೊಸಕೆರೆಹಳ್ಳಿಯಲ್ಲಿ ಮನೆ ಮೇಲೆ ಮರ ಬಿದ್ದು ಹಾನಿಯಾಗಿದೆ.

ಸಿಡಿಲಿನ ಅಬ್ಬರ: ಕೊಡಗು ಜಿಲ್ಲೆಯ ಬಹುತೇಕ ಭಾಗಗಳಲ್ಲಿ ಮಳೆ ಸುರಿದಿದೆ. ಮಡಿಕೇರಿ ನಗರದಲ್ಲಿ ಸಿಡಿಲಿನ ಅಬ್ಬರ ಜೋರಾಗಿತ್ತು. ಪುಷ್ಪಗಿರಿ ಬೆಟ್ಟಶ್ರೇಣಿಗಳಲ್ಲಿ ಭಾರಿ ಮಳೆಯಾಗಿದೆ. ಮಡಿಕೇರಿ, ಸುಂಟಿಕೊಪ್ಪ, ಸೋಮವಾರ ಪೇಟೆ, ಗೋಣಿಕೊಪ್ಪಲು, ವಿರಾಜಪೇಟೆ, ಕುಶಾಲನಗರ ವ್ಯಾಪ್ತಿಯಲ್ಲಿ ಉತ್ತಮ ಮಳೆಯಾಗಿದೆ.

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಬೆಟ್ಟದಪುರ ಹೋಬಳಿಯ ಚಪ್ಪರದಹಳ್ಳಿಯಲ್ಲಿ ಸಿಡಿಲಿಗೆ ತೆಂಗಿನ ಮರ ಹೊತ್ತಿ ಉರಿಯಿತು. ಜಿಲ್ಲಾ ಕೇಂದ್ರ, ಹುಣಸೂರು ಸುತ್ತಮುತ್ತಲಿನ ಹಲವು ಹಳ್ಳಿಗಳಲ್ಲಿ ಒಂದು ಗಂಟೆಗೂ ಹೆಚ್ಚಿನ ಕಾಲ ಜೋರು ಮಳೆ ಸುರಿಯಿತು.

ಹಾಸನ ಜಿಲ್ಲೆಯಾದ್ಯಂತ ಹದ ಮಳೆಯಾಗಿದ್ದು, ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗಿದೆ. ಹಾಸನ, ಅರಸೀಕೆರೆ, ಅರಕಲಗೂಡು, ಚನ್ನರಾಯಪಟ್ಟಣ, ಕೊಣನೂರು, ಜಾವಗಲ್, ಹಳೇಬೀಡು, ಹಿರೀಸಾವೆ, ನುಗ್ಗೇಹಳ್ಳಿ ಯಲ್ಲಿ ಒಂದು ಗಂಟೆ ಕಾಲ ನಿರಂತರ ಮಳೆಯಾಗಿದೆ.

ರಾಮನಗರ ಜಿಲ್ಲೆಯ ಮಾಗಡಿ, ಸೋಲೂರು, ಕಸಬಾ, ತಿಪ್ಪಸಂದ್ರ ಮತ್ತು ಕುದೂರು ಹೋಬಳಿಗಳಲ್ಲಿ ಧಾರಾಕಾರ ಮಳೆಯಾಗಿದೆ. ಶಿವಗಂಗೆ ಬೆಟ್ಟದಿಂದ ಸಾವನದುರ್ಗದ ಬೆಟ್ಟದವರೆಗೂ ದಟ್ಟವಾದ ಮೋಡಗಳು ಆವರಿಸಿದ್ದವು. ಕುದೂರು ಹೋಬಳಿಯಲ್ಲಿ ಒಂದು ವಾರದಿಂದ ಮಳೆಯಾಗುತ್ತಿದ್ದು, ತಂಪಾದ ವಾತಾವರಣ ಇದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ಮತ್ತು ಆನೇಕಲ್‌ನಲ್ಲಿ ತುಂತುರು ಮಳೆಯಾಗಿದೆ. ಯಾದಗಿರಿ, ಬೀದರ್ ಜಿಲ್ಲೆಯ ವಿವಿಧೆಡೆ ಮಳೆಯಾಗಿದೆ. ಕೊಪ್ಪಳ ತಾಲ್ಲೂಕಿನ ಹಾಲಳ್ಳಿ ಗ್ರಾಮದಲ್ಲಿ ಸಿಡಿಲಿಗೆ ಎರಡು ಎತ್ತುಗಳು ಬಲಿಯಾಗಿವೆ.

ಬಿಸಿಲ ಝಳಕ್ಕೆ ತಂಪೆರೆದ ಮಳೆ

ಹುಬ್ಬಳ್ಳಿ: ವಿಜಯನಗರ ಜಿಲ್ಲೆಯ ಹೊಸಪೇಟೆಯಲ್ಲಿ ಧಾರಾಕಾರ ಮಳೆಯಾಗಿದೆ. ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ ಹಾಗೂ ಹರಪನಹಳ್ಳಿಯಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗಿದೆ. ಬೆಳಗಾವಿ, ಕಿತ್ತೂರು, ಸವದತ್ತಿಯಲ್ಲಿ ತುಂತುರು ಮಳೆಯಾಗಿದೆ. ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದಲ್ಲಿ ಗುಡುಗು ಸಹಿತ ಮಳೆಯಾಗಿದೆ.

ಹುಬ್ಬಳ್ಳಿ–ಧಾರವಾಡ ಅವಳಿ ನಗರದಲ್ಲಿ ಬಿಸಿಲ ಬೇಗೆಯಿಂದ ಬಸವಳಿದಿದ್ದ ಜನರಿಗೆ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಸುರಿದ ಮಳೆ ತಂಪೆರೆಯಿತು. ಬೆಳಿಗ್ಗೆಯಿಂದಲೇ ಮೋಡ ಕವಿದ ವಾತಾವರಣವಿತ್ತು. ಮಧ್ಯಾಹ್ನದ ನಂತರ ಕೆಲಕಾಲ ರಭಸದಿಂದ ಸುರಿಯಿತು. ಸಂಜೆವರೆಗೂ ತುಂತುರು ಮಳೆ ಮುಂದುವರಿದಿತ್ತು.

ಧಾರವಾಡ ತಾಲ್ಲೂಕಿನ ಶಿಬಾರಗಟ್ಟಿ, ಯಾದವಾಡ, ಲಕಮಾಪುರ, ಉಪ್ಪಿನಬೆಟಗೇರಿ, ಕಲಘಟಗಿ, ಕುಂದಗೋಳ ಹಾಗೂ ನವಲಗುಂದ ಭಾಗದಲ್ಲಿ ಸಾಧಾರಣ ಮಳೆಯಾಗಿದೆ.

ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತ

ನವದೆಹಲಿ(ಪಿಟಿಐ): ಆಗ್ನೇಯ ಬಂಗಾಳ ಕೊಲ್ಲಿಯಲ್ಲಿ ಸೋಮವಾರ ಕಡಿಮೆ ಒತ್ತಡದ ಪ್ರದೇಶ ಸೃಷ್ಟಿಯಾಗಿದ್ದು, ಇದು ಮಂಗಳವಾರ ಸಂಜೆ ವೇಳೆಗೆ ವಾಯುಭಾರ ಕುಸಿತವಾಗಿ ಬದಲಾಗಲಿದೆ. ಬುಧವಾರ ಚಂಡಮಾರುತವಾಗಿ ರೂಪುಗೊಳ್ಳಲಿದ್ದು, ಈ ವಾರಾಂತ್ಯದ ವೇಳೆಗೆ ಬಾಂಗ್ಲಾದೇಶ, ಮ್ಯಾನ್ಮಾರ್ ಕರಾವಳಿ ಕಡೆಗೆ ಚಲಿಸಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಈ ಚಂಡಮಾರುತಕ್ಕೆ 'ಮೋಚಾ' ಎಂದು ಹೆಸರಿಡಲಾಗಿದೆ.

ಬಂಗಾಳ ಕೊಲ್ಲಿಯ ಈಶಾನ್ಯ ಭಾಗದಲ್ಲಿ ಮೀನುಗಾರರು, ಮೀನುಗಾರ ದೋಣಿಗಳು ಮತ್ತು ಸಣ್ಣ ಗಾತ್ರದ ದೋಣಿಗಳಿಗೆ ಸಮುದ್ರಕ್ಕಿಳಿಯದಂತೆ ಮತ್ತು ಈಗಾಗಲೇ ಸಮುದ್ರಕ್ಕಿಳಿದಿರುವವರಿಗೆ ತೀರಕ್ಕೆ ಮರಳುವಂತೆ ಭಾರತೀಯ ಹವಾಮಾನ ಇಲಾಖೆ ಪ್ರಧಾನ ನಿರ್ದೇಶಕ ಮೃತ್ಯುಂಜಯ ಮಹಾಪಾತ್ರ ಮುನ್ನೆಚ್ಚರಿಕೆ ನೀಡಿದ್ದಾರೆ.

ಚಂಡಮಾರುತವು ಮೇ 11ರ ವರೆಗೆ ಬಂಗಾಳಕೊಲ್ಲಿಯ ಉತ್ತರ– ವಾಯುವ್ಯ ಭಾಗದಿಂದ ಕೇಂದ್ರ ಭಾಗಕ್ಕೆ ಚಲಿಸಲಿದೆ. ಬಳಿಕ ಉತ್ತರ– ಈಶಾನ್ಯ ದಿಕ್ಕಿನಲ್ಲಿ ಸಾಗಿ ಬಾಂಗ್ಲಾದೇಶ, ಮ್ಯಾನ್ಮಾರ್ ದೇಶಗಳ ಕಡೆಗೆ ಚಲಿಸಲಿದೆ ಎಂದು ಅವರು ಹೇಳಿದ್ದಾರೆ.

ಮಂಗಳವಾರದ ವೇಳೆಗೆ ಭಾರಿ ಗಾಳಿ ಬೀಸಲಿದ್ದು, ಮಾರುತದ ವೇಗವು ಗಂಟೆಗೆ 50– 60 ಕಿಮೀ ಇರಲಿದೆ. ಇದು ಮತ್ತಷ್ಟು ವೇಗ ಪಡೆದು ಗಂಟೆಗೆ 70 ಕಿ.ಮೀ. ವೇಗದಲ್ಲಿ ಬಂಗಾಳ ಕೊಲ್ಲಿಯ ಆಗ್ನೇಯ ಭಾಗ, ಅಂಡಮಾನ್ ನಿಕೋಬಾರ್ ದ್ವೀಪ ಸಮೂಹ ಮತ್ತು ಅದಕ್ಕೆ ಹೊಂದಿಕೊಂಡಿರುವ ಅಂಡಮಾನ್ ಸಮುದ್ರದ ಮೇಲೆ ಬೀಸಲಿದೆ.

ಈ ಪ್ರತಿಕೂಲ ಹವಾಮಾನದ ಕಾರಣ ಅಂಡಮಾನ್ ನಿಕೋಬಾರ್ ದ್ವೀಪದಲ್ಲಿ ಮಂಗಳವಾರ ಭಾರಿ ಮಳೆ ಬೀಳಲಿದೆ. ಶುಕ್ರವಾರದ ವರೆಗೆ ಅಂಡಮಾನ್ ನಿಕೋಬಾರ್ ದ್ವೀಪ ಸಮೂಹ ಮತ್ತು ಬಂಗಾಳ ಕೊಲ್ಲಿಯ ಆಗ್ನೇಯ, ಕೇಂದ್ರ ಭಾಗದ ಕರಾವಳಿ ತೀರದಲ್ಲಿ ಪ್ರವಾಸೋದ್ಯಮ ಹಾಗೂ ಇತರ ಚಟುವಟಿಕೆಗಳನ್ನು ನಿಯಂತ್ರಣದಲ್ಲಿ ಇರಿಸುವಂತೆ ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ.

ಸುದ್ದಿ 2 ನಿಮಿಷ

ಪಠ್ಯಪುಸ್ತಕ ಪರಿಷ್ಕರಣೆ: ಅಸ್ಸಾಂ ಸಿ.ಎಂ ಬಿಸ್ವ ಶರ್ಮಾ ಬೆಂಬಲ

ಬೆಂಗಳೂರು: ಬಿಜೆಪಿ ನೇತೃತ್ವದ ಕರ್ನಾಟಕ ಸರ್ಕಾರ, ಪಠ್ಯ ಪುಸ್ತಕಗಳ ಪರಿಷ್ಕರಣೆ ಮಾಡಿರುವ ಕ್ರಮಕ್ಕೆ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರು ಬೆಂಬಲ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, ಇತಿಹಾಸ ಪಾಠಗಳಲ್ಲಿ ಕೇವಲ ಮೊಘಲರು ಮತ್ತು ಇಸ್ಲಾಮಿಕ್ ಸುಲ್ತಾನರನ್ನು ವೈಭವೀಕರಿಸುವ ವಿಷಯಗಳ ಸುತ್ತ ಸುತ್ತುತ್ತಿತ್ತೇ ವಿನಾ ಸ್ಥಳೀಯ ವೀರರು, ಸಂತರನ್ನು ಪರಿಚಯಿಸುವ ಗೋಜಿಗೇ ಹೋಗಿರಲಿಲ್ಲ ಎಂದು ಹೇಳಿದ್ದಾರೆ.



'ಚುನಾವಣೆ ನಿಮಿತ್ತ ಕರ್ನಾಟಕಕ್ಕೆ ಭೇಟಿ ನೀಡಿದಾಗ ಅಲ್ಲಿನ ಪ್ರಸಿದ್ಧ ಸಂತರು, ರಾಜ ರಾಣಿಯರು, ವೀರರು ಮತ್ತು ಚಿಂತಕರ ಬಗ್ಗೆ ತಿಳಿದುಕೊಳ್ಳಲು ನನಗೆ ಅವಕಾಶ ಸಿಕ್ಕಿತ್ತು. ಅಸ್ಸಾಂನಲ್ಲಿ ನಾವು ನಮ್ಮ ಶಾಲಾ ದಿನಗಳಲ್ಲಿ ವಂಚಿತವಾಗಿದ್ದ ಪ್ರಮುಖ ನಾಗರಿಕತೆಯ ಪಾಠ ಕರ್ನಾಟಕದಲ್ಲಿ ನನಗೆ ಸಿಕ್ಕಿತು' ಎಂದು ತಿಳಿಸಿದ್ದಾರೆ.

'ಪ್ರಯಾಣದ ಮಧ್ಯೆ ಹಲವಾರು ಪ್ರಮುಖ ಅಂಶಗಳನ್ನು ಕಂಡೆ. 12 ನೇ ಶತಮಾನದ ಬಸವೇಶ್ವರರ ಭಕ್ತಿ ಮತ್ತು ವಚನ ಚಳವಳಿ, ಸರಳ ವಚನಗಳ ಮೂಲಕ ಸಮಾಜವನ್ನು ಒಗ್ಗೂಡಿಸಿದ್ದರು. ಇದು ಈಗಲೂ ದಾರಿ ದೀಪ ಆಗಿದೆ. ಪಾಶ್ಚಾತ್ಯರು ಮ್ಯಾಗ್ನಾ ಕಾರ್ಟಾವನ್ನು ರೂಪಿಸುವ ಮೊದಲೇ ಬಸವಣ್ಣ ಅವರು ಸಂಸದೀಯ ಪ್ರಜಾತಂತ್ರದ ಮೂಲ ತತ್ವಗಳನ್ನು ಜಗತ್ತಿಗೆ ನೀಡಿದ್ದರು' ಎಂದೂ ಅವರು ಹೇಳಿದ್ದಾರೆ.

ಗಡಿ ಭಾಗದ ಐದು ಶಾಲೆಗೆ ಶೇ 100 ಫಲಿತಾಂಶ

ಹನೂರು(ಚಾಮರಾಜನಗರ ಜಿಲ್ಲೆ): ಗಡಿ ತಾಲ್ಲೂಕಾದ ಹನೂರಿನ 11 ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳಲ್ಲಿ ಎಸ್ಸೆಸ್ಸೆಲ್ಸಿ ಓದುತ್ತಿರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ 50 ದಿನಗಳ ಕಾಲ 'ಪ್ರಜಾವಾಣಿ' ಪತ್ರಿಕೆಯನ್ನು ಉಚಿತವಾಗಿ ವಿತರಿಸಲಾಗಿದ್ದು, ಈ ಪೈಕಿ ಐದು ಸರ್ಕಾರಿ ಶಾಲೆಗಳಲ್ಲಿ ಶೇ 100ರಷ್ಟು ಫಲಿತಾಂಶ ಬಂದಿದೆ.

'ಪ್ರಜಾವಾಣಿ'ಯಲ್ಲಿ ಪ್ರತಿದಿನ ಪ್ರಕಟವಾಗುತ್ತಿದ್ದ ಎಸ್ಸೆಸ್ಸೆಲ್ಸಿ ಪರೀಕ್ಷಾ ಮಾರ್ಗದರ್ಶಿಯನ್ನು ಗಡಿ ಭಾಗದ ವಿದ್ಯಾರ್ಥಿಗಳೂ ಓದುವಂತಾಗಬೇಕು ಎಂಬ ಉದ್ದೇಶದಿಂದ, ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ. ಸೋಮಶೇಖರ್ ಅವರು ಆಸಕ್ತಿವಹಿಸಿ ಈ ಯೋಜನೆ ರೂಪಿಸಿದ್ದರು. ಒಂಬತ್ತು ಸರ್ಕಾರಿ ಶಾಲೆಗಳು ಮತ್ತು ಎರಡು ಅನುದಾನಿತ ಶಾಲೆಗಳಿಗೆ ಪತ್ರಿಕೆ ವಿತರಿಸಲಾಗಿತ್ತು. ಮೀಣ್ಯಂ, ಶಾಗ್ಯ, ಭೈರನತ್ತ, ಮಂಗಲ ಹಾಗೂ ಚೆನ್ನಾಲಿಂಗನಹಳ್ಳಿ ಸರ್ಕಾರಿ ಪ್ರೌಢಶಾಲೆಗಳಲ್ಲಿ ಶೇ 100ರಷ್ಟು ಫಲಿತಾಂಶ ಬಂದಿದೆ. ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಎಂ. ಶಿವರಾಜು, 'ಗಡಿ ಭಾಗದ ಶಾಲೆಗಳನ್ನು ಗುರುತಿಸಿ ಅಲ್ಲಿನ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ಉಚಿತವಾಗಿ ಪತ್ರಿಕೆಗಳನ್ನು ಹಂಚಿರುವುದರಿಂದ ಅನುಕೂಲ ವಾಗಿದೆ. ಈ ಸಾಧನೆಗೆ ಕಾರಣವಾದ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಹಾಗೂ 'ಪ್ರಜಾವಾಣಿ'ಯ ಸಹಕಾರ ಶೈಕ್ಷಣಿಕ ವಲಯದ ಮತ್ತಷ್ಟು ಶಾಲೆಗಳಿಗೆ ಸಿಗುವಂತಾಗಲಿ' ಎಂದು ಹೇಳಿದರು.

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಬಿಜೆಪಿಯ ವಸುಂಧರಾ ರಾಜೇ, ಇಬ್ಬರು ನಾಯಕರು ತಮ್ಮ ಸರ್ಕಾರವನ್ನು ಉಳಿಸಿದರು ಎಂದು ರಾಜಸ್ಥಾನದ ಕಾಂಗ್ರೆಸ್ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಹೇಳಿರುವುದನ್ನು ನಂಬಬಹುದೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಸಂಕ್ಷಿಪ್ತ ಸುದ್ದಿ

ಬಾಲ್ಯದಲ್ಲೇ ಶಾಲೆ ಬಿಟ್ಟವರು 'ಫಸ್ಟ್ ಕ್ಲಾಸ್'

ಪ್ರಜಾವಾಣಿ ವಾರ್ತೆ



ಶಿವಕುಮಾರ್



ಸುದೀಪ್

ಬೆಂಗಳೂರು: ಪೋಷಕರನ್ನು ಕಳೆದುಕೊಂಡು, ಎರಡನೇ ತರಗತಿಗೆ ಶಾಲೆ ತೊರೆದಿದ್ದ ಶಿವಕುಮಾರ್, ಸುದೀಪ್ ಸಹೋದರರು ಈ ಬಾರಿಯ ಎಸ್ಸೆಸ್ಸೆಲ್ಸಿಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ.

ಬೆಂಗಳೂರಿನ ಈ ಇಬ್ಬರು ಸಹೋದರರು ಶಾಲೆಬಿಟ್ಟು ಕೂಲಿ ಕೆಲಸ ಮಾಡಿಕೊಂಡಿದ್ದರು. ಶಾಲೆಬಿಟ್ಟ ಮಕ್ಕಳನ್ನು ಗುರುತಿಸುವ ಕಾರ್ಯದಲ್ಲಿ ತೊಡಗಿದ್ದ ಸ್ಪರ್ಶ ಟ್ರಸ್ಟ್ 2019ರಲ್ಲಿ ಅವರನ್ನು ಪತ್ತೆ ಮಾಡಿತ್ತು. ಒಂದು ವರ್ಷ ಸೇತುಬಂಧ ಶಿಕ್ಷಣ ಕೊಡಿಸಿ, ನಂತರ ವಯಸ್ಸಿನ ಆಧಾರದಲ್ಲಿ ನೇರವಾಗಿ 8ನೇ ತರಗತಿಗೆ ಪ್ರವೇಶ ಕೊಡಿಸಿತ್ತು.

ಹೆಸರಘಟ್ಟದ ಸರ್ಕಾರಿ ಪ್ರೌಢಶಾಲೆಗೆ ನೇರ ಪ್ರವೇಶ ಪಡೆದಿದ್ದ ಮಕ್ಕಳು ಈಗ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ಶಿವಕುಮಾರ್ 625ಕ್ಕೆ 561, ಸುದೀಪ್ 450 ಅಂಕ ಪಡೆದಿದ್ದಾರೆ.

'ಚಿಕ್ಕವಯಸ್ಸಿನಲ್ಲೇ ತಂದೆ-ತಾಯಿಯನ್ನು ಕಳೆದುಕೊಂಡು ಶಾಲೆ ಬಿಟ್ಟಿದ್ದ ನಮಗೆ 8ನೇ ತರಗತಿಗೆ ಸೇರಿಸಿದಾಗ ಓದುತ್ತೇವೆ ಎನ್ನುವ ಆತ್ಮವಿಶ್ವಾಸವಿರಲಿಲ್ಲ. ಆದರೆ, ಶಾಲೆಯ ಶಿಕ್ಷಕರು ಹಾಗೂ ಸ್ಪರ್ಶ ಟ್ರಸ್ಟ್ ಎಲ್ಲ ನೆರವು ನೀಡಿ, ಕಲಿಕೆಗೆ ಉತ್ತೇಜಿಸಿದರು. ಇದರಿಂದ ಕಷ್ಟಪಟ್ಟು ಓದಿದೆವು. ಅವರ ಸಹಾಯ ಎಂದಿಗೂ ಮರೆಯುವುದಿಲ್ಲ' ಎಂದು ಶಿವಕುಮಾರ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಶಿವಕುಮಾರ್ ಪಿಯುಸಿನಲ್ಲಿ ಕಲಾ ವಿಷಯ ಆಯ್ಕೆಮಾಡಿಕೊಂಡು ನಾಗರಿಕ ಸೇವಾ ಪರೀಕ್ಷೆ ಬರೆಯಲು ಸುದೀಪ್ ವಾಣಿಜ್ಯ ವಿಭಾಗಕ್ಕೆ ಪ್ರವೇಶ ಪಡೆಯಲು ನಿರ್ಧರಿಸಿದ್ದಾರೆ.

ಸಿಇಟಿ: ಪ್ರವೇಶಪತ್ರ ಡೌನ್‌ಲೋಡ್ ಸೌಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್, ಕೃಷಿ ವಿಜ್ಞಾನ, ಪಶು ವೈದ್ಯಕೀಯ, ಬಿ.ಎಸ್ಸಿ (ನರ್ಸಿಂಗ್) ಮುಂತಾದ ವೃತ್ತಿಪರ ಕೋರ್ಸುಗಳಿಗೆ ಮೇ 20 ಮತ್ತು 21ರಂದು ಸಿಇಟಿ ಪರೀಕ್ಷೆ ನಡೆಯಲಿದೆ.

'ಅಭ್ಯರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್‌ಗೆ http://kea.kar.nic.inಗೆ ಭೇಟಿ ನೀಡಿ ಪ್ರವೇಶಪತ್ರ ಡೌನ್‌ಲೋಡ್ ಮಾಡಿಕೊಳ್ಳಬಹುದು' ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ರಮ್ಯಾ ಮಾಹಿತಿ ನೀಡಿದ್ದಾರೆ

ಗಡಿನಾಡು ಮತ್ತು ಹೊರನಾಡು ಕನ್ನಡ ವಿದ್ಯಾರ್ಥಿಗಳಿಗೆ ಮೇ 22ರಂದು ಕನ್ನಡ ಪರೀಕ್ಷೆ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಅಪಘಾತ: ವಿಮಾ ಪರಿಹಾರ ಏರಿಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಅಪಘಾತದಲ್ಲಿ ಒಂದು ಕಣ್ಣು ಕಳೆದುಕೊಂಡಿದ್ದ ವ್ಯಕ್ತಿಯೊಬ್ಬರ ಮೇಲ್ಮನವಿಯನ್ನು ಪುರಸ್ಕರಿಸಿರುವ ಹೈಕೋರ್ಟ್, ಪರಿಹಾರದ ಮೊತ್ತವನ್ನು ₹ 77 ಸಾವಿರದಿಂದ ₹ 5.03 ಲಕ್ಷಕ್ಕೆ ಹೆಚ್ಚಿಸಿ ಆದೇಶಿಸಿದೆ.

ಈ ಸಂಬಂಧ ಬಾಗಲಕೋಟೆ ಜಿಲ್ಲೆಯ ಬಿಸಲದಿನ್ನಿ ಗ್ರಾಮದ ಪರಸಪ್ಪ ಎಂಬುವರು ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಅನಂತ ರಾಮನಾಥ ಹೆಗಡೆ ಅವರಿದ್ದ ಪೀಠವು ವಿಚಾರಣೆ ನಡೆಸಿತು.

'ಕಣ್ಣು ಅತ್ಯಂತ ಸೂಕ್ಷ್ಮ ಅಂಗ. ಅರ್ಜಿದಾರರು ಅಪಘಾತದಲ್ಲಿ ತಮ್ಮ ಒಂದು ಕಣ್ಣು ಕಳೆದುಕೊಂಡಿರುವ ಕಾರಣ ಇದು ಅವರ ಬದುಕಿನ ಮೇಲೆ ಗಂಭೀರ ಪರಿಣಾಮ ಉಂಟು ಮಾಡುತ್ತದೆ. ಹೀಗಾಗಿ, ಅರ್ಜಿದಾರರಿಗೆ ಬಾಗಲಕೋಟೆ ಮೋಟಾರು ವಾಹನ ಅಪಘಾತ ಪರಿಹಾರ ನ್ಯಾಯಮಂಡಳಿ ನಿಗದಿಪಡಿಸಿರುವ ₹ 77,500 ಪರಿಹಾರದ ಮೊತ್ತವನ್ನು ₹ 5,03,600ಕ್ಕೆ ಹೆಚ್ಚಳ ಮಾಡಲಾಗಿದೆ. ಸಂತ್ರಸ್ತ ಅರ್ಜಿದಾರರಿಗೆ ರಾಯಲ್ ಸುಂದರಂ ವಿಮಾ ಕಂಪನಿ ನಿಯಮಿತ ಶೇ 6ರ ಬಡ್ಡಿಯಂತೆ ಪರಿಹಾರದ ಮೊತ್ತವನ್ನು ಪಾವತಿಸಬೇಕು' ಎಂದು ಆದೇಶಿಸಿದೆ.

ಪ್ರಕರಣವೇನು?: ಪರಸಪ್ಪ 2008ರ ಡಿ. 2ರಂದು ಮೋಟಾರ್ ಬೈಕ್‌ನಲ್ಲಿ ತೆರಳುತ್ತಿದ್ದಾಗ ಅಪಘಾತಕ್ಕೀಡಾಗಿ ಗಂಭೀರವಾಗಿ ಗಾಯಗೊಂಡಿದ್ದರಲ್ಲದೆ, ತಮ್ಮ ಬಲಗಣ್ಣಿನ ದೃಷ್ಟಿಯನ್ನು ಕಳೆದುಕೊಂಡಿದ್ದರು. ಮೋಟಾರು ವಾಹನ ಅಪಘಾತ ನ್ಯಾಯಮಂಡಳಿ ₹ 77,500 ಪರಿಹಾರವನ್ನು ನಿಗದಿಪಡಿಸಿತ್ತು. ಇದನ್ನು ಪ್ರಶ್ನಿಸಿದ್ದ ಅವರು ಪರಿಹಾರದ ಮೊತ್ತವನ್ನು ಹೆಚ್ಚಿಸುವಂತೆ ಕೋರಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

ಸಂತ್ರಸ್ತರನ್ನು ಸಾಕ್ಷಿಯನ್ನಾಗಿ ಪರಿಗಣಿಸಿ: ಹೈಕೋರ್ಟ್

ಬೆಂಗಳೂರು: 'ಮಹಿಳೆಯರ ವಿರುದ್ಧದ ಅತ್ಯಾಚಾರ ಅಥವಾ ದೌರ್ಜನ್ಯ ಪ್ರಕರಣಗಳಲ್ಲಿ ಬದುಕುಳಿದ ಸಂತ್ರಸ್ತರನ್ನು ಸಾಕ್ಷಿಗಳನ್ನಾಗಿ ಪರಿಗಣಿಸಬೇಕು' ಎಂದು ಆದೇಶಿಸಿರುವ ಹೈಕೋರ್ಟ್, 'ಒಂದು ವೇಳೆ ಬದುಕುಳಿದವರನ್ನು ಸಾಕ್ಷಿಗಳನ್ನಾಗಿ ಪರಿಗಣಿಸದೇ ಹೋದಲ್ಲಿ, ಅಂತಹ ಪ್ರಕರಣವು ತನ್ನ ಮಹತ್ವ ಕಳೆದುಕೊಳ್ಳುತ್ತದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

'ನನ್ನ ಪತ್ನಿಯನ್ನು ಬಸವಕಲ್ಯಾಣಕ್ಕೆ ಮೋಟಾರ್ ಬೈಕ್‌ನಲ್ಲಿ ಕರೆದೊಯ್ಯುತ್ತಿದ್ದಾಗ ಬೀದರ್ ಜಿಲ್ಲೆ ಭಾಲ್ಕಿ ತಾಲ್ಲೂಕಿನ ಅಳವಾಯಿ ಗ್ರಾಮದ ನಿವಾಸಿಯೊಬ್ಬರು ಆಕೆಯನ್ನು ಬಲವಂತವಾಗಿ ಅಪಹರಿಸಿಕೊಂಡು ಹೋಗಿ ಅತ್ಯಾಚಾರ ಎಸಗಿದ್ದಾರೆ' ಎಂದು ವ್ಯಕ್ತಿಯೊಬ್ಬರು 2016ರ ಮಾರ್ಚ್ 19ರಂದು ಪೊಲೀಸರಿಗೆ ದೂರು ನೀಡಿದ್ದರು.

ಪ್ರಕರಣದ ತನಿಖೆ ನಡೆಸಿದ್ದ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಆದರೆ, 'ದೋಷಾರೋಪ ಪಟ್ಟಿಯಲ್ಲಿ ಸಂತ್ರಸ್ತೆಯನ್ನು ಸಾಕ್ಷಿಯನ್ನಾಗಿ ಹೆಸರಿಸಿಲ್ಲ' ಎಂಬ ಅಂಶದ ಆಧಾರದಲ್ಲಿ ಆರೋಪಿಯು, ಜಾಮೀನು ಮಂಜೂರು ಮಾಡುವಂತೆ ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ಕುರಿತ ಅರ್ಜಿಯನ್ನು ಕಲಬುರಗಿ ಪೀಠದಲ್ಲಿನ ನ್ಯಾಯಮೂರ್ತಿ ಎಸ್. ರಾಚಯ್ಯ ಅವರು ವಿಚಾರಣೆ ನಡೆಸಿ, ಆರೋಪಿ ಅರ್ಜಿದಾರನಿಗೆ ಜಾಮೀನು ಮಂಜೂರು ಮಾಡಿದ್ದಾರೆ. ಅಂತೆಯೇ, 'ತನಿಖಾಧಿಕಾರಿಯು, ಪ್ರಕರಣದ ಸಂತ್ರಸ್ತೆಯನ್ನು ಸಾಕ್ಷಿಯನ್ನಾಗಿ ಪರಿಗಣಿಸದೆ ತಪ್ಪೆಸಗಿದ್ದಾರೆ. ಈ ಕುರಿತು ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಬೀದರ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ನಿರ್ದೇಶಿಸಿದ್ದಾರೆ.

ಗನ್ ತಯಾರಿಸಿ ಮಾರಾಟ ಆರೋಪ: ಜಾಮೀನು

ಬೆಂಗಳೂರು: ಅಕ್ರಮವಾಗಿ ಗನ್ ತಯಾರಿಸಿ ಮಾರಾಟ ಮಾಡಿದ ಮತ್ತು ಸ್ಫೋಟಕಗಳನ್ನು ಸಂಗ್ರಹಿಸಿದ ಆರೋಪಿಯೊಬ್ಬರಿಗೆ ಹೈಕೋರ್ಟ್, ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.



ಈ ಸಂಬಂಧ ಜಾಮೀನು ಕೋರಿ ತುಮಕೂರು ಜಿಲ್ಲೆ ಊರ್ಡಿಗೆರೆ ಹೋಬಳಿ ದುರ್ಗದಹಳ್ಳಿಯ ಕೃಷ್ಣಪ್ಪ (43) ಎಂಬುವರು ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ನ್ಯಾಯಮೂರ್ತಿ ಕೆ. ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದೆ.

'ಆರೋಪಿಯು ₹ 2 ಲಕ್ಷ ಮೊತ್ತದ ಬಾಂಡ್ ಹಾಗೂ ಅಷ್ಟೇ ಮೊತ್ತಕ್ಕೆ ಇಬ್ಬರ ಭದ್ರತೆ ಒದಗಿಸಬೇಕು. ಸಾಕ್ಷ್ಯ ಗಳ ನಾಶಕ್ಕೆ ಯತ್ನಿಸಬಾರದು. ಯಾವುದೇ ವಿಳಂಬವಿಲ್ಲದೆ ಪ್ರಕರಣದ ವಿಚಾರಣೆ ಎದುರಿಸಬೇಕು. ನ್ಯಾಯಾಲಯದ ಅನುಮತಿ ಇಲ್ಲದೆ ವ್ಯಾಪ್ತಿ ಪ್ರದೇಶ ಬಿಟ್ಟು ತೆರಳಬಾರದು' ಎಂದು ಷರತ್ತುಗಳನ್ನು ನ್ಯಾಯಪೀಠ ವಿಧಿಸಿದೆ.

ಪ್ರಕರಣವೇನು?: 'ಅರ್ಜಿದಾರ ಹಾಗೂ ಮತ್ತೊಬ್ಬ ವ್ಯಕ್ತಿಯು ಅಕ್ರಮವಾಗಿ ಗನ್‌ಗಳ ತಯಾರಿಕೆ, ಮಾರಾಟ ಹಾಗೂ ಸ್ಫೋಟಕ ವಸ್ತುಗಳ ಸಂಗ್ರಹಣೆಯಂತಹ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾರೆ' ಎಂಬ ಮಾಹಿತಿ ಆಧರಿಸಿ ಕ್ಯಾತ್ಸಂದ್ರ ಠಾಣೆಯ ಪೊಲೀಸರು, 2022ರ ಜನವರಿ 12ರಂದು ಅರ್ಜಿದಾರನ ನಿವಾಸದ ಮೇಲೆ ದಾಳಿ ನಡೆಸಿದ್ದರು. ಈ ಸಂದರ್ಭದಲ್ಲಿ ಪರವಾನಗಿ ಇಲ್ಲದ ಗನ್‌ಗಳು ಹಾಗೂ ಸ್ಫೋಟಕಗಳನ್ನು ವಶಕ್ಕೆ ಪಡೆಯಲಾಗಿತ್ತು. ಆರೋಪಿ ತಯಾರಿಸಿದ್ದ ಗನ್‌ಗಳನ್ನು ಪ್ರಕರಣದ 2ರಿಂದ 9ನೇ ಆರೋಪಿಗಳಿಗೆ ಮಾರಾಟ ಮಾಡಿದ್ದ ಹಿನ್ನೆಲೆಯಲ್ಲಿ ಅದೇ ದಿನ ಎಲ್ಲ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದರು. ಇತರ ಆರೋಪಿಗಳು ಜಾಮೀನು ಪಡೆದಿದ್ದರು. ಆದರೆ, ಪ್ರಕರಣದ ಮೊದಲ ಆರೋಪಿಯಾದ ಕೃಷ್ಣಪ್ಪ ಅವರಿಗೆ ಜಾಮೀನು ನೀಡಲು ವಿಚಾರಣಾ ನ್ಯಾಯಾಲಯ ನಿರಾಕರಿಸಿತ್ತು.

ಹೈಕೋರ್ಟ್ ಮೆಟ್ಟಿಲೇರಿದ್ದ ಕೃಷ್ಣಪ್ಪ, 'ನಾನು 1 ವರ್ಷ 3 ತಿಂಗಳಿನಿಂದ ಜೈಲಿನಲ್ಲಿದ್ದೇನೆ. ಈಗಾಗಲೇ ತನಿಖೆ ಪೂರ್ಣಗೊಂಡು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಆದ್ದರಿಂದ, ಜಾಮೀನು ಮಂಜೂರು ಮಾಡಬೇಕು' ಎಂದು ಕೋರಿದ್ದರು.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಪೀಠ, 'ವೃತ್ತಿಯಲ್ಲಿ ಬಡಗಿಯಾಗಿರುವ ಅರ್ಜಿದಾರನ ವಿರುದ್ಧ ಸಿಂಗಲ್ ಬ್ಯಾರೆಲ್ ಗನ್‌ಗಳನ್ನು ತಯಾರಿಸಿ, ಪರವಾನಗಿ ಹೊಂದಿರದ ವ್ಯಕ್ತಿಗಳಿಗೆ (ಪ್ರಕರಣದ ಇತರ ಆರೋಪಿಗಳು) ಮಾರಾಟ ಮಾಡಿದ ಆರೋಪವಿದೆ. ಪೊಲೀಸರು, ಆರೋಪಿಯಿಂದ ಕೆಲವು ಗನ್‌ಗಳು ಹಾಗೂ ಸ್ಫೋಟಕಗಳನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿಯು 2022ರ ಜನವರಿ 12ರಿಂದ ನ್ಯಾಯಾಂಗ ಬಂಧನದಲ್ಲಿದ್ದಾರೆ. ಈಗಾಗಲೇ ತನಿಖೆ ಪೂರ್ಣಗೊಂಡಿದ್ದು ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಹೀಗಾಗಿ, ವಿಚಾರಣೆಗಾಗಿ ಅರ್ಜಿದಾರನನ್ನು ನ್ಯಾಯಾಂಗ ಬಂಧನದಲ್ಲಿ ಇರಿಸುವ ಅವಶ್ಯಕತೆ ಕಂಡುಬರುತ್ತಿಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

ಊಟದ ಪ್ಲೇಟ್‌ನಿಂದ ಚಾಕು!

ಒಂದನೇ ಪುಟದಿಂದ...

'ಎರಡು ಮೊಬೈಲ್‌ಗಳು, ಸಿಮ್‌ಕಾರ್ಡ್, ಚಾರ್ಜರ್, 5 ಚಾಕು, 5 ಕತ್ತರಿ ಹಾಗೂ ಊಟದ ಪ್ಲೇಟ್‌ನಿಂದ ತಯಾರಿಸಿದ್ದ ಒಂದು ಚಾಕು ಜಪ್ತಿ ಮಾಡಲಾಗಿದೆ. ಮೊಬೈಲ್ ಇರಿಸಿಕೊಂಡಿದ್ದ ಕೈದಿಗಳ ವಿರುದ್ಧ ಪ್ರಕರಣ ದಾಖಲಿಸಲು ಕ್ರಮ ಕೈಗೊಳ್ಳಲಾಗಿದೆ' ಎಂದರು.

'ಊಟದ ಪ್ಲೇಟ್ ಜಜ್ಜಿ ತಯಾರಿಸಿದ್ದ ಚಾಕುವನ್ನು ಎಲ್ಲ ಕೈದಿಗಳು ಓಡಾಡುವ ಜಾಗದಲ್ಲಿ ಇರಿಸಲಾಗಿತ್ತು. ಚಾಕು ಯಾರಿಗೆ ಸೇರಿದ್ದು? ಅದನ್ನು ಯಾವುದಾದರೂ ಅಪರಾಧ ಕೃತ್ಯಕ್ಕೆ ಬಳಸಲಾಗಿತ್ತಾ? ಎಂಬ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ಹೇಳಿದರು.

ಭದ್ರತೆ ವೈಫಲ್ಯ: 'ಕಾರಾಗೃಹ ಪ್ರವೇಶ ದ್ವಾರ ಹಾಗೂ ಇತರೆಡೆ ಬಿಗಿ ಭದ್ರತೆ ಇರುವುದಾಗಿ ಇಲಾಖೆಯವರು ಹೇಳುತ್ತಾರೆ. ಆದರೆ, ಮೊಬೈಲ್ ಹಾಗೂ ಚಾಕುಗಳು ಒಳಗೆ ಹೋಗಿದ್ದು ಹೇಗೆ? ಎಂಬ ಪ್ರಶ್ನೆ ಮೂಡಿದೆ. ಕಾರಾಗೃಹದ ಭದ್ರತಾ ವೈಫಲ್ಯ ಎದ್ದು ಕಾಣುತ್ತಿದ್ದು, ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ವರದಿ ಸಲ್ಲಿಸಲಾಗುವುದು' ಎಂದು ಹೇಳಿದರು.



ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ಸಿಸಿಬಿ ಪೊಲೀಸರು ಜಪ್ತಿ ಮಾಡಿರುವ ಚಾಕುಗಳು

ಪೊಲೀಸ್ ನೇಮಕಾತಿ: ನಕಲಿ ಜಾಲತಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ನೇಮಕಾತಿ ವಿಭಾಗದ ಹೆಸರಿನಲ್ಲಿ ನಕಲಿ ಜಾಲತಾಣ ಸೃಷ್ಟಿಸಿ ಅಭ್ಯರ್ಥಿಗಳನ್ನು ವಂಚಿಸಲಾಗಿದ್ದು, ಈ ಸಂಬಂಧ ಕೇಂದ್ರ ವಿಭಾಗ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಪೊಲೀಸ್ ಇಲಾಖೆಯಲ್ಲಿ 25 ತಾಂತ್ರಿಕ ಹುದ್ದೆಗಳು ಖಾಲಿ ಇವೆ. ಅರ್ಜಿ ಸಲ್ಲಿಸಬಹುದು' ಎಂಬುದಾಗಿ ಜಾಹೀರಾತು ನೀಡಿದ್ದ ಆರೋಪಿಗಳು, ಅದರ ಜೊತೆ ನಕಲಿ ಜಾಲತಾಣದ ಲಿಂಕ್ ಹರಿಬಿಟ್ಟಿದ್ದರು. ಈ ಬಗ್ಗೆ ಮಾಹಿತಿ ಲಭ್ಯವಾಗುತ್ತಿದ್ದಂತೆ ಎಫ್‌ಐಆರ್ ದಾಖಲಿಸಿಕೊಂಡು, ಜಾಲತಾಣ ನಿಷ್ಕ್ರಿಯಗೊಳಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಹೊರ ದೇಶವೊಂದರ ವಿಳಾಸ ಬಳಸಿ www.ksprecruitment.co.in ನಕಲಿ ಜಾಲತಾಣ ಸೃಷ್ಟಿಸಲಾಗಿತ್ತು. ತಾಂತ್ರಿಕ ಹುದ್ದೆಗಳ ನೇಮಕಾತಿ ಆಯ್ಕೆಯನ್ನು ನಮೂದಿಸಲಾಗಿತ್ತು. ಲಿಂಕ್ ತೆರೆಯುವ ಅಭ್ಯರ್ಥಿಗಳು, ಅರ್ಜಿ ಭರ್ತಿ ಮಾಡಿದ್ದರು. ಜೊತೆಗೆ, ಪ್ರತಿ ಅರ್ಜಿಗೆ ₹ 2000 ಪಾವತಿಸಬೇಕೆಂಬ ಸೂಚನೆಯೂ ಜಾಲತಾಣದಲ್ಲಿತ್ತು' ಎಂದು ತಿಳಿಸಿದರು. 'ಅರ್ಜಿ ಭರ್ತಿ ಮಾಡಿದ್ದ ಕೆಲವರು, ಅರ್ಜಿ ಶುಲ್ಕದ ಬಗ್ಗೆ ಅನುಮಾನಗೊಂಡಿದ್ದರು. ಹೀಗಾಗಿ, ಹಣ ಪಾವತಿ ಮಾಡಿಲ್ಲ' ಎಂದರು.

ವಶಕ್ಕೆ ಪಡೆದು ವಿಚಾರಣೆ: 'ಜಾಲತಾಣಕ್ಕೆ ಲಿಂಕ್ ಮಾಡಲಾಗಿದ್ದ ಮೊಬೈಲ್ ನಂಬರ್ ಆಧರಿಸಿ ವ್ಯಕ್ತಿಯೊಬ್ಬನನ್ನು ವಶಕ್ಕೆ ಪಡೆಯಲಾಗಿತ್ತು. ಆದರೆ, ಆತನ ಹೆಸರಿನಲ್ಲಿ ಆರೋಪಿಗಳು ಸಿಮ್‌ಕಾರ್ಡ್ ಖರೀದಿಸಿ ಕೃತ್ಯ ಎಸಗಿದ್ದು ಗೊತ್ತಾಗಿದೆ. ಸೈಬರ್ ವಂಚಕರು ಯಾರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದರು.

ಬಂದರು ನೇಮಕಾತಿ ಹೆಸರಿನಲ್ಲೂ ವಂಚನೆ: 'ಉಡುಪಿ ಬಂದರಿನಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿ ಹೆಸರಿನಲ್ಲಿ ನಕಲಿ ಜಾಲತಾಣ ಸೃಷ್ಟಿಸಿ, ಅಭ್ಯರ್ಥಿಗಳಿಂದ ಹಣ ಪಡೆದು ವಂಚಿಸಿರುವುದು ಗಮನಕ್ಕೆ ಬಂದಿದೆ. ಈ ಕೃತ್ಯ ಎಸಗಿರುವ ಆರೋಪಿಗಳೇ ಪೊಲೀಸ್ ನೇಮಕಾತಿ ಹೆಸರಿನಲ್ಲಿ ವಂಚಿಸಿರುವುದು ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

ನದಿಯಲ್ಲಿ ಮುಳುಗಿ ಬಾಲಕಿಯರಿಬ್ಬರು ಸಾವು

ಒಂದನೇ ಪುಟದಿಂದ...

ಉದಯ ಅವರ ಅಪ್ಪನ ವಾರ್ಷಿಕ ತಿಥಿ ಮಂಗಳವಾರ ನಡೆಯಬೇಕಿತ್ತು. ಹಾಗಾಗಿ ಕುಟುಂಬಸ್ಥರೆಲ್ಲರೂ ಬಂದಿದ್ದರು. ಮನೆಯವರು ಬಟ್ಟೆ ಒಗೆಯಲು ಮನೆ ಸಮೀಪವೇ ಇರುವ ಕುಮಾರಧಾರ ನದಿಗೆ ಹೋಗಿದ್ದರು. ಆಗ ಆ ಬಾಲಕಿಯರೂ ಅವರ ಜೊತೆ ಹೋಗಿದ್ದರು. ಈ ವೇಳೆ ಅವರಿಬ್ಬರು ನೀರಿಗೆ ಇಳಿದಿದ್ದು, ಮುಳುಗಿ ನಾಪತ್ತೆಯಾಗಿದ್ದರು. ಇದು ಗಮನಕ್ಕೆ ಬರುತ್ತಿದ್ದಂತೆಯೇ ಸ್ಥಳೀಯ ಈಜುಗಾರರೂ ನದಿ ನೀರಲ್ಲಿ ಮುಳುಗಿ ಹುಡುಕಾಟ ನಡೆಸಿದ್ದರು. ಸುಳ್ಯದಿಂದ ಅಗ್ನಿಶಾಮಕ ದಳವನ್ನು ಕರೆಸಿ ನೀರಿನಲ್ಲಿ ಶೋಧ ನಡೆಸಲಾಯಿತು. ರಾತ್ರಿ ವೇಳೆಗೆ ಇಬ್ಬರ ಮೃತದೇಹಗಳು ಪತ್ತೆಯಾದವು.

ಸುಬ್ರಹ್ಮಣ್ಯ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. 'ನದಿಯ ಆಳ ತಿಳಿಯದೇ ಬಾಲಕಿಯರು ನದಿಗೆ ಇಳಿದಿರಬಹುದು. ಕಾಲು ಜಾರಿ ನೀರಲ್ಲಿ ಮುಳುಗಿ ಮೃತಪಟ್ಟಿರಬಹುದು' ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

'ಮುಂಬೈನಿಂದ ಬಂದಿದ್ದ ಇನ್ನೊಬ್ಬ ಬಾಲಕಿಯೂ ಆವಂತಿಕಾ ಹಾಗೂ ಅಂಕಿತಾ ಜೊತೆ ನೀರಿಗಿಳಿದಿದ್ದಳು. ಮುಳುಗುತ್ತಿದ್ದ ಬಾಲಕಿಯೊಬ್ಬಳು ರಕ್ಷಣೆಗಾಗಿ ಆಕೆಯ ಚೂಡಿದಾರವನ್ನೂ ಹಿಡಿದ ಕಾರಣ ಆಕೆಯೂ ನೀರಿನಲ್ಲಿ ಮುಳುಗಿದ್ದಳು. ಆದರೆ, ನೀರಿನಿಂದ ಮೇಲೆದ್ದು ಬರುವಲ್ಲಿ ಯಶಸ್ವಿಯಾದಳು' ಎಂದು ಸ್ಥಳೀಯರು ತಿಳಿಸಿದರು.

ನಗದು ರಹಿತ ವ್ಯವಸ್ಥೆಗೆ ಪ್ರವಾಸಿಗರು ಹೈರಾಣ, ಒಮ್ಮೆ ಐವರಿಗೆ ಮಾತ್ರ ಅವಕಾಶ

ಕೋಟೆ ಪ್ರವೇಶಕ್ಕೆ 'ಆನ್‌ಲೈನ್' ತೊಡಕು

• ಕೆ.ಪಿ. ಓಂಕಾರಮೂರ್ತಿ



ಚಿತ್ರದುರ್ಗದ ಕೋಟೆ ಮುಂಭಾಗದಲ್ಲಿ ಕೋಡ್ ಸ್ಕ್ಯಾನ್ ಮಾಡುತ್ತಿರುವ ಪ್ರವಾಸಿಗರು. ಪ್ರಜಾವಾಣಿ ಚಿತ್ರ: ವಿ.ಚಂದ್ರಪ್ಪ

ಚಿತ್ರದುರ್ಗ: 'ಬಿಸಿಲಿನ ಬೇಗೆಗೆ ಸುಸ್ತಾಗಿದ್ದೇವೆ. ಇಲ್ಲಿ ಹಣ ಪಡೆದು ಟಿಕೆಟ್ ನೀಡುತ್ತಿಲ್ಲ. ಕುಟುಂಬದವರನ್ನು ಅರ್ಧ ಗಂಟೆಯಿಂದ ರಸ್ತೆಯಲ್ಲಿ ನಿಲ್ಲಿಸಿದ್ದೇನೆ' ಎನ್ನುತ್ತಾ ಮೊಬೈಲ್ ಹಿಡಿದು ಗೊಣಗುತ್ತಿದ್ದರು ಹಾಸನದ ಪ್ರವಾಸಿಗ ಕೆ.ಆರ್. ಛಾಯಾಪತಿ. ಐತಿಹಾಸಿಕ ಕಲ್ಲಿನ ಕೋಟೆ ಪ್ರವೇಶಕ್ಕೆ ಭಾರತೀಯ ಪುರಾತತ್ವ ಮತ್ತು ಸರ್ವೇಕ್ಷಣಾ ಇಲಾಖೆ ರೂಪಿಸಿದ ಆನ್‌ಲೈನ್ ಟಿಕೆಟ್ ವ್ಯವಸ್ಥೆ ಅವರನ್ನು ಹೈರಾಣ ಮಾಡಿತ್ತು.

ಕೋವಿಡ್ ಸಂದರ್ಭದಲ್ಲಿ ಕೋಟೆ ಮುಂಭಾಗದ ಕೌಂಟರ್ ಬಳಿ ಹಣ ಪಡೆದು ಟಿಕೆಟ್ ವಿತರಿಸುವುದನ್ನು ಸಂಪೂರ್ಣ ಸ್ಥಗಿತಗೊಳಿಸಿ, ನಗದು ರಹಿತ ಟಿಕೆಟ್ ವ್ಯವಸ್ಥೆ ಜಾರಿಗೊಳಿಸಲಾಗಿತ್ತು. ಕೊರೊನಾ ಭಯ ದೂರವಾದರೂ ಆ ವ್ಯವಸ್ಥೆ ಬದಲಾಗಿಲ್ಲ. ಇದರಿಂದ ಪ್ರವಾಸಿಗರು ನಿತ್ಯ ತೊಂದರೆ ಅನುಭವಿಸುತ್ತಿದ್ದಾರೆ.

ಇಲ್ಲಿನ ಕೋಟೆಗೆ ನಿತ್ಯವೂ ಪ್ರವಾಸಿಗರು ಭೇಟಿ ನೀಡುತ್ತಾರೆ. ರಜಾ ದಿನಗಳಲ್ಲಿ ಈ ಸಂಖ್ಯೆ ಎರಡು, ಮೂರು ಸಾವಿರದ ಗಡಿ ದಾಟುತ್ತದೆ. ನಿತ್ಯ ಬೆಳಿಗ್ಗೆ 6ರಿಂದ ಸಂಜೆ 6 ಗಂಟೆವರೆಗೂ ಕೋಟೆ ವೀಕ್ಷಣೆಗೆ ಅವಕಾಶವಿದೆ. 15 ವರ್ಷದೊಳಗಿನ ಮಕ್ಕಳಿಗೆ ಪ್ರವೇಶ ಉಚಿತ. ಭಾರತೀಯರಿಗೆ ₹ 25 ಹಾಗೂ ವಿದೇಶಿ ಪ್ರವಾಸಿಗರಿಗೆ ₹ 300 ಪ್ರವೇಶ ದರ ನಿಗದಿಗೊಳಿಸಲಾಗಿದೆ. ಆನ್‌ಲೈನ್‌ನಲ್ಲಿ ಭಾರತೀಯರಿಗೆ ₹ 20 ಹಾಗೂ ವಿದೇಶಿಗರಿಗೆ ₹ 250 ಪಡೆಯಲಾಗುತ್ತಿದೆ.

ಕೋಟೆ ಪ್ರವೇಶ ದ್ವಾರದ ಬಳಿ ಟಿಕೆಟ್ ಪಡೆಯಲು ಕ್ಯೂಆರ್ ಕೋಡ್ ಫಲಕ ಅಳವಡಿಸಲಾಗಿದೆ.

ಪ್ರವೇಶ ಬಯಸುವವರು ಫೋನ್‌ನಲ್ಲಿ ಕೋಡ್ ಸ್ಕ್ಯಾನ್ ಮಾಡಿದರೆ ಭಾರತೀಯ ಪುರಾತತ್ವ ಮತ್ತು ಸರ್ವೇಕ್ಷಣಾ ಇಲಾಖೆ ಜಾಲತಾಣ ತೆರೆದುಕೊಳ್ಳುತ್ತದೆ. ಪ್ರವಾಸಿಗರ ಹೆಸರು, ಗುರುತಿನ ಚೀಟಿ ಸಂಖ್ಯೆ ಸೇರಿ ಇತರ ಮಾಹಿತಿ ಭರ್ತಿ ಮಾಡಬೇಕು. ಬಳಿಕ ನೆಟ್ ಬ್ಯಾಂಕಿಂಗ್, ಡೆಬಿಟ್ ಕಾರ್ಡ್ ಅಥವಾ ಯುಪಿಐ ಮೂಲಕ ಹಣ ಪಾವತಿಸಿದರೆ ಟಿಕೆಟ್ ಲಭ್ಯವಾಗುತ್ತದೆ. ಆದರೆ, ಸರ್ವರ್ ಸಮಸ್ಯೆಯಿಂದ ಟಿಕೆಟ್ ಪಡೆಯುವುದು ಸುಲಭವಾಗಿಲ್ಲ. ಒಮ್ಮೆ ಐದು ಪ್ರವಾಸಿಗರಿಗೆ ಮಾತ್ರ ಅವಕಾಶವಿರುವುದು ಸಮಸ್ಯೆ ತಂದೊಡ್ಡಿದೆ. ಇದು ಪ್ರವಾಸಿಸ್ನೇಹಿಯಾಗಿಲ್ಲ ಎಂಬುದು ಪ್ರವಾಸಿಗರ ದೂರು.

ಗ್ರಾಮೀಣರಿಗೆ ಆನ್‌ಲೈನ್ ಟಿಕೆಟ್ ಪಡೆಯುವುದು ದುಸ್ತರವಾಗಿದೆ. ಸಿಬ್ಬಂದಿ ಮತ್ತೊಬ್ಬರ ಮೊಬೈಲ್‌ನಲ್ಲಿ ಟಿಕೆಟ್ ವ್ಯವಸ್ಥೆ ಮಾಡುತ್ತಾರೆ. ಬಹುತೇಕರು ಇದಕ್ಕೆ ಸಮ್ಮತಿಸುತ್ತಿಲ್ಲ. ಇಂತಹ ಸಮಯದಲ್ಲಿ ಪ್ರವಾಸಿಗರು ಸಿಬ್ಬಂದಿ ಜೊತೆ ಗಲಾಟೆ ನಡೆಸಿದ ನಿದರ್ಶನಗಳಿವೆ.

ಹಂಪಿಯಂತೆ ಕೋಟೆ ವೀಕ್ಷಣೆಗೂ ಸಹ ಆನ್‌ಲೈನ್, ಆಫ್‌ಲೈನ್ ಟಿಕೆಟ್ ಸೌಲಭ್ಯ ಕಲ್ಪಿಸಬೇಕು. ಪ್ರವೇಶ ದ್ವಾರ ದಲ್ಲಿ ಅರ್ಧ ತಾಸು ಕಳೆಯುವಂತಾಗಿದೆ.
ಸೌಮ್ಯಶ್ರೀ ಬಿ. ಘಾಟೆ
ಪ್ರವಾಸಿ, ಬೆಂಗಳೂರು

ನೆಟ್‌ವರ್ಕ್ ಸಮಸ್ಯೆಯಿಂದಾಗಿ ಟಿಕೆಟ್ ಪಡೆಯಲು ಸಾಧ್ಯವಾಗದೆ ನಿರಾಸೆಯಿಂದ ಹಂಪಿಗೆ ಪ್ರಯಾಣ ಬೆಳೆಸುತ್ತಿದ್ದೇನೆ. ನಗದು ಪಡೆದು ಟಿಕೆಟ್ ನೀಡಿದರೆ ಅನುಕೂಲ.
ಎಚ್.ಎಸ್. ಆದರ್ಶ
ಪ್ರವಾಸಿ, ತಿಪಟೂರು

'ಕೊರೊನಾ ಸಮಯದಲ್ಲಿ ಇಲಾಖೆ ಆನ್‌ಲೈನ್ ಟಿಕೆಟ್ ವ್ಯವಸ್ಥೆ ಜಾರಿಗೊಳಿಸಿತು. ಪ್ರವಾಸಿಗರು ಹೆಚ್ಚಾದಾಗ ನಗದು ಸ್ವೀಕರಿಸಿ ಟಿಕೆಟ್ ನೀಡಲಾಗುತ್ತಿದೆ' ಎನ್ನುತ್ತಾರೆ ಇಲಾಖೆಯ ಸಹಾಯಕ ಸಂರಕ್ಷಣಾಧಿಕಾರಿ ಪಿ.ಸುಧೀರ್.

ಸೋಂಕಿನ ಭೀತಿ ತಗ್ಗಿದರೂ ವ್ಯವಸ್ಥೆ ಮಾತ್ರ ಬದಲಾಗಿಲ್ಲ. ಇದರಿಂದ ಕೋಟೆ ವೀಕ್ಷಣೆಗೆ ಬರುವ ಅನೇಕರು ಟಿಕೆಟ್ ಪಡೆಯಲು ಸಾಧ್ಯವಾಗದೇ ನಿರಾಸೆಯಿಂದ ಹಿಂದಿರುಗುವುದು ಸಾಮಾನ್ಯವಾಗಿದೆ.

ಚುನಾವಣೆ ಫಲಿತಾಂಶ: ನಿಖರ ಭವಿಷ್ಯ ಹೇಳಿದರೆ ₹ 10 ಲಕ್ಷ ಬಹುಮಾನ

ಪ್ರಜಾವಾಣಿ ವಾರ್ತೆ



ಪ್ರೊ. ನರೇಂದ್ರ ನಾಯಕ್

ಮಂಗಳೂರು: ರಾಜ್ಯ ವಿಧಾನ ಸಭಾ ಚುನಾವಣೆಯ ಫಲಿತಾಂಶ ಕುರಿತು ನಿಖರವಾಗಿ ಭವಿಷ್ಯ ಹೇಳುವವರಿಗೆ ₹ 10 ಲಕ್ಷ ಬಹುಮಾನ ನೀಡುವುದಾಗಿ ಇಲ್ಲಿನ ವಿಚಾರವಾದಿ ಪ್ರೊ.ನರೇಂದ್ರ ನಾಯಕ್ ಘೋಷಿಸಿದ್ದಾರೆ.

ಈ ಸಲುವಾಗಿ 20 ಪ್ರಶ್ನೆಗಳನ್ನು ಸಿದ್ಧಪಡಿಸಿರುವ ಅವರು, 'ಎಲ್ಲ ಪ್ರಶ್ನೆಗಳಿಗೂ ಇದೇ 10ರ ಒಳಗೆ ಖಚಿತ ಉತ್ತರ ಕಳುಹಿಸಿಕೊಡಬಹುದು ಅಥವಾ ಇ-ಮೇಲ್ ಮಾಡಬಹುದು. ಉತ್ತರಗಳು ಶೇ 95ರಷ್ಟು ಸರಿ ಇದ್ದರೂ ಬಹುಮಾನ ನೀಡಲಾಗುತ್ತದೆ' ಎಂದು ತಿಳಿಸಿದ್ದಾರೆ.

'ರಾಜ್ಯದಲ್ಲಿ ಯಾವ ಪಕ್ಷವು ಅಧಿಕಾರಕ್ಕೆ ಬರಲಿದೆ. ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಹಾಗೂ ಸ್ವತಂತ್ರ ಅಭ್ಯರ್ಥಿಗಳು ಎಷ್ಟು ಸ್ಥಾನಗಳಲ್ಲಿ ಗೆಲ್ಲಲಿದ್ದಾರೆ. ಮಹಿಳೆಯರು ಎಷ್ಟು ಕ್ಷೇತ್ರಗಳಲ್ಲಿ ಗೆಲ್ಲಿದ್ದಾರೆ, ಮುಂದಿನ ಮುಖ್ಯಮಂತ್ರಿ ಯಾರು, ವರುಣದಲ್ಲಿ ಸಿದ್ದರಾಮಯ್ಯ, ಶಿಗ್ಗಾಂವಿಯಲ್ಲಿ ಬಸವರಾಜ ಬೊಮ್ಮಯಿ, ಕನಕಪುರದಲ್ಲಿ ಡಿ.ಕೆ.ಶಿವಕುಮಾರ್, ಚನ್ನಪಟ್ಟಣದಲ್ಲಿ ಎಚ್.ಡಿ.ಕುಮಾರಸ್ವಾಮಿ, ಹುಬ್ಬಳ್ಳಿ-ಧಾರವಾಡದಲ್ಲಿ ಜಗದೀಶ ಶೆಟ್ಟರ್, ಮಂಗಳೂರು ದಕ್ಷಿಣದಲ್ಲಿ ಜೆ.ಆರ್.ಲೋಬೊ, ಮಂಗಳೂರು ಕ್ಷೇತ್ರದಲ್ಲಿ ಯು.ಟಿ.ಖಾದರ್, ಕಾರ್ಕಳದಲ್ಲಿ ಪ್ರಮೋದ್ ಮುತಾಲಿಕ್, ಮಲ್ಲೇಶ್ವರದಲ್ಲಿ ಡಾ.ಸಿ.ಎನ್.ಅಶ್ವತ್ಥನಾರಾಯಣ, ಚಿತ್ತಾಪುರದಲ್ಲಿ ಪ್ರಿಯಾಂಕ್ ಖರ್ಗೆ, ಯಲಹಂಕದಲ್ಲಿ ಸಂದೇಶ್ ಗಂಗಾಧರ್, ದಾವಣಗೆರೆಯಲ್ಲಿ ಶ್ಯಾಮನೂರು ಶಿವಶಂಕರಪ್ಪ ಅಥವಾ ಭವಿಷ್ಯ ಹೇಳುವವರ ಆಯ್ಕೆಯ ಅಭ್ಯರ್ಥಿ ಎಷ್ಟು ಮತ ಪಡೆಯುತ್ತಾರೆ ಎಂದು ತಿಳಿಸಬೇಕು.'

'ಜನರ ಭವಿಷ್ಯವನ್ನು ನಿಖರವಾಗಿ ಹೇಳುತ್ತೇವೆ ಎನ್ನುವ ಜ್ಯೋತಿಷಿಗಳ ಬಣ್ಣದ ಮಾತಿಗೆ ಬಲಿ ಆಗದಿರಿ ಎಂದು ಜಾಗೃತಿ ಮೂಡಿಸಲು 30 ವರ್ಷಗಳಿಂದ ನಾನು ಚುನಾವಣೆ ಸಂದರ್ಭದಲ್ಲಿ ಈ ಸ್ಪರ್ಧೆ ನಡೆಸುತ್ತಾ ಬಂದಿದ್ದೇನೆ. ಇಷ್ಟರವರೆಗೂ ಶೇ 40ಕ್ಕಿಂತ ಹೆಚ್ಚು ಸರಿ ಉತ್ತರ ನೀಡಿದವರು ಯಾರೂ ಸಿಕ್ಕಿಲ್ಲ' ಎಂದು ನರೇಂದ್ರ ನಾಯಕ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

10ರಂದು ಕೋರ್ಟ್‌ಗೆ ರಜೆ

ಬೆಂಗಳೂರು: ರಾಜ್ಯ ವಿಧಾನಸಭೆಯ ಚುನಾವಣೆ ನಿಮಿತ್ತ ಇದೇ 10ರಂದು ಹೈಕೋರ್ಟ್‌ನ ಬೆಂಗಳೂರು ಪ್ರಧಾನ ಪೀಠ ಸೇರಿದಂತೆ, ಕಲಬುರಗಿ, ಧಾರವಾಡದ 3 ಪೀಠಗಳು ಹಾಗೂ ಜಿಲ್ಲಾ ಮತ್ತು ವಿಚಾರಣಾ ನ್ಯಾಯಾಲಯಗಳಿಗೆ ರಜೆ ಘೋಷಿಸಲಾಗಿದೆ. ರಾಜ್ಯ ಹೈಕೋರ್ಟ್‌ಗೆ ಈಗಾಗಲೇ ಬೇಸಿಗೆ ರಜೆ ಘೋಷಿಸಲಾಗಿದ್ದು, ರಜಾಕಾಲದ ನ್ಯಾಯಪೀಠಗಳು ಕರ್ತವ್ಯ ನಿರ್ವಹಿಸುತ್ತಿವೆ. ಕಲಾಪಗಳು ಇದೇ 22ರಿಂದ ಪುನರಾರಂಭ ಆಗಲಿವೆ.

ಸುಧಾ, ಮಯೂರ ಓದಿರಿ

ಅಂಜನಾದ್ರಿ: ಹನುಮಾನ್ ಚಾಲೀಸ್ ಪಠಣ

ಗಂಗಾವತಿ (ಕೊಪ್ಪಳ ಜಿಲ್ಲೆ): 'ಬಜರಂಗದಳ ನಿಷೇಧದ ಬಗ್ಗೆ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಘೋಷಿಸಿದ್ದು, ಎಲ್ಲ ಭಕ್ತರು ಮತದಾನದ ದಿನ ಮೇ 10ರಂದು ಬಿಜೆಪಿಗೆ ಮತ ಹಾಕಿಸಿ, ಕಾಂಗ್ರೆಸ್ ನಿರ್ನಾಮ ಮಾಡಬೇಕು' ಎಂದು ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಹೇಳಿದರು.

ಅಂಜನಾದ್ರಿ ಬೆಟ್ಟದ ಮುಂಭಾಗದಲ್ಲಿ ಸೋಮವಾರ ಜನರೊಂದಿಗೆ ಹನುಮಾನ್ ಚಾಲೀಸ್ ಪಠಣ ಮಾಡಿದ ಬಳಿಕ ಮಾತನಾಡಿದ ಅವರು 'ಭಾರತ ರಾಮನ ದೇಶವಾಗಿದೆ. ಕಾಂಗ್ರೆಸ್ ಈ ಬಗ್ಗೆ ತುಚ್ಛವಾಗಿ ಮಾತನಾಡಿ ಮುಸ್ಲಿಮರನ್ನು ಓಲೈಸುತ್ತಿದೆ' ಎಂದರು.

'ಹನುಮ ಅಪಾರ ಶಕ್ತಿವಂತ. ಆಂಜನೇಯ ಸೀತೆಯನ್ನು ಹುಡುಕಲು ಹೋಗಿ ಲಂಕೆಗೆ ಹೇಗೆ ಬೆಂಕಿ ಹಚ್ಚಿದ್ದನೊ ಅದೇ ರೀತಿ ಹನುಮ ಭಕ್ತರು ಚುನಾವಣೆಯಲ್ಲಿ ಬಿಜೆಪಿಗೆ ಮತ ಹಾಕಿ ಕಾಂಗ್ರೆಸ್‌ಗೆ ಬೆಂಕಿ ಹಚ್ಚಿ, ಫಲಿತಾಂಶದ ದಿನ 13ರಂದು ಬೆಂಕಿಯ ವಾಸನೆ ಬರುವಂತೆ ಮಾಡಬೇಕು' ಎಂದರು.

ಇದಕ್ಕೂ ಮುನ್ನ ಆಂಜನೇಯ ಮೂರ್ತಿಗೆ ಪೂಜೆ ಸಲ್ಲಿಸಿದ ಭಕ್ತರು 'ಜೈ ಶ್ರೀರಾಮ್' ಘೋಷಣೆ ಮೊಳಗಿಸಿದರು. ಕಾಂಗ್ರೆಸ್ ಪ್ರಣಾಳಿಕೆ ಘೋಷಣೆಯಾದ ಬಳಿಕ ಅಂಜನಾದ್ರಿಯಲ್ಲಿ ಇದೇ ಮೊದಲು ಚಾಲೀಸ್ ಪಠಣ ನೆರವೇರಿತು.



ಎನ್‌ಸಿಪಿ ನಾಯಕ ಶರದ್ ಪವಾರ್ ಅವರು ಅಭ್ಯರ್ಥಿ ಉತ್ತಮ ಪಾಟೀಲ ಪರ ನಿಪ್ಪಾಣಿಯಲ್ಲಿ ಸೋಮವಾರ ಮತ ಯಾಚನೆ ಮಾಡಿದರು

'ಮಣಿಪುರದಲ್ಲಿ ಸಾವು–ನೋವು ಮೋದಿಗೆ ಪ್ರಚಾರದ್ದೇ ಗುಂಗು'

ಪ್ರಜಾವಾಣಿ ವಾರ್ತೆ

ನಿಪ್ಪಾಣಿ: 'ಬಿಜೆಪಿ ಸರ್ಕಾರವಿದ್ದ ಮಣಿಪುರದಲ್ಲಿ ಜರುಗಿದ ಹಿಂಸಾಚಾರದಲ್ಲಿ 54 ಜನರು ಸಾವನ್ನಪ್ಪಿದ್ದಾರೆ. ಪ್ರಧಾನಿ ಮೋದಿ ಅವರು ಅಲ್ಲಿಯ ಹಿಂಸಾಚಾರ, ಸಾವು- ನೋವುಗಳನ್ನು ತಡೆಯುವ ಬದಲು ಕರ್ನಾಟಕದಲ್ಲಿ ಚುನಾವಣಾ ಪ್ರಚಾರದಲ್ಲಿ ತೊಡಗಿದ್ದರು' ಎಂದು ಎನ್‌ಸಿಪಿ ನಾಯಕ ಶರದ್ ಪವಾರ್ ವಾಗ್ದಾಳಿ ನಡೆಸಿದರು.

ನಿಪ್ಪಾಣಿ ಕ್ಷೇತ್ರದ ಎನ್‌ಸಿಪಿ ಅಭ್ಯರ್ಥಿ ಉತ್ತಮ ಪಾಟೀಲ ಪರ ಸೋಮವಾರ ಪ್ರಚಾರ ಭಾಷಣ ಮಾಡಿದ ಅವರು, 'ಅಧಿಕಾರ ಸಿಕ್ಕ ನಂತರ ಅದನ್ನು ಸರ್ವರ ಹಿತಕ್ಕಾಗಿ ಬಳಸಬೇಕು. ಆದರೆ 'ಶೇ 40ರ ಫಾರ್ಮುಲಾ' ಅಳವಡಿಸಿಕೊಂಡಿದ್ದ ಈ ರಾಜ್ಯ ಸರ್ಕಾರದ ನೀತಿ ಬಹುತೇಕ ಎಲ್ಲ ಬಿಜೆಪಿ ಸರ್ಕಾರವಿರುವ ರಾಜ್ಯಗಳಲ್ಲಿ ಪಸರಿಸುವ ಭೀತಿಯಿದೆ' ಎಂದು ಟೀಕಿಸಿದರು.

'ಭೂತಾಯಿಯನ್ನು ನಿಜವಾಗಿ ಪ್ರೀತಿಸುವ ರೈತರು ಗೌರವದಿಂದ ಬದುಕುವಂಥ ಪರಿಸ್ಥಿತಿ ನಿರ್ಮಿಸದಿದ್ದಲ್ಲಿ ಈ ದೇಶ ನಡೆಸುವುದು ಕಷ್ಟವಾಗುತ್ತದೆ. ಕರ್ನಾಟಕವು ಕೃಷಿಗೆ ಉತ್ತಮವಾದ ರಾಜ್ಯ. ಇಲ್ಲಿ ವಿದ್ಯುತ್, ನೀರು, ಕೃಷಿ, ಮೊದಲಾದ ವಿಷಯಗಳಲ್ಲಿ ಗಮನ ಹರಿಸಬೇಕು. ತಂಬಾಕು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಿರುವ ಈ ಕ್ಷೇತ್ರದಲ್ಲಿ ಈಗ ಕಬ್ಬು ಬೆಳೆ ಬೆಳೆಯಲಾಗುತ್ತಿದೆ. ಕಬ್ಬಿಗೆ ಹೆಚ್ಚಿನ ದರ ಸಿಗುವಂತಾಗಲು ಎನ್‌ಸಿಪಿ ಅಭ್ಯರ್ಥಿ ಗೆಲ್ಲಿಸಿ' ಎಂದು ಮನವಿ ಮಾಡಿದರು.

ಅಭ್ಯರ್ಥಿ ಉತ್ತಮ ಪಾಟೀಲ ಮಾತನಾಡಿ, 'ಕ್ಷೇತ್ರದಲ್ಲಿ ಕುಡಿಯಲು ನೀರಿಲ್ಲ. ಆದರೆ, ಶಾಸಕಿ ಶಶಿಕಲಾ ಜೊಲ್ಲೆ ಈಜಲು ನೀರು ತರಲು ಹೊರಟಿದ್ದಾರೆ' ಎಂದು ಲೇವಡಿ ಮಾಡಿದರು.

ಎನ್‌ಸಿಪಿ ಮಹಾರಾಷ್ಟ್ರದ ಅಧ್ಯಕ್ಷ ಜಯಂತ ಪಾಟೀಲ ಇದ್ದರು.

ಮೋದಿಯನ್ನು ಅವಮಾನಿಸಿದರೆ ಜನ ಸಹಿಸುವುದಿಲ್ಲ: ಮಹಾರಾಷ್ಟ್ರ ಸಿಎಂ

ಪ್ರಜಾವಾಣಿ ವಾರ್ತೆ

ಉಡುಪಿ: ಕಾಂಗ್ರೆಸ್‌ನ ಹಿರಿಯ ನಾಯಕರು ಅಭಿವೃದ್ಧಿ ವಿಚಾರಗಳನ್ನು ಮುಂದಿಟ್ಟು ಚುನಾವಣೆ ಎದುರಿಸುವ ಬದಲು ಪ್ರಧಾನಿ ಮೋದಿ ಅವರನ್ನು ಅವಮಾನಿಸಿ ಮತ ಪಡೆಯುವ ಮಟ್ಟಕ್ಕೆ ಇಳಿದಿದ್ದಾರೆ ಎಂದು ಮಹಾರಾಷ್ಟ್ರದ ಮುಖ್ಯಮಂತ್ರಿ ಏಕನಾಥ ಶಿಂದೆ ವಾಗ್ದಾಳಿ ನಡೆಸಿದರು

ಬಿಜೆಪಿ ಅಭ್ಯರ್ಥಿಗಳ ಪರವಾಗಿ ಪ್ರಚಾರ ನಡೆಸಿದ ಅವರು ಸೋಮವಾರ ಇಲ್ಲಿ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿ, 'ಮೋದಿ ಅವರನ್ನು ಅವಮಾನಿಸುತ್ತಿರುವುದು ಇದು ಮೊದಲಲ್ಲ. ಗುಜರಾತ್ ಚುನಾವಣೆಯ ಸಂದರ್ಭದಲ್ಲಿ ಸಾವಿನ ವ್ಯಾಪಾರಿ, ಕೀಳುಮಟ್ಟದ ವ್ಯಕ್ತಿ ಎಂದು ಜರಿಯಲಾಗಿತ್ತು. ಕಾಂಗ್ರೆಸ್ ಟೀಕೆಗಳಿಗೆ ಪ್ರಧಾನಿ ಉತ್ತರ ನೀಡಲಿಲ್ಲ. ಬದಲಾಗಿ, ಚುನಾವಣೆಯಲ್ಲಿ ಮತದಾರರು ಉತ್ತರ ನೀಡಿದರು. ಪ್ರಧಾನಿಗೆ ಮಾಡಿದ ಅವಮಾನವನ್ನು ಕರ್ನಾಟಕದ ಮತದಾರರೂ ಸಹಿಸುವುದಿಲ್ಲ. ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸಲಿದ್ದಾರೆ' ಎಂದರು.

ಸಂಸದ ರಾಹುಲ್ ಶಾವ್ಲೆ, ಮುಂಬೈ ಮೇಯರ್ ಮೀನಾಕ್ಷಿ ಶಿಂದೆ, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಕುಯಿಲಾಡಿ ಸುರೇಶ್ ನಾಯಕ್, ಮಂಗಳೂರು ವಿಭಾಗ ಪ್ರಭಾರಿ ಉದಯಕುಮಾರ್ ಶೆಟ್ಟಿ ಇದ್ದರು.

ತಲಾ ₹10 ಲಕ್ಷ ಪರಿಹಾರ; ಸಾಮರ್ಥ್ಯ ಮೀರಿ ಜನರ ಭರ್ತಿ– ದೋಣಿ ಮಾಲೀಕನ ಬಂಧನ

ದೋಣಿ ದುರಂತ: ನ್ಯಾಯಾಂಗ ತನಿಖೆ

ಮಲಪ್ಪುರ (ಪಿಟಿಐ): ಕೇರಳದ ತೂವಲ್‌ತೀರ ಬೀಚ್ ಸಮೀಪ ಭಾನುವಾರ ಸಂಜೆ ಸಂಭವಿಸಿದ ದೋಣಿ ದುರಂತ ಕುರಿತು ರಾಜ್ಯ ಸರ್ಕಾರ ನ್ಯಾಯಾಂಗ ತನಿಖೆಗೆ ಆದೇಶಿಸಿದೆ. ಮೃತರ ಕುಟುಂಬಕ್ಕೆ ತಲಾ ₹ 10 ಲಕ್ಷ ಪರಿಹಾರ ಘೋಷಿಸಿದೆ.

ದೋಣಿ ಮಗುಚಿ ಸಂಭವಿಸಿದ್ದ ದುರಂತದಲ್ಲಿ ಮಹಿಳೆಯರು, ಮಕ್ಕಳು ಸೇರಿ 22 ಜನರು ಮೃತಪಟ್ಟಿದ್ದರು. ಕಣ್ಣುಮೇಲ್ ಕುಟುಂಬದ 12 ಜನರು ಮೃತರಲ್ಲಿ ಸೇರಿದ್ದರು.

'ಗಾಯಾಳುಗಳ ಚಿಕಿತ್ಸೆ ವೆಚ್ಚವನ್ನೂ ಸರ್ಕಾರ ಭರಿಸಲಿದೆ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಸೋಮವಾರ ಹೇಳಿದರು. ತಿರುರಂಗಂಡಿ ತಾಲ್ಲೂಕು ಆಸ್ಪತ್ರೆಯಲ್ಲಿ ಮೃತರ ಕುಟುಂಬದವರ ಭೇಟಿ ಬಳಿಕ ಅವರು ಸುದ್ದಿಗಾರರ ಜೊತೆಗೆ ಮಾತನಾಡಿದರು.

ಇದಕ್ಕೆ ಮುನ್ನ ಅವರು ಸರ್ವಪಕ್ಷ ಸಭೆ ಕರೆದು ಈ ವಿಷಯ ಕುರಿತು ಚರ್ಚಿಸಿದರು. 'ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಸರ್ವಪಕ್ಷಗಳ ಸಭೆ ನಿರ್ಧರಿಸಿದೆ. ದೋಣಿ ಸುರಕ್ಷತೆ ಮತ್ತು ಇತರೆ ತಾಂತ್ರಿಕ ಅಂಶಗಳು ತನಿಖೆ ವ್ಯಾಪ್ತಿಗೆ ಒಳಪಡಲಿವೆ. ತಾಂತ್ರಿಕ ಪರಿಣತರು ತನಿಖೆ ಆಯೋಗದಲ್ಲಿ ಇರಲಿದ್ದಾರೆ. ಜೊತೆಗೆ ಕೇರಳ ಪೊಲೀಸ್‌ನ ವಿಶೇಷ ತಂಡವೂ ಅವಘಡದ ತನಿಖೆಯನ್ನು ನಡೆಸಲಿದೆ' ಎಂದು ವಿವರಿಸಿದರು.

ಪ್ರವಾಸಿಗರ ಬೋಟ್‌ಗಳಲ್ಲಿ ಸುರಕ್ಷತೆ ಕುರಿತು ಸರ್ಕಾರ ನಿಯಮಗಳನ್ನು ರೂಪಿಸಿತ್ತು. ಇಲ್ಲಿ, ಆ ನಿಯಮ ಪಾಲನೆಯಾಗಿದೆಯೇ ಎಂದು ತನಿಖೆ ನಡೆಯಲಿದೆ ಎಂದು ಹೇಳಿದರು.

ಜಿಲ್ಲಾ ಅಧಿಕಾರಿಗಳ ಪ್ರಕಾರ, ಮೃತರಲ್ಲಿ 15 ಮಂದಿ ಎಂಟು ತಿಂಗಳಿನಿಂದ 17 ವರ್ಷ ವಯಸ್ಸಿನವರು. ತಾನೂರ್ ಠಾಣೆಯ ಪೊಲೀಸರು, ಬೋಟ್ ಮಾಲೀಕನನ್ನು ಬಂಧಿಸಿದ್ದಾರೆ. ಆತನ ಮೇಲೆ ಪ್ರಕರಣ ದಾಖಲಾಗಿದೆ. ಬೋಟ್‌ಗೆ ಲೈಸೆನ್ಸ್ ಇರಲಿಲ್ಲ ಎನ್ನುವುದು ಗೊತ್ತಾಗಿದೆ' ಎಂದು ತಿಳಿಸಿದರು.

ಈ ಮಧ್ಯೆ, ಕೊಚ್ಚಿಯ ಪಾಲಾರಿವಟ್ಟಂ ಠಾಣೆಯ ವ್ಯಾಪ್ತಿಯಲ್ಲಿ ಬೋಟ್ ಮಾಲೀಕನದು ಎನ್ನಲಾದ ಕಾರು ಮತ್ತು ಮೊಬೈಲ್ ಫೋನ್ ಪತ್ತೆಯಾಗಿದೆ. 'ಆ ಕಾರಿನಲ್ಲಿ ಆರೋಪಿ ಇಲ್ಲ, ಆತನ ಕುಟುಂಬ ಸದಸ್ಯರಿದ್ದು, ವಕೀಲರ ಭೇಟಿಗೆ ಸಿದ್ಧತೆ ನಡೆಸಿದ್ದಾರೆ' ಎಂದು ಪೊಲೀಸರು ತಿಳಿಸಿದರು.

ಶೋಧ ಕಾರ್ಯಕ್ಕೆ ಏಳು ತಂಡ: ಎನ್‌ಡಿಆರ್‌ಎಫ್, ಕರಾವಳಿ ರಕ್ಷಣಾ ಪಡೆ, ಅಗ್ನಿಶಾಮಕ ಸೇವೆ, ನೌಕಾಪಡೆ ಮತ್ತು ಸ್ಥಳೀಯರ ಒಟ್ಟು ಏಳು ತಂಡಗಳು ಶೋಧ ನಡೆಸಿದವು. ಎನ್‌ಡಿಆರ್‌ಎಫ್‌ನ ಇನ್ನೊಂದು ತಂಡ ಶೀಘ್ರ ಸೇರ್ಪಡೆ ಆಗಲಿದೆ ಎಂದು ಸಚಿವ ರಾಜನ್ ತಿಳಿಸಿದರು.

'22 ಜನ ಮೃತಪಟ್ಟಿದ್ದಾರೆ. ದೋಣಿಯಲ್ಲಿ 37 ಜನರಿದ್ದರು. ಐವರು ಈಜಿ ದಡ ಸೇರಿದ್ದಾರೆ. ಅದು ಖಾಸಗಿ ಬೋಟ್ ಆಗಿದ್ದು, ಎಷ್ಟು ಜನರಿದ್ದರು ಎಂಬುದು ಖಚಿತವಾಗಿ ಹೇಳಲಾಗುತ್ತಿಲ್ಲ' ಎಂದರು.

'15 ಜನರಿರುವ ನುರಿತ ಈಜುಗಾರರ ತಂಡ, ಅಗತ್ಯ ಪರಿಕರಗಳ ಜೊತೆಗೆ ಶೋಧದಲ್ಲಿ ತೊಡಗಿದೆ. ಕಾರ್ಯಾಚರಣೆಯ ಕಟ್ಟುನಿಟ್ಟಿನ ಮೇಲ್ವಿಚಾರಣೆ ನಡೆದಿದೆ' ಎಂದು ನೌಕಾಪಡೆ ಅಧಿಕಾರಿಗಳು ಹೇಳಿದರು. ದುರಂತದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಸೋಮವಾರ ಒಂದು ದಿನ ಶೋಕ ಘೋಷಿಸಿದ್ದು, ಅಧಿಕೃತ ಕಾರ್ಯಕ್ರಮ ರದ್ದುಪಡಿಸಲಾಗಿತ್ತು.



ಮಲಪ್ಪುರ ತೂವಲ್‌ತೀರ ಬೀಚ್ ಸಮೀಪ ದೋಣಿ ದುರಂತ ನಡೆದ ಸ್ಥಳದಲ್ಲಿ ಆತಂಕಭರಿತ ನಿವಾಸಿಗಳು –ಪಿಟಿಐ ಚಿತ್ರ



ದೋಣಿ ದುರಂತದಲ್ಲಿ ನೀರು ಪಾಲಾದವರ ಶೋಧ ಕಾರ್ಯಕ್ಕೆ ನೌಕಾಪಡೆ ಹೆಲಿಕಾಪ್ಟರ್ ನೆರವು ಪಡೆಯಲಾಯಿತು –ಎಎಫ್‌ಪಿ ಚಿತ್ರ

ದೋಣಿ ದುರಂತದ ಕರಾಳ ಇತಿಹಾಸ

100 ವರ್ಷ, 200 ಜನ ನೀರುಪಾಲು

ತಿರುವನಂತಪುರ/ಮಲಪ್ಪುರ (ಪಿಟಿಐ): ಕೇರಳದಲ್ಲಿ ದೋಣಿ ಅವಘಡಗಳ ಕರಾಳ ಇತಿಹಾಸವಿದೆ. 100 ವರ್ಷಗಳಲ್ಲಿ 200 ಜನರು ಸತ್ತಿದ್ದಾರೆ. ಪ್ರಮುಖ ದುರಂತದ ಹಿನ್ನೋಟ ಹೀಗಿದೆ.

- 1924: ಕೊಲ್ಲಂನಿಂದ ಕೋಟಯಂಗೆ ತೆರಳುತ್ತಿದ್ದ ದೋಣಿಯು ಪಾಳನ ಬಳಿ ಮಗುಚಿ 24 ಜನರ ಸಾವು. ಮಹಾಕವಿ ಕುಮಾರನಾಶಾನ್ ಕೂಡಾ ಇದೇ ಅವಘಡದಲ್ಲಿ ಅಸುನೀಗಿದ್ದರು.
- ಮಾರ್ಚ್ 19, 1980: ಕಣ್ಣಮಾಲಿ ಬಳಿ ದೋಣಿ ಮಗುಚಿ ಚರ್ಚ್‌ಗೆ ಪ್ರಾರ್ಥನೆಗೆ ತೆರಳುತ್ತಿದ್ದ 30 ಜನರ ಸಾವು.
- ಸೆಪ್ಟೆಂಬರ್ 25. 1983: ವಲ್ಲಾರ್‌ಪಾಡಂ ಬಳಿ ನಡೆದ ಅವಘಡದಲ್ಲಿ ಚರ್ಚ್‌ನ ಕಾರ್ಯಕ್ರಮ ಮುಗಿಸಿ ಮರಳುತ್ತಿದ್ದ 18 ಜನರ ಸಾವು.
- ಜುಲೈ 27, 2002: ಕೇರಳ ಜಲಸಾರಿಗೆ ಇಲಾಖೆಯ ಎ53 ದೋಣಿ ಮಗುಚಿ 29 ಜನರ ಸಾವು. ಸ್ಪರ್ಧಾತ್ಮಕ ಪರೀಕ್ಷೆಗೆ ತೆರಳುತ್ತಿದ್ದ ಹಲವು ಪರೀಕ್ಷಾರ್ಥಿಗಳು ಮೃತಪಟ್ಟಿದ್ದರು.
- ಫೆಬ್ರುವರಿ 20, 2007: ಎರ್ನಾಕುಳಂ ಜಿಲ್ಲೆಯ ತಟ್ಟೆಕ್ಕಾಡ್ ಬಳಿ ಪೆರಿಯಾರ್ ನದಿಯಲ್ಲಿ ದೋಣಿ ಮುಗುಚಿ ಶಾಲಾ ಪ್ರವಾಸ ತೆರಳಿದ್ದ 14 ಮಕ್ಕಳು ಸಾವು. ಆರು ಜನರ ಸಾಮರ್ಥ್ಯದ ದೋಣಿಯಲ್ಲಿ 61 ಪ್ರಯಾಣಿಕರಿದ್ದರು ಎಂಬುದು ನಂತರ ತಿಳಿದುಬಂದಿತ್ತು.
- ಸೆಪ್ಟೆಂಬರ್ 30, 2009: ಡಬ್ಬಲ್ ಡೆಕ್ಕರ್ ಪ್ರಯಾಣಿಕರ ಬೋಟ್ 'ಜಲಕನ್ಯಕಾ' ಮುಲ್ಲಪೆರಿಯಾರ್ ಜಲಾಶಯದಲ್ಲಿ ಮುಳುಗಿ 45 ಜನರ ಸಾವು. 75 ಜನ ಸಾಮರ್ಥ್ಯದ ದೋಣಿಯಲ್ಲಿ 80 ಪ್ರಯಾಣಿಕರಿದ್ದರು.

ಸ್ವಯಂಪ್ರೇರಿತ ದೂರು ದಾಖಲು

ತಿರುವನಂತಪುರ (ಪಿಟಿಐ): ದೋಣಿ ದುರಂತದ ಕುರಿತು ಕೇರಳ ರಾಜ್ಯ ಮಾನವ ಹಕ್ಕುಗಳ ಆಯೋಗ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿದೆ. ಅವಘಡ ಕುರಿತು 10 ದಿನದಲ್ಲಿ ವರದಿ ಸಲ್ಲಿಸಲು ಮಲಪ್ಪುರ ಜಿಲ್ಲಾಧಿಕಾರಿಗೆ ಸೂಚಿಸಲಾಗಿದೆ ಎಂದು ಆಯೋಗದ ಸದಸ್ಯ ಕೆ.ಬೈಜುನಾಥ್ ಅವರು ತಿಳಿಸಿದರು.

ಕಡೆ ಪಯಣವಾದ 'ಕಡೇ ಟ್ರಿಪ್' ಆಮಿಷ

ಮಲ್ಲಪುರಂ (ಪಿಟಿಐ): 22 ಜನರ ಅಕಾಲಿಕ ಸಾವಿಗೆ ಕಾರಣವಾದ ದೋಣಿ ದುರಂತ ಹಲವರ ಪಾಲಿಗೆ ದುಃಸ್ವಪ್ನ. ಆಟೋರಿಕ್ಷಾ ಚಾಲಕ ಶಾಹುಲ್ ಹಮೀದ್ ಪಾಲಿಗೆ ಅನವರತ ಕಾಡುವ ಆಘಾತ.

ದುರಂತದ ಮಾಹಿತಿ ತಿಳಿದಂತೆ ಶಾಹುಲ್ ಅಟೊದಲ್ಲಿ ಸ್ಥಳಕ್ಕೆ ಧಾವಿಸಿದ್ದರು. ದುರಂತ ಸ್ಥಳದಿಂದ ಆ ವೇಳೆಗೆ ರಕ್ಷಿಸಿದ್ದ ಮೂವರು ಮಕ್ಕಳನ್ನು ಜೀವ ಉಳಿಸುವ ಭರದಲ್ಲಿ ಆಟೊಗೆ ಸ್ಥಳಾಂತರಿಸಲಾಗಿತ್ತು. ಆಸ್ಪತ್ರೆಗೆ ತಲುಪಿದ ಬಳಿಕ ಶಾಹುಲ್‌ಗೆ ತಿಳಿದ ಸಂಗತಿ: ಆಟೊದಲ್ಲಿ ಬಿದ್ದಿರುವ ಮೂವರು ತಂಗಿ ಮಕ್ಕಳು ಎಂಬುದು.

ದೋಣಿ ನಿರ್ವಹಣೆಗಾರನ 'ಕೊನೆ ಟ್ರಿಪ್' ತಂತ್ರ ಹಲವರಿಗೆ ಕಡೆ ಪಯಣವೇ ಆಯಿತು. ಸಾಮರ್ಥ್ಯ ಮೀರಿ ಜನರನ್ನು ತುಂಬಲಾಗಿತ್ತು. ಇದನ್ನು ಗಮನಿಸಿ ಕೆಲವರು ನೀಡಿದ ಎಚ್ಚರಿಕೆಯೂ ಫಲ ನೀಡಲಿಲ್ಲ.

'ಕೊನೆ ಟ್ರಿಪ್' ತಂತ್ರಕ್ಕೆ ಮಾರುಹೋಗಿ ದೋಣಿ ಏರಿದ್ದವರಲ್ಲಿ ಆಟೊ ಚಾಲಕ ಶಾಹುಲ್‌ನ ಸಹೋದರಿ, ಆಕೆಯ ಮೂವರು ಮಕ್ಕಳು ಇದ್ದರು. 'ಸ್ಥಳಕ್ಕೆ ಹೋದಂತೆ ಮಕ್ಕಳನ್ನು ಆಟೊಗೆ ಹಾಕಿದರು. ವೇಗವಾಗಿ ಆಸ್ಪತ್ರೆ ತಲುಪಿದ್ದೆ. ಅಲ್ಲಿಗೆ ಹೋದಾಗಲೇ ಅವರು ತಂಗಿಯ ಮಕ್ಕಳೆಂಬುದು ತಿಳಿಯಿತು' ಎಂದು ಹೇಳಿದರು.

ಶಾಹುಲ್ ತಂಗಿಯ ಕುಟುಂಬಕ್ಕೆ ಸೇರಿದ ಇತರ ಐವರು ಮತ್ತು ಮೂವರು ಸಂಬಂಧಿಕರು ಮೃತಪಟ್ಟಿದ್ದ 22 ಜನರಲ್ಲಿ ಸೇರಿದ್ದರು. ವಾರಾಂತ್ಯದ ರಜೆ ಕಾರಣ ಹಲವು ಕುಟುಂಬಗಳು ತುವಲ್‌ತೀರ ಕ್ಕೆ ಬಂದಿದ್ದವು.

ದೋಣಿ ಪ್ರಯಾಣ ಎಷ್ಟು ಸುರಕ್ಷಿತ ಎಂದು ಮೂಡಿದ ಶಂಕೆಯೇ ಇಬ್ಬರ ಜೀವ ಉಳಿಸಿತು. ಐಸ್ಯಾಕ್ ಮತ್ತು ಇಬ್ರಾಹಿಂ ಸೋದರರಿಗೆ ದೋಣಿ ಪ್ರಯಾಣ ಸುರಕ್ಷಿತವಲ್ಲ ಎಂಬ ಶಂಕೆ ಬಲವಾಗಿತ್ತು. ದೋಣಿ ಏರದೆ ಹಿಂದೆ ಉಳಿದರು. ಕೊನೆಗೆ ಜೀವ ಉಳಿಸಿಕೊಂಡರು.

ಕೊನೆ ಟ್ರಿಪ್ ಎಂಬ ಆತುರ, ಹೆಚ್ಚಿನ ಜನರು ದೋಣಿ ಏರಿದ್ದನ್ನು ಗಮನಿಸಿದ್ದ ಶಂಸುದ್ದೀನ್ ಮತ್ತು ಅವರ ಎಂಟು ಸದಸ್ಯರ ಕುಟುಂಬ ಕೂಡಾ ದೋಣಿ ವಿಹಾರದಿಂದ ಹಿಂದೆ ಸರಿಯಿತು.

'ನಾನು ಟಿಕೆಟ್ ಖರೀದಿಸಿದ್ದೆ. ಆದರೆ, ಅದಾಗಲೇ ಸಾಮರ್ಥ್ಯ ಮೀರಿ ದೋಣಿ ತುಂಬಿತ್ತು. ಒಮ್ಮುಖವಾಗಿ ಬಾಗಿತ್ತು. ಅದನ್ನು ಗಮನಿಸಿ ನಾನು ಟಿಕೆಟ್ ಕ್ಯಾನ್ಸಲ್ ಮಾಡಿಕೊಂಡೆ' ಎಂದು ಬಳಿಕ ತಿಳಿಸಿದರು.

'ಇದು, ಬಯಸಿ ಮಾಡಿಕೊಂಡ ದುರಂತ. ಸಾಮರ್ಥ್ಯ ಮೀರಿ ಪ್ರಯಾಣಿಕರ ತುಂಬದಿದ್ದರೆ ಘಟಿಸುತ್ತಿರಲಿಲ್ಲ' ಎಂದು ಸ್ಥಳೀಯ ನಿವಾಸಿಯೊಬ್ಬರು ಘಟನೆಯನ್ನು ಸ್ಮರಿಸಿದರು.

ದೋಣಿಗೆ ಗಾಜಿನ ಕವಚ ಇದ್ದು, ಎರಡೇ ಬಾಗಿಲಿದ್ದವು ಹೆಚ್ಚಿನ ಸಾವುಗಳಿಗೆ ಇದೂ ಕಾರಣ ಎಂದು ಮತ್ತೊಬ್ಬರು ಹೇಳಿದರು. ರಕ್ಷಣಾ ವ್ಯವಸ್ಥೆ ಇರಲಿಲ್ಲ. ಸ್ಥಳೀಯ ಮೀನುಗಾರರೇ ರಕ್ಷಣೆಗೆ ಧಾವಿಸಿದ್ದರು.

ಮಣಿಪುರ: ಸಹಜ ಸ್ಥಿತಿಯತ್ತ ಜನಜೀವನ

ಇಂಫಾಲ (ಪಿಟಿಐ): 'ಹಿಂಸಾಚಾರದಿಂದ ನಲುಗಿದ್ದ ಮಣಿಪುರದಲ್ಲಿ ಜನಜೀವನವು ಸಹಜ ಸ್ಥಿತಿಯತ್ತ ಮರಳುತ್ತಿದೆ. ಸೋಮವಾರ ಕೆಲ ಗಂಟೆಗಳವರೆಗೆ ನಿಷೇಧಾಜ್ಞೆ ಸಡಿಲಿಸಿದ್ದರಿಂದಾಗಿ ನಾಗರಿಕರು ಮನೆಗಳಿಂದ ಹೊರಬಂದು ಅಗತ್ಯ ವಸ್ತುಗಳನ್ನು ಖರೀದಿಸಿದ್ದಾರೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

'ರಾಜ್ಯದಲ್ಲಿ ಹಿಂಸಾಚಾರ ಭುಗಿಲೆದ್ದ ಬಳಿಕ ಸೇನೆಯ 100ಕ್ಕೂ ಅಧಿಕ ತುಕಡಿಗಳನ್ನು ಭದ್ರತೆಗಾಗಿ ನಿಯೋಜಿಸಲಾಗಿದೆ. ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟನಲ್ಲಿ ಅಸ್ಸಾಂ ರೈಫಲ್ಸ್, ಪಾರಾ ಮಿಲಿಟರಿ ಮತ್ತು ರಾಜ್ಯ ಪೊಲೀಸರನ್ನು ಒಳಗೊಂಡಂತೆ ಸುಮಾರು 10 ಸಾವಿರ ಭದ್ರತಾ ಸಿಬ್ಬಂದಿ ವಿವಿಧ ಸ್ಥಳಗಳಲ್ಲಿ ಮೊಕ್ಕಾಂ ಹೂಡಿದ್ದಾರೆ' ಎಂದು ಮಾಹಿತಿ ನೀಡಿದ್ದಾರೆ.

'ಭಾರತ–ಮ್ಯಾನ್ಮಾರ್ ಗಡಿ ಭಾಗ ಸೇರಿದಂತೆ ಗಲಭೆ ಪೀಡಿತ ಸ್ಥಳಗಳ ಮೇಲೆ ಕಣ್ಗಾವಲು ಇಡುವುದಕ್ಕಾಗಿ ಮಾನವರಹಿತ ವೈಮಾನಿಕ ವಾಹನಗಳು (ಯುಎವಿ) ಹಾಗೂ ಹೆಲಿಕಾಪ್ಟರ್‌ಗಳನ್ನು ನಿಯೋಜಿಸಲಾಗಿದೆ' ಎಂದು ರಕ್ಷಣಾ ಇಲಾಖೆ ವಕ್ತಾರರೊಬ್ಬರು ತಿಳಿಸಿದ್ದಾರೆ.

ಸೋಮವಾರ ಬೆಳಿಗ್ಗೆ 5 ಗಂಟೆಯಿಂದ 8 ಗಂಟೆವರೆಗೂ ನಿಷೇಧಾಜ್ಞೆ ಸಡಿಲಿಸಲಾಗಿತ್ತು. ಈ ಅವಧಿಯಲ್ಲಿ ಇಂಫಾಲದಲ್ಲಿ ಆಟೊ ಸೇರಿದಂತೆ ಇತರೆ ವಾಹನಗಳ ಸಂಚಾರ ಕಂಡುಬಂತು. ರಾಜ್ಯದ ಹಲವೆಡೆ ಪೆಟ್ರೋಲ್ ಬಂಕ್‌ಗಳ ಎದುರು ವಾಹನಗಳು ಸಾಲುಗಟ್ಟಿ ನಿಂತಿದ್ದವು.

'ಸಾವಿನ ನಿಖರ ಮಾಹಿತಿ ನೀಡುತ್ತಿಲ್ಲ' (ಕೋಲ್ಕತ್ತ ವರದಿ): 'ಮಣಿಪುರದ ಬಿಜೆಪಿ ಸರ್ಕಾರವು ಹಿಂಸಾಚಾರದಲ್ಲಿ ಎಷ್ಟು ಮಂದಿ ಮೃತಪಟ್ಟಿದ್ದಾರೆ ಎಂಬುದರ ಕುರಿತ ಮಾಹಿತಿ ನೀಡುತ್ತಿಲ್ಲ' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ.

'ಮಣಿಪುರದಲ್ಲಿನ ಪರಿಸ್ಥಿತಿ ಅವಲೋಕಿಸುವುದಕ್ಕಾಗಿ ಕೇಂದ್ರ ಸರ್ಕಾರವು ತನ್ನ ಯಾವೊಬ್ಬ ಪ್ರತಿನಿಧಿಯನ್ನೂ ಆ ರಾಜ್ಯಕ್ಕೆ ಕಳುಹಿಸಿಲ್ಲ' ಎಂದು ದೂರಿದ್ದಾರೆ.

'ಕಂಡಲ್ಲಿ ಗುಂಡು ಆದೇಶದಿಂದಾಗಿ ಮಣಿಪುರದಲ್ಲಿ ಎಷ್ಟು ಮಂದಿ ಮೃತರಾಗಿದ್ದಾರೆ ಎಂಬುದು ಇನ್ನೂ ಗೊತ್ತಾಗಿಲ್ಲ. ಈ ಕುರಿತು ಸರ್ಕಾರವೂ ಸ್ಪಷ್ಟ ಮಾಹಿತಿ ಒದಗಿಸುತ್ತಿಲ್ಲ. ಅಲ್ಲಿನ ಪರಿಸ್ಥಿತಿ ನೋಡಿ ಆತಂಕಗೊಂಡಿದ್ದೇನೆ' ಎಂದಿದ್ದಾರೆ.



ಗಲಭೆಪೀಡಿತ ಪ್ರದೇಶಗಳಿಂದ ಸ್ಥಳಾಂತರಿಸಿದ ನಾಗರಿಕರಿಗೆ ಸೇನಾ ಶಿಬಿರದಲ್ಲಿ ತಾತ್ಕಾಲಿಕ ನೆಲೆ ಕಲ್ಪಿಸಿರುವುದು –ಎಎಫ್‌ಪಿ ಚಿತ್ರ

ಕೇಂದ್ರ, ರಾಜ್ಯ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನ

'ಮಣಿಪುರ ಹಿಂಸಾಚಾರ ಬಾಧಿತರಿಗೆ ಪರಿಹಾರ'

ನವದೆಹಲಿ (ಪಿಟಿಐ): 'ಮಣಿಪುರದಲ್ಲಿ ಉಂಟಾಗಿದ್ದ ಹಿಂಸಾಚಾರದಿಂದಾಗಿ ತೊಂದರೆಗೆ ಒಳಗಾಗಿರುವ ನಾಗರಿಕರಿಗೆ ಅಗತ್ಯ ಪರಿಹಾರ ಹಾಗೂ ಪುನರ್ವಸತಿ ಕಲ್ಪಿಸಿ' ಎಂದು ಸುಪ್ರೀಂ ಕೋರ್ಟ್ ಸೋಮವಾರ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಸಂಬಂಧ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ (ಪಿಐಎಲ್) ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ತ್ರಿಸದಸ್ಯ ನ್ಯಾಯಪೀಠ, ಭದ್ರತೆ ಹೆಚ್ಚಿಸುವ ನಿಟ್ಟನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆಯೂ ಸೂಚಿಸಿದೆ.

'ಪರಿಹಾರ ಕೇಂದ್ರಗಳಲ್ಲಿ ಅಗತ್ಯವಿರುವ ಎಲ್ಲಾ ಮೂಲಸೌಕರ್ಯಗಳನ್ನು ಒದಗಿಸಬೇಕು. ಅಲ್ಲಿ ತಂಗಿರುವ ನಾಗರಿಕರಿಗೆ ಆಹಾರ, ದಿನಸಿ ಹಾಗೂ ವೈದ್ಯಕೀಯ ಸೌಲಭ್ಯಗಳನ್ನು ಕಲ್ಪಿಸಬೇಕು' ಎಂದು ತಾಕೀತು ಮಾಡಿದೆ.

ಹಿಂಸಾಚಾರದಲ್ಲಿ ಅಮಾಯಕರು ಜೀವ ಕಳೆದುಕೊಂಡಿರುವುದು ಹಾಗೂ ಆಸ್ತಿಪಾಸ್ತಿಗೆ ಹಾನಿಯಾಗಿರುವುದಕ್ಕೆ ನ್ಯಾಯಪೀಠ ವಿಷಾದ ವ್ಯಕ್ತಪಡಿಸಿದೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ,



ಹಿಂಸಾಚಾರವನ್ನು ತಹಬದಿಗೆ ತರಲು ಕೈಗೊಂಡಿರುವ ಕ್ರಮಗಳ ಕುರಿತು ಮಾಹಿತಿ ಒದಗಿಸಿದರು.

'ಗಲಭೆ ಪೀಡಿತ ಪ್ರದೇಶಗಳಲ್ಲಿ ಭದ್ರತೆಗಾಗಿ ಸೇನೆ ಹಾಗೂ ಅಸ್ಸಾಂ ರೈಫಲ್ಸ್ ಪಡೆಗಳ ಜೊತೆಗೆ ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಯ (ಸಿಎಪಿಎಫ್) 52 ತುಕಡಿಗಳನ್ನೂ ನಿಯೋಜಿಸಲಾಗಿದೆ. ಭದ್ರತಾ ಪಡೆಗಳ ಪಥ ಸಂಚಲನವನ್ನೂ ಕೈಗೊಳ್ಳಲಾಗಿದೆ. ಜೊತೆಗೆ ಶಾಂತಿ ಸಭೆಗಳನ್ನೂ ನಡೆಸಲಾಗಿದೆ' ಎಂದು ಹೇಳಿದರು.

'ಪೊಲೀಸ್ ಇಲಾಖೆಯ ಮಾಜಿ ಅಧಿಕಾರಿಯೊಬ್ಬರನ್ನು ರಾಜ್ಯ ಸರ್ಕಾರದ ಭದ್ರತಾ ಸಲಹೆಗಾರರನ್ನಾಗಿ ನೇಮಿಸಲಾಗಿದೆ. ಕೇಂದ್ರಕ್ಕೆ ನಿಯೋಜನೆಯಾಗಿದ್ದ ಉನ್ನತ ಅಧಿಕಾರಿಯೊಬ್ಬರನ್ನು ಮರಳಿ ರಾಜ್ಯಕ್ಕೆ ಕಳುಹಿಸಲಾಗಿದೆ. ಅವರು ಮಣಿಪುರ ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿ ಕೆಲಸ ಮಾಡಲಿದ್ದಾರೆ. ಗಲಭೆ ಪೀಡಿತ ಪ್ರದೇಶಗಳ ಮೇಲೆ ನಿರಂತರವಾಗಿ ನಿಗಾ ಇಡಲಾಗುತ್ತಿದೆ. ಇದಕ್ಕಾಗಿ ಹೆಲಿಕಾಪ್ಟರ್ ಹಾಗೂ ಡ್ರೋನ್‌ಗಳನ್ನು ಬಳಸಲಾಗುತ್ತಿದೆ' ಎಂದು ಮಾಹಿತಿ ನೀಡಿದ್ದಾರೆ.

'ಎಷ್ಟು ಪರಿಹಾರ ಕೇಂದ್ರ ತೆರೆದಿದ್ದೀರಿ'

'ಗಲಭೆಯಿಂದ ಬಾಧಿತವಾಗಿರುವ ಪ್ರದೇಶದ ಜನರಿಗಾಗಿ ಎಷ್ಟು ಪರಿಹಾರ ಕೇಂದ್ರಗಳನ್ನು ತೆರೆಯಲಾಗಿದೆ. ಅವುಗಳಲ್ಲಿ ಎಷ್ಟು ಮಂದಿಗೆ ಆಶ್ರಯ ಕಲ್ಪಿಸಲಾಗಿದೆ' ಎಂದು ಸುಪ್ರೀಂ ಕೋರ್ಟ್, ಕೇಂದ್ರ ಹಾಗೂ ರಾಜ್ಯ ಸರ್ಕಾರವನ್ನು ಕೇಳಿದೆ.

'ಇದು ಮಾನವೀಯತೆಗೆ ಸಂಬಂಧಿಸಿದ ವಿಚಾರ. ಹೀಗಾಗಿ ಪರಿಹಾರ ಕೇಂದ್ರಗಳಲ್ಲಿ ಯಾವ ಬಗೆಯ ಸೌಲಭ್ಯಗಳನ್ನು ಒದಗಿಸಲಾಗಿದೆ ಎಂಬುದನ್ನು ಅರಿಯಲು ನಾವು ಬಯಸುತ್ತೇವೆ' ಎಂದು ಹೇಳಿದೆ.

ವಿಚಾರಣೆಯನ್ನು ಇದೇ 17ಕ್ಕೆ ಮುಂದೂಡಿರುವ ನ್ಯಾಯಪೀಠವು ಆ ದಿನ ವಸ್ತು ಸ್ಥಿತಿ ಕುರಿತಾದ ಪರಿಷ್ಕೃತ ವರದಿಯೊಂದನ್ನು ಸಲ್ಲಿಸುವಂತೆಯೂ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

'ಕಳೆದ ಎರಡು ದಿನಗಳಲ್ಲಿ ರಾಜ್ಯದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆದಿಲ್ಲ. ಜನಜೀವನವು ಸಹಜ ಸ್ಥಿತಿಗೆ ಮರಳುತ್ತಿದೆ. ಭಾನುವಾರ ಹಾಗೂ ಸೋಮವಾರ ಕೆಲ ಗಂಟೆಗಳವರೆಗೆ ನಿಷೇಧಾಜ್ಞೆ ಸಡಿಲಿಸಲಾಗಿತ್ತು' ಎಂದಿದ್ದಾರೆ.

'ಸಂಘರ್ಷ ಪೀಡಿತ ಸ್ಥಳಗಳಿಂದ ಸ್ಥಳಾಂತರಗೊಂಡಿರುವವರಿಗೆ ಪುನರ್ವಸತಿ ಕಲ್ಪಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನೂ ಕೈಗೊಳ್ಳಬೇಕು. ದೇಗುಲ ಹಾಗೂ ಪ್ರಾರ್ಥನಾ ಮಂದಿರಗಳಿಗೆ ಯಾವುದೇ ರೀತಿಯಲ್ಲೂ ಹಾನಿಯಾಗದ ಹಾಗೆ ಎಚ್ಚರ ವಹಿಸಬೇಕು' ಎಂದು ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಹಾಗೂ ಜೆ.ಬಿ.ಪಾರ್ದಿವಾಲಾ ಅವರನ್ನೊಳಗೊಂಡ ನ್ಯಾಯಪೀಠವು ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಸೂಚಿಸಿದೆ.

ಮಣಿಪುರದ ಬಹುಸಂಖ್ಯಾತ ಮೈತೇಯಿ ಸಮುದಾಯ ಮತ್ತು ಬುಡಕಟ್ಟು ಸಮುದಾಯಗಳ ನಡುವೆ ಕಳೆದ ಬುಧವಾರ ರಾತ್ರಿ ಸಂಘರ್ಷ ನಡೆದು, 8 ಜಿಲ್ಲೆಗಳಲ್ಲಿ ಹಿಂಸಾಚಾರ ಭುಗಿಲೆದ್ದಿತ್ತು. 54ಕ್ಕೂ ಹೆಚ್ಚು ಮಂದಿ ಅಸುನೀಗಿದ್ದರು.

ಗಲಭೆಯಿಂದ ಬಾಧಿತವಾಗಿದ್ದ ಪ್ರದೇಶಗಳಿಂದ 23 ಸಾವಿರಕ್ಕೂ ಅಧಿಕ ಮಂದಿಯನ್ನು ರಕ್ಷಿಸಿ ಅವರಿಗೆ ಸೇನಾ ಶಿಬಿರ ಹಾಗೂ ಪರಿಹಾರ ಕೇಂದ್ರಗಳಲ್ಲಿ ಆಶ್ರಯ ಕಲ್ಪಿಸಲಾಗಿತ್ತು.

'ದಿ ಕೇರಳ ಸ್ಟೋರಿ' ತಗ್ಗದ ವಿವಾದ

ಒಂದನೇ ಪುಟದಿಂದ...

'ರಾಜ್ಯದಲ್ಲಿ ದ್ವೇಷ, ಹಿಂಸಾತ್ಮಕ ಕೃತ್ಯಗಳನ್ನು ತಡೆಯಲು ಹಾಗೂ ಶಾಂತಿ ರಕ್ಷಣೆಯ ದೃಷ್ಟಿಯಿಂದ ತಕ್ಷಣದಿಂದಲೇ ಜಾರಿಗೆ ಬರುವಂತೆ 'ಕೇರಳ ಸ್ಟೋರಿ' ಚಿತ್ರ ಪ್ರದರ್ಶನ ನಿಷೇಧಿಸಲು ಮುಖ್ಯಮಂತ್ರಿ ಸೂಚಿಸಿದ್ದಾರೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು. ನಿಷೇಧ ಉಲ್ಲಂಘಿಸಿದಲ್ಲಿ ಶಿಸ್ತುಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಕರ್ನಾಟಕದಲ್ಲಿ ಚುನಾವಣೆಯ ರ‍್ಯಾಲಿಯೊಂದರಲ್ಲಿ ಚಿತ್ರವನ್ನು ಶ್ಲಾಘಿಸಿದ್ದರು. ಅದರ ಹಿಂದೆಯೇ ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ, ಸಂಸದ ತೇಜಸ್ವಿ ಸೂರ್ಯ ಅವರೂ ಯುವತಿಯರು ಈ ಚಿತ್ರ ವೀಕ್ಷಿಸಬೇಕು ಎಂದು ಕರೆ ನೀಡಿದ್ದರು. ಬೆಂಗಳೂರಿನಲ್ಲಿ ವಾರಾಂತ್ಯದಲ್ಲಿ ಪ್ರದರ್ಶನ ಕಂಡ ಬಹುತೇಕ ಚಿತ್ರಮಂದಿರಗಳಲ್ಲಿ ಉತ್ತಮ ಪ್ರತಿಕ್ರಿಯೆಯೂ ವ್ಯಕ್ತವಾಗಿತ್ತು.

ಕೋರ್ಟ್‌ಗೆ ಹೋಗ್ತೇವೆ: ಪಶ್ಚಿಮ ಬಂಗಾಳ ಸರ್ಕಾರದ ಕ್ರಮವನ್ನು ಕೋರ್ಟ್‌ನಲ್ಲಿ ಪ್ರಶ್ನಿಸುವುದಾಗಿ ಮುಂಬೈನಲ್ಲಿ ಚಿತ್ರ ನಿರ್ಮಾಪಕ ವಿಪುಲ್ ಶಾ ಪ್ರತಿಕ್ರಿಯಿಸಿದ್ದಾರೆ. ಕಾನೂನು ವ್ಯಾಪ್ತಿಯಲ್ಲಿ ನಿಷೇಧ ವಿರುದ್ಧ ಹೋರಾಟ ನಡೆಸುತ್ತೇವೆ ಎಂದು ಹೇಳಿದರು.

ಚಿತ್ರ ಪ್ರದರ್ಶನ ನಿಷೇಧ ಕುರಿತಂತೆ ಮಮತಾ ಬ್ಯಾನರ್ಜಿ ಅವರ ನಿರ್ಧಾರ ಹೊರಬಿದ್ದಿರುವಂತೆಯೇ, ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಅವರು ಚಿತ್ರವನ್ನು ಬೆಂಬಲಿಸಿ ಮಾತನಾಡಿದ್ದಾರೆ.

'ಕೇರಳ ಸ್ಟೋರಿಯು ಧಾರ್ಮಿಕ ಮತಾಂತರ ಕುರಿತು ಚರ್ಚಿಸಲಿದೆ. ಪ್ರತಿ ಹೆಣ್ಣು ಮಕ್ಕಳು ಇದನ್ನು ವೀಕ್ಷಿಸಬೇಕು. ಜಾಗತಿಕ ಭಯೋತ್ಪಾದನೆಯ ಅಪಾಯಕಾರಿ ಸಂಚು ಕುರಿತು ತಿಳಿಯಬೇಕು' ಎಂದು ಠಾಕೂರ್ ಹೇಳಿದರು.

ಇನ್ನೊಂದೆಡೆ, ಗುವಾಹಟಿಯಲ್ಲಿ ಮಾತನಾಡಿದ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ, 'ನಾನು, ನನ್ನ ಕುಟುಂಬದ ಸದಸ್ಯರು ಹಾಗೂ ಸಂಪುಟ ಸಚಿವರು ಇದೇ 11 ರಂದು ಚಿತ್ರವನ್ನು ವೀಕ್ಷಿಸಲಿದ್ದೇವೆ' ಎಂದು ಪ್ರತಿಕ್ರಿಯಿಸಿದ್ದಾರೆ.

ಸುದಿಪ್ತೋ ಸೇನ್ ನಿರ್ದೇಶನದ ಈ ಚಿತ್ರವು, ಕೇರಳದಲ್ಲಿ ಇಸ್ಲಾಂಗೆ ಯುವತಿಯರ ಮತಾಂತರ ಹಾಗೂ ಬಳಿಕ ಅವರನ್ನು ಇಸ್ಲಾಮಿಕ್ ಸ್ಟೇಟ್‌ನ ಉಗ್ರ ಸಂಘಟನೆಗಳಿಗೆ ನಿಯೋಜಿಸುವುದರ ಕಥಾಹಂದರ ಹೊಂದಿದೆ. ಮೇ 5ರಂದು ಚಿತ್ರ ಬಿಡುಗಡೆಯಾಗಿದ್ದು, ಅದಕ್ಕೂ ಮೊದಲೇ ಕಾನೂನಿನ ಮೂಲಕ ಬಿಡುಗಡೆ ತಡೆಯುವ ಯತ್ನವು ನಡೆದಿತ್ತು. ಬಿಜೆಪಿ ಮತ್ತು ಪ್ರತಿಪಕ್ಷಗಳ ನಡುವೆ ಬಿಸಿ ಚರ್ಚೆಗೂ ಚಿತ್ರ ವಸ್ತುವಾಗಿತ್ತು.

ತಮಿಳುನಾಡಿನಲ್ಲಿ ಎರಡು ದಿನದ ಪ್ರದರ್ಶನ ಬಳಿಕ ಮೇ 7ರಂದು ಸರ್ಕಾರ ನಿಷೇಧ ಹೇರಿತ್ತು.

'ಚಿತ್ರ ಪ್ರದರ್ಶನಕ್ಕೆ ಭದ್ರತೆ ನೀಡಿ ಕೆಲ ಚಿತ್ರಮಂದಿರಗಳಲ್ಲಿ ಪೊಲೀಸರನ್ನು ನಿಯೋಜಿಸಲಾಗಿತ್ತು. ಇದರಿಂದಾಗಿಯೂ ಚಿತ್ರಮಂದಿರಗಳಲ್ಲಿ ಹಾಜರಾತಿ ಕುಗ್ಗಿತ್ತು. ಚಿತ್ರಪ್ರದರ್ಶನ ನಿಲ್ಲಿಸಲು ತೀರ್ಮಾನಿಸಲಾಯಿತು' ಎಂದು ತಮಿಳುನಾಡು ಚಿತ್ರಮಂದಿರಗಳು, ಮಲ್ಟಿಪ್ಲೆಕ್ಸ್‌ಗಳ ಮಾಲೀಕರ ಸಂಘದ ಅಧ್ಯಕ್ಷ ತಿರುಪ್ಪೂರ್ ಎಂ.ಸುಬ್ರಹ್ಮಣಿಯಂ ಪ್ರತಿಕ್ರಿಯಿಸಿದರು.

ಕೇರಳದಲ್ಲಿ ಸುಮಾರು 30 ಚಿತ್ರಮಂದಿರಗಳಲ್ಲಿ ಪ್ರದರ್ಶನ ಸುಸೂತ್ರವಾಗಿ ನಡೆದಿದೆ. ಶುಕ್ರವಾರ ಪ್ರದರ್ಶನ ಹಿಂಪಡೆದಿದ್ದ ಕಡೆಯೂ ಪ್ರದರ್ಶನ ಪುನರಾರಂಭವಾಗಿದೆ. ಆದರೆ, ಗುಜರಾತ್‌ನಲ್ಲಿ 'ದ ಕೇರಳ ಸ್ಟೋರಿ' ಚಿತ್ರವು ವೀಕ್ಷಕರನ್ನು ಸೆಳೆಯಲು ವಿಫಲವಾಗಿದೆ.

'ಭಾನುವಾರ ರಾಜ್ಯದ ವಿವಿಧ ಚಿತ್ರಮಂದಿರಗಳಲ್ಲಿ ಹಾಜರಾತಿ ಪ್ರಮಾಣ ಶೇ 35ರಷ್ಟಿತ್ತು. ಸೋಮವಾರ ಈ ಪ್ರಮಾಣ ಶೇ 10ಕ್ಕೆ ಇಳಿದಿದೆ' ಎಂದು ಗುಜರಾತ್ ಮಲ್ಟಿಪ್ಲೆಕ್ಸ್‌ಗಳ ಮಾಲೀಕರ ಸಂಘದ ಅಧ್ಯಕ್ಷ ಮನುಭಾಯ್ ಪಟೇಲ್ ಅವರು ಪ್ರತಿಕ್ರಿಯಿಸಿದರು.

ಡಿಎಂಕೆಯಿಂದ ವ್ಯವಸ್ಥಿತ ತಡೆ: ಬಿಜೆಪಿ ಆರೋಪ

ಚೆನ್ನೈ (ಪಿಟಿಐ): 'ದಿ ಕೇರಳ ಸ್ಟೋರಿ' ಸಿನಿಮಾದ ಪ್ರದರ್ಶನಕ್ಕೆ ತಮಿಳುನಾಡಿನಲ್ಲಿ ಆಡಳಿತಾರೂಢ ಡಿಎಂಕೆಯು ವ್ಯವಸ್ಥಿತವಾಗಿ ತಡೆಯೊಡ್ಡುತ್ತಿದೆ ಎಂದು ಆರೋಪಿಸಿರುವ ಬಿಜೆಪಿ, ಸತ್ಯವನ್ನು ಮರೆಮಾಚಲು ಸರ್ಕಾರವು ಅಧಿಕಾರವನ್ನು ದುರುಪಯೋಗಪಡಿಸುತ್ತಿದೆ ಎಂದು ಸೋಮವಾರ ಆರೋಪಿಸಿದೆ.

'ಈ ಚಿತ್ರವನ್ನು ಪ್ರದರ್ಶಿಸುವುದಕ್ಕೆ ಮೂಲಭೂತವಾದಿ ಶಕ್ತಿಗಳು ಬೆದರಿಕೆಯೊಡ್ಡಿವೆ. ಇವುಗಳ ವಿರುದ್ಧ ಕ್ರಮ ಕೈಗೊಳ್ಳುವ ಬದಲು ಸರ್ಕಾರವು ಸಿನಿಮಾವನ್ನು ಚಿತ್ರಮಂದಿರಗಳಿಂದ ತೆರವುಗೊಳಿಸುತ್ತಿದೆ. ಇದು ಹೇಡಿತನ ಮಾತ್ರವಲ್ಲ ಅಪಾಯಕಾರಿ' ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ನಾರಾಯಣನ್ ತಿರುಪತಿ ಹೇಳಿದ್ದಾರೆ.

ಈ ಸಿನಿಮಾವನ್ನು ಕಾನೂನುಬದ್ಧವಾಗಿ ನಿಷೇಧಿಸಿಲ್ಲ. ಇದು ಐ.ಎಸ್. ಉಗ್ರ ಸಂಘಟನೆಯ ಕುರಿತು ಜನರಲ್ಲಿ ಜಾಗೃತಿ ಮೂಡಿಸುತ್ತಿದೆ ಎಂದೂ ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ದಿ ಕೇರಳ ಸ್ಟೋರಿ' ಸಿನಿಮಾವನ್ನು ಪ್ರದರ್ಶಿಸುತ್ತಿದ್ದ ಕೆಲವು ಮಲ್ಟಿಪ್ಲೆಕ್ಸ್‌ಗಳು ಪ್ರದರ್ಶನವನ್ನು ನಿಲ್ಲಿಸಿವೆ ಎಂದು ತಮಿಳುನಾಡಿನ ಚಿತ್ರಮಂದಿರ ಮತ್ತು ಮಲ್ಟಿಪ್ಲೆಕ್ಸ್‌ಗಳ ಮಾಲಕರ ಸಂಘದ ಅಧ್ಯಕ್ಷ ತಿರುಪ್ಪೂರ್ ಸುಬ್ರಮಣ್ಯಂ ಭಾನುವಾರ ಹೇಳಿದ್ದರು.

ಪೆರು: ಗಣಿಯಲ್ಲಿ ಅಗ್ನಿ ದುರಂತ, 27 ಸಾವು

ಲಿಮಾ (ಎಪಿ): ಪೆರುವಿನ ದಕ್ಷಿಣ ಭಾಗದಲ್ಲಿಯ ಚಿನ್ನದ ಗಣಿಯೊಂದರಲ್ಲಿ ಶುಕ್ರವಾರ ತಡರಾತ್ರಿ ಸಂಭವಿಸಿದ ಅಗ್ನಿ ದುರಂತದಲ್ಲಿ ಕನಿಷ್ಠ 27 ಕಾರ್ಮಿಕರು ಮೃತಪಟ್ಟಿದ್ದಾರೆ ಎಂದು ಅಲ್ಲಿಯ ಅಧಿಕಾರಿಗಳು ತಿಳಿಸಿದ್ದಾರೆ.

ದುರಂತ ಸಂಭವಿಸಿದ ಸ್ಥಳದಿಂದ ಒಟ್ಟು 175 ಕಾರ್ಮಿಕರನ್ನು ಸುರಕ್ಷಿತವಾಗಿ ಹೊರತರಲಾಗಿದೆ. ಗುತ್ತಿಗೆದಾರರೊಬ್ಬರ ಬಳಿ ಕೆಲಸ ಮಾಡುತ್ತಿದ್ದ 27 ಕಾರ್ಮಿಕರು ಮೃತಪಟ್ಟಿದ್ದಾರೆ ಎಂದು ಯಾನಕ್ವಿಹುವಾ ಗಣಿ ಕಂಪನಿಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಗಣಿಯೊಳಗೆ ಸುಮಾರು 100 ಮೀಟರ್ ಆಳದಲ್ಲಿ ಶಾರ್ಟ್ ಸರ್ಕಿಟ್ ಸಂಭವಿಸಿದ್ದು ಈ ದುರಂತಕ್ಕೆ ಕಾರಣ ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ ಎಂದು ಕೆಲ ಪತ್ರಿಕೆಗಳು ವರದಿ ಮಾಡಿವೆ. ಗಣಿಯೊಳಗೆ ಬೆಂಕಿ ಹೊತ್ತಿಕೊಳ್ಳಲು ನಿಖರವಾದ ಕಾರಣ ಏನು ಎಂಬುದನ್ನು ತಿಳಿಯಲು ತನಿಖೆ ನಡೆಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೃತರ ಕುಟುಂಬ ಸದಸ್ಯರನ್ನು ಗಣಿ ಬಳಿಗೆ ಬಸ್‌ಗಳ ಮೂಲಕ ಕರೆತರಲಾಯಿತು. ತಮ್ಮ ಪ್ರೀತಿ ಪಾತ್ರರ ಮೃತದೇಹಗಳನ್ನು ಪಡೆಯಲು ಅವರು ಗಣಿ ಎದುರು ಕಾದುಕುಳಿತಿದ್ದರು.

ಕಾಶ್ಮೀರದಲ್ಲಿ 3.1 ತೀವ್ರತೆ ಭೂಕಂಪ

ಶ್ರೀನಗರ (ಪಿಟಿಐ): ಕಾಶ್ಮೀರ ಕಣಿವೆಯಲ್ಲಿ ಸೋಮವಾರ ಮಧ್ಯಾಹ್ನ 2.28ರ ಸುಮಾರಿಗೆ ರಿಕ್ಟರ್ ಮಾಪಕದಲ್ಲಿ 3.1 ತೀವ್ರತೆ ಭೂಕಂಪ ಸಂಭವಿಸಿದೆ. ಕಂಪನದ ಅನುಭವವಾಗುತ್ತಿದ್ದಂತೆಯೇ ಜನರು ಮನೆಗಳಿಂದ ಮತ್ತು ಉದ್ಯೋಗದ ಸ್ಥಳಗಳಿಂದ ಹೊರಬಂದಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭೂಕಂಪದ ಕೇಂದ್ರಬಿಂದು ಉತ್ತರ ಕಾಶ್ಮೀರದ ಬಾರಾಮುಲ್ಲ ಜಿಲ್ಲೆಯಲ್ಲಿ 10 ಕಿಮೀ ಆಳದಲ್ಲಿ ಪತ್ತೆಯಾಗಿದೆ ಎಂದು ರಾಷ್ಟ್ರೀಯ ಭೂಕಂಪ ಅಧ್ಯಯನ ಕೇಂದ್ರ ತಿಳಿಸಿದೆ. ಭೂಕಂಪದಿಂದ ಯಾವುದೇ ಹಾನಿ ಸಂಭವಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪನಾಮ ಪ್ರಕರಣ: ₹ 41 ಕೋಟಿ ಮೌಲ್ಯದ ಕಚೇರಿ ಇ.ಡಿ ವಶಕ್ಕೆ

ನವದೆಹಲಿ (ಪಿಟಿಐ): ಪನಾಮ ಪ್ರಕರಣದಲ್ಲಿ ಹೆಸರಿರುವ ಉದ್ಯಮಿಯೊಬ್ಬರ ವಿದೇಶಿ ವಿನಿಮಯ ಉಲ್ಲಂಘನೆ ತನಿಖೆಯ ಭಾಗವಾಗಿ ಮುಂಬೈನಲ್ಲಿರುವ ಸುಮಾರು ₹41 ಕೋಟಿ ಮೌಲ್ಯದ ಮೂರು ಪ್ರಮುಖ ಕಚೇರಿಗಳನ್ನು ಜಾರಿ ನಿರ್ದೇಶನಾಲಯ (ಇ.ಡಿ) ಸೋಮವಾರ ಜಪ್ತಿ ಮಾಡಿಕೊಂಡಿದೆ.

ಉದ್ಯಮಿ ಜವೇರ್ಥ ಸೋಲಿ ಪೂನಾವಾಲಾ ಹಾಗೂ ಅವರ ಕುಟುಂಬಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಎಂದು ಇ.ಡಿ ಹೇಳಿಕೆಯೊಂದರಲ್ಲಿ ಹೇಳಿದೆ.

ಎಲ್‌ಆರ್‌ಎಸ್ (ಉದಾರೀಕೃತ ರವಾನೆ ಯೋಜನೆ) ನಿಬಂಧನೆಗಳನ್ನು ದುರ್ಬಳಕೆ ಮಾಡಿಕೊಂಡು ಕುಟುಂಬ ಹಾಗೂ ಸ್ವಯಂ ನಿರ್ವಹಣೆ ಹೆಸರಿನಲ್ಲಿ 2011–12ರ ವರೆಗೆ ಪೂನಾವಾಲಾ ಹಾಗೂ ಅವರ ಕುಟುಂಬಸ್ಥರು ವಿದೇಶಕ್ಕೆ ವಿದೇಶಿ ವಿನಿಮಯ ರವಾನೆ ಮಾಡುತ್ತಿದ್ದರು. ಆದರೆ ಅವರಾಗಲೀ, ಅವರ ಕುಟುಂಬಸ್ಥರಾಗಲಿ ಯಾರೂ ವಿದೇಶದಲ್ಲಿ ನೆಲೆಸಿಲ್ಲ ಎಂದು ಇ.ಡಿ ಹೇಳಿದೆ.



ಪ್ರಿಯಾಂಕಾ ರೋಡ್ ಶೋ...

ಬೆಂಗಳೂರಿನ ವಿಜಯನಗರದಲ್ಲಿ ಪಕ್ಷದ ಅಭ್ಯರ್ಥಿ ಎಂ. ಕೃಷ್ಣಪ್ಪ ಮತ್ತು ಗೋವಿಂದರಾಜ ನಗರ ಕ್ಷೇತ್ರ ಅಭ್ಯರ್ಥಿ ಪ್ರಿಯಕೃಷ್ಣ ಪರವಾಗಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು ಸೋಮವಾರ ರೋಡ್ ಶೋ ನಡೆಸಿದರು ಪ್ರಜಾವಾಣಿ ಚಿತ್ರ

₹ 7 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ವಿಶೇಷ ಕಾರ್ಯಾಚರಣೆ ನಡೆಸಿರುವ ಸಿಸಿಬಿ ಪೊಲೀಸರು, ₹ 7 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

'ವಿಲ್ಸನ್ ಗಾರ್ಡನ್, ಬೇಗೂರು, ಅಶೋಕನಗರ, ಬಾಣಸವಾಡಿ, ಸಿದ್ದಾಪುರ, ಪುಲಿಕೇಶಿನಗರ, ಹೆಣ್ಣೂರು, ಕೆ.ಆರ್.ಪುರ, ಯಲಹಂಕ ಹಾಗೂ ಆರ್.ಟಿ. ನಗರ ಠಾಣೆ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಲಾಗಿದೆ. ಡ್ರಗ್ಸ್ ಸಾಗಣೆ ಹಾಗೂ ಮಾರಾಟದಲ್ಲಿ ತೊಡಗಿದ್ದ 19 ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಜಂತು ಮಂಡೋಲ್, ಸಾಯಿ ಕುಮಾರ್ ದ್ಯಾಮಶೆಟ್ಟಿ, ಅರ್ಜುನ್ ನಂಬಿಯಾರ್, ರೋಹನ್ ಬಾಬು, ಪವನ್, ಅಕ್ಷಯ್ ಹಾಗೂ ಜಿಸ್ಸು ಬಂಧಿತರು. ತನಿಖೆ ದೃಷ್ಟಿಯಿಂದ ಇನ್ನಿಬ್ಬರು ಹೆಸರು ಗೌಪ್ಯವಾಗಿಡಲಾಗಿದೆ. ಇವರೆಲ್ಲರೂ ಹಶಿಷ್, ಗಾಂಜಾ, ಎಂಡಿಎಂಎ, ಎಕ್ಸ್‌ಟೆಸಿ, ಎಲ್‌ಎಸ್‌ಡಿ, ಕೊಕೇನ್ ಮಾದರಿ ಡ್ರಗ್ಸ್ ಮಾರುತ್ತಿದ್ದರು. 17 ಮೊಬೈಲ್, ಕಾರು ಹಾಗೂ ಎರಡು ದ್ವಿಚಕ್ರ ವಾಹನ ಸಹ ಜಪ್ತಿ ಮಾಡಲಾಗಿದೆ' ಎಂದು ತಿಳಿಸಿದರು.

ಪೋರ್ಟರ್, ಉಬರ್‌ನಲ್ಲಿ ಡೆಲಿವರಿ: 'ಆರೋಪಿಗಳಾದ ಜಂತು ಮಂಡೋಲ್ ಹಾಗೂ ಸಾಯಿಕುಮಾರ್, ಪೋರ್ಟರ್ ಹಾಗೂ ಉಬರ್ ಆ್ಯಪ್‌ನ ಡೆಲಿವರಿ ಬಾಯ್‌ಗಳನ್ನು ಬಳಸಿಕೊಂಡು ಗ್ರಾಹಕರ ವಿಳಾಸಕ್ಕೆ ಡ್ರಗ್ಸ್ ಪೂರೈಸುತ್ತಿದ್ದರು. ಇದಕ್ಕಾಗಿ ಡೆಲಿವರಿ ಬಾಯ್‌ಗಳಿಗೆ ಕಮಿಷನ್ ನೀಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

ವಿಮೆ ಕಂಪನಿಯಲ್ಲಿ ಕೆಲಸ: 'ಬಂಧಿತ ಆರೋಪಿ ಅಕ್ಷಯ್, ವಿಮೆ ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರಿದ್ದ. ಹೆಚ್ಚಿನ ಹಣ ಸಂಪಾದನೆಗಾಗಿ ಆಂಧ್ರಪ್ರದೇಶದಿಂದ ಡ್ರಗ್ಸ್ ಖರೀದಿಸಿ ನಗರಕ್ಕೆ ತಂದು ಮಾರುತ್ತಿದ್ದ' ಎಂದು ಪೊಲೀಸರು ತಿಳಿಸಿದರು.

'ಬಂಧಿತರಲ್ಲಿ ವಿದೇಶಿ ಪ್ರಜೆಗಳು ಇದ್ದಾರೆ. ಇವರೆಲ್ಲರೂ ಪೆಡ್ಲರ್‌ಗಳಿಂದ ಡ್ರಗ್ಸ್ ಖರೀದಿಸುತ್ತಿದ್ದರು. ಸಣ್ಣ ಪೊಟ್ಟಣಗಳಲ್ಲಿ ಡ್ರಗ್ಸ್ ಬಚ್ಚಿಟ್ಟು, ಉಡುಗೊರೆ ರೂಪದಲ್ಲಿ ಡೆಲಿವರಿ ಬಾಯ್‌ಗಳ ಮೂಲಕ ಗ್ರಾಹಕರಿಗೆ ತಲುಪಿಸುತ್ತಿದ್ದರು' ಎಂದರು.



ಸಿಸಿಬಿ ಪೊಲೀಸರು ಜಪ್ತಿ ಮಾಡಿರುವ ಎಕ್ಸ್‌ಟೆಸ್ಸಿ ಮಾತ್ರೆಗಳು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮೇಕ್ ಇನ್ ಇಂಡಿಯಾ ಏರೋಸ್ಪೇಸ್ ಯೋಜನೆಯಲ್ಲಿ ಮಹತ್ವದ ಮೈಲಿಗಲ್ಲು

ಸಿ295 ವಿಮಾನ ಸದ್ಯದಲ್ಲೇ ಐಎಎಫ್‌ಗೆ ಸೇರ್ಪಡೆ

ಪ್ರಜಾವಾಣಿ ವಾರ್ತೆ

ಮುಂಬೈ: ಹೊಸ ತಲೆಮಾರಿನ ತಂತ್ರಜ್ಞಾನ, ಯುದ್ಧತಂತ್ರದ ಮೊದಲ ಸಿ295 ವಿಮಾನ ತನ್ನ ಚೊಚ್ಚಲ ಹಾರಾಟವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಭಾರತಕ್ಕೆ ಮೊದಲ ಸಿ295 ವಿಮಾನ 2023ರ ದ್ವಿತೀಯಾರ್ಧದಲ್ಲಿ ಪೂರೈಕೆಯಾಗಲಿದೆ.

ಯದ್ಧತಂತ್ರದ ಈ ವಿಮಾನವು ಸ್ಪೇನ್‌ನ ಸೆವಿಲ್ಲೆಯಿಂದ ಮೇ 5ರಂದು ಸ್ಥಳೀಯ ಕಾಲಮಾನ ಬೆಳಿಗ್ಗೆ 11:45ಕ್ಕೆ (ಜಿಎಂಟಿ +1) ಟೇಕ್ ಆಫ್ ಆಗಿ, ಮೂರು ತಾಸುಗಳ ಯಶಸ್ವಿ ಹಾರಾಟದ ನಂತರ ಮಧ್ಯಾಹ್ನ 2:45ಕ್ಕೆ ಸುರಕ್ಷಿತವಾಗಿ ಇಳಿಯಿತು ಎಂದು ಹೇಳಿಕೆ ಬಿಡುಗಡೆ ಮಾಡಲಾಗಿದೆ.

ಭಾರತೀಯ ವಾಯುಪಡೆಗೆ ಈ ವಿಮಾನದ ಸೇರ್ಪಡೆಯನ್ನು ಮೇಕ್ ಇನ್ ಇಂಡಿಯಾ ಏರೋಸ್ಪೇಸ್ ಯೋಜನೆಯಲ್ಲಿ ಮಹತ್ವದ ಮೈಲಿಗಲ್ಲು ಎನಿಸಿಕೊಳ್ಳಲಿದೆ. ಭಾರತವು 2021ರ ಸೆಪ್ಟೆಂಬರ್‌ನಲ್ಲಿ 56 ಸಿ295 ವಿಮಾನಗಳನ್ನು ಖರೀದಿಸಿದೆ. ಈ ವಿಮಾನಗಳು ಎವಿಆರ್‌ಒ ವಿಮಾನಗಳ ಜಾಗವನ್ನು ಕ್ರಮೇಣ ತುಂಬಲಿವೆ.

'ಈ ವಿಮಾನದ ಚೊಚ್ಚಲ ಹಾರಾಟವು ಮೇಕ್ ಇನ್ ಇಂಡಿಯಾ ಏರೋಸ್ಪೇಸ್ ಯೋಜನೆಯಲ್ಲಿನ ಗಮನಾರ್ಹ ಸಾಧನೆ ಎನಿಸಿದೆ. ಭಾರತೀಯ ವಾಯುಪಡೆಯು ಸಿ295 ಯುದ್ಧ ವಿಮಾನಗಳ ಕಾರ್ಯಾಚರಣೆಯಲ್ಲಿ ವಿಶ್ವದಲ್ಲೇ ಅತಿದೊಡ್ಡ ಆಪರೇಟರ್ ಎನಿಸಿಕೊಳ್ಳಲಿದೆ. ಈ ಯೋಜನೆಯು ಭಾರತೀಯ ವಾಯುಪಡೆ (ಐಎಎಫ್) ಕಾರ್ಯಾಚರಣೆಯ ಸಾಮರ್ಥ್ಯ ಹೆಚ್ಚಿಸುವಲ್ಲಿ ನಮ್ಮ ಬದ್ಧತೆಯನ್ನು ತೋರಿಸುತ್ತದೆ' ಎಂದು ಏರ್‌ಬಸ್ ಡಿಫೆನ್ಸ್ ಮತ್ತು ಬಾಹ್ಯಾಕಾಶದಲ್ಲಿನ ಮಿಲಿಟರಿ ವಾಯು ವ್ಯವಸ್ಥೆಗಳ ಮುಖ್ಯಸ್ಥ ಜೀನ್-ಬ್ರಿಕ್ಸ್ ಡುಮಾಂಟ್ ಹೇಳಿದರು.

ಮೊದಲ 16 ವಿಮಾನಗಳನ್ನು ಸ್ಪೇನ್‌ನ ಸೆವಿಲ್ಲೆಯಲ್ಲಿ ಜೋಡಿಸಿ, ಕಾರ್ಯಾಚರಿಸುವ ಸ್ಥಿತಿಯಲ್ಲಿ ಅವುಗಳನ್ನು ಐಎಎಫ್‌ಗೆ ಪೂರೈಸಲಾಗುತ್ತಿದೆ. ಉಳಿದ 40 ವಿಮಾನಗಳನ್ನು ಭಾರತದಲ್ಲಿ ಕೈಗಾರಿಕಾ ಪಾಲುದಾರಿಕೆಯ ಭಾಗವಾಗಿ ಗುಜರಾತ್‌ನಲ್ಲಿನ ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್‌ನಲ್ಲಿ (ಟಿಎಎಸ್‌ಎಲ್) ತಯಾರಿಸಲಾಗುತ್ತಿದೆ.

ಸಿ295 ವಿಮಾನಗಳ ಅಂತಿಮ ಜೋಡಣೆಯು ಮೇಕ್-ಇನ್-ಇಂಡಿಯಾ ರಕ್ಷಣಾ ಯೋಜನೆಯಾಗಿದೆ. ವಿನ್ಯಾಸ, ಉತ್ಪಾದನೆ, ಜೋಡಣೆ, ಪರೀಕ್ಷೆ, ವಿತರಣೆ ಮತ್ತು ವಿಮಾನದ ಸಂಪೂರ್ಣ ನಿರ್ವಹಣೆಯು ಸಂಪೂರ್ಣ ದೇಶೀಯವಾಗಿ ನಿರ್ವಹಿಸಲ್ಪಡಲಿದೆ.

ಈ ಯೋಜನೆ ಉದ್ದೇಶ ಆತ್ಮನಿರ್ಭರ ಭಾರತಕ್ಕಾಗಿ ಭಾರತೀಯ ಕಂಪನಿಗಳು ದೇಶೀಯವಾಗಿ ಅಭಿವೃದ್ಧಿಪಡಿಸುವ ಸಾಮರ್ಥ್ಯಗಳನ್ನು ಹೆಚ್ಚಿಸಲು ಗಣನೀಯ ಕೊಡುಗೆ ನೀಡಲಿದೆ ಎಂದು ನಿರೀಕ್ಷಿಸಲಾಗಿದೆ.

ಎಸ್‌ಒಪಿ ರೂಪಿಸಲು ಡಿಜಿಸಿಎಗೆ ನೋಟಿಸ್

ವಿಮಾನದಲ್ಲಿ ಮೂತ್ರ ವಿಸರ್ಜಿಸಿದ ಪ್ರಕರಣ: ಕ್ರಮಕ್ಕಾಗಿ 'ಸುಪ್ರೀಂ' ಮೊರೆ ಹೋದ ಮಹಿಳೆ

ನವದೆಹಲಿ (ಪಿಟಿಐ): ಕಳೆದ ವರ್ಷ ನವೆಂಬರ್‌ನಲ್ಲಿ ಏರ್ ಇಂಡಿಯಾ ವಿಮಾನದಲ್ಲಿ ಸಹಪ್ರಯಾಣಿಕನೊಬ್ಬ ತಮ್ಮ ಮೇಲೆ ಮೂತ್ರ ವಿಸರ್ಜಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ 72 ವರ್ಷದ ಮಹಿಳೆಯೊಬ್ಬರು ನೀಡಿರುವ ಅರ್ಜಿಯನ್ನು ವಿಚಾರಣೆ ನಡೆಸುವುದಾಗಿ ಸೋಮವಾರ ತಿಳಿಸಿರುವ ಸುಪ್ರೀಂ ಕೋರ್ಟ್, ಇಂಥ ಘಟನೆಗಳನ್ನು ಎದುರಿಸಲು ನೆರವಾಗಲು ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ರೂಪಿಸುವಂತೆ ಕೇಂದ್ರ ಸರ್ಕಾರ ಹಾಗೂ ನಾಗರಿಕ ವಿಮಾನಯಾನ ನಿರ್ದೇಶನಾಲಯಕ್ಕೆ (ಡಿಜಿಸಿಎ) ನೋಟಿಸ್ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಜೆ.ಬಿ. ಪಾರ್ದೀವಾಲಾ ಅವರನ್ನೊಳಗೊಂಡ ನ್ಯಾಯಪೀಠವು, ಮಹಿಳೆಯ ಮನವಿಯನ್ನು ಪರಿಗಣಿಸಿ, ಕೇಂದ್ರ ಸರ್ಕಾರ, ಡಿಜಿಸಿಎ, ಏರ್ ಇಂಡಿಯಾ ಸೇರಿದಂತೆ ಇತರ ವಿಮಾನಯಾನ ಸಂಸ್ಥೆಗಳಿಗೆ ನೋಟಿಸ್ ನೀಡಿ, ಪ್ರಕರಣವನ್ನು ಜುಲೈಗೆ ಮುಂದೂಡಿತು.

ಘಟನೆಯ ಬಳಿಕ ಏರ್ ಇಂಡಿಯಾ, ಡಿಜಿಸಿಎ ತಮ್ಮ ಜವಾಬ್ದಾರಿ ನಿರ್ವಹಿಸಲು ವಿಫಲವಾದ ಕಾರಣ ನ್ಯಾಯಾಲಯದ ಮೊರೆ ಹೋಗಬೇಕಾಯಿತು ಎಂದು ಮಹಿಳೆ ಮಾರ್ಚ್‌ನಲ್ಲಿ ಸಲ್ಲಿಸಿದ್ದ ಪಿಐಎಲ್‌ನಲ್ಲಿ ತಿಳಿಸಿದ್ದಾರೆ.

ವಿಮಾನದ ಮೂಲಕ ನ್ಯೂಯಾರ್ಕ್‌ನಿಂದ ದೆಹಲಿಗೆ ತೆರಳುತ್ತಿದ್ದ ವೇಳೆ ಪ್ರಯಾಣಿಕ ಶಂಕರ್ ಮಿಶ್ರಾ ಎಂಬುವವರು ಸಹ ಪ್ರಯಾಣಿಕ ಮಹಿಳೆ ಮೇಲೆ ಮೂತ್ರ ವಿಸರ್ಜಿಸಿದ್ದರು. ಈ ಸಂಬಂಧ ಶಂಕರ್ ಅವರನ್ನು ಬಂಧಿಸಲಾಗಿತ್ತು.

ನಿಗಮದ ತಪ್ಪಿಗೆ ಉದ್ಯೋಗಿಗೆ ಪಿಂಚಣಿ ನಿರಾಕರಿಸುವಂತಿಲ್ಲ: ಸುಪ್ರೀಂ ಕೋರ್ಟ್

ಪ್ರಜಾವಾಣಿ ವಾರ್ತೆ

ನವದೆಹಲಿ: 'ಉದ್ಯೋಗದಾತರು (ನಿಗಮ) ತಪ್ಪಾಗಿ ಹಣ ಕಡಿತಮಾಡಿ ಅದಕ್ಕೆ ಉದ್ಯೋಗಿಯನ್ನು ಹೊಣೆ ಮಾಡುವುದು, ಆತನಿಗೆ ಪಿಂಚಣಿ ನಿರಾಕರಿಸುವುದು ಸಲ್ಲ' ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

'ಉದ್ಯೋಗಿಯ ಸಂಬಳದಿಂದ ತಪ್ಪಾಗಿ ಹಣ ಕಡಿತ ಮಾಡಿರುವ ಮತ್ತು ಆತನನ್ನು ಕೇಂದ್ರೀಯ ಭವಿಷ್ಯ ನಿಧಿ (ಸಿಪಿಎಫ್) ಯೋಜನೆಯ ಸದಸ್ಯ ಎಂದು ಪರಿಗಣಿಸಿದ ಮಾತ್ರಕ್ಕೆ ಆತನಿಂದ ಪಿಂಚಣಿ ಹಕ್ಕು ಕಸಿಯುವಂತಿಲ್ಲ. ಅದಕ್ಕೆ ಅವಕಾಶ ನೀಡಲಾಗದು' ಎಂದು ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ ಮತ್ತು ರಾಜೇಶ್ ಬಿಂದಾಲ್ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠ ತಿಳಿಸಿದೆ.

ಈ ಸಂಬಂಧ ಕಲ್ಕತ್ತ ರಾಜ್ಯ ರಸ್ತೆ ಸಾರಿಗೆ ನಿಗಮ ಹಾಗೂ ಇತರರು ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಪೀಠ ವಜಾಗೊಳಿಸಿದೆ.

ಅರ್ಜಿದಾರರಾದ ಆಶಿತ್ ಚಕ್ರವರ್ತಿ ಹಾಗೂ ಇತರರಿಗೆ ಪಿಂಚಣಿ ಹಣ ಬಿಡುಗಡೆ ಮಾಡುವಂತೆ ಹೈಕೋರ್ಟ್‌ನ ಏಕಸದಸ್ಯ ನ್ಯಾಯಪೀಠವು ಸಾರಿಗೆ ನಿಗಮಕ್ಕೆ ಆದೇಶಿಸಿತ್ತು. ಕಳೆದ ವರ್ಷದ ಮಾರ್ಚ್ 5ರಂದು ಈ ಕುರಿತ ವಿಚಾರಣೆ ನಡೆಸಿದ್ದ ವಿಭಾಗೀಯ ಪೀಠವು ಏಕ ಸದಸ್ಯ ಪೀಠದ ತೀರ್ಪು ಎತ್ತಿಹಿಡಿದಿತ್ತು. ಸಾರಿಗೆ ನಿಗಮ ಹಾಗೂ ಇತರರು ಇದರ ವಿರುದ್ಧ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

'ಭವಿಷ್ಯ ನಿಧಿಗಾಗಿ ಉದ್ಯೋಗಿಯ ವೇತನದಿಂದ ನಿಯಮಿತವಾಗಿ ಹಣ ಕಡಿತ ಮಾಡಲಾಗಿತ್ತು. ಈ ಕುರಿತು ಅವರಿಗೆ ಮಾಹಿತಿಯನ್ನೂ ನೀಡಲಾಗಿತ್ತು. ಅದಕ್ಕೆ ಅವರು ಆಕ್ಷೇಪ ವ್ಯಕ್ತಪಡಿಸಿರಲಿಲ್ಲ. ನಿವೃತ್ತಿಯ ನಂತರ ಈ ಕುರಿತು ಆಕ್ಷೇಪ ಎತ್ತಿದ್ದಾರೆ. ಹೀಗಾಗಿ ಪಿಂಚಣಿಯ ಪ್ರಯೋಜನ ಪಡೆಯಲು ಅವರಿಗೆ ಅವಕಾಶ ನೀಡಬಾರದು' ಎಂದು ಮೇಲ್ಮನವಿಯಲ್ಲಿ ಹೇಳಲಾಗಿತ್ತು.

'ನಾನು ಪಿಂಚಣಿ ಯೋಜನೆಯನ್ನು ಆಯ್ಕೆ ಮಾಡಿಕೊಂಡಿದ್ದೆ. ಹೀಗಿರುವಾಗ ನನ್ನ ವೇತನವನ್ನು ಸರಿಯಾಗಿ ಲೆಕ್ಕ ಹಾಕಿ ಅದರ ಆಧಾರದಲ್ಲಿ ಹಣ ಕಡಿತ ಮಾಡಬೇಕಿರುವುದು ನಿಗಮದ ಕರ್ತವ್ಯ. ನಿಗಮದ ಈ ತಪ್ಪಿಗಾಗಿ ನನ್ನನ್ನು ಪರಿತಪಿಸುವಂತೆ ಮಾಡುವುದು ಸರಿಯಲ್ಲ' ಎಂದು ಆಶಿತ್ ತಿಳಿಸಿದ್ದರು.



ದೋಣಿವಿಹಾರ ಪ್ರಯಾಗ್‌ರಾಜ್‌ನ ಯಮುನಾ ನದಿಯ ಸಂಗಮದಲ್ಲಿ ಬೇಸಿಗೆಯಿಂದಾಗಿ ನೀರಿನಮಟ್ಟ ಕಡಿಮೆಯಾಗಿದ್ದು, ಸೋಮವಾರ ಪ್ರವಾಸಿಗರು ದೋಣಿ ವಿಹಾರ ನಡೆಸಿದರು –ಪಿಟಿಐ ಚಿತ್ರ

'96 ಲಕ್ಷ ಜನರಿಗೆ ಸಾಧ್ಯವಾಗದ ರೈಲು ಪ್ರಯಾಣ'

ನವದೆಹಲಿ (ಪಿಟಿಐ): 'ರೈಲುಗಳ ಕೊರತೆಯಿಂದಾಗಿ ದೇಶದಲ್ಲಿನ ದಟ್ಟಣೆಯ ಮಾರ್ಗಗಳಲ್ಲಿ ರೈಲುಗಳ ಸಂಚಾರ ವಿರಳಗೊಂಡಿತ್ತು. ಈ ಕಾರಣದಿಂದ 2022–23ನೇ ಸಾಲಿನಲ್ಲಿ 96 ಲಕ್ಷ ಜನರಿಗೆ ರೈಲು ಪ್ರಯಾಣ ಸಾಧ್ಯವಾಗಲಿಲ್ಲ' ಎಂದು ರೈಲ್ವೆ ಸಚಿವಾಲಯ ಆರ್‌ಟಿಐವೊಂದಕ್ಕೆ ಉತ್ತರ ನೀಡಿದೆ.

'ಮಧ್ಯಪ್ರದೇಶದ ಸಾಮಾಜಿಕ ಕಾರ್ಯಕರ್ತ ಚಂದ್ರಶೇಖರ್ ಗೌರ್ ಅವರು ರೈಲ್ವೆ ಇಲಾಖೆಗೆ ಆರ್‌ಟಿಐ ಸಲ್ಲಿಸಿದ್ದರು. '2022–23ನೇ ಸಾಲಿನಲ್ಲಿ 2.72 ಕೋಟಿ ಪ್ರಯಾಣಿಕರ ಪೈಕಿ 1.76 ಕೋಟಿ ಜನರಿಗಷ್ಟೇ ಪಿಎನ್‌ಆರ್ ನಂಬರ್ ದೊರೆತಿತ್ತು. ಉಳಿದ 96 ಲಕ್ಷ ಪ್ರಯಾಣಿಕರು ಟಿಕೆಟ್ ಬುಕ್ ಮಾಡಿಕೊಂಡಿದ್ದರೂ ರೈಲು ಪ್ರಯಾಣ ಸಾಧ್ಯವಾಗಿರಲಿಲ್ಲ' ಎಂದು ಸಚಿವಾಲಯ ಉತ್ತರಿಸಿದೆ.

'ರೈಲಿನ ಸೀಟು ಸಂಖ್ಯೆಯನ್ನು ಹೆಚ್ಚು ಮಾಡುವ ಕುರಿತು ಇಲಾಖೆಯು ಪ್ರಯತ್ನ ನಡೆಸುತ್ತಿದೆ. ಇದಾದ ಬಳಿಕ ಪ್ರಯಾಣಿಕರು ವೇಟಿಂಗ್‌ಲಿಸ್ಟ್ ನಲ್ಲಿ ಕಾಯುವುದು ತಪ್ಪಲಿದೆ. ಕೋವಿಡ್–19ಕ್ಕೂ ಮೊದಲು 10,186 ರೈಲುಗಳು ದೇಶದಾದ್ಯಂತ ಸಂಚರಿಸುತ್ತಿದ್ದವು. ಪ್ರಸ್ತುತ 10,678 ರೈಲುಗಳು ಸಂಚರಿಸುತ್ತಿವೆ' ಎಂದು ಮಾಹಿತಿ ನೀಡಿದೆ.

ಸರಕು ಸಾಗಣೆ ಪ್ರಮಾಣದಲ್ಲಿ ಏರಿಕೆ: 'ಏಪ್ರಿಲ್‌ನಲ್ಲಿ ಸರಕು ಸಾಗಣೆ ರೈಲಿನಲ್ಲಿ ದಾಖಲೆಯ 126.46 ದಶಲಕ್ಷ ಟನ್‌ನಷ್ಟು ಸರಕುಗಳ ಸಾಗಣೆ ನಡೆದಿದೆ' ಎಂದು ರೈಲ್ವೆ ಸಚಿವಾಲಯ ತಿಳಿಸಿದೆ.

ಶ್ರದ್ಧಾ ಹತ್ಯೆ: ಆರೋಪಿ ಆಫ್ತಾಬ್ ವಿರುದ್ಧ ದೋಷಾರೋಪ ನಿಗದಿ– ಇಂದು ಆದೇಶ?

ನವದೆಹಲಿ (ಪಿಟಿಐ): ಕಾಲ್‌ಸೆಂಟರ್ ಉದ್ಯೋಗಿ ಶ್ರದ್ಧಾ ವಾಲ್ಕರ್ ಹತ್ಯೆಗೆ ಸಂಬಂಧಿಸಿದಂತೆ ಆರೋಪಿ ಆಫ್ತಾಬ್ ಅಮಿನ್ ಪೂನಾವಾಲಾ ಅವರ ವಿರುದ್ಧ ದೋಷಾರೂಪವನ್ನು ನಿಗದಿಪಡಿಸುವ ಕುರಿತು ಮಂಗಳವಾರ ದೆಹಲಿ ಕೋರ್ಟ್ ತನ್ನ ಆದೇಶವನ್ನು ಪ್ರಕಟಿಸುವ ಸಾಧ್ಯತೆ ಇದೆ.



ಶ್ರದ್ಧಾ ವಾಲ್ಕರ್


ಸಂಬಂಧಪಟ್ಟ ನ್ಯಾಯಾಧೀಶರು ರಜೆಯಲ್ಲಿದ್ದ ಕಾರಣ, ಏ. 29ರಂದು ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ವಿಶಾಲ್ ಪಹುಜಾ ಅವರು ಪೂನಾವಾಲಾ ವಿರುದ್ಧದ ದೋಷಾರೂಪಗಳನ್ನು ನಿಗದಿಪಡಿಸುವ ತಮ್ಮ ಆದೇಶವನ್ನು ಮುಂದೂಡಿದ್ದರು.

ಶ್ರದ್ಧಾ ಅವರ ಅಂತಿಮ ಸಂಸ್ಕಾರ ನೆರವೇರಿಸಲು ಅವರ ಕಳೇಬರವನ್ನು ಹಸ್ತಾಂತರಿಸುವಂತೆ ಕೋರಿ ಅವರ ತಂದೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನೂ ನ್ಯಾಯಾಲಯವು ಮೇ 9ಕ್ಕೆ ನಿಗದಿಪಡಿಸಿದೆ.

ಕಳೆದ ವರ್ಷ ಮೇ 18ರಂದು ಶ್ರದ್ಧಾ ವಾಲ್ಕರ್ ಅವರನ್ನು ಅವರ ಸಹಜೀವನದ ಸಂಗಾತಿ ಆಫ್ತಾಬ್ ಕತ್ತುಹಿಸುಕು ಹತ್ಯೆ ಮಾಡಿದ್ದ. ಬಳಿಕ, ಅವರ ದೇಹವನ್ನು ತುಂಡುತುಂಡಾಗಿ ಕತ್ತರಿಸಿ ತನ್ನ ಮನೆಯ ಫ್ರಿಡ್ಜ್‌ನಲ್ಲಿ ಮೂರು ವಾರಗಳ ಕಾಲ ಇಟ್ಟು, ನಂತರ ದೆಹಲಿಯ ವಿವಿಧೆಡೆ ಬಿಸಾಡಿದ್ದ.

ಮೋದಿ ಧಾರ್ಮಿಕ ಘೋಷಣೆ ಅಚ್ಚರಿ ತಂದಿದೆ: ಪವಾರ್

ಮುಂಬೈ (ಪಿಟಿಐ): 'ಕರ್ನಾಟಕದಲ್ಲಿ ಚುನಾವಣಾ ಪ್ರಚಾರದ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ಧಾರ್ಮಿಕ ಘೋಷಣೆಗಳನ್ನು ಮಾಡುತ್ತಿರುವುದು ನನಗೆ ಆಶ್ಚರ್ಯ ತಂದಿದೆ' ಎಂದು ಎನ್‌ಸಿಪಿ ಅಧ್ಯಕ್ಷ ಶರದ್ ಪವಾರ್ ಹೇಳಿದ್ದಾರೆ.



ಶರದ್ ಪವಾರ್

ಚುನಾವಣೆಯಲ್ಲಿ ಧರ್ಮ ಅಥವಾ ಧಾರ್ಮಿಕ ವಿಷಯವನ್ನು ಕೈಗೆತ್ತಿಕೊಂಡಾಗ ಅದು ವಿಭಿನ್ನ ರೀತಿಯ ವಾತಾವರಣವನ್ನು ಸೃಷ್ಟಿಸುತ್ತದೆ. ಅದು ಒಳ್ಳೆಯ ಬೆಳವಣಿಗೆ ಅಲ್ಲ ಎಂದು ಪವಾರ್ ಸ್ಥಳೀಯ ಸುದ್ದಿ ವಾಹಿನಿಯೊಂದಕ್ಕೆ ತಿಳಿಸಿದ್ದಾರೆ.

ಪಂಢರಾಪುರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಚುನಾವಣೆಯಲ್ಲಿ ಸ್ಪರ್ಧಿಸುವ ಸಮಯದಲ್ಲಿ ನಾವು ಪ್ರಜಾಪ್ರಭುತ್ವದ ಮೌಲ್ಯಗಳು ಮತ್ತು ಜಾತ್ಯತೀತತೆಯ ರಕ್ಷಣೆಗಾಗಿ ಪ್ರಮಾಣ ವಚನ ಸ್ವೀಕರಿಸಿರುತ್ತೇವೆ. ನೀವು ಚುನಾವಣೆಯಲ್ಲಿ ಧರ್ಮ ಅಥವಾ ಧಾರ್ಮಿಕ ವಿಚಾರವನ್ನು ಕೈಗೆತ್ತಿಕೊಂಡಾಗ ಅದು ವಿಭಿನ್ನ ರೀತಿಯ ವಾತಾವರಣವನ್ನು ಸೃಷ್ಟಿಸುತ್ತದೆ' ಎಂದೂ ಹೇಳಿದ್ದಾರೆ.

₹ 3 ಲಕ್ಷಕ್ಕೆ ನವಜಾತ ಶಿಶು ಮಾರಾಟ ಮಾಡಿದ ತಾಯಿ

ತಿರುವನಂತಪುರ (ಪಿಟಿಐ): ₹3 ಲಕ್ಷಕ್ಕೆ ತಮ್ಮ ನವಜಾತ ಶಿಶುವನ್ನು ಮಾರಾಟ ಮಾಡಿದ ಆರೋಪದ ಮೇಲೆ ಕೇರಳದ ತಂಬಾನೂರಿನ ಪೊಲೀಸರು ಮಹಿಳೆಯೊಬ್ಬರನ್ನು ಬಂಧಿಸಿದ್ದಾರೆ.

ಆರೋಪಿ ಮಹಿಳೆ ಕಾಞಿರಂಕುಳ ನಿವಾಸಿಯೆಂದು ತಿಳಿದುಬಂದಿದೆ. ಈ ಬಗ್ಗೆ ಏಪ್ರಿಲ್ 21ರಂದು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯಿಂದ ತಂಬಾನೂರು ಪೊಲೀಸರಿಗೆ ಮಾಹಿತಿ ಬಂದಿತ್ತು. ಈ ವಿಚಾರವಾಗಿ ಪೊಲೀಸರು ತನಿಖೆ ಪ್ರಾರಂಭಿಸಿದ್ದರು.

'ಮಗು ಏಪ್ರಿಲ್ ಮೊದಲ ವಾರದಲ್ಲಿ ಜನಿಸಿದ್ದು, ಹುಟ್ಟಿದ ನಾಲ್ಕು ದಿನಕ್ಕೆ ಮಾರಾಟ ಮಾಡಲಾಗಿದೆ. ತಿರುವನಂತಪುರದ ದಂಪತಿ ಹಣಕೊಟ್ಟು ಮಗುವನ್ನು ಮಹಿಳೆಯಿಂದ ಪಡೆದಿದ್ದರು. ಈ ಬಗ್ಗೆ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ಮಾಹಿತಿ ಬಂದಿದ್ದು, ಅವರು ನಮಗೆ ಮಾಹಿತಿ ನೀಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಮಗುವಿನ ಸಂರಕ್ಷಣೆ ಮತ್ತು ಜವಾಬ್ದಾರಿಯನ್ನು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ವಹಿಸಲಾಗಿದೆ' ಎಂದೂ ಪೊಲೀಸರು ಮಾಹಿತಿ ನೀಡಿದ್ದಾರೆ.

ಎನ್‌ಎಸ್‌ಎ ಅಡಿ ದಾಖಲಾದ ದೂರು ರದ್ದುಪಡಿಸಲು ಕೋರಿ 'ಸುಪ್ರೀಂ'ಗೆ ಅರ್ಜಿ ಸಲ್ಲಿಕೆ

ನಕಲಿ ವಿಡಿಯೊ: ಯೂಟ್ಯೂಬರ್ ಅರ್ಜಿ ತಿರಸ್ಕಾರ

ನವದೆಹಲಿ (ಪಿಟಿಐ): ತಮಿಳುನಾಡಿನಲ್ಲಿ ವಲಸೆ ಕಾರ್ಮಿಕರ ಮೇಲೆ ಹಲ್ಲೆ ನಡೆದಿದೆ ಎಂದು ಬಿಂಬಿಸಿದ್ದ ನಕಲಿ ವಿಡಿಯೊ ಹಂಚಿಕೊಂಡಿರುವ ಪ್ರಕರಣದಲ್ಲಿ ತಮ್ಮ ವಿರುದ್ಧ ರಾಷ್ಟ್ರೀಯ ಭದ್ರತಾ ಕಾಯ್ದೆಯ (ಎನ್‌ಎಸ್‌ಎ) ಅಡಿ ದೂರು ದಾಖಲಿಸಿಕೊಂಡಿರುವುದನ್ನು ರದ್ದುಪಡಿಸಲು ಕೋರಿ ಬಂಧಿತ ಯೂಟ್ಯೂಬರ್ ಮನೀಷ್ ಕಶ್ಯಪ್ ಸಲ್ಲಿಸಿರುವ ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ತಿರಸ್ಕರಿಸಿದೆ.

'ನಿಮಗೊಂದು ಸುಭದ್ರವಾದ ರಾಜ್ಯವಿದ್ದು, ಆ ರಾಜ್ಯದಲ್ಲಿ ನೀವು ಗೊಂದಲ ಸೃಷ್ಟಿಸಿ, ಏನನ್ನಾದರೂ ಹಂಚಿಕೊಳ್ಳಬಹುದೇ?' ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಪ್ರಶ್ನಿಸಿದರು.

ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಜೆ.ಬಿ. ಪಾರ್ದೀವಾಲಾ ಅವರನ್ನೊಳಗೊಂಡ ನ್ಯಾಯಪೀಠವು, ಎನ್‌ಎಸ್‌ಎಗೆ ಸಂಬಂಧಿಸಿದ ಮನವಿಯನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಲು ಕಶ್ಯಪ್ ಅವರಿಗೆ ಅವಕಾಶವನ್ನು ನೀಡಿತು. ಅಂತೆಯೇ, ಅವರ ವಿರುದ್ಧದ ಎಲ್ಲಾ 19 ಎಫ್‌ಐಆರ್‌ಗಳನ್ನು ಬಿಹಾರಕ್ಕೆ ವರ್ಗಾಯಿಸುವ ಮನವಿಯನ್ನು ತಿರಸ್ಕರಿಸಿತು.

ಸದ್ಯ ತಮಿಳುನಾಡಿನ ಮದುರೈ ಜೈಲಿನಲ್ಲಿರುವ ಯೂಟ್ಯೂಬರ್ ಕಶ್ಯಪ್ ಅವರ ಪರ ವಾದ ಮಂಡಿಸಿದ ಹಿರಿಯ ವಕೀಲ ಮಣಿಂದರ್ ಸಿಂಗ್ ಅವರ ಮನವಿಗಳನ್ನು ತಿರಸ್ಕರಿಸಿದ ಪೀಠವು, 'ನಾವು ಮನವಿಯನ್ನು ಪರಿಗಣಿಸಲು ಒಲವು ಹೊಂದಿಲ್ಲ' ಎಂದೂ ಹೇಳಿತು.

ಎನ್‌ಎಸ್‌ಎ ಅಡಿಯಲ್ಲಿ ಕಶ್ಯಪ್ ಅವರ ಬಂಧನವನ್ನು ರದ್ದುಗೊಳಿಸಲು ನಿರಾಕರಿಸಿದ ಪೀಠ, ಈ ರೀತಿಯ ಅರ್ಜಿಯನ್ನು ಆಲಿಸಲು ಸಾಧ್ಯವಿಲ್ಲ ಎಂದೂ ಸ್ಪಷ್ಟಪಡಿಸಿತು. ಮನೀಷ್ ಮಾರ್ಚ್ 18ರಂದು ಬಿಹಾರದ ಜಗದೀಶ್‌ಪುರ ಪೊಲೀಸ್ ಠಾಣೆಗೆ ಶರಣಾಗಿದ್ದರು. ಬಳಿಕ ಅವರನ್ನು ತಮಿಳುನಾಡಿಗೆ ಕರೆಯೊಯ್ಯಲಾಗಿತ್ತು. ಅಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು.

ಷೇರುಪೇಟೆ ವಹಿವಾಟು 710

ಹಿಂದಿನ ಅಂತ್ಯ	61,054
ಇಂದಿನ ಅಂತ್ಯ	61,764

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,069
ಇಂದಿನ ಅಂತ್ಯ	18,264
▲	195
ದಿನದ ಕನಿಷ್ಠ	18,286

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆ	₹500
12 ಮೊಟ್ಟೆ	₹66
ಮೈಸೂರು	
100 ಮೊಟ್ಟೆ	₹505

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ಕಚ್ಚಾ)	₹1680 (1660)
ಸೋಯಾ (ಕಚ್ಚಾ)	₹1000 (985)
ಸೂರ್ಯಕಾಂತಿ (ಕಚ್ಚಾ)	₹1000 (1000)
ಪಾಮೋಲಿನ್	₹958 (950)

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹152
ಆರ್‌ಎಸ್‌ಎಸ್-5	₹147
ಲಾಟ್	₹133

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹900-1300
ಮಧ್ಯಮ	₹600-800
ಸಣ್ಣ	₹300-500

710 ಅಂಶ ಜಿಗಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ಬ್ಯಾಂಕಿಂಗ್, ಹಣಕಾಸು ಮತ್ತು ವಾಹನ ವಲಯದ ಷೇರುಗಳನ್ನು ಹೂಡಿಕೆದಾರರು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿದರು. ಇದರಿಂದಾಗಿ ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಮತ್ತು ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಶೇಕಡ 1ಕ್ಕೂ ಹೆಚ್ಚಿನ ಗಳಿಕೆ ಕಂಡವು.

ವಿದೇಶಿ ಬಂಡವಾಳದ ಒಳಹರಿವು ಹೆಚ್ಚಾಗುತ್ತಿರುವುದು ಸಹ ಸಕಾರಾತ್ಮಕ ವಹಿವಾಟಿಗೆ ಬೆಂಬಲ ನೀಡಿತು ಎಂದು ವರ್ತಕರು ಹೇಳಿದ್ದಾರೆ. ಸೆನ್ಸೆಕ್ಸ್ 710 ಅಂಶ ಹೆಚ್ಚಾಗಿ 61,764 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು. ನಿಫ್ಟಿ 195 ಅಂಶ ಹೆಚ್ಚಾಗಿ 18,264 ಅಂಶಗಳಿಗೆ ತಲುಪಿತು.

ದಿನದ ವಹಿವಾಟಿನಲ್ಲಿ ಬಹುತೇಕ ಎಲ್ಲ ವಲಯಗಳು ಗಳಿಕೆ ಕಂಡಿದ್ದರಿಂದ ಮಿಡ್ ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಕೂಡ ಏರಿಕೆ ಕಂಡವು ಎಂದು ಎಲ್‌ಕೆಪಿ ಸೆಕ್ಯುರಿಟೀಸ್‌ನ ಸಂಶೋಧನಾ ಮುಖ್ಯಸ್ಥ ಎಸ್. ರಂಗನಾಥನ್ ತಿಳಿಸಿದ್ದಾರೆ.

ರಿಲಯನ್ಸ್, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಐಸಿಐಸಿಐ ಬ್ಯಾಂಕ್ ಷೇರುಗಳ ಖರೀದಿ ಸಹ ವಹಿವಾಟಿನ ಏರಿಕೆಗೆ ಕಾರಣವಾಯಿತು.

ಅಮೆರಿಕದಲ್ಲಿ ಉದ್ಯೋಗ ಸೃಷ್ಟಿಗೆ ಸಂಬಂಧಿಸಿದ ಅಂಕಿ-ಅಂಶಗಳು ಅಲ್ಲಿನ ಆರ್ಥಿಕ ಬೆಳವಣಿಗೆಯು ಮಂದಗತಿಗೆ ತಿರುಗುವ ಆತಂಕವನ್ನು ಕಡಿಮೆ ಮಾಡಿದೆ. ಇದರ ಜೊತೆಗೆ ದೇಶಿ ಕಂಪನಿಗಳ ಗಳಿಕೆಯು ಷೇರುಪೇಟೆಗಳಲ್ಲಿ ಉತ್ಸಾಹ ಹೆಚ್ಚಿಸಿದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಸಂಪತ್ತು ₹2.27 ಲಕ್ಷ ಕೋಟಿ ಹೆಚ್ಚಳ

ನವದೆಹಲಿ: ಮುಂಬೈ ಷೇರುಪೇಟೆಯಲ್ಲಿ ಸೋಮವಾರ ನಡೆದ ಸಕಾರಾತ್ಮಕ ವಹಿವಾಟಿನಿಂದಾಗಿ ಹೂಡಿಕೆದಾರರ ಸಂಪತ್ತು ₹2.27 ಲಕ್ಷ ಕೋಟಿಯಷ್ಟು ಹೆಚ್ಚಾಗಿದೆ. ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯವು ₹276 ಕೋಟಿಗೆ ಏರಿಕೆಯಾಗಿದೆ.

ತೈಲ ಸಚಿವಾಲಯ ರಚಿಸಿದ್ದ ಸಮಿತಿಯಿಂದ ಕೇಂದ್ರಕ್ಕೆ ಸಲಹೆ

‘ಡೀಸೆಲ್ ವಾಹನ ನಿಷೇಧಿಸಿ’

ನವದೆಹಲಿ (ಪಿಟಿಐ): 10 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ನಗರಗಳಲ್ಲಿ ಡೀಸೆಲ್ ಚಾಲಿತ ವಾಹನಗಳ ಬಳಕೆಯನ್ನು 2027ಕ್ಕೂ ಮೊದಲು ನಿಷೇಧಿಸಬೇಕು, ಅಲ್ಲಿ ವಿದ್ಯುತ್ ಚಾಲಿತ ಅಥವಾ ಅನಿಲ ಚಾಲಿತ ವಾಹನಗಳನ್ನು ಬಳಸಬೇಕು ಎಂದು ಕೇಂದ್ರ ತೈಲ ಸಚಿವಾಲಯ ರಚಿಸಿದ್ದ ಸಮಿತಿಯೊಂದು ಹೇಳಿದೆ.

ಸಾಂಪ್ರದಾಯಿಕ ಇಂಧನ ಬಳಸುವ (ಐಸಿಇ) ಎಂಜಿನ್ ಇರುವ ದ್ವಿಚಕ್ರ ಹಾಗೂ ತ್ರಿಚಕ್ರ ವಾಹನಗಳ ಬಳಕೆಯನ್ನು 2035ಕ್ಕೆ ಮೊದಲು ಕೊನೆಗಾಣಿಸಬೇಕು ಎಂದು ಕೂಡ ತೈಲ ಸಚಿವಾಲಯದ ಮಾಜಿ ಕಾರ್ಯದರ್ಶಿ ತರುಣ್ ಕಪೂರ್ ನೇತೃತ್ವದ ಸಮಿತಿಯು ಸಲಹೆ ಮಾಡಿದೆ.

ಸಮಿತಿಯು ಫೆಬ್ರುವರಿಯಲ್ಲಿಯೇ ಈ ವರದಿಯನ್ನು ಸಲ್ಲಿಸಿದೆ. ಆದರೆ ವರದಿಯನ್ನು ಸರ್ಕಾರವು ಇನ್ನೂ ಒಪ್ಪಿಲ್ಲ. ಪ್ರಯಾಣಿಕ ವಾಹನಗಳು ಹಾಗೂ ಟ್ಯಾಕ್ಸಿಗಳು ವಿದ್ಯುತ್ ಚಾಲಿತ ಆಗಬೇಕು, ಹಾಗೂ ಎಥೆನಾಲ್ ಮಿಶ್ರಣದ ಪೆಟ್ರೋಲ್ ಬಳಕೆಯ ಕಡೆ ಮುಖ ಮಾಡಬೇಕು ಎಂದು ವರದಿಯಲ್ಲಿ ಶಿಫಾರಸು ಮಾಡಲಾಗಿದೆ.

ಮುಖ್ಯಾಂಶಗಳು

- ವರದಿಯನ್ನು ಇನ್ನೂ ಒಪ್ಪದ ಸರ್ಕಾರ
- ಸರಕು ಸಾಗಣೆಗೆ ಇ.ವಿ. ಹೆಚ್ಚು ಬಳಕೆಗೆ ಶಿಫಾರಸು
- ದ್ವಿಚಕ್ರ ವಾಹನ ವಿಭಾಗದಲ್ಲೂ ಇ.ವಿ. ಬಳಕೆಗೆ ಸಲಹೆ



‘ಡೀಸೆಲ್ ಬಳಸುವ ನಾಲ್ಕು ಚಕ್ರದ ವಾಹನಗಳನ್ನು ಎಷ್ಟು ಸಾಧ್ಯವೋ ಅಷ್ಟು ಬೇಗ ನಿರ್ಮೂಲನೆಗೊಳಿಸಬೇಕು. ಹೀಗಾಗಿ, 10 ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ನಗರಗಳಲ್ಲಿ ಮತ್ತು ಹೆಚ್ಚಿನ ಮಾಲಿನ್ಯ ದಾಖಲಾಗುವ ಎಲ್ಲ ನಗರಗಳಲ್ಲಿ ಡೀಸೆಲ್ ಚಾಲಿತ ನಾಲ್ಕು ಚಕ್ರಗಳ ವಾಹನಗಳ ಬಳಕೆಯನ್ನು ಇನ್ನು ಐದು ವರ್ಷಗಳಲ್ಲಿ ನಿಷೇಧಿಸಬೇಕು’ ಎಂದು ವರದಿಯು ಹೇಳಿದೆ.

ಇ.ವಿ.ಗಳಿಗೆ ಪರಿವರ್ತನೆ ಹೊಂದುವ ಅವಧಿಯಲ್ಲಿ, 10ರಿಂದ 15 ವರ್ಷಗಳವರೆಗೆ ಸಿಎನ್‌ಜಿ ಚಾಲಿತ ವಾಹನಗಳಿಗೆ ಆದ್ಯತೆ ಕೊಡಬಹುದು ಎಂದು ಅದರಲ್ಲಿ ಹೇಳಲಾಗಿದೆ. ‘ಅಲ್ಪಾವಧಿಗೆ ಅಥವಾ ಮಧ್ಯಮಾವಧಿಗೆ ಹೈಬ್ರಿಡ್ ಎಂಜಿನ್ ಇರುವ, ಎರಡು ಬಗೆಯ ಇಂಧನ ಬಳಸುವ ವಾಹನಗಳಿಗೆ ಉತ್ತೇಜನ ನೀಡಬಹುದು’ ಎಂದು ಹೇಳಿದೆ.

ನಗರಗಳಲ್ಲಿ ಸರಕು ಸಾಗಣೆಗೆ 2024ರ ನಂತರದಲ್ಲಿ ವಿದ್ಯುತ್ ಚಾಲಿತ ವಾಹನಗಳನ್ನು ಮಾತ್ರ ನೋಂದಾಯಿಸಿಕೊಳ್ಳಬೇಕು. ಸರಕು ಸಾಗಣೆಗೆ ರೈಲು ಮತ್ತು ಅನಿಲದಿಂದ ಚಲಿಸುವ ಟ್ರಕ್‌ಗಳ ಬಳಕೆಗೆ ಆದ್ಯತೆ ಕೊಡಬೇಕು ಎಂದು ಅದು ಸಲಹೆ ಮಾಡಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		ಕೆಂಪುಗೋಟು	28989-35099	ಹಳೆಚಾಲಿ	---
ಬಂಟ್ವಾಳ		ರಾಶಿ	34299-49129	ತಟ್ಟಿಬೆಟ್ಟೆ	39199-43109
ಕೋಕ	12500-25000	ಸಿಪ್ಪೆಗೋಟು	5290-21567	**ಶಿರಸಿ**	
ಹೊಸತು	27500-40000	**ಶಿವಮೊಗ್ಗ**		ಬೆಟ್ಟೆ	37699-42899
ಹಳತು	48000-53000	ಬೆಟ್ಟೆ	47609-53283	ಬಿಳಿಗೋಟು	24699-31769
ಕಾರ್ಕಳ		ಗೊರಬಲು	18009-34791	ಚಾಲಿ	34419-37099
ಹೊಸತು	30000-39500	ರಾಶಿ	36716-49299	ಕೆಂಪುಗೋಟು	31321-34699
ಹಳತು	40000-53000	ಸರಕು	58436-80140	ರಾಶಿ	42669-45809
ಕುಮಟಾ		**ಹೊನ್ನಾಳಿ**		**ಯಲ್ಲಾಪುರ**	
ಚಿಪ್ಪು	29999-32599	ರಾಶಿ	48499-48499	ಬಿಳಿಗೋಟು	25899-34199
ಕೋಕ	20169-29999	**ಸಿದ್ದಾಪುರ**		ಚಾಲಿ	33012-37777
ಫ್ಯಾಕ್ಟರಿ	12089-22699	ಬಿಳಿಗೋಟು	27699-31299	ಕೋಕ	18201-30519
ಹಳೆಚಾಲಿ	36199-38399	ಚಾಲಿ	34699-36611	ಕೆಂಪುಗೋಟು	25969-34699
ಹೊಸಚಾಲಿ	35089-36599	ಕೋಕ	26399-32299	ರಾಶಿ	40209-50579
ಸಾಗರ		ಕೆಂಪುಗೋಟು	28319-31399	ತಟ್ಟಿಬೆಟ್ಟೆ	36899-44019
ಬಿಳಿಗೋಟು	21569-31099	ರಾಶಿ	42699-46599		
ಚಾಲಿ	33099-36600				
ಕೋಕ	18989-33699				



ಹಿಮದಾಟ... ಕಾಶ್ಮೀರದ ಹಲವು ಭಾಗಗಳಲ್ಲಿ ಅಕಾಲಿಕವಾಗಿ ಹಿಮ ಸುರಿಯುತ್ತಿರುವುದರಿಂದ ಚಳಿಗಾಲದ ವಾತಾವರಣ ನಿರ್ಮಾಣ ಆಗಿದ್ದು, ಬಾರಾಮುಲ್ಲಾ ಜಿಲ್ಲೆಯ ಗುಲ್ಮಾರ್ಗ್‌ನಲ್ಲಿ ಪ್ರವಾಸಿಗರು ಹಿಮದಲ್ಲಿ ಆಟವಾಡಿದರು –ಪಿಟಿಐ ಚಿತ್ರ

ಸುದ್ದಿ 2 ನಿಮಿಷ

ಕೆನರಾ ಬ್ಯಾಂಕ್ ನಿವ್ವಳ ಲಾಭ ಶೇ 90ರಷ್ಟು ಹೆಚ್ಚಳ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್‌ನ ನಿವ್ವಳ ಲಾಭವು 2022–23ನೇ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ಶೇಕಡ 90.63ರಷ್ಟು ಹೆಚ್ಚಾಗಿದ್ದು ₹3,174 ಕೋಟಿಗೆ ತಲುಪಿದೆ.

2021–22ನೇ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ನಿವ್ವಳ ಲಾಭವು ₹1,666 ಕೋಟಿಯಷ್ಟು ಇತ್ತು ಎಂದು ಬ್ಯಾಂಕ್‌ನ ಸಿಇಒ ಕೆ. ಸತ್ಯನಾರಾಯಣ ರಾಜು ಅವರು ವರ್ಚುವಲ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ವರಮಾನ ಹೆಚ್ಚಳ ಮತ್ತು ಭವಿಷ್ಯದಲ್ಲಿ ಎದುರಾಗುವ ಆರ್ಥಿಕ ನಷ್ಟ ಭರಿಸಲು ತೆಗೆದಿರಿಸುವ ಮೊತ್ತದಲ್ಲಿ ಇಳಿಕೆ ಆಗಿರುವುದು ಲಾಭ ಹೆಚ್ಚಳ ಕಾರಣ ಎಂದು ಬ್ಯಾಂಕ್ ಹೇಳಿದೆ.

ವಸೂಲಾಗದ ಸಾಲದ ಸರಾಸರಿ ಪ್ರಮಾಣ (ಜಿಎನ್‌ಪಿಎ) ಶೇ 2.16ರಷ್ಟು ಇಳಿಕೆ ಕಂಡಿದ್ದು ಶೇ 5.35ಕ್ಕೆ ತಲುಪಿದೆ. ನಿವ್ವಳ ಎನ್‌ಪಿಎ ಶೇ 0.92ರಷ್ಟು ಕಡಿಮೆ ಆಗಿ ಶೇ 1.73ಕ್ಕೆ ಇಳಿಕೆಯಾಗಿದೆ.

2023ರ ಮಾರ್ಚ್ ಅಂತ್ಯಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ ಬ್ಯಾಂಕ್ ನಿವ್ವಳ ಲಾಭವು ₹6,124 ಕೋಟಿಯಿಂದ ₹11,254 ಕೋಟಿಗೆ ಏರಿಕೆ ಕಂಡಿದೆ.

2023ರ ಮಾರ್ಚ್ 31ಕ್ಕೆ ಕೊನೆಗೊಂಡ ವರ್ಷಕ್ಕೆ ಪ್ರತಿ ಷೇರಿಗೆ ₹12 ಲಾಭಾಂಶ ನೀಡಲು ಆಡಳಿತ ಮಂಡಳಿಯು ಶಿಫಾರಸು ಮಾಡಿರುವುದಾಗಿ ರಾಜು ಮಾಹಿತಿ ನೀಡಿದರು.



ಬ್ಯಾಂಕ್‌ನಲ್ಲಿ ವಾರಸುದಾರರಿಲ್ಲದ ಹಣ: ಅಭಿಯಾನಕ್ಕೆ ಒಲವು

ನವದೆಹಲಿ (ಪಿಟಿಐ): ಬ್ಯಾಂಕ್ ಮತ್ತು ಇತರ ಹಣಕಾಸು ಸಂಸ್ಥೆಗಳಲ್ಲಿ ವಾರಸುದಾರರು ಇಲ್ಲದೆ ಉಳಿದುಕೊಂಡಿರುವ ಠೇವಣಿಗಳು ಸಂಬಂಧಪಟ್ಟವರಿಗೆ ತಲುಪುವಂತೆ ಮಾಡಲು ಅಭಿಯಾನ ಕೈಗೊಳ್ಳುವ ಅಗತ್ಯವಿದೆ ಎಂದು ಹಣಕಾಸು ಸ್ಥಿರತೆ ಮತ್ತು ಅಭಿವೃದ್ಧಿ ಮಂಡಳಿಯು (ಎಫ್‌ಎಸ್‌ಡಿಸಿ) ಅಭಿಪ್ರಾಯಪಟ್ಟಿದೆ. ಈ ಮಂಡಳಿಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮುಖ್ಯಸ್ಥರು.

ಮಂಡಳಿಯ ಸಭೆಯು ಸೋಮವಾರ ನಡೆಯಿತು. ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರೂ ಇದರಲ್ಲಿ ಭಾಗಿಯಾಗಿದ್ದರು.

ವಾರಸುದಾರರು ಇಲ್ಲದೆ, 10 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯಿಂದ ಹಾಗೇ ಬಿದ್ದಿರುವ ಒಟ್ಟು ₹35 ಸಾವಿರ ಕೋಟಿಯನ್ನು ಹಣಕಾಸು ಸಂಸ್ಥೆಗಳು ಆರ್‌ಬಿಐಗೆ ವರ್ಗಾವಣೆ ಮಾಡಿವೆ. 10.24 ಕೋಟಿ ಖಾತೆಗಳಲ್ಲಿ ಇಷ್ಟು ಹಣ ಇತ್ತು.

ಬೇರೆ ಬೇರೆ ಬ್ಯಾಂಕ್‌ಗಳಲ್ಲಿ ಇರುವ ಈ ಹಣದ ಬಗ್ಗೆ ಠೇವಣಿದಾರರು ಮತ್ತು ವಾರಸುದಾರರು ಮಾಹಿತಿ ಪಡೆಯಲು ಕೇಂದ್ರೀಕೃತ ಪೋರ್ಟಲ್ ಒಂದನ್ನು ಮೂರರಿಂದ ನಾಲ್ಕು ತಿಂಗಳುಗಳಲ್ಲಿ ಅಭಿವೃದ್ಧಿಪಡಿಸಲಾಗುವುದು ಎಂದು ದಾಸ್ ಅವರು ಈಚೆಗೆ ಹೇಳಿದ್ದರು.

ಹ್ಯಾಪಿಯೆಸ್ಟ್ ಮೈಂಡ್ಸ್‌ಗೆ ಲಾಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐ.ಟಿ. ಸೇವಾ ಕಂಪನಿ ಹ್ಯಾಪಿಯೆಸ್ಟ್ ಮೈಂಡ್ಸ್ ಮಾರ್ಚ್ ತ್ರೈಮಾಸಿಕದ ಹಣಕಾಸು ಫಲಿತಾಂಶವನ್ನು ಸೋಮವಾರ ಪ್ರಕಟಿಸಿದ್ದು, ₹57 ಕೋಟಿ ತೆರಿಗೆ ನಂತರದ ಲಾಭ ಗಳಿಸಿದೆ. ಇದು ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಂಪನಿ ಗಳಿಸಿದ್ದ ಲಾಭಕ್ಕೆ ಹೋಲಿಸಿದರೆ ಶೇ 10.7ರಷ್ಟು ಹೆಚ್ಚು.

ಕಂಪನಿಯು ಪ್ರತಿ ಷೇರಿಗೆ ₹3.40ರಷ್ಟು ಅಂತಿಮ ಲಾಭಾಂಶ ಘೋಷಿಸಿದೆ ಎಂದು ಕಂಪನಿಯ ಕಾರ್ಯನಿರ್ವಾಹಕ ಅಧ್ಯಕ್ಷ ಅಶೋಕ್ ಸೂಟ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಎಫ್‌ಪಿಐ: ರಷ್ಯಾದ 3 ಕಂಪನಿಗಳ ನೋಂದಣಿ

ನವದೆಹಲಿ (ಪಿಟಿಐ): ಉಕ್ರೇನ್ ವಿರುದ್ಧ ಸಮರ ಸಾರಿದ ಬಳಿಕ ರಷ್ಯಾ ಮೇಲೆ ಪಾಶ್ಚಿಮಾತ್ಯ ದೇಶಗಳು ನಿರ್ಬಂಧ ಹೇರಿರುವ ನಡುವೆಯೇ, ರಷ್ಯಾದ ಹೂಡಿಕೆದಾರರು ಭಾರತದ ಷೇರುಪೇಟೆಗಳತ್ತ ಮುಖಮಾಡುತ್ತಿದ್ದಾರೆ.

ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರೀಸ್ ಲಿ.ನಲ್ಲಿ (ಎನ್‌ಎಸ್‌ಡಿಎಲ್) ಇರುವ ಮಾಹಿತಿಯ ಪ್ರಕಾರ, ರಷ್ಯಾದ ಮೂರು ಕಂಪನಿಗಳು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯಲ್ಲಿ (ಸೆಬಿ) ವಿದೇಶಿ ಬಂಡವಾಳ ಹೂಡಿಕೆದಾರರಾಗಿ (ಎಫ್‌ಪಿಐ) ನೋಂದಣಿ ಮಾಡಿಸಿವೆ. ರಷ್ಯಾದ ಹೂಡಿಕೆದಾರರು ಭಾರತದಲ್ಲಿ ಬಂಡವಾಳ ತೊಡಗಿಸಲು ಎಫ್‌ಪಿಐ ಮಾರ್ಗ ಆಯ್ಕೆ ಮಾಡಿಕೊಂಡಿರುವುದು ಇದು ಮೊದಲ ನಿದರ್ಶನ ಎನ್ನಲಾಗಿದೆ. ಈ ಮೊದಲು ಅವರು ಎಫ್‌ಡಿಐ ಮೂಲಕ ಹೆಚ್ಚಾಗಿ ಹೂಡಿಕೆ ಮಾಡುತ್ತಿದ್ದರು. ಪಾಶ್ಚಿಮಾತ್ಯ ದೇಶಗಳು ರಷ್ಯಾದ ಮೇಲೆ ಹಲವು ರೀತಿಯ ನಿರ್ಬಂಧಗಳನ್ನು ಹೇರಿರುವ ಕಾರಣ ರಷ್ಯಾದ ಹೂಡಿಕೆದಾರರು ಭಾರತದ ಮಾರುಕಟ್ಟೆಗಳತ್ತ ಆಸಕ್ತಿ ತೋರಿಸುತ್ತಿದ್ದಾರೆ ಎಂದು ತಜ್ಞರು ಹೇಳಿದ್ದಾರೆ.

ಗುಣಮಟ್ಟದ ವಿದ್ಯುತ್ ಬೆಳಿಗ್ಗೆಯೇ ಪೂರೈಸುವಂತೆ ರೈತರ ಆಗ್ರಹ

ರೈತರ ರಾತ್ರಿ ಪಾಳಿಗೆ ಮುಕ್ತಿ ಎಂದು?

• ಶಿವಪ್ರಸಾದ್ ರೈ

ಮೈಸೂರು: ಬೆಳೆಗಳಿಗೆ ನೀರು ಹಾಯಿಸಲು ಅನಿವಾರ್ಯವಾದ ರಾತ್ರಿ ಪಾಳಿಯಿಂದ ಮುಕ್ತಿ ಸಿಗುವುದು ಯಾವಾಗ ಎಂಬ ಚಿಂತೆ ಜಿಲ್ಲೆಯ ರೈತರದ್ದಾಗಿದೆ. ಬೆಳೆ ರೋಗಗಳು, ಇಳುವರಿ ಹಾಗೂ ಬೆಲೆ ಕುಸಿತದಂಥ ಸಮಸ್ಯೆಗಳ ಜೊತೆಗೆ ಈಗ ವಿದ್ಯುತ್ ಸಮಸ್ಯೆಯೂ ಅವರನ್ನು ಬಾಧಿಸುತ್ತಿದೆ.

ಸದ್ಯ ಪಂಪ್‌ಸೆಟ್‌ಗಳಿಗೆ ಬೆಳಿಗ್ಗೆ 4 ಗಂಟೆ ಹಾಗೂ ರಾತ್ರಿ 3 ಗಂಟೆ ಕಾಲ ವಿದ್ಯುತ್ ಪೂರೈಸಲಾಗುತ್ತಿದೆ. ಆದರೆ, ಮಧ್ಯರಾತ್ರಿ ವೇಳೆ ವಿದ್ಯುತ್ ಪೂರೈಕೆಯಾಗುವುದರಿಂದ ರಾತ್ರಿ ಪಾಳಿಯಲ್ಲಿ ಕೆಲಸ ಮಾಡಲೇಬೇಕು. ಕೆಲವೆಡೆ ತಿಂಗಳುಗಳಿಂದ ಕಡಿಮೆ ವಿದ್ಯುತ್ ಪೂರೈಸಲಾಗುತ್ತಿದೆ ಎಂಬ ಆರೋಪವೂ ಇದೆ.

ಮನೆಯಿಂದ ದೂರದಲ್ಲಿರುವ ತೋಟಕ್ಕೆ ನೀರು ಹಾಯಿಸಲು ಮಧ್ಯರಾತ್ರಿ 12 ಗಂಟೆಗೆ ಟಾರ್ಚ್ ಹಿಡಿದು ತೆರಳುವ ರೈತರು ಹಾವು ಹಾಗೂ ಕಾಡುಪ್ರಾಣಿಗಳ ದಾಳಿಗೂ ಗುರಿಯಾಗಬೇಕಾಗುತ್ತದೆ. ನಿದ್ದೆಗಣ್ಣಿನಲ್ಲಿ ಬದುವಿನಲ್ಲಿ ನಡೆಯುವಾಗ ಕಾಲು ಜಾರಿ ಬೀಳುವ ಘಟನೆಗಳೂ ನಡೆಯುತ್ತವೆ. ರೈತರು, ಇಂಥ ಅಪಾಯದ ನಡುವೆಯೇ ಬೆಳೆ ರಕ್ಷಿಸಿಕೊಳ್ಳಬೇಕಾಗಿದೆ. ಹೀಗಾಗಿಯೇ, ‘7 ಗಂಟೆ ಕಾಲದ ವಿದ್ಯುತ್ ಅನ್ನು ಬೆಳಗಿನ ವೇಳೆಯಲ್ಲೇ ಪೂರೈಸಬೇಕು’ ಎಂಬುದು ರೈತರ ಆಗ್ರಹ.

ಅದಕ್ಕೆ ರೈತ ಸಂಘಟನೆಗಳೂ ದನಿ ಕೊಟ್ಟಿವೆ. ‘ಸಮರ್ಪಕವಾಗಿ ವಿದ್ಯುತ್ ಪೂರೈಕೆಯಾಗುತ್ತಿದೆ’ ಎಂಬ ಅಧಿಕಾರಿಗಳ ಮಾತನ್ನು ರೈತರು ಒಪ್ಪುವುದಿಲ್ಲ.

‘ನಿಗದಿಯಾಗಿರುವುದಕ್ಕಿಂತಲೂ 2 ತಾಸು ಕಡಿಮೆ ವಿದ್ಯುತ್ ಪೂರೈಕೆಯಾಗುತ್ತಿದೆ. ಪೂರೈಕೆಯ ಅವಧಿಯನ್ನು ವಾರಕ್ಕೊಮ್ಮೆ ಮೂರು ಹಂತಗಳಲ್ಲಿ ಬದಲಾಯಿಸುತ್ತಾರೆ. ಮಧ್ಯರಾತ್ರಿ 12ಕ್ಕೆ, ಬೆಳಗಿನ ಜಾವ 2 ಗಂಟೆ ಹಾಗೂ 4 ಗಂಟೆಗೆ ಪೂರೈಕೆಯಾಗುವುದರಿಂದ ನಿದ್ದೆಗೆಟ್ಟು ತೋಟಕ್ಕೆ ಹೋಗಬೇಕು’ ಎಂಬುದು ನಂಜನಗೂಡಿನ ರೈತ ಮುಖಂಡ ವಿದ್ಯಾಸಾಗರ್ ಅವರ ಸಂಕಟದ ನುಡಿ.

ಮುಖ್ಯಾಂಶಗಳು

- ಮಧ್ಯರಾತ್ರಿ ಗುಣಮಟ್ಟದ (ತ್ರಿಫೇಸ್) ವಿದ್ಯುತ್ ಪೂರೈಕೆ
- ಕೆಲವೆಡೆ ನಿಗದಿಗಿಂತ ಕಡಿಮೆ ವಿದ್ಯುತ್
- ಪ್ರಾಣ ಭಯದೊಂದಿಗೆ ತೋಟಕ್ಕೆ ತೆರಳುತ್ತಿರುವ ರೈತ

‘ಜೂನ್‌ನಿಂದ ನಿರಂತರ ಪೂರೈಕೆ’

ಸಮಸ್ಯೆ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಜಯವಿಭವಸ್ವಾಮಿ, ‘ಬೇಸಿಗೆಯಲ್ಲಿ ಓವರ್ ಲೋಡ್ ಆಗುವುದರಿಂದ ಎಲ್ಲಾ ಫೀಡರ್‌ಗಳಿಗೂ ಏಕಕಾಲದಲ್ಲಿ ವಿದ್ಯುತ್ ಪೂರೈಕೆ ಅಸಾಧ್ಯ. ವಿದ್ಯುತ್ ಉತ್ಪಾದನಾ ಪ್ರಮಾಣ ಕಡಿಮೆ ಇದ್ದುದರಿಂದ ತ್ರಿಫೇಸ್ ವಿದ್ಯುತ್ ಅನ್ನು ಎರಡು ಹಂತದಲ್ಲಿ ಪೂರೈಸಲಾಗುತ್ತಿದೆ. ಆದರೆ ಬೆಳಗಿನ ವೇಳೆಯಲ್ಲೇ 7 ಗಂಟೆ ಕಾಲ ವಿದ್ಯುತ್ ಪೂರೈಸಬೇಕೆಂದು ರೈತರು ಆಗ್ರಹಿಸುತ್ತಿದ್ದಾರೆ. ಮಳೆ ಶುರುವಾದರೆ, ಜೂನ್ ತಿಂಗಳಿನಿಂದ ನಿರಂತರ ವಿದ್ಯುತ್ ಪೂರೈಕೆ ಮಾಡಲಾಗುವುದು’ ಎಂದರು.

‘ಸೌರ ವಿದ್ಯುತ್ ಉತ್ಪಾದನೆಗೆ ಉತ್ತೇಜನ ನೀಡುವ ಮೂಲಕವೂ ಲೋಡ್‌ಶೆಡ್ಡಿಂಗ್ ಸಮಸ್ಯೆಯನ್ನು ತಕ್ಕಮಟ್ಟಿಗೆ ಪರಿಹರಿಸಲು ಸಾಧ್ಯ’ ಎಂದೂ ಅವರು ಹೇಳಿದರು.

‘ಬೆಳಿಗ್ಗೆ ಹಾಗೂ ರಾತ್ರಿ ತಲಾ 3 ಗಂಟೆಯಷ್ಟೇ ವಿದ್ಯುತ್ ಪೂರೈಕೆಯಾಗುತ್ತಿದೆ. ಕೆಲವು ದಿನ ಅಷ್ಟೂ ಪೂರೈಕೆಯಾಗುವುದಿಲ್ಲ. ಅಧಿಕಾರಿಗಳು ಮೇಲಾಧಿಕಾರಿಗಳ ಕಡೆಗೆ ಬೆರಳು ತೋರಿಸುತ್ತಾರೆ’ ಎಂಬುದು ಕಬ್ಬು ಬೆಳೆಗಾರರ ಸಂಘದ ತಾಲ್ಲೂಕು ಅಧ್ಯಕ್ಷ ಕುರುಬೂರು ಸಿದ್ದೇಶ್ ಅವರ ಆರೋಪ.

ಎಚ್.ಡಿ.ಕೋಟೆ ತಾಲ್ಲೂಕಿನ ಹುಣಸಹಳ್ಳಿ, ಮನುಗನಹಳ್ಳಿ, ಕೂಲ್ಯ, ಶಾಂತಿಪುರ, ರೈತರಿಗೆ 3 ತಿಂಗಳಿನಿಂದ ಕೇವಲ 4 ಗಂಟೆ ಕಾಲವಷ್ಟೇ ತ್ರಿಫೇಸ್ ವಿದ್ಯುತ್ ಸಿಗುತ್ತಿದೆ. ಅದೂ ನಿರಂತರವಾಗಿಲ್ಲ. ಅಧಿಕಾರಿಗಳು ತಾಂತ್ರಿಕ ದೋಷದ ನೆಪ ಹೇಳುತ್ತಿದ್ದಾರೆ. ಪ್ರತಿವರ್ಷವೂ ಇದೇ ಸಮಸ್ಯೆ. ಬೆಳೆಗೆ ನೀರು ಒದಗಿಸಲಾಗದೆ ಕಂಗಲಾಗಿದ್ದೇವೆ. ರಾತ್ರಿ ವೇಳೆ ನಿದ್ದೆಗೆಟ್ಟು ಆರೋಗ್ಯವೂ ಕೆಟ್ಟಿದೆ’ ಎಂದು ಹುಣಸಹಳ್ಳಿಯ ರೈತ ಜಾನಕಿರಾಮ್, ಜಯಪುರ ತಾಲ್ಲೂಕಿನ ಆನಂದ್ ಅಲವತ್ತುಕೊಂಡರು.

ಚಿರತೆ ದಾಳಿಯ ಭಯ ಮಾಸಿಲ್ಲ

‘ಕೆಲವು ತಿಂಗಳ ಹಿಂದೆ ನಡೆದ ಚಿರತೆ ದಾಳಿಯ ನೆನಪು ಇನ್ನೂ ಮಾಸಿಲ್ಲ. ಕಬ್ಬು, ಭತ್ತದ ಬೆಳೆ ನಡುವೆ ಕಾಡು ಪ್ರಾಣಿಗಳು ಅವಿತಿದ್ದರೂ ತಿಳಿಯುವುದಿಲ್ಲ’ ಎಂದು ಮೈಸೂರು ತಾಲ್ಲೂಕಿನ ಅರಸನಕೆರೆ ಗ್ರಾಮದ ರೈತ ಶಿವಾನಂದ ತಿಳಿಸಿದರು.

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ತಿಪಟೂರು	₹8500-9810
ತುರುವೇಕೆರೆ	₹9800-9800

ಮುಂಬೈ ಧಾರಣೆ

ಶೇಂಗಾ 8-5-2023

ಜಾವಾ 70/80(ಹೊಸ)	11450-11500
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	11000-11100
ದಪ್ಪ ಗುಜರಾತ್(ಹೊಸ)	12100-12200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1690 (1670)
ಒಂದು ವಾರದ ಡೆಲಿವರಿ	1685 (1665)
ಸೋಯಾ ಕಚ್ಚಾ	910 (900)
ಪಾಮ್ ವಾರದ ಡೆಲಿವರಿ	956 (948)
ಸೂರ್ಯಕಾಂತಿ ಎಣ್ಣೆ ಕಚ್ಚಾ	920 (900)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 60,800 (60,450)

ಬೆಳ್ಳಿ ಕೆ.ಜಿ. 76,250 (76,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಉಕ್ರೇನ್‌ನಲ್ಲಿ 127 ಸ್ಥಳಗಳು ದಾಳಿಗೆ ಗುರಿ • ನಾಲ್ವರು ನಾಗರಿಕರ ಸಾವು

ಕೀವ್ ಮೇಲೆ ದಾಳಿ:35 ಡ್ರೋನ್ ನಾಶ

ಕೀವ್ (ಎಪಿ): ರಷ್ಯಾ ಪಡೆಗಳು ಉಕ್ರೇನ್‌ನ ಹಲವು ನಗರಗಳನ್ನು ಗುರಿಯಾಗಿಸಿ ರಾತ್ರಿ ವೇಳೆ ಡ್ರೋನ್ ಮತ್ತು ಕ್ಷಿಪಣಿಗಳಿಂದ ವ್ಯಾಪಕ ದಾಳಿ ನಡೆಸಿವೆ. ದಾಳಿಯಲ್ಲಿ ನಾಲ್ವರು ನಾಗರಿಕರು ಮೃತಪಟ್ಟಿದ್ದು, ರಾಜಧಾನಿ ಕೀವ್‌ನಲ್ಲಿ ಐವರು ನಾಗರಿಕರು ಗಾಯಗೊಂಡಿದ್ದಾರೆ ಎಂದು ಉಕ್ರೇನ್ ಅಧಿಕಾರಿಗಳು ಸೋಮವಾರ ಹೇಳಿದ್ದಾರೆ.

ರಷ್ಯಾ ಪಡೆಗಳು ಭಾನುವಾರ ರಾತ್ರಿ ಪ್ರಯೋಗಿಸಿರುವ ಇರಾನ್ ನಿರ್ಮಿತ 35 ಡ್ರೋನ್‌ಗಳನ್ನು ದೇಶದ ವಾಯು ಪಡೆಯು ಹೊಡೆದುರುಳಿಸಿದೆ. ಡ್ರೋನ್ ಅವಶೇಷಗಳು ಬಿದ್ದು ಕೀವ್ ನಗರದಲ್ಲಿ ಐವರು ನಾಗರಿಕರು ಗಾಯಗೊಂಡಿದ್ದಾರೆ. ರಾತ್ರಿ ಸುಮಾರು ಮೂರು ತಾಸು ವಾಯು ದಾಳಿಯ ಎಚ್ಚರಿಕೆ ಸಂದೇಶ ಮೊಳಗಿತು ಎಂದು ನಗರ ಸೇನಾ ಆಡಳಿತದ ಮುಖ್ಯಸ್ಥ ಸೆರ್ಹಿಲ್ ಪಾಪ್ಕೊ ಅವರು ಹೇಳಿದ್ದಾರೆ.

ಉಕ್ರೇನ್‌ನ ಉತ್ತರ, ದಕ್ಷಿಣ ಹಾಗೂ ಪೂರ್ವ ಭಾಗದಾದ್ಯಂತ ಸುಮಾರು 127 ಸ್ಥಳಗಳನ್ನು ಗುರಿಯಾಗಿಸಿಕೊಂಡು ರಷ್ಯಾ ಶೆಲ್ ದಾಳಿ ಮಾಡಿದೆ. ಯುದ್ಧ ಟ್ಯಾಂಕ್, ಡ್ರೋನ್‌ಗಳು, ಮಾರ್ಟರ್‌ಗಳು, ಯುದ್ಧ ವಿಮಾನಗಳು, ಬಹುವಿಧದ ರಾಕೆಟ್ ಲಾಂಚರ್‌ಗಳು, ಕ್ಷಿಪಣಿಗಳು, ಬಾಂಬ್‌ಗಳನ್ನು ಬಳಸಿಕೊಂಡು ರಷ್ಯಾ ಪಡೆಗಳು ವ್ಯಾಪಕ ದಾಳಿ ನಡೆಸಿವೆ ಎಂದು ಉಕ್ರೇನ್ ಸೇನೆ ಹೇಳಿದೆ.

ಒಡೆಸಾ ಮೇಲೆ ಸೋವಿಯತ್ ಕಾಲದ ದೂರ ವ್ಯಾಪ್ತಿಯ 8 ಕ್ರೂಸ್ ಕ್ಷಿಪಣಿಗಳು, ಕ್ರಾಮೊರಸ್ಕ್ ಮೇಲೆ ಆರು ಕ್ಷಿಪಣಿಗಳನ್ನು ಉಡಾಯಿಸಿದೆ. ಡೊನೆಟ್‌ಸ್ಕ್ ಕೈಗಾರಿಕ ನಗರದ ಮೇಲೂ ಕ್ಷಿಪಣಿ ದಾಳಿಯಾಗಿದೆ. ಒಡೆಸಾದಲ್ಲಿ ಒಬ್ಬ ನಾಗರಿಕ ಮೃತಪಟ್ಟಿದ್ದಾರೆ ಎಂದು ಉಕ್ರೇನ್ ವಾಯುಪಡೆಯ ಯೂರಿ ಇಹ್ನಾಟ್ ಅವರು ಹೇಳಿದ್ದಾರೆ.



ರಷ್ಯಾ ಸೇನೆ ಭಾನುವಾರ ರಾತ್ರಿ ನಡೆಸಿದ ಡ್ರೋನ್ ದಾಳಿಯಿಂದಾಗಿ ಉಕ್ರೇನ್ ರಾಜಧಾನಿ ಕೀವ್ ನಗರದ ಬಹುಮಹಡಿ ವಸತಿ ಕಟ್ಟಡವೊಂದು ಹಾನಿಗೀಡಾಗಿದೆ – ಎಎಫ್‌ಪಿ ಚಿತ್ರ

2ನೇ ವಿಶ್ವ ಯುದ್ಧದಲ್ಲಿ ನಾಜಿ ಜರ್ಮನಿ ಮಣ್ಣುಮುಕ್ಕಿದಂತೆ ರಷ್ಯಾ ಪಡೆಗಳು ಉಕ್ರೇನ್ ಯುದ್ಧದಲ್ಲಿ ಸೋಲು ಕಾಣಲಿವೆ

ವೊಲೊಡಿಮಿರ್ ಝೆಲೆನ್‌ಸ್ಕಿ, ಉಕ್ರೇನ್ ಅಧ್ಯಕ್ಷ

2ನೇ ವಿಶ್ವಯುದ್ಧ ವಿಜಯೋತ್ಸವ ಇಂದು

ರಷ್ಯಾ ಸೇನೆ ಉಕ್ರೇನ್ ಮೇಲೆ ಬಾಂಬು, ಕ್ಷಿಪಣಿಗಳ ಮಳೆಗರೆಯುತ್ತಿರುವ ಬೆನ್ನಲ್ಲೇ, ಎರಡನೇ ಮಹಾ ಯುದ್ಧದಲ್ಲಿ ನಾಜಿ ಜರ್ಮನಿ ಮಣಿಸಿದ ಸ್ಮರಣಾರ್ಥ ರಷ್ಯಾದ ರಾಜಧಾನಿ ಮಾಸ್ಕೊದಲ್ಲಿರುವ ರೆಡ್ ಸ್ಕ್ವೇರ್‌ನಲ್ಲಿ ಸಾಂಪ್ರದಾಯಿಕ-ವಾಗಿ ವಿಜಯೋತ್ಸವ ಆಚರಿಸಲು ಭರದ ಸಿದ್ಧತೆಗಳು ನಡಯುತ್ತಿವೆ.

ಮೇ 9ರಂದು ನಡೆಯಲಿರುವ ವಿಜಯೋತ್ಸವ ಪ್ರಯುಕ್ತ ರಷ್ಯಾ ದೇಶದಾದ್ಯಂತ ಬಿಗಿ ಭದ್ರತೆ ಹೆಚ್ಚಿಸಿದೆ. ಉಕ್ರೇನ್ ಮೇಲೆ ಸೇನಾ ಕಾರ್ಯಾಚರಣೆ ನಡೆಸುತ್ತಿರುವ ಕಾರಣಕ್ಕೆ ಈ ಬಾರಿ ದೇಶದ ಅತಿ ದೊಡ್ಡ ನಗರಗಳಾದ ಮಾಸ್ಕೊ ಮತ್ತು ಸೇಂಟ್ ಪೀಟರ್ಸ್ ಬರ್ಗ್‌ನಲ್ಲಿ ಮಾತ್ರ ವಿಜಯೋತ್ಸವದ ಮಿಲಿಟರಿ ಪರೇಡ್ ನಡೆಯಲಿದೆ. ವಿಜಯದ ದಿನಕ್ಕೆ ಮುಂಚಿತವಾಗಿ ಈ ಎರಡೂ ನಗರಗಳಲ್ಲಿ ಡ್ರೋನ್ ಬಳಕೆ ನಿಷೇಧಿಸಲಾಗಿದೆ.

ಭದ್ರತೆಯ ಕಾರಣ ಅಥವಾ ಸದ್ಯದ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಕನಿಷ್ಠ 21 ನಗರಗಳಲ್ಲಿ ಈ ಬಾರಿ ಸೇನಾ ಪಡೆಗಳ ಪರೇಡ್‌ಗಳನ್ನು ರದ್ದುಪಡಿಸ-ಲಾಗಿದೆ. ಅಲ್ಲದೆ, ಸೇಂಟ್ ಪೀಟರ್ಸ್‌ಬರ್ಗ್ ನಗರದ ಕೆಲವು ಭಾಗಗಳಲ್ಲಿ ಮೇ 10ರವರೆಗೂ ನದಿಗಳು, ಕಾಲುವೆಗಳಲ್ಲಿ ಮೋಟಾರ್ ದೋಣಿಗಳ ಸಂಚಾರವನ್ನೂ ನಿಷೇಧಿಸಲಾಗಿದೆ ಎಂದು ಪ್ರಾದೇಶಿಕ ಅಧಿಕಾರಿಗಳ ಹೇಳಿಕೆ ಉಲ್ಲೇಖಿಸಿ ರಷ್ಯಾದ ಮಾಧ್ಯಮಗಳು ವರದಿ ಮಾಡಿವೆ.

ಶಸ್ತ್ರಾಸ್ತ್ರ ಪೂರೈಕೆ: ಚೀನಾ ಕಂಪನಿಗಳ ಮೇಲೆ ನಿರ್ಬಂಧಕ್ಕೆ ಚಿಂತನೆ

ಬ್ರಸೆಲ್ಸ್ (ರಾಯಿಟರ್ಸ್): ರಷ್ಯಾ – ಉಕ್ರೇನ್ ಯುದ್ಧದಲ್ಲಿ ಬಳಸುವ ಶಸ್ತ್ರಾಸ್ತ್ರ ಪೂರೈಕೆಗೆ ಸಂಬಂಧಿಸಿದಂತೆ ಚೀನಾದ ಕೆಲವು ಕಂಪನಿಗಳ ಮೇಲೆ ನಿರ್ಬಂಧವನ್ನು ಹೇರಲು ಐರೋಪ್ಯ ರಾಷ್ಟ್ರಗಳ ಒಕ್ಕೂಟವು (ಇಯು) ಚಿಂತನೆ ನಡೆಸಿದೆ.

ಒಕ್ಕೂಟದ ಸದಸ್ಯ ರಾಷ್ಟ್ರಗಳ ಈ ವಾರದ ಸಭೆಯಲ್ಲಿ ಈ ಬಗ್ಗೆ ಚರ್ಚೆಯಾಗಿದ್ದು, ಏಳು ಕಂಪನಿಗಳ ಪಟ್ಟಿ ಸಿದ್ಧವಾಗಿದೆ ಎಂದು 'ಫೈನಾನ್ಶಿಯಲ್ ಟೈಮ್ಸ್' ವರದಿ ಮಾಡಿದೆ.

ವರದಿ ಪ್ರಕಾರ, ಚೀನಾದ ಎರಡು ಪ್ರಮುಖ ಸಂಸ್ಥೆಗಳು, 3ಎಚ್‌ಸಿ ಸೆಮಿ ಕಂಡಕ್ಟರ್ಸ್, ಕಿಂಗ್ ಪೈ ಟೆಕ್ನಾಲಜಿ, ಹಾಂಗ್‌ಕಾಂಗ್‌ನ ಸಿನ್ನೊ ಎಲೆಕ್ಟ್ರಾನಿಕ್ಸ್, ಸಿಗ್ಮಾ ಟೆಕ್ನಾಲಜಿ, ಏಷ್ಯಾ ಪೆಸಿಫಿಕ್ ಲಿಂಕ್ಸ್, ಟೊರ್ಡಾನ್ ಇಂಡಸ್ಟ್ರಿ, ಆಲ್ಫಾ ಟ್ರೇಡಿಂಗ್ ಇನ್‌ವೆಸ್ಟ್‌ಮೆಂಟ್ ಸೇರಿವೆ.

ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ವಾಂಗ್ ವೆನ್‌ಬಿನ್ ಅವರು, 'ತಪ್ಪು ನಿರ್ಧಾರ ಕೈಗೊಳ್ಳಬಾರದು. ಒಂದು ವೇಳೆ ಕೈಗೊಂಡರೆ ಚೀನಾ ಕೂಡಾ ತನ್ನ ಹಕ್ಕು ಮತ್ತು ಹಿತಾಸಕ್ತಿಗಳ ರಕ್ಷಣೆಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಿದೆ' ಎಂದು ಎಚ್ಚರಿಸಿದ್ದಾರೆ.

ಯೂರೋಪಿಯನ್ ಕಮಿಷನ್ ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸಿಲ್ಲ.

ಟೆಕ್ಸಾಸ್‌ನಲ್ಲಿ ಗುಂಡಿನ ದಾಳಿ: ಹೈದರಾಬಾದ್‌ನ ಐಶ್ವರ್ಯಾ ಸಾವು

ಹ್ಯೂಸ್ಟನ್/ಹೈದರಾಬಾದ್ (ಪಿಟಿಐ): ಅಮೆರಿಕದ ಟೆಕ್ಸಾಸ್‌ನಲ್ಲಿ ಜನದಟ್ಟಣೆ ಇದ್ದ ಮಾಲ್‌ನಲ್ಲಿ ಬಂದೂ-ಕುಧಾರಿಯೊಬ್ಬ ನಡೆಸಿದ ಗುಂಡಿನ ದಾಳಿಯಲ್ಲಿ ಮೃತಪಟ್ಟ 9 ಮಂದಿಯಲ್ಲಿ ಹೈದರಾಬಾದ್‌ನ ಎಂಜಿನಿಯರ್ ಐಶ್ವರ್ಯಾ ತಾಟಿಕೊಂಡ (27) ಸೇರಿದ್ದಾರೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.



ಐಶ್ವರ್ಯಾ ತಾಟಿಕೊಂಡ

ಐಶ್ವರ್ಯಾ ಅವರು ರಂಗಾ ರೆಡ್ಡಿ ಜಿಲ್ಲೆಯ ಜಿಲ್ಲಾ ನ್ಯಾಯಾಲಯದ ನ್ಯಾಯಾಧೀಶರೊ-ಬ್ಬರ ಪುತ್ರಿ. ಐಶ್ವರ್ಯಾ ಅವರು ಟೆಕ್ಸಾಸ್‌ನಲ್ಲಿ ಪ್ರಾಜೆಕ್ಟ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು. ಹೈದರಾಬಾದ್‌ನ ಕಾಲೇಜಿನಲ್ಲಿ ಸಿವಿಲ್ ಎಂಜಿನಿಯರಿಂಗ್ ಪದವಿ, ಅಮೆರಿಕದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರು. ಬಳಿಕ ಅಲ್ಲಿಯೇ ಉದ್ಯೋಗಕ್ಕೆ ಸೇರಿದ್ದರು. ಐಶ್ವರ್ಯಾ ಅವರ ಕುಟುಂಬ ಹೈದರಾಬಾದ್‌ನ ಸರೂರ್‌ನಗರದಲ್ಲಿ ನೆಲೆಸಿದೆ ಎಂದು ನ್ಯಾಯಾಧೀಶರ ಸ್ನೇಹಿತರೊಬ್ಬರು ಮಾಧ್ಯಮಗಳಿಗೆ ತಿಳಿಸಿದ್ದಾರೆ.

'ಶನಿವಾರ ದಾಳಿ ನಡೆಯುವುದಕ್ಕೂ ಮೊದಲು ಐಶ್ವರ್ಯಾ ತನ್ನ ಕುಟುಂಬದ ಸದಸ್ಯರೊಂದಿಗೆ ಮೊಬೈಲ್‌ನಲ್ಲಿ ಮಾತನಾಡಿದ್ದರು. ದಾಳಿಯ ಬಗ್ಗೆ ತಿಳಿದ ನಂತರ ಆಕೆಗೆ ಕರೆ ಮಾಡಿದಾಗ ಆ ಕಡೆಯಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಆಕೆ ಮೃತಪಟ್ಟಿರುವ ಬಗ್ಗೆ ಕುಟುಂಬಕ್ಕೆ ಭಾನುವಾರ ಮಾಹಿತಿ ಸಿಕ್ಕಿದೆ. ಕುಟುಂಬವು ಆಘಾತಗೊಂಡಿದೆ. ಮೃತದೇಹವನ್ನು ಹೈದರಾಬಾದ್‌ಗೆ ತರಲು ಪ್ರಯತ್ನಗಳು ನಡೆಯುತ್ತಿದ್ದು, ಬುಧವಾರ ಭಾರತಕ್ಕೆ ಕಳುಹಿಸುವ ಸಾಧ್ಯತೆ ಇದೆ' ಎಂದು ಅವರು ಹೇಳಿದ್ದಾರೆ.

'ಪರ್ಫೆಕ್ಟ್ ಜನರಲ್ ಕಾಂಟ್ರಾಕ್ಟರ್ಸ್ ಎಲ್‌ಎಲ್‌ಸಿ ಕಂಪನಿಯಲ್ಲಿ ಪ್ರಾಜೆಕ್ಟ್ ಎಂಜಿನಿಯರ್ ಆಗಿ, ಎರಡು ವರ್ಷಗಳಿಂದ ಕೆಲಸ ಮಾಡುತ್ತಿದ್ದ ಐಶ್ವರ್ಯಾ ಟೆಕ್ಸಾಸ್‌ನ ಮೆಕ್‌ಕಿನ್ನಿ ನಗರದಲ್ಲಿ ನೆಲೆಸಿದ್ದರು. ತಮ್ಮ ಸ್ನೇಹಿತನ ಜೊತೆ ಡಲ್ಲಾಸ್‌ನ ಅಲೆನ್ ಪ್ರೀಮಿಯಂ ಔಟ್‌ಲೆಟ್ಸ್ ಮಾಲ್‌ನಲ್ಲಿ ಶಾಪಿಂಗ್ ಮಾಡುತ್ತಿದ್ದಾಗ ಶನಿವಾರ ಮಧ್ಯಾಹ್ನ 3.30ರ ವೇಳೆಗೆ ಬಂದೂಕುಧಾರಿ ಮಾರಿಶಿಯೋ ಗಾರ್ಸಿಯಾ (33) ನಡೆಸಿದ ಗುಂಡಿನ ದಾಳಿಗೆ ಬಲಿಯಾಗಿದ್ದಾರೆ' ಎಂದು 'ನ್ಯೂಯಾರ್ಕ್ ಪೋಸ್ಟ್' ಪತ್ರಿಕೆ ವರದಿ ಮಾಡಿದೆ. ಬಂದೂಕುಧಾರಿಯನ್ನು ಪೊಲೀಸರು ಹತ್ಯೆ ಮಾಡಿದ್ದಾರೆ.

ಐಶ್ವರ್ಯಾ ಜತೆಗಿದ್ದ ಆಕೆಯ ಸ್ನೇಹಿತನಿಗೂ ಗುಂಡೇಟು ತಗುಲಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರ ಸ್ಥಿತಿ ಸ್ಥಿರವಾಗಿದೆ ಎಂದು ವರದಿಯಾಗಿದೆ.

ನೇಪಾಳ: 10 ಭಾರತೀಯರ ಬಂಧನ

ಕಠ್ಮಂಡು(ಪಿಟಿಐ): ನಕಲಿ ದಾಖಲೆಗಳನ್ನು ನೀಡಿ ಅಕ್ರಮವಾಗಿ ನೇಪಾಳದ ಪೌರತ್ವ ಪ್ರಮಾಣಪತ್ರ ಪಡೆದ ಆರೋಪಕ್ಕೆ ಸಂಬಂಧಿಸಿದಂತೆ ಮೂವರು ಮಹಿಳೆಯರು ಸೇರಿ ಹತ್ತು ಮಂದಿ ಭಾರತೀಯ ಪ್ರಜೆಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ತನಿಖಾಧಿಕಾರಿಗಳ ತಂಡವು ವಿವಿಧೆಡೆ ಕಾರ್ಯಾಚರಣೆ ನಡೆಸಿ ಶನಿವಾರ ಬಂಧಿಸಿದೆ. ಅವರೆಲ್ಲರೂ ಬಿಹಾರ ಮೂಲದವರು' ಎಂದು ಡಿವೈಎಸ್‌ಪಿ ರವೀಂದ್ರ ರೆಗ್ಮಿ ಅವರು ತಿಳಿಸಿದ್ದಾರೆ.

ಬಂಧಿತರು ನಕಲಿ ದಾಖಲೆ ಸಲ್ಲಿಸಿ ರುಪಾಂದೇಹಿ, ಬರಾ ಮತ್ತು ಪರ್ಸಾ ಜಿಲ್ಲಾಡಳಿತಗಳಿಂದ ಅಕ್ರಮವಾಗಿ ಪೌರತ್ವ ಪ್ರಮಾಣಪತ್ರ ಪಡೆದಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಬಂಧಿತರು ಹಲವರು ವರ್ಷಗಳಿಂದ ನೇಪಾಳದಲ್ಲಿ ನೆಲೆಸಿದ್ದಾರೆ. ಇವರಿಂದ ನೇಪಾಳ ಪೌರತ್ವ ಪ್ರಮಾಣಪತ್ರ, ಮತದಾನ ಗುರುತಿನ ಚೀಟಿ, ಭಾರತೀಯ ಪಾಸ್‌ಪೋರ್ಟ್, ಆಧಾರ್ ಕಾರ್ಡ್‌ಗಳನ್ನು ವಶಪಡಿಸಿ-ಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

276 ದಿನದ ಬಳಿಕ ಭೂಮಿಗೆ ಮರಳಿದ ಚೀನಾ ಬಾಹ್ಯಾಕಾಶ ನೌಕೆ

ಬೀಜಿಂಗ್ (ರಾಯಿಟರ್ಸ್): ಪ್ರಯೋಗಾರ್ಥ ಅಂತರಿಕ್ಷಕ್ಕೆ ಕಳುಹಿಸಲಾಗಿದ್ದ ಚೀನಾದ ಬಾಹ್ಯಾಕಾಶ ನೌಕೆಯು, 276 ದಿನಗಳ ಬಳಿಕ ಭೂಮಿಗೆ ಮರಳಿದೆ.



ಈ ಮೂಲಕ ಅಂತರಿಕ್ಷ ತಂತ್ರಜ್ಞಾನಗಳ ಮರುಬಳಕೆ ಕಾರ್ಯತಂತ್ರ ಕುರಿತ ದೇಶದ ಯೋಜನೆ ಯಶಸ್ವಿಯಾಗಿದೆ ಎಂದು ಚೀನಾದ ಮಾಧ್ಯಮ ವರದಿ ಮಾಡಿದೆ.

ಈ ಬಾಹ್ಯಾಕಾಶ ನೌಕೆ ಮೂಲಕ ಯಾವ ತಂತ್ರಜ್ಞಾನಗಳ ಪ್ರಾಯೋಗಿಕ ಪರೀಕ್ಷೆಯಾಯಿತು, ಎಷ್ಟು ಎತ್ತರಕ್ಕೆ ಬಾಹ್ಯಾಕಾಶ ನೌಕೆ ಏರಿತ್ತು, ಆಗಸ್ಟ್ 2022ರಲ್ಲಿ ಉಡಾವಣೆಯಾದ ಬಳಿಕ ಕಕ್ಷೆಯ ಯಾವ ಭಾಗದಲ್ಲಿ ನೆಲೆಗೊಂಡಿತ್ತು ಎಂಬ ವಿವರಗಳನ್ನು ಬಹಿರಂಗಪಡಿಸಲಾಗಿಲ್ಲ.

ಆದರೆ, ಅಂತರಿಕ್ಷ ತಂತ್ರಜ್ಞಾನದ ಮರುಬಳಕೆ ಕುರಿತ ಚೀನಾದ ಸಂಶೋಧನೆಯಲ್ಲಿ ಇದು ಮಹತ್ವದ ಹೆಜ್ಜೆಯಾಗಿದ್ದು, ಭವಿಷ್ಯದಲ್ಲಿ ಬಾಹ್ಯಾಕಾಶ ಯೋಜನೆಗಳಿಗೆ ನೆರವಾಗಲಿದೆ. ಬಾಹ್ಯಾಕಾಶ ಕಾರ್ಯಕ್ರಮದ ವೆಚ್ಚ ತಗ್ಗಿಸಲು ಇದು ಸಹಕಾರಿಯಾಗಲಿದೆ ಎಂದು ವರದಿ ತಿಳಿಸಿದೆ.

2021ರಲ್ಲಿಯೂ ಇಂತಹದೇ ಬಾಹ್ಯಾಕಾಶ ನೌಕೆಯನ್ನು ಉಡಾವಣೆ ಮಾಡಲಾಗಿತ್ತು. ಆದರೆ, ಅದು ಒಂದೇ ದಿನದಲ್ಲಿ ಭೂಮಿಗೆ ಮರಳಿತ್ತು. ಅದರ ವಿವರಗಳು ಬಹಿರಂಗ ಆಗಿರಲಿಲ್ಲ.

ಆದರೆ, ಜಾಲತಾಣಗಳಲ್ಲಿ ಈ ಬೆಳವಣಿಗೆ ಕುರಿತು ಪ್ರತಿಕ್ರಿಯಿಸಿರುವವರು, ಚೀನಾವು ಅಮೆರಿಕದ ಎಕ್ಸ್–37ಬಿ ಸ್ವರೂಪದ ಬಾಹ್ಯಾಕಾಶ ನೌಕೆ ಸಜ್ಜುಗೊಳಿಸುತ್ತಿದೆ. ಇದು, ವರ್ಷಗಳ ಕಾಲ ಕಕ್ಷೆಯಲ್ಲಿ ಉಳಿಯುವ ಸಾಮರ್ಥ್ಯ ಹೊಂದಿರಲಿದೆ ಎಂದು ಹೇಳಿದ್ದಾರೆ.

ನೌಕಾಪಡೆ ತಾಲೀಮು ತಾಣ ಪ್ರವೇಶಿಸಿದ ಚೀನಾದ ದೋಣಿ

ನವದೆಹಲಿ / ಹನೋಯಿ (ರಾಯಿಟರ್ಸ್): ಭಾರತ –ಆಸಿಯಾನ್ ರಾಷ್ಟ್ರಗಳ ನೌಕಾಪಡೆಗಳ ತಾಲೀಮು ನಡೆಸುತ್ತಿದ್ದ ದಕ್ಷಿಣ ಚೀನಾ ಸಮುದ್ರ ವ್ಯಾಪ್ತಿಗೆ ಚೀನಾದ ನೌಕಾಪಡೆಗೆ ಸೇರಿದ ದೋಣಿ ಪ್ರವೇಶಿಸಿತ್ತು.

ಸೋಮವಾರ ಈ ಘಟನೆ ನಡೆದಿದ್ದು, ನೌಕಾಪಡೆಗಳ ತಾಲೀಮು ಚಟುವಟಿಕೆಗೆ ಭಂಗ ತರುವುದು ಚೀನಾದ ಉದ್ದೇಶವಾಗಿರುವಂತಿದೆ ಎಂದು ವಿಯೆಟ್ನಾಂನ ಪರಿಣತರೊಬ್ಬರು ಅಭಿಪ್ರಾಯಪಟ್ಟರು.

ದೋಣಿ ಪ್ರವೇಶದ ಉದ್ದೇಶ ಕುರಿತಂತೆ ಚೀನಾ ಪ್ರತಿಕ್ರಿಯೆ ನೀಡಿಲ್ಲ. ಈ ಕುರಿತು ಪ್ರತಿಕ್ರಿಯಿಸಲು ಭಾರತ ಮತ್ತು ವಿಯೆಟ್ನಾಂ ಸರ್ಕಾರಗಳು ನಿರಾಕರಿಸಿವೆ.

ಆಸಿಯಾನ್ ದೇಶಗಳ ನೌಕಾಪಡೆ ತಾಲೀಮು (ಎಐಎಂಇ 2023) ಭಾನುವಾರ ಇಲ್ಲಿ ಆರಂಭವಾಗಿದೆ. ಭಾರತ, ವಿಯೆಟ್ನಾಂ, ಥಾಯ್ಲೆಂಡ್, ಫಿಲಿಪ್ಪೀನ್ಸ್, ಇಂಡೋನೇಷ್ಯಾ, ಬ್ರೂನೆ ದೇಶಗಳು ಈ ನೌಕಾಪಡೆಗಳ ತಾಲೀಮಿನಲ್ಲಿ ಭಾಗವಹಿಸಿವೆ.

ಭಾರತದ ನೌಕಾಪಡೆಯು ಚೀನಾದ ಕನಿಷ್ಠ ಐದು ದೋಣಿಗಳ ಸಂಚಾರವನ್ನು ಗುರುತಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ದಕ್ಷಿಣ ಚೀನಾದ ಸ್ಟ್ಯಾನ್‌ಫೋರ್ಡ್ ಯೂನಿವರ್ಸಿಟಿಯ ಮ್ಯೊಷು ಯೋಜನೆಯ ನೇತೃತ್ವ ವಹಿಸಿರುವ ರೇ ಪೋವೆಲ್ ಅವರು, ದೋಣಿಯು ಕ್ವಿಯೊಂಗ್ ಸಾನ್ಷಾ ಯು ಸೇನೆ ತುಕಡಿಗೆ ಸೇರಿದ್ದಾಗಿದೆ ಎಂದು ಮಾಹಿತಿ ನೀಡಿದರು.

ಸಂಕ್ಷಿಪ್ತ ಸುದ್ದಿ

ಪಾಕ್: 12ರಂದು ಭಾರತೀಯ ಮೀನುಗಾರರ ಬಿಡುಗಡೆ

ಕರಾಚಿ (ಪಿಟಿಐ): ಪಾಕಿಸ್ತಾನದಲ್ಲಿ ಅಕ್ರಮವಾಗಿ ಮೀನುಗಾರಿಕೆಯಲ್ಲಿ ತೊಡಗಿದ್ದ ಆರೋಪದಡಿ ಬಂಧಿತರಾಗಿರುವ 199 ಭಾರತೀಯ ಮೀನುಗಾರರನ್ನು ಮೇ 12ರಂದು ಬಿಡುಗಡೆ ಮಾಡುವುದಾಗಿ ಪಾಕಿಸ್ತಾನ ಹೇಳಿದೆ. ಬಂಧಿತರ ಪೈಕಿ ಒಬ್ಬರು ಮೃತಪಟ್ಟ ಬೆನ್ನಲ್ಲೇ ಅಧಿಕಾರಿಗಳು ಈ ಹೇಳಿಕೆ ನೀಡಿದ್ದಾರೆ.

ಪ್ರಸ್ತುತ ಲಾಂಧಿ ಜೈಲಿನಲ್ಲಿರುವ ಭಾರತೀಯ ಮೀನುಗಾರರನ್ನು ಶುಕ್ರವಾರ ವಾಘಾ ಗಡಿಯ ಮೂಲಕ ಭಾರತೀಯ ಅಧಿಕಾರಿಗಳ ಸುಪರ್ದಿಗೆ ಒಪ್ಪಿಸಲಾಗುವುದು. ಬಿಡುಗಡೆಗೆ ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳಲು ಸಂಬಂಧಪಟ್ಟ ಸಚಿವಾಲಯಕ್ಕೆ ಸೂಚಿಸಲಾಗಿದೆ ಎಂದು ಸಿಂಧ್‌ನ ಕಾರಾಗೃಹ ಇಲಾಖೆಯ ಹಿರಿಯ ಅಧಿಕಾರಿ ಖಾಗಿ ನಜೀರ್ ಅವರು ಮಾಹಿತಿ ನೀಡಿದ್ದಾರೆ.

ಬಿಡುಗಡೆ ಆಗಬೇಕಾದವರ ಪಟ್ಟಿಯಲ್ಲಿದ್ದ ಜುಲ್ಫೀಕರ್ ಅನಾರೋಗ್ಯದಿಂದ ಕರಾಚಿ ಆಸ್ಪತ್ರೆಯಲ್ಲಿ ಶನಿವಾರ ಮೃತಪಟ್ಟಿದ್ದಾರೆ.

ಶಾಂತಿ ಮತ್ತು ಪ್ರಜಾಪ್ರಭುತ್ವಕ್ಕೆ ಸಂಬಂಧಿಸಿದ ಪಾಕಿಸ್ತಾನ– ಭಾರತ ನಾಗರಿಕರ ವೇದಿಕೆ ಪ್ರಕಾರ, ಒಟ್ಟು 654 ಭಾರತೀಯ ಮೀನುಗಾರರು ಕರಾಚಿ ಜೈಲಿನಲ್ಲಿದ್ದಾರೆ. ಈ ಪೈಕಿ 631 ಮಂದಿಯ ಶಿಕ್ಷೆ ಅವಧಿ ಪೂರ್ಣಗೊಂಡಿದ್ದು, ಬಿಡುಗಡೆಗಾಗಿ ಕಾಯುತ್ತಿದ್ದಾರೆ.

ಭಾರತದ ಜೈಲುಗಳಲ್ಲಿ ಪಾಕಿಸ್ತಾನದ 83 ಮೀನುಗಾರರು ಇದ್ದಾರೆ ಎನ್ನಲಾಗಿದೆ.

ಚೀನಾದಲ್ಲಿ ಚಾಟ್‌ಜಿಪಿಟಿ ದುರ್ಬಳಕೆ: ಬಂಧನ

ಬೀಜಿಂಗ್ (ಪಿಟಿಐ): ಚಾಟ್‌ಜಿಪಿಟಿ ತಂತ್ರಜ್ಞಾನದ ದುರ್ಬಳಕೆ ಆರೋಪ ಸಂಬಂಧ ಇದೇ ಮೊದಲ ಬಾರಿಗೆ ವ್ಯಕ್ತಿಯೊಬ್ಬನನ್ನು ಚೀನಾ ಪೊಲೀಸರು ಬಂಧಿಸಿದ್ದಾರೆ.

ಆರೋಪಿ ರೈಲು ಅವಘಡದ ಸುಳ್ಳು ಸುದ್ದಿ ಸೃಷ್ಟಿಸಿ ಅದನ್ನು ಕೃತಕ ಬುದ್ಧಿಮತ್ತೆ ಬಳಸಿ ವಿವಿಧ ಆನ್‌ಲೈನ್ ವೇದಿಕೆಗಳಲ್ಲಿ ಹಂಚಿಕೊಂಡಿದ್ದ ಎಂದು ವರದಿ ಆಗಿದೆ.

ನಕಲಿ ಸುದ್ದಿಯಲ್ಲಿ ಏಪ್ರಿಲ್ 25ರಂದು ನಡೆದ ರೈಲು ಅವಘಡದಲ್ಲಿ ಒಂಬತ್ತು ಮಂದಿ ಮೃತಪಟ್ಟಿದ್ದಾರೆ ಎಂದು ಹೇಳಲಾಗಿತ್ತು ಎಂದು ದಕ್ಷಿಣ ಚೀನಾ ಮಾರ್ನಿಂಗ್ ಪೋಸ್ಟ್ ಸುದ್ದಿ ಪತ್ರಿಕೆಯು ವರದಿ ಮಾಡಿದೆ.

ಟೈಗರ್ ಕಪ್ ಕ್ರಿಕೆಟ್: ಪ್ಲೇ ಸ್ಮಾರ್ಟ್‌ಗೆ ಜಯ

ಬೆಂಗಳೂರು: ಪ್ಲೇ ಸ್ಮಾರ್ಟ್ ತಂಡವು ಟೈಗರ್ ಕಪ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಜಯ ಗಳಿಸಿತು.ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿ ಮೈದಾನದಲ್ಲಿ ಸೋಮವಾರ ನಡೆದ 12 ವರ್ಷದೊಳಗಿನವರ ಸೆಮಿಫೈನಲ್ ಪಂದ್ಯದಲ್ಲಿ ಪ್ಲೇ ಸ್ಮಾರ್ಟ್ 9 ವಿಕೆಟ್‌ಗಳಿಂದ ಮಾಗಡಿ ಕ್ರಿಕೆಟ್ ಅಕಾಡೆಮಿಯನ್ನು ಸೋಲಿಸಿತು.

ಇನ್ನೊಂದು ಪಂದ್ಯದಲ್ಲಿ ಕೆಸಿಸಿ ಗುರುಕುಲ 38 ರನ್‌ಗಳಿಂದ ಬೆಳಗಾವಿಯ ಯೂನಿಯನ್ ಜಿಮ್ಖಾನಾ ತಂಡವನ್ನು ಮಣಿಸಿತು.

ಸಂಕ್ಷಿಪ್ತ ಸ್ಕೋರು: ಮಾಗಡಿ ಕ್ರಿಕೆಟ್ ಅಕಾಡೆಮಿ: 27.2 ಓವರ್‌ಗಳಲ್ಲಿ 82 (ಸಂಜಿತ್ ಸತೀಶ್ 25; ಶ್ಲೋಕ್ ಚಡಿಚಲ್ 9ಕ್ಕೆ 2, ಜಯಪ್ರೀತ್ 3ಕ್ಕೆ 2). ಪ್ಲೇ ಸ್ಮಾರ್ಟ್: 15.4 ಓವರ್‌ಗಳಲ್ಲಿ 1 ವಿಕೆಟ್‌ಗೆ 86 (ಪವನದೀಪ್ ಆರ್. 57)

ಗುರುಕುಲ: 30 ಓವರ್‌ಗಳಲ್ಲಿ 4ಕ್ಕೆ 189 (ನೀರಜ್ 83, ದೀಪ್ 79). ಯೂನಿಯನ್ ಜಿಮ್ಖಾನಾ: 37.3 ಓವರ್‌ಗಳಲ್ಲಿ 151 (ಫರ್ಹಾನ್ ಶೇಖ್ 52; ನೀರಜ್ 13ಕ್ಕೆ 3).


ಐಒಎ ಅಡ್‌ಹಾಕ್ ಸಮಿತಿಯಿಂದ ಕುಸ್ತಿ ಚಟುವಟಿಕೆಗೆ ಚಾಲನೆ

ಅಭ್ಯಾಸ ಆರಂಭಿಸಿದ ಕುಸ್ತಿಪಟುಗಳು

ನವದೆಹಲಿ (ಪಿಟಿಐ): ಭಾರತದ ಪ್ರಮುಖ ಕುಸ್ತಿಪಟುಗಳಾದ ಬಜರಂಗ್ ಪೂನಿಯಾ ಮತ್ತು ವಿನೇಶಾ ಫೋಗಟ್ ಅವರು ಏಷ್ಯನ್ ಗೇಮ್ಸ್ ಟ್ರಯಲ್ಸ್‌ಗೆ ಸಿದ್ಧತೆ ನಡೆಸಲು ಸೋಮವಾರ ಮ್ಯಾಟ್‌ನಲ್ಲಿ ಅಭ್ಯಾಸ ಆರಂಭಿಸಿದರು. ಇದೇ ವೇಳೆ ಭಾರತ ಒಲಿಂಪಿಕ್ ಸಂಸ್ಥೆ ನಿಯೋಜಿಸಿರುವ ಅಡ್–ಹಾಕ್ ಸಮಿತಿಯು ಏಷ್ಯನ್ ಚಾಂಪಿಯನ್‌ಷಿಪ್ (17 ಮತ್ತು 23 ವರ್ಷದೊಳಗಿನವರ) ಟ್ರಯಲ್ಸ್‌ಗೆ ದಿನಾಂಕ ಅಂತಿಮಗೊಳಿಸುವ ಮೂಲಕ ಕುಸ್ತಿ ಚಟುವಟಿಕೆಗಳ ಪುನರಾರಂಭಕ್ಕೆ ಚಾಲನೆ ಕೊಟ್ಟಿದೆ.

15 ದಿನಗಳಲ್ಲಿ ಇದೇ ಮೊದಲ ಬಾರಿ ಬಜರಂಗ್ ಮತ್ತು ವಿನೇಶಾ ಅವರು ಸಹ ಕುಸ್ತಿಪಟುಗಳ ಜೊತೆ ಮ್ಯಾಟ್ ಮೇಲೆ ಅಭ್ಯಾಸ ನಡೆಸಿದರು.

ಜನವರಿಯಿಂದೀಚೆಗೆ ಬಜರಂಗ್ ಮತ್ತು ವಿನೇಶಾ ಅವರು ಯಾವುದೇ ಅಂತರಾಷ್ಟ್ರೀಯ ಟೂರ್ನಿಯಲ್ಲಿ ಭಾಗವಹಿಸಿಲ್ಲ. ಭಾರತ ಕ್ರೀಡಾ ಪ್ರಾಧಿಕಾರ (ಎಸ್‌ಎಐ) ಈ ಇಬ್ಬರು ಕುಸ್ತಿಪಟುಗಳ ಮನವಿ ಮೇರೆಗೆ ತರಬೇತಿ ಮತ್ತು ಅಂತರರಾಷ್ಟ್ರೀಯ ಅನುಭವ ಉದ್ದೇಶದಿಂದ ವಿದೇಶ ಪ್ರವಾಸಕ್ಕೆ ಸಮ್ಮತಿ ನೀಡಿದೆ. ಆದರೆ ಅವರು ಹೋಗಿರಲಿಲ್ಲ.



ಬಜರಂಗ್ ಪೂನಿಯಾ



ವಿನೇಶಾ ಫೋಗಟ್

'ಪಟ್ಟು' ಸಡಿಲಿಸಿದ ಪೈಲ್ವಾನರು: ತಮ್ಮ ಬೇಡಿಕೆ ಈಡೇರುವವರೆಗೆ ತಾವು ಯಾವುದೇ ತರಬೇತಿ ಅಥವಾ ಟೂರ್ನಿಯಲ್ಲಿ ಭಾಗವಹಿಸುವುದಿಲ್ಲ ಎಂದು ತೀರಾ ಇತ್ತೀಚಿನವರೆಗೂ ತಾರಾ ಕುಸ್ತಿಪಟುಗಳು ಪಟ್ಟುಹಿಡಿದಿದ್ದರು.

ಆದರೆ, 'ಇನ್ನು ಮುಂದೆ ತರಬೇತಿ ಆರಂಭಿಸುತ್ತೇವೆ ಮತ್ತು ಯಾವುದೇ ಟೂರ್ನಿ ತಪ್ಪಿಸಿಕೊಳ್ಳುವುದಿಲ್ಲ' ಎಂದು ವಿನೇಶಾ ಭಾನುವಾರ ಹೇಳಿದ್ದಾರೆ.

ಸಮೀಪದ ಕ್ರೀಡಾಂಗಣದ-ಲ್ಲಿ ಬಜರಂಗ್ ಅವರು ಜಿತೇಂದರ್ ಕಿನ್ಹಾ ಜೊತೆ ಅಭ್ಯಾಸ ನಡೆಸಿದರು. ವಿನೇಶಾ ಅವರು ತಮ್ಮ ಸೋದರಿ ಸಂಗೀತಾ ಫೋಗಟ್ ಮತ್ತು ರಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಸಾಕ್ಷಿ ಮಲಿಕ್ ಅವರೊಡನೆ ತಾಲೀಮಿನಲ್ಲಿ ತೊಡಗಿದರು. ಸತ್ಯವ್ರತ ಕಡಿಯಾನ್ ಅವರು ತಮ್ಮ ಸಹೋದರ ಸೋಮವೀರ್ ಜೊತೆ ಕುಸ್ತಿ ಅಭ್ಯಾಸ ನಡೆಸಿದರು.

ಆದರೆ ಬಿಷ್ಕೆಕ್‌ನಲ್ಲಿ (ಕಿರ್ಗಿಸ್ತಾನ) ಜೂನ್ 1ರಿಂದ 4ರವರೆಗೆ ನಡೆಯಲಿರುವ ಯುಡಬ್ಲ್ಯುಡಬ್ಲ್ಯು ರ್‍ಯಾಂಕಿಂಗ್ ಕುಸ್ತಿ ಸರಣಿ ಸ್ಪರ್ಧೆಗೆ ಭಾರತ ತಂಡವನ್ನು ಈಗಾಗಲೇ ಅಂತಿಮಗೊ-ಳಿಸಲಾಗಿದೆ. ಏಪ್ರಿಲ್‌ನಲ್ಲಿ ಕಜಕಸ್ತಾನದ ಅಸ್ತಾನಾದಲ್ಲಿ ನಡೆದ ಏಷ್ಯನ್ ಚಾಂ-ಪಿಯನ್‌ಷಿಪ್‌ನಲ್ಲಿ ಪಾಲ್ಗೊಂಡ ತಂಡವನ್ನೇ ಅಲ್ಲಿಗೂ ಆಯ್ಕೆ ಮಾಡಲಾಗಿದೆ. ಭಾರತದ ಸ್ಪರ್ಧಿಗಳು ಏಷ್ಯನ್ ಕೂಟದಲ್ಲಿ 14 ಪದಕಗಳನ್ನು ಗೆದ್ದುಕೊಂಡಿದ್ದರು.

ಪ್ರತಿಭಟನೆಯಲ್ಲಿದ್ದ ಕಾರಣ ಬಜರಂಗ್, ವಿನೇಶಾ, ಸಾಕ್ಷಿ, ಸತ್ಯವ್ರತ್ ಮತ್ತು ಸಂಗೀತಾ ಅಸ್ತಾನಾದಲ್ಲಿ ಪಾಲ್ಗೊಂಡ ಭಾರತ ತಂಡದಲ್ಲಿ ಇರಲಿಲ್ಲ.

ಚಟುವಟಿಕೆಗೆ ಚಾಲನೆ: ಕುಸ್ತಿ ಫೆಡರೇಷನ್ ದೈನಂದಿನ ವ್ಯವಹಾರಗಳನ್ನು ನಡೆಸಲು ಐಒಎ ರೂಪಿಸಿರುವ ಅಡ್‌ಹಾಕ್ ಸಮಿತಿ, ತರಬೇತುದಾರರ ಮತ್ತು ಭಾರತ ಕ್ರೀಡಾ ಪ್ರಾಧಿಕಾರದ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿದೆ. ಅಡ್‌ಹಾಕ್ ಸಮಿತಿ ಸದಸ್ಯೆಯಾಗಿರುವ ರಾಷ್ಟ್ರೀಯ ಶೂಟಿಂಗ್ ಕೋಚ್ ಸುಮಾ ಶಿರೂರು ಅವರು ಉಪಸ್ಥಿತರಿರಲಿಲ್ಲ. ಆದರೆ ಮತ್ತೊಬ್ಬ ಸದಸ್ಯ ಭೂಪೇಂದ್ರ ಸಿಂಗ್ ಬಾಜ್ವಾ ಅವರು ಕೋಚ್‌ಗಳ ಜೊತೆ ಮುಂದಿನ ದಾರಿ ಏನಿರಬೇಕೆಂದು ಚರ್ಚಿಸಿದರು.

ಬಿಷ್ಕೆಕ್‌ನಲ್ಲಿ ಜೂನ್ 10ರಿಂದ 18ರವರೆಗೆ ನಡೆಯುವ ಏಷ್ಯಾ 17 ಮತ್ತು 23 ವರ್ಷದೊಳಗಿನವರ ಚಾಂಪಿಯನ್‌ಷಿಪ್‌ಗೆ ಇದೇ ತಿಂಗಳ 17 ರಿಂದ 19ರವರೆಗೆ ಇಂದಿರಾ ಗಾಂಧಿ ಕ್ರೀಡಾಂಗಣದಲ್ಲಿ ಟ್ರಯಲ್ಸ್ ನಡೆಸಲು ಸಮಿತಿ ನಿರ್ಧರಿಸಿದೆ. ಸೀನಿಯರ್ ಕುಸ್ತಿಪಟುಗಳಿಗೆ ರಾಷ್ಟ್ರೀಯ ಶಿಬಿರ ಪುನರಾರಂಭಿಸುವ ಬಗ್ಗೆಯೂ ಮಾತುಕತೆ ನಡೆಯಿತು. ಈ ಬಗ್ಗೆ ಕ್ರೀಡಾ ಪ್ರಾಧಿಕಾರ ಅಂತಿಮ ನಿರ್ಧಾರ ಕೈಗೊಳ್ಳಲಿದೆ.

ಎಚ್‌ಬಿಆರ್, ಮೌಂಟ್ಸ್‌ಗೆ ಪ್ರಶಸ್ತಿ

ಬೆಂಗಳೂರು: ಎಚ್‌ಬಿಆರ್ ಕ್ಲಬ್ ಮತ್ತು ಮೌಂಟ್ಸ್ ಕ್ಲಬ್ ತಂಡದವರು ರಾಜ್ಯ ಯೂತ್ (16 ವರ್ಷದೊಳಗಿ-ವರ) ಬ್ಯಾಸ್ಕೆಟ್‌ಬಾಲ್ ಟೂರ್ನಿ ಯಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ವಿಭಾಗಗಳಲ್ಲಿ ಚಾಂಪಿಯನ್ ಆದರು.

ಕಂಠೀರವ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಬಾಲಕರ ವಿಭಾಗದ ತನ್ನ ಕೊನೆಯ ಸೆಮಿಫೈನಲ್ ಲೀಗ್ ಪಂದ್ಯದಲ್ಲಿ ಎಚ್‌ಬಿಆರ್ ತಂಡ 50–36 ರಲ್ಲಿ ಮೈಸೂರಿನ ಆಲ್‌ಸ್ಟಾರ್ ಅಕಾಡೆಮಿ ತಂಡವನ್ನು ಮಣಿಸಿತು. ಪಿಪಿಸಿ ಎರಡನೇ ಸ್ಥಾನ ಪಡೆದರೆ, ಆಲ್‌ಸ್ಟಾರ್ ಮೂರನೇ ಸ್ಥಾನ ಗಳಿಸಿತು.

ಬಾಲಕಿಯರ ವಿಭಾಗದ ಪಂದ್ಯದಲ್ಲಿ ಮೌಂಟ್ಸ್ ಕ್ಲಬ್ 73–68 ರಲ್ಲಿ ಸದರ್ನ್ ಬ್ಲೂಸ್ ತಂಡವನ್ನು ಸೋಲಿಸಿತು. ನಿಧಿ (23 ಪಾಯಿಂಟ್ಸ್) ಮತ್ತು ನಕ್ಷತ್ರಾ (21) ಗಮನ ಸೆಳೆದರು.

ಸದರ್ನ್ ಬ್ಲೂಸ್ ಮತ್ತು ಬೆಂಗಳೂರು ವ್ಯಾಂಗಾರ್ಡ್ಸ್ ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನ ಪಡೆದುಕೊಂಡವು.

ಬ್ಯಾಂಕ್ ಆಫ್ ಬರೋಡಕ್ಕೆ ಪ್ರಶಸ್ತಿ: ಬ್ಯಾಂಕ್ ಆಫ್ ಬರೋಡ ತಂಡವು 'ಎ' ಡಿವಿಷನ್ ಲೀಗ್ ಟೂರ್ನಿಯ ಫೈನಲ್‌ನಲ್ಲಿ 80–67 ರಲ್ಲಿ ಯಂಗ್ ಓರಿಯನ್ಸ್ ಕ್ಲಬ್ ತಂಡವನ್ನು ಮಣಿಸಿ ಚಾಂಪಿಯನ್ ಆಯಿತು.

ಹಾಕಿ ತಂಡಕ್ಕೆ ಸವಿತಾ ನೇತೃತ್ವ

ನವದೆಹಲಿ: ಆಸ್ಟ್ರೇಲಿಯಾ ಪ್ರವಾಸ ಕೈಗೊಳ್ಳಲಿರುವ 20 ಮಂದಿ ಆಟಗಾರ್ತಿಯರ ಭಾರತ ತಂಡವನ್ನು ಹಾಕಿ ಇಂಡಿಯಾ ಸೋಮವಾರ ಪ್ರಕಟಿಸಿದೆ. ಆಡಿಲೇಡ್‌ನಲ್ಲಿ ಮೇ 18ರಂದು ಮೂರು ಪಂದ್ಯಗಳ ಸರಣಿಯ ಮೊದಲ ಪಂದ್ಯವನ್ನು ಭಾರತ ಆಡಲಿದೆ.

ಆಸ್ಟ್ರೇಲಿಯಾ ವಿರುದ್ಧ ಸರಣಿಯ ನಂತರ ಭಾರತವು, ಆಸ್ಟ್ರೇಲಿಯಾ 'ಎ' ತಂಡದ ವಿರುದ್ಧ ಎರಡು ಪಂದ್ಯಗಳನ್ನು ಆಡಲಿದೆ. ಚೀನಾದ ಹಾಂಗ್‌ಝೌನಲ್ಲಿ ನಡೆಯಲಿರುವ ಏಷ್ಯನ್ ಕ್ರೀಡಾಕೂಟಕ್ಕೆ ಸಿದ್ಧತೆಯ ಭಾಗವಾಗಿ ಈ ಪ್ರವಾಸ ಹಮ್ಮಿಕೊಳ್ಳಲಾಗಿದೆ.

ಇತ್ತೀಚೆಗಷ್ಟೇ ಬಲಬೀರ್ ಸಿಂಗ್ ಸೀನಿಯರ್ ಹಾಕಿ ಇಂಡಿಯಾ ವರ್ಷದ ಆಟಗಾರ್ತಿ ಗೌರವಕ್ಕೆ ಪಾತ್ರರಾಗಿರುವ ಅನುಭವಿ ಗೋಲ್‌ಕೀಪರ್ ಸವಿತಾ ಅವರು ತಂಡದ ನೇತೃತ್ವ ವಹಿಸುವರು. ರಕ್ಷಣಾ ಆಟಗಾರ್ತಿ ದೀಪ್ ಗ್ರೇಸ್ ಎಕ್ಕಾ ಅವರು ಉಪನಾಯಕಿ ಆಗಿದ್ದಾರೆ.

ಬಿಚುದೇವಿ ಕರಿಬಮ್ ತಂಡದ ಎರಡನೇ ಗೋಲ್‌ಕೀಪರ್ ಆಗಿದ್ದಾರೆ. ದೀಪ್ ಗ್ರೇಸ್ ಜೊತೆ ನಿಕ್ಕಿ ಪ್ರಧಾನ್, ಇಶಿಕಾ ಚೌಧರಿ, ಉದಿತಾ ಮತ್ತು ಗುರ್ಜಿತ್ ಕೌರ್ ರಕ್ಷಣಾ ವಿಭಾಗದಲ್ಲಿ ಇದ್ದಾರೆ. ನಿಶಾ, ನವಜ್ಯೋತ್ ಕೌರ್,



ಸವಿತಾ ಪೂನಿಯಾ –ಪಿಟಿಐ ಚಿತ್ರ

ಮೋನಿಕಾ, ಸಲಿಮಾ ಟೆಟೆ, ನೇಹಾ, ನವನೀತ್ ಕೌರ್, ಸೋನಿಕಾ, ಜ್ಯೋತಿ ಮತ್ತು ಬಲಜೀತ್ ಕೌರ್ ಅವರು ಮಿಡ್‌ಫೀಲ್ಡರ್‌ಗಳಾಗಿ ತಂಡದಲ್ಲಿದ್ದಾರೆ.

ಅನುಭವಿ ಆಟಗಾರ್ತಿ ವಂದನಾ ಕಟಾರಿಯಾ ಜೊತೆಗೆ ಲಾಲ್‌ರೆಮ್‌ಸಿಯಾಮಿ, ಸಂಗೀತಾ ಕುಮಾರಿ ಮತ್ತು ಶರ್ಮಿಳಾ ದೇವಿ ಫಾರ್ವರ್ಡ್‌ಗಳಾಗಿದ್ದಾರೆ.

ಭಾರತ ಮೇ 18, 20 ಮತ್ತು 21ರಂದು ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ. ಮೇ 25 ಮತ್ತು 27ರಂದು ಆಸ್ಟ್ರೇಲಿಯಾ 'ಎ' ತಂಡದ ವಿರುದ್ಧ ಆಡಲಿದೆ. ಈ ಐದೂ ಪಂದ್ಯಗಳು ಅಡಿಲೇಡ್‌ನಲ್ಲಿ ನಡೆಯಲಿವೆ.

ವೇಟ್‌ಲಿಫ್ಟಿಂಗ್: ಅಜಿತ್‌ಗೆ ಅಗ್ರಸ್ಥಾನ

ಜಿಂಜು, ಕೊರಿಯಾ (ಪಿಟಿಐ): ಭಾರತದ ಅಜಿತ್ ನಾರಾಯಣ ಮತ್ತು ಅಚಿಂತಾ ಶೆವುಲಿ ಅವರು ಏಷ್ಯನ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನ 'ಗುಂಪು ಬಿ' ಪುರುಷರ 73 ಕೆ.ಜಿ. ವಿಭಾಗದಲ್ಲಿ ಕ್ರಮವಾಗಿ ಮೊದಲ ಎರಡು ಸ್ಥಾನಗಳನ್ನು ಪಡೆದರು.

ಸೀನಿಯರ್ ವಿಭಾಗದಲ್ಲಿ ಇದೇ ಮೊದಲ ಬಾರಿ ಅಂತರರಾಷ್ಟ್ರೀಯ ಕೂಟದಲ್ಲಿ ಪಾಲ್ಗೊಂಡ ಅಜಿತ್ ಒಟ್ಟು 307 ಕೆ.ಜಿ. ಭಾರ ಎತ್ತಿದರು. ಸ್ನ್ಯಾಚ್‌ನಲ್ಲಿ 139 ಕೆ.ಜಿ. ಹಾಗೂ ಕ್ಲೀನ್ ಮತ್ತು ಜರ್ಕ್‌ನಲ್ಲಿ 168 ಕೆ.ಜಿ. ಸಾಧನೆ ಮಾಡಿದರು.

ಅಚಿಂತಾ ಅವರು ಒಟ್ಟು 305 ಕೆ.ಜಿ. ಭಾರ (140 ಕೆ.ಜಿ + 165 ಕೆ.ಜಿ) ಎತ್ತಿದರು. ಆರಂಭಿಕ ಪ್ರಯತ್ನ-ದಲ್ಲಿ ನಮೂದಿಸಿದ ಕೆ.ಜಿ ಆಧಾರದಲ್ಲಿ ಭಾರತದ ಈ ಇಬ್ಬರು ವೇಟ್‌ಲಿಫ್ಟರ್‌ಗ-ಳಿಗೆ 'ಬಿ' ಗುಂಪಿನಲ್ಲಿ ಸ್ಥಾನ ನೀಡಲಾಗಿತ್ತು. ಆರಂಭಿಕ ಪ್ರಯತ್ನದಲ್ಲಿ ಹೆಚ್ಚು ಕೆ.ಜಿ. ಭಾರ ನಮೂದಿಸುವ ಲಿಫ್ಟರ್‌ಗಳಿಗೆ 'ಎ' ಗುಂಪಿನಲ್ಲಿ ಸ್ಥಾನ ನೀಡಲಾಗುತ್ತದೆ. 'ಎ' ಗುಂಪಿನಲ್ಲಿ ಗೆದ್ದವರಿಗೆ ಮಾತ್ರ ಪದಕ ನೀಡಲಾಗುತ್ತದೆ.

ಏಷ್ಯಾ ಕಪ್ ಕ್ರಿಕೆಟ್ ಟೂರ್ನಿ ಪಾಕಿಸ್ತಾನದಿಂದ 'ಔಟ್'

ನವದೆಹಲಿ (ಪಿಟಿಐ): ಮುಂಬರುವ ಏಷ್ಯಾಕಪ್ ಕ್ರಿಕೆಟ್ ಟೂರ್ನಿಯ ಆತಿಥ್ಯವನ್ನು ಪಾಕಿಸ್ತಾನದಿಂದ ಬೇರೆ ತಾಣಕ್ಕೆ ಸ್ಥಳಾಂತರಿಸಲು ಏಷ್ಯನ್ ಕ್ರಿಕೆಟ್ ಸಮಿತಿ (ಎಸಿಸಿ) ನಿರ್ಧರಿಸಿದೆ. ಇದರಿಂದ ಪಾಕಿಸ್ತಾನ ಕ್ರಿಕೆಟ್ ಮಂಡಳಿಗೆ (ಪಿಸಿಬಿ) ಹಿನ್ನಡೆ ಉಂಟಾಗಿದೆ.

ಭಾರತ ಮತ್ತು ಪಾಕಿಸ್ತಾನ ಒಳಗೊಂಡಂತೆ ಆರು ರಾಷ್ಟ್ರಗಳು ಪಾಲ್ಗೊಳ್ಳುವ ಟೂರ್ನಿಯು ಶ್ರೀಲಂಕಾ ದಲ್ಲಿ ನಡೆಯುವ ಸಾಧ್ಯತೆಯಿದೆ. ಸೆಪ್ಟೆಂಬರ್ ತಿಂಗಳಲ್ಲಿ ಯುಎಇನಲ್ಲಿ ಸೆಕೆ ಹೆಚ್ಚಿರುವುದರಿಂದ ಟೂರ್ನಿಯನ್ನು ದುಬೈ ಅಥವಾ ಶಾರ್ಜಾದಲ್ಲಿ ನಡೆಸುವ ಸಾಧ್ಯತೆ ಕಡಿಮೆ ಎನ್ನಲಾಗಿದೆ.

ಏಷ್ಯಾ ಕಪ್ ಟೂರ್ನಿ ಸೆ. 2ರಿಂದ 17 ರ ವರೆಗೆ ನಡೆಯಲಿದೆ. ಪಿಸಿಬಿಗೆ ಹಿನ್ನಡೆ ಉಂಟಾಗಿರುವುದರಿಂದ ಪಾಕಿಸ್ತಾನ ತಂಡವು ಟೂರ್ನಿಯಲ್ಲಿ ಪಾಲ್ಗೊಳ್ಳುವುದೇ ಎಂಬುದು ಖಚಿತ ವಾಗಿಲ್ಲ.

ಏಷ್ಯಾಕಪ್ ಟೂರ್ನಿಗೆ ಭಾರತ ತಂಡವನ್ನು ಪಾಕಿಸ್ತಾನಕ್ಕೆ ಕಳುಹಿಸುವುದಿಲ್ಲ ಎಂದು ಬಿಸಿಸಿಐ ಹೇಳಿತ್ತು. ಅದಕ್ಕೆ ಪಿಸಿಬಿಯು 'ಹೈಬ್ರಿಡ್ ಮಾದರಿ'ಯನ್ನು ಮುಂದಿಟ್ಟಿತ್ತು. ಈ ಮಾದರಿಯಂತೆ ಭಾರತ ತನ್ನ ಪಂದ್ಯಗಳನ್ನು ಯುಎಇಯಲ್ಲಿ ಮತ್ತು ಪಾಕಿಸ್ತಾನ ಸ್ವದೇಶದಲ್ಲಿ ಆಡಬೇಕಿತ್ತು.

ಆದರೆ ಎಸಿಸಿಯ ಸದಸ್ಯ ರಾಷ್ಟ್ರಗಳು 'ಹೈಬ್ರಿಡ್ ಮಾದರಿ'ಯನ್ನು ತಿರಸ್ಕರಿಸಿವೆ ಎಂದು ಮೂಲಗಳು ಹೇಳಿವೆ. 'ಪ್ರಸ್ತಾವಿತ ಹೈಬ್ರಿಡ್ ಮಾದರಿಗೆ ಬೆಂಬಲ ಗಿಟ್ಟಿಸಲು ಪಿಸಿಬಿ ಮುಖ್ಯಸ್ಥ ನಜಮ್ ಸೇಥಿ ಅವರು ಸೋಮವಾರ ದುಬೈಗೆ ಬಂದಿದ್ದರು. ಆದರೆ ಅವರಿಗೆ ತಕ್ಕ ಬೆಂಬಲ ಸಿಗಲಿಲ್ಲ. ಶ್ರೀಲಂಕಾ ಕ್ರಿಕೆಟ್ ಮಂಡಳಿ ಮತ್ತು ಬಾಂಗ್ಲಾದೇಶ ಕ್ರಿಕೆಟ್ ಮಂಡಳಿಗಳು ಈ ಮಾದರಿಯನ್ನು ವಿರೋಧಿಸಿದವು' ಎಂದು ಮೂಲಗಳು ತಿಳಿಸಿವೆ.



ನಿತೀಶ್ ರಾಣಾ, ರಸೆಲ್ ಅಬ್ಬರ; ವರುಣ್ ಸ್ಪಿನ್ ಮೋಡಿ: ಪಂಜಾಬ್ ಕಿಂಗ್ಸ್ ವಿರುದ್ಧ ಗೆಲುವು

ಕೋಲ್ಕತ್ತ ಪ್ಲೇಆಫ್ ಆಸೆ ಜೀವಂತ

ಕೋಲ್ಕತ್ತ (ಪಿಟಿಐ): ನಿತೀಶ್ ರಾಣಾ, ಆ್ಯಂಡ್ರೆ ರಸೆಲ್ ಅವರ ಬ್ಯಾಟಿಂಗ್ ಹಾಗೂ ವರುಣ್ ಚಕ್ರವರ್ತಿ ಅವರ ಬೌಲಿಂಗ್ ಬಲದಿಂದ ಕೋಲ್ಕತ್ತ ತಂಡಕ್ಕೆ ಜಯ ಒಲಿಯಿತು.

ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಐಪಿಎಲ್ ಪಂದ್ಯದಲ್ಲಿ ಕೋಲ್ಕತ್ತ 5 ವಿಕೆಟ್‌ಗಳಿಂದ ಪಂಜಾಬ್ ಕಿಂಗ್ಸ್ ತಂಡವನ್ನು ಮಣಿಸಿತು.

ಇದರೊಂದಿಗೆ ನಿತೀಶ್ ರಾಣಾ ಪಡೆಯು ಪ್ಲೇ ಆಫ್ ಪ್ರವೇಶದ ಆಸೆಯನ್ನು ಜೀವಂತವಾಗುಳಿಸಿಕೊಂಡಿತು.

ಮೊದಲು ಬ್ಯಾಟ್ ಮಾಡಿದ ಪಂಜಾಬ್, 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 179 ರನ್ ಗಳಿಸಿತು. ಕೋಲ್ಕತ್ತ ನಿಗದಿತ ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 182 ರನ್ ಗಳಿಸಿತು.

ಕೊನೆಯ ಎರಡು ಓವರ್‌ಗಳಲ್ಲಿ ಕೋಲ್ಕತ್ತ ತಂಡಕ್ಕೆ 26 ರನ್ ಬೇಕಿತ್ತು. ಸ್ಯಾಮ್ ಕರನ್ ಎಸೆದ 19ನೇ ಓವರ್‌ನಲ್ಲಿ ಮೂರು ಸಿಕ್ಸರ್ ಸಿಡಿಸಿದ ಆ್ಯಂಡ್ರೆ ರಸೆಲ್ (42, 23ಎ) ಪಂದ್ಯಕ್ಕೆ ತಿರುವು ನೀಡಿದರು. ಅರ್ಷದೀಪ್ ಸಿಂಗ್ ಎಸೆದ ಕೊನೆಯ ಓವರ್‌ನಲ್ಲಿ ಗೆಲುವಿಗೆ ಆರು ರನ್ ಬೇಕಿತ್ತು. ಅವರ ಪರಿಣಾಮಕಾರಿ ಬೌಲಿಂಗ್ ಎದುರು ಬ್ಯಾಟರ್‌ಗಳು ಪರದಾಡಿದರೂ ಕೊನೆಯ ಎಸೆತದಲ್ಲಿ ರಿಂಕು ಸಿಂಗ್ ಬೌಂಡರಿ ಸಿಡಿಸಿ ಜಯ ತಂದುಕೊಟ್ಟರು. ಈ ಓವರ್‌ನ ರಸೆಲ್ ರನೌಟ್ ಕೂಡ ಆದರು.

ಸವಾಲಿನ ಗುರಿ ಬೆನ್ನತ್ತಿದ ಕೋಲ್ಕತ್ತ ತಂಡಕ್ಕಾಗಿ ಜೇಸನ್ ರಾಯ್ (38) ಮತ್ತು ರಹಮಾನುಲ್ಲಾ ಗುರ್ಬಾಜ್ (15) ಮೊದಲ ವಿಕೆಟ್‌ಗೆ 38 ರನ್ ಸೇರಿಸಿದರು. ಗುರ್ಬಾಜ್ ಔಟಾದ ಬಳಿಕ ನಾಯಕ ನಿತೀಶ್ (51) ಅಲ್ಲದೆ ರಿಂಕು (ಔಟಾಗದೆ 21) ಕೂಡ ಉಪಯುಕ್ತ ಕಾಣಿಕೆ ನೀಡಿದರು.

ಶಿಖರ್ ಅರ್ಧಶತಕ ವ್ಯರ್ಥ: ಟಾಸ್ ಗೆದ್ದ ಪಂಜಾಬ್ ತಂಡ ಬ್ಯಾಟಿಂಗ್ ಆಯ್ದುಕೊಂಡಿತು. ನಾಯಕ ಶಿಖರ್ ಧವನ್ ಅವರ ಅರ್ಧಶತಕದ ಕೋಲ್ಕತ್ತಗೆ ಸವಾಲಿನ ಗುರಿ ನೀಡಿತ್ತು.

ಧವನ್ (57 ರನ್, 47 ಎ., 4X9, 6X1) ಹೊರತುಪಡಿಸಿ ಇತರ ಬ್ಯಾಟರ್‌ಗಳು ಪರದಾಡಿದರು.

ಶಾರುಕ್ ಖಾನ್ (ಅಜೇಯ 21, 8 ಎ.) ಮತ್ತು ಹರ್‌ಪ್ರೀತ್ ಬ್ರಾರ್ (ಅಜೇಯ 17, 9 ಎ.) ಅವರು ಕೊನೆಯಲ್ಲಿ ಬೀಸಾಟವಾಡಿದ್ದರಿಂದ ಪಂಜಾಬ್ ತಂಡದ ಸ್ಕೋರ್ ಹಿಗ್ಗಿತು. ವರುಣ್ ಚಕ್ರವರ್ತಿ (26ಕ್ಕೆ 3) ಸ್ಪಿನ್ ಮೋಡಿಯಿಂದ ಗಮನ ಸೆಳೆದರು. ಹರ್ಷಿತ್ ರಾಣಾ 2 ವಿಕೆಟ್ ಪಡೆದರು.



ಕೋಲ್ಕತ್ತ ತಂಡದ ಆ್ಯಂಡ್ರೆ ರಸೆಲ್ (ಬಲ) ಮತ್ತು ರಿಂಕು ಸಿಂಗ್– ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಪಂಜಾಬ್ ಕಿಂಗ್ಸ್ 7ಕ್ಕೆ 179 (20 ಓವರ್)
ಪ್ರಭ್‌ಸಿಮ್ರನ್ ಸಿ ಗುರ್ಬಾಜ್ ಬಿ ರಾಣಾ 12 (8 ಎ., 4X4)
ಧವನ್ ಸಿ ಅರೋರ ಬಿ ನಿತೀಶ್ 57 (47 ಎ., 4X9, 6X1)
ರಾಜಪಕ್ಸ ಸಿ ಗುರ್ಬಾಜ್ ಬಿ ರಾಣಾ 0 (3 ಎ.)
ಲಿವಿಂಗ್‌ಸ್ಟೋನ್ ಎಲ್‌ಬಿಡಬ್ಲ್ಯು ಬಿ ವರುಣ್ 15 (9 ಎ., 4X3)
ಜಿತೇಶ್ ಸಿ ಗುರ್ಬಾಜ್ ಬಿ ವರುಣ್ 21 (18 ಎ., 6X2)
ಕರನ್ ಸಿ ಗುರ್ಬಾಜ್ ಬಿ ಸುಯಶ್ 4 (9 ಎ)
ರಿಷಿ ಬಿ ವರುಣ್ 19 (11 ಎ., 4X1, 6X1)
ಶಾರುಕ್ ಔಟಾಗದೆ 21 (8 ಎ., 4X3, 6X1)
ಹರ್‌ಪ್ರೀತ್ ಔಟಾಗದೆ 17 (9 ಎ., 4X2, 6X1)
ಇತರೆ: 13 (ಬೈ 4, ಲೆಗ್ ಬೈ 3, ನೋಬಾಲ್ 2, ವೈಡ್ 4)
ವಿಕೆಟ್ ಪತನ: 1–21 (ಪ್ರಭ್‌ಸಿಮ್ರನ್ ಸಿಂಗ್; 1.6), 2–29 (ಭಾನುಕ ರಾಜಪಕ್ಸ; 3.4), 3–53 (ಲಿಯಾಮ್ ಲಿವಿಂಗ್‌ಸ್ಟೋನ್; 5.3), 4–106 (ಜಿತೇಶ್ ಶರ್ಮಾ; 12.3), 5–119 (ಶಿಖರ್ ಧವನ್; 14.4), 6–139 (ರಿಷಿ ಧವನ್; 16.5), 7–139 (ಸ್ಯಾಮ್ ಕರನ್; 17.2)
ಬೌಲಿಂಗ್: ವೈಭವ್ ಅರೋರ 3–0–32–0, ಹರ್ಷಿತ್ ರಾಣಾ 3–0–33–2, ಆ್ಯಂಡ್ರೆ ರಸೆಲ್ 1–0–19–0, ವರುಣ್ ಚಕ್ರವರ್ತಿ 4–0–26–3, ಸುಯಶ್ ಶರ್ಮಾ 4–0–26–1, ಸುನಿಲ್ ನಾರಾಯಣ 4–0–29–0, ನಿತೀಶ್ ರಾಣಾ 1–0–7–1

ಕೋಲ್ಕತ್ತ ನೈಟ್ ರೈಡರ್ಸ್ 5ಕ್ಕೆ 182 (20 ಓವರ್)
ಜೇಸನ್ ಸಿ ಶಾರುಕ್ ಬಿ ಬ್ರಾರ್ 38 (24 ಎ., 4X8)
ಗುರ್ಬಾಜ್ ಎಲ್‌ಬಿಡಬ್ಲ್ಯು ಬಿ ಎಲಿಸ್ 15 (12 ಎ., 4X1, 6X1)
ನಿತೀಶ್ ಸಿ ಲಿವಿಂಗ್‌ಸ್ಟೋನ್ ಬಿ ಚಾಹರ್ 51 (38 ಎ., 4X6, 6X1)
ವೆಂಕಟೇಶ್ ಸಿ ಲಿವಿಂಗ್‌ಸ್ಟೋನ್ ಬಿ ಚಾಹರ್ 11 (13 ಎ.)
ರಸೆಲ್ ರನೌಟ್ (ಶರ್ಮಾ/ ಅರ್ಷದೀಪ್) 42 (23 ಎ., 4X3, 6X3)
ರಿಂಕು ಔಟಾಗದೆ 21 (10 ಎ., 4X2, 6X1)
ಶಾರ್ದೂಲ್ ಔಟಾಗದೆ 0 (0 ಎ)
ಇತರೆ: 4 (ಲೆಗ್ ಬೈ 1, ವೈಡ್ 3)
ವಿಕೆಟ್ ಪತನ: 1–38 (ರಹಮಾನುಲ್ಲಾ ಗುರ್ಬಾಜ್; 4.4), 2–64 (ಜೇಸನ್ ರಾಯ್; 7.2), 3–115 (ವೆಂಕಟೇಶ್ ಅಯ್ಯರ್; 13.4), 4–124 (ನಿತೀಶ್; 15.2), 5–178 (ರಸೆಲ್; 19.5)
ಬೌಲಿಂಗ್: ರಿಷಿ ಧವನ್ 2–0–15–0, ಅರ್ಷದೀಪ್ ಸಿಂಗ್ 4–0–39–0, ನೇಥನ್ ಎಲಿಸ್ 4–0–29–1, ಸ್ಯಾಮ್ ಕರನ್ 3–0–44–0, ಲಿಯಾಮ್ ಲಿವಿಂಗ್‌ಸ್ಟೋನ್ 2–0–27–0, ಹರ್‌ಪ್ರೀತ್ ಬ್ರಾರ್ 1–0–4–1, ರಾಹುಲ್ ಚಾಹರ್ 4–0–23–2
ಫಲಿತಾಂಶ: ಕೋಲ್ಕತ್ತ ನೈಟ್ ರೈಡರ್ಸ್‌ಗೆ 5 ವಿಕೆಟ್ ಗೆಲುವು

ಸ್ಪೈಡರ್‌ಮ್ಯಾನ್‌ಗೆ ಶುಭಮನ್ ಗಿಲ್ ಧ್ವನಿ

ಮುಂಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಯುವ ಬ್ಯಾಟರ್ ಶುಭಮನ್ ಗಿಲ್ ಅವರು ಅನಿಮೇಟೆಡ್ ಸಿನಿಮಾ 'ಸ್ಪೈಡರ್‌ಮ್ಯಾನ್: ಅಕ್ರಾಸ್ ದ ಸ್ಪೈಡರ್ ವರ್ಸ್'ನ ಸ್ಪೈಡರ್‌ಮ್ಯಾನ್ ಪಾತ್ರಕ್ಕೆ ಧ್ವನಿ ನೀಡಲಿದ್ದಾರೆ. ಚಿತ್ರದ ನಿರ್ಮಾಪಕರು ಸೋಮವಾರ ಈ ವಿಷಯ ತಿಳಿಸಿದ್ದಾರೆ.

ಸೋನಿ ಪಿಕ್ಚರ್ಸ್ ಜೂನ್ 2ರಂದು ಈ ಸಿನಿಮಾ ಬಿಡುಗಡೆ ಮಾಡಲಿದೆ. ಗಿಲ್ ಅವರು ಸ್ಪೈಡರ್‌ಮ್ಯಾನ್‌ನ 'ಪವಿತ್ರ್ ಪ್ರಭಾಕರ್' ಹೆಸರಿನ ಪಾತ್ರಕ್ಕೆ ಹಿಂದಿ ಮತ್ತು ಪಂಜಾಬಿ ಭಾಷೆಗಳಲ್ಲಿ ಧ್ವನಿ ನೀಡಲಿದ್ದಾರೆ.

'ಗಿಲ್ ಅವರೊಂದಿಗೆ ಕೆಲಸ ಮಾಡಲು ಉತ್ಸುಕರಾಗಿದ್ದೇವೆ. ಅವರು ಯುವಜನತೆಯ ಆದರ್ಶ. ಅಲ್ಲದೆ ಕ್ರಿಕೆಟ್‌ನಲ್ಲಿ ದೇಶವನ್ನು ಪ್ರತಿನಿಧಿಸುತ್ತಿರುವ ನಿಜವಾದ ಹೀರೊ' ಎಂದು ಸೋನಿ ಪಿಕ್ಚರ್ಸ್ ರಿಲೀಸಿಂಗ್ ಇಂಟರ್‌ನ್ಯಾಷನಲ್‌ನ ಜನರಲ್ ಮ್ಯಾನೇಜರ್ ಶೋನಿ ಪ್ರಭಾಕರನ್ ಹೇಳಿದ್ದಾರೆ.

ಪ್ಲೇಆಫ್ ಸಾಧ್ಯತೆ ಹೆಚ್ಚಿಸಿಕೊಳ್ಳಲು ಉಭಯ ತಂಡಗಳಿಗೆ ಜಯ ಅನಿವಾರ್ಯ

ಆರ್‌ಸಿಬಿಗೆ ಮುಂಬೈ ಇಂಡಿಯನ್ಸ್ ಸವಾಲು

ಮುಂಬೈ (ಪಿಟಿಐ): ಐಪಿಎಲ್ ಟೂರ್ನಿಯ 'ಪ್ಲೇ ಆಫ್'ನಲ್ಲಿ ಸ್ಥಾನ ಖಚಿತಪಡಿಸಿಕೊಳ್ಳುವ ಪ್ರಯತ್ನದಲ್ಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ, ಮಂಗಳವಾರ ನಡೆಯುವ ಮಹತ್ವದ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡದ ಸವಾಲು ಎದುರಿಸಲಿದೆ.

ಆರ್‌ಸಿಬಿ ಮತ್ತು ಮುಂಬೈ ತಂಡಗಳು 10 ಪಂದ್ಯಗಳಿಂದ ತಲಾ 10 ಪಾಯಿಂಟ್ಸ್ ಕಲೆಹಾಕಿವೆ. ಉತ್ತಮ ರನ್‌ರೇಟ್ ಆಧಾರದಲ್ಲಿ ಫಫ್ ಡುಪ್ಲೆಸಿ ಬಳಗ, ರೋಹಿತ್ ಶರ್ಮಾ ಬಳಗಕ್ಕಿಂತ ಒಂದು ಸ್ಥಾನ ಮೇಲಿದೆ. ಪ್ಲೇ ಆಫ್ ಪ್ರವೇಶದ ಹಾದಿಯಲ್ಲಿ ಉಭಯ ತಂಡಗಳಿಗೆ ಇನ್ನುಳಿದ ನಾಲ್ಕು ಪಂದ್ಯಗಳ ಫಲಿತಾಂಶವೂ ಮಹತ್ವದ್ದಾಗಿವೆ.

ಹಿಂದಿನ ಪಂದ್ಯದಲ್ಲಿ ಎರಡೂ ತಂಡಗಳು ಸೋತಿದ್ದವು. ಆರ್‌ಸಿಬಿಯು ಡೆಲ್ಲಿ ಕ್ಯಾಪಿಟಲ್ಸ್ ಎದುರು ಆಘಾತ ಅನುಭವಿಸಿದ್ದರೆ, ಮುಂಬೈ ತಂಡ, ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಮುಗ್ಗರಿಸಿತ್ತು. ಸೋಲಿನ ನಿರಾಸೆಯನ್ನು ಮರೆತು ಸಂಘಟಿತ ಪ್ರದರ್ಶನ ನೀಡುವುದು ಇವೆರಡು ತಂಡಗಳ ಗುರಿ.

ಬೆಂಗಳೂರಿನ ತಂಡವು ಈ ಪಂದ್ಯದಲ್ಲೂ ಅಗ್ರ ಕ್ರಮಾಂಕದ ಬ್ಯಾಟರ್‌ಗಳಾದ ಡುಪ್ಲೆಸಿ, ವಿರಾಟ್ ಕೊಹ್ಲಿ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ ಮೇಲೆ ಭರವಸೆ ಇಟ್ಟಿದೆ. ಈ ಮೂವರು ಜತೆಯಾಗಿ ಮಿಂಚಿದಾಗ ತಂಡಕ್ಕೆ ಗೆಲುವು ದಕ್ಕಿದೆ.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಗುಜರಾತ್	11	8	3	0	16	0.951
ಚೆನ್ನೈ	11	6	4	1	13	0.409
ಲಖನೌ	11	5	5	1	11	0.294
ರಾಜಸ್ಥಾನ	11	5	6	0	10	0.388
ಕೋಲ್ಕತ್ತ	11	5	6	0	10	-0.079
ಬೆಂಗಳೂರು	10	5	5	0	10	-0.209
ಪಂಜಾಬ್	11	5	6	0	10	-0.441
ಮುಂಬೈ	10	5	5	0	10	-0.454
ಹೈದರಾಬಾದ್	10	4	6	0	8	-0.472
ಡೆಲ್ಲಿ	10	4	6	0	8	-0.529

ಸೋಮವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಡುಪ್ಲೆಸಿ ಇದುವರೆಗೆ 511 ರನ್‌ಗಳನ್ನು ಕಲೆಹಾಕಿದ್ದು, ಅತ್ಯಧಿಕ ರನ್ ಗಳಿಸಿದವರ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ. ಈ ಟೂರ್ನಿಯಲ್ಲಿ 500ಕ್ಕೂ ಅಧಿಕ ರನ್ ಗಳಿಸಿರುವುದು ಅವರು ಮಾತ್ರ. ಕೊಹ್ಲಿ ಆರು ಅರ್ಧಶತಕಗಳ ನೆರವಿನಿಂದ 419 ರನ್ ಪೇರಿಸಿದ್ದಾರೆ.

ಡೆಲ್ಲಿ ಎದುರು 54 ರನ್ ಗಳಿಸಿದ್ದ ಮಹಿಪಾಲ್ ಲೊಮ್ರೊರ್ ಮೇಲೂ ನಿರೀಕ್ಷೆ ಇಡಲಾಗಿದೆ. ಆದರೆ ದಿನೇಶ್ ಕಾರ್ತಿಕ್ ಅವರ ಕಳಪೆ ಫಾರ್ಮ್ ಮುಂದುವರಿದಿರುವುದು ಚಿಂತೆ ಉಂಟುಮಾಡಿದೆ. ಬೌಲಿಂಗ್‌ನಲ್ಲಿ ಮೊಹಮ್ಮದ್ ಸಿರಾಜ್ ಮತ್ತು ಜೋಶ್ ಹ್ಯಾಜಲ್‌ವುಡ್ ಅವರು ಪರಿಣಾಮಕಾರಿ ದಾಳಿ ನಡೆಸಬೇಕಿದೆ.

ರೋಹಿತ್ ಕಳಪೆ ಫಾರ್ಮ್ ಚಿಂತೆ: ನಾಯಕ ರೋಹಿತ್ ಅವರ ಕಳಪೆ ಫಾರ್ಮ್ ಮುಂಬೈ ತಂಡದ ಚಿಂತೆಗೆ ಕಾರಣವಾಗಿದೆ. ಅವರು 10 ಪಂದ್ಯಗಳಿಂದ 18.39ರ ಸರಾಸರಿಯಲ್ಲಿ 184 ರನ್ ಮಾತ್ರ ಗಳಿಸಿದ್ದಾರೆ. ಒಮ್ಮೆ ಮಾತ್ರ ಅರ್ಧಶತಕದ ಗಡಿ ದಾಟಿದ್ದಾರೆ. ತಂಡಕ್ಕೆ ಬಿರುಸಿನ ಆರಂಭ ನೀಡಲು ಅವರಿಗೆ ಆಗದಿರುವುದು ಇತರ ಬ್ಯಾಟರ್‌ಗಳ ಮೇಲಿನ ಒತ್ತಡ ಹೆಚ್ಚಿಸಿದೆ.

ಆರೆಂಜ್ ಕ್ಯಾಪ್ (ಹೆಚ್ಚು ರನ್)		
ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	511

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)		
ಆಟಗಾರ	ತಂಡ	ವಿಕೆಟ್
ಶಮಿ	ಗುಜರಾತ್	19

ಇಶಾನ್ ಕಿಶನ್, ಸೂರ್ಯಕುಮಾರ್ ಯಾದವ್, ಕ್ಯಾಮರಾನ್ ಗ್ರೀನ್, ತಿಲಕ್ ವರ್ಮಾ ಮತ್ತು ಟಿಮ್ ಡೇವಿಡ್ ಅವರು ಮಿಂಚುತ್ತಿರುವುದರಿಂದ ರೋಹಿತ್ ಅವರ ಕಳಪೆ ಫಾರ್ಮ್ ನಡುವೆಯೂ ತಂಡ 'ಪ್ಲೇ ಆಫ್' ರೇಸ್‌ನಲ್ಲಿ ಉಳಿದುಕೊಂಡಿದೆ. 'ಡೆತ್ ಬೌಲಿಂಗ್'ಅನ್ನು ಇನ್ನಷ್ಟು ಪರಿಣಾಮಕಾರಿಯಾಗಿಸುವ ಸವಾಲು ಕೂಡಾ ತಂಡದ ಮುಂದಿದೆ.

ಏ.2ರಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇವೆರಡು ತಂಡಗಳು ಎದುರಾಗಿದ್ದಾಗ ಆರ್‌ಸಿಬಿ ಎಂಟು ವಿಕೆಟ್‌ಗಳಿಂದ ಗೆದ್ದಿತ್ತು. ಆ ಸೋಲಿಗೆ ಮುಯ್ಯಿ ತೀರಿಸುವ ಲೆಕ್ಕಾಚಾರದೊಂದಿಗೆ ಮುಂಬೈ ಇಂಡಿಯನ್ಸ್ ಕಣಕ್ಕಿಳಿಯಲಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಸಿನೆಮಾ ಆ್ಯಪ್



ವಿರಾಟ್ ಕೊಹ್ಲಿ (ಎಡ) ಮತ್ತು ಫಫ್ ಡುಪ್ಲೆಸಿ

ಸಂಕ್ಷಿಪ್ತ ಸುದ್ದಿ

ರಾಜ್ಯ ಮಹಿಳಾ ಚೆಸ್ ಮೇ 18ರಿಂದ

ಬೆಂಗಳೂರು: ರೇನ್‌ಬೊ ಕ್ಲಬ್ ಕಿಡ್ಜ್ ಲೈಬ್ರರಿ ಆಶ್ರಯದಲ್ಲಿ ಕರ್ನಾಟಕ ರಾಜ್ಯ ಮಹಿಳಾ ಚೆಸ್ ಚಾಂಪಿಯನ್‌ಷಿಪ್ ಇದೇ ತಿಂಗಳ 18 ರಿಂದ 20ರವರೆಗೆ ವಿಜಯನಗರ ಆರ್‌ಪಿಸಿ ಲೇಔಟ್‌ನ ಹಂಪಿನಗರದ ನಗರ ಕೇಂದ್ರ ಗ್ರಂಥಾಲಯದಲ್ಲಿ (ಪಶ್ಚಿಮ ವಲಯ) ನಡೆಯಲಿದೆ.

ಟೂರ್ನಿಯು ₹40,000 ಬಹುಮಾನ ಹೊಂದಿದೆ. ಮೊದಲ ಮೂರು ಸ್ಥಾನ ಪಡೆದ ಆಟಗಾರ್ತಿಯರಿಗೆ ಟ್ರೋಫಿ ಮತ್ತು ನಗದು ಬಹುಮಾನ ನೀಡಲಾಗುವುದು. ಮೊದಲ ಎರಡು ಸ್ಥಾನ ಪಡೆದವರು ರಾಷ್ಟ್ರೀಯ ಮಹಿಳಾ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ರಾಜ್ಯವನ್ನು ಪ್ರತಿನಿಧಿಸುವರು.

ವಯೋವರ್ಗ (8, 10, 12 ಮತ್ತು 15 ವರ್ಷದೊಳಗಿನವರ) ವಿಭಾಗದಲ್ಲೂ ಟ್ರೋಫಿಗಳನ್ನು ನೀಡಲಾಗುವುದು. ನೋಂದಾಯಿಸಲು ಕೊನೆಯ ದಿನ ಮೇ 16. ವಿವರಗಳಿಗೆ 9449340975 ಅಥವಾ 9448292516 ಸಂಪರ್ಕಿಸಬಹುದು.

ಬೆಂಗಳೂರು ಟೆನ್‌ಕೆ: ಕಿಪ್ರುಟೊ ಸ್ಪರ್ಧೆ

ಬೆಂಗಳೂರು: ಪುರುಷರ ಟೆನ್‌ಕೆ ವಿಶ್ವದಾಖಲೆ ಹೊಂದಿರುವ ಕೆನ್ಯಾದ ರೋನೆಕ್ಸ್ ಕಿಪ್ರುಟೊ ಅವರು 15ನೇ ಆವೃತ್ತಿಯ ಟಿಸಿಎಸ್ ಬೆಂಗಳೂರು ವಿಶ್ವ ಟೆನ್‌ಕೆ ಸ್ಪರ್ಧೆಯಲ್ಲಿ ಕಣಕ್ಕಿಳಿಯಲಿದ್ದಾರೆ.

ಪ್ರತಿಷ್ಠಿತ ಸ್ಪರ್ಧೆಯು ಉದ್ಯಾನನಗರಿಯಲ್ಲಿ ಇದೇ 21ರಂದು ನಡೆಯಲಿದೆ.

ಕಿಪ್ರುಟೊ ಅವರು 2020ರ ಜನವರಿಯಲ್ಲಿ ಸ್ಪೇನ್‌ನ ವೆಲೆನ್ಸಿಯಾದಲ್ಲಿ ನಡೆದ ಕೂಟದಲ್ಲಿ 26 ನಿಮಿಷ 24 ಸೆಕೆಂಡುಗಳಲ್ಲಿ ಗುರಿ ತಲುಪಿ ವಿಶ್ವದಾಖಲೆ ಬರೆದಿದ್ದರು.

ಡಬ್ಲ್ಯುಟಿಸಿ: ರಾಹುಲ್ ಬದಲಿಗೆ ಇಶಾನ್

ಮುಂಬೈ (ಪಿಟಿಐ): ವಿಕೆಟ್ ಕೀಪರ್ ಬ್ಯಾಟರ್ ಇಶಾನ್ ಕಿಶನ್ ಅವರು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ (ಡಬ್ಲ್ಯುಟಿಸಿ) ಫೈನಲ್‌ಗೆ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಗಾಯಗೊಂಡಿರುವ ಕೆ.ಎಲ್. ರಾಹುಲ್‌ಗೆ ಬದಲಿ ಆಟಗಾರನಾಗಿ ಅವರಿಗೆ ಅವಕಾಶ ಲಭಿಸಿದೆ.

ಐಪಿಎಲ್‌ನಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡದ ನಾಯಕರಾಗಿರುವ ರಾಹುಲ್, ಆರ್‌ಸಿಬಿ ವಿರುದ್ಧದ ಪಂದ್ಯದಲ್ಲಿ ತೊಡೆಯ ಗಾಯಕ್ಕೆ ಒಳಗಾಗಿದ್ದರು. ಐಪಿಎಲ್ ಟೂರ್ನಿಯ ಇನ್ನುಳಿದ ಪಂದ್ಯಗಳು ಮತ್ತು ಡಬ್ಲ್ಯುಟಿಸಿ ಫೈನಲ್‌ನಿಂದ ಅವರು ಹೊರಬಿದ್ದಿದ್ದರು.

ಲಂಡನ್‌ನ ದಿ ಓವಲ್‌ನಲ್ಲಿ ಜೂನ್ 7 ರಿಂದ 11ರ ವರೆಗೆ ನಡೆಯಲಿರುವ ಡಬ್ಲ್ಯುಟಿಸಿ ಫೈನಲ್‌ನಲ್ಲಿ ಭಾರತ ತಂಡ ಆಸ್ಟ್ರೇಲಿಯಾ ವಿರುದ್ಧ ಹಣಾಹಣಿ ನಡೆಸಲಿದೆ.

'ರಾಹುಲ್ ಅವರು ಶೀಘ್ರದಲ್ಲೇ ಶಸ್ತ್ರಚಿಕಿತ್ಸೆಗೆ ಒಳಗಾಗಲಿದ್ದು, ಆ ಬಳಿಕ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ ಮರುಚೈತನ್ಯ ಶಿಬಿರದಲ್ಲಿ ಪಾಲ್ಗೊಳ್ಳುವರು' ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಡಗೈ ವೇಗಿ ಜೈದೇವ್ ಉನದ್ಕತ್ ಅವರು ಡಬ್ಲ್ಯುಟಿಸಿ ಫೈನಲ್‌ನಲ್ಲಿ ಆಡುವ ಬಗ್ಗೆ ಅಂತಿಮ ನಿರ್ಧಾರವನ್ನು ಮುಂದಿನ ದಿನಗಳಲ್ಲಿ ತೆಗೆದುಕೊಳ್ಳಲಾಗುವುದು ಎಂದು ಪ್ರಕಟಣೆ ಹೇಳಿದೆ. ಐಪಿಎಲ್‌ನಲ್ಲಿ ಲಖನೌ ತಂಡಕ್ಕೆ ಆಡುವ ಜೈದೇವ್ ಅವರು ಅಭ್ಯಾಸದ ವೇಳೆ ಜಾರಿಬಿದ್ದು ಭುಜಕ್ಕೆ ಗಾಯವಾಗಿತ್ತು.

ಐಪಿಎಲ್ ಪಂದ್ಯದ ವೇಳೆ ಮಂಡಿರಜ್ಜು ಗಾಯಕ್ಕೆ ಒಳಗಾಗಿದ್ದ ವೇಗದ ಬೌಲರ್ ಉಮೇಶ್ ಯಾದವ್ ಅವರು ಚೇತರಿಸಿಕೊಂಡಿದ್ದು, ಅಲ್ಪ ಪ್ರಮಾಣದ ಅಭ್ಯಾಸ ಆರಂಭಿಸಿದ್ದಾರೆ.

'ಉಮೇಶ್ ಅವರು ಕೆಕೆಆರ್ ವೈದ್ಯಕೀಯ ತಂಡದ ಆರೈಕೆಯಲ್ಲಿದ್ದಾರೆ. ಬಿಸಿಸಿಐ ವೈದ್ಯರ ತಂಡವು ಕೆಕೆಆರ್ ವೈದ್ಯರ ಜತೆ ಸಂಪರ್ಕದಲ್ಲಿದ್ದು, ಉಮೇಶ್ ಅವರ ಫಿಟ್‌ನೆಸ್ ಮೇಲೆ ನಿಗಾ ಇಟ್ಟಿದೆ' ಎಂದು ಪ್ರಕಟಣೆ ಹೇಳಿದೆ.

ಋತುರಾಜ್ ಗಾಯಕವಾಡ್, ಮುಕೇಶ್ ಕುಮಾರ್ ಮತ್ತು ಸೂರ್ಯಕುಮಾರ್ ಯಾದವ್ ಅವರು ಮೀಸಲು ಆಟಗಾರರಾಗಿ ಭಾರತ ತಂಡದ ಜತೆ ಇಂಗ್ಲೆಂಡ್‌ಗೆ ಪ್ರಯಾಣಿಸಲಿದ್ದಾರೆ.



ಇಶಾನ್ ಕಿಶನ್

ಬಾಕ್ಸಿಂಗ್: ಸಚಿನ್ ಮುನ್ನಡೆ

ತಾಷ್ಕೆಂಟ್, ಉಜ್ಬೆಕಿಸ್ತಾನ (ಪಿಟಿಐ): ಇದೇ ಮೊದಲ ಬಾರಿ ಸ್ಪರ್ಧಿಸಿರುವ ಭಾರತದ ಬಾಕ್ಸರ್ ಸಚಿನ್ ಸಿವಾಚ್ ಇಲ್ಲಿ ನಡೆಯುತ್ತಿರುವ ಪುರುಷರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪ್ರೀಕ್ವಾರ್ಟರ್‌ಫೈನಲ್‌ಗೆ ತಲುಪಿದ್ದಾರೆ.

ಸೋಮವಾರ ನಡೆದ 54 ಕೆಜಿ ವಿಭಾಗದ 32ರ ಘಟ್ಟದ ಹಣಾಹಣಿಯಲ್ಲಿ ಸಚಿನ್ 5–0ಯಿಂದ ಮೊಲ್ಡೊವಾದ ಸೆರ್ಜ್ ನೋವಾಕ್ ಅವರನ್ನು ಮಣಿಸಿದರು.

ನೀಳಕಾಯದ ಲಾಭ ಪಡೆದ ಮಾಜಿ ಯೂತ್ ವಿಶ್ವ ಚಾಂಪಿಯನ್ ಸಚಿನ್ ಬೌಟ್‌ನುದ್ದಕ್ಕೂ ಎದುರಾಳಿಯನ್ನು ಕಂಗೆಡಿಸಿದರು.ಗೋವಿಂದ್ ಸಹಾನಿ (48 ಕೆಜಿ ವಿಭಾಗ) ಮತ್ತು ನವೀನ್ ಕುಮಾರ್ ಅವರ ಅಭಿಯಾನ ಪ್ರೀಕ್ವಾರ್ಟರ್‌ಫೈನಲ್‌ಗಳಲ್ಲಿ ಅಂತ್ಯವಾಯಿತು.

ಪ್ರೀಕ್ವಾರ್ಟರ್‌ಫೈನಲ್ ಬೌಟ್‌ನಲ್ಲಿ ಗೋವಿಂದ್ 0–5ರಿಂದ ಜಾರ್ಜಿಯಾದ ಶಕೀಲ್ ಅಲಕೆವರ್ದೋವಿ ವಿರುದ್ಧ ನಿರಾಸೆ ಅನುಭವಿಸಿದರು. ನವೀನ್ ಅವರು ಇಷ್ಟೇ ಅಂತರದಿಂದ ಸ್ಪೇನ್‌ನ ಇಮ್ಯಾನ್ಯುಯೆಲ್ ರೇಯಸ್ ಎದುರು ಸೋತರು.



ಸಚಿನ್ ಸಿವಾಚ್

ಜೆಫ್ರಿಗೆ 22ನೇ ಸ್ಥಾನ

ಎಸ್ಟೋರಿಲ್, ಪೋರ್ಚುಗಲ್ (ಪಿಟಿಐ): ಭಾರತದ ಜೆಫ್ರಿ ಇಮ್ಯಾನುಯೆಲ್ ಅವರು ಭಾನುವಾರ ಇಲ್ಲಿ ನಡೆದ ಎಫ್‌ಐಎಂ ವಿಶ್ವ ಚಾಂಪಿಯನ್‌ಷಿಪ್‌ನ ಜೂನಿಯರ್ ಗ್ರ್ಯಾನ್ ಪ್ರಿ (ಜಿಪಿ) ಸ್ಪರ್ಧೆ ಪೂರ್ಣಗೊಳಿಸುವಲ್ಲಿ ಯಶಸ್ವಿಯಾದರು. ಅವರು 22ನೇ ಸ್ಥಾನ ಪಡೆದರು.

ಈ ಮೂಲಕ ಜೂನಿಯರ್ ಜಿಪಿ ರೇಸ್‌ನಲ್ಲಿ ಪಾಲ್ಗೊಂಡ ಭಾರತದ ಮೊದಲ ಸ್ಪರ್ಧಿ ಎಂಬ ಗೌರವವನ್ನು ಚೆನ್ನೈನ 18 ವರ್ಷದ ಜೆಫ್ರಿ ತಮ್ಮದಾಗಿಸಿಕೊಂಡರು. ಶನಿವಾರ ನಡೆದಿದ್ದ ಅರ್ಹತಾ ಸುತ್ತಿನಲ್ಲಿ ಅವರ ಬೈಕ್ ಅಪಘಾತಕ್ಕೆ ಒಳಗಾಗಿತ್ತು. ಆದರೂ ಮುಕ್ತ ಪ್ರಾಕ್ಟೀಸ್ ಅವಧಿಯಲ್ಲಿ ಉತ್ತಮ ಸಮಯ ಕಂಡುಕೊಂಡದ್ದರಿಂದ ಭಾನುವಾರದ ರೇಸ್‌ನಲ್ಲಿ ಸ್ಪರ್ಧಿಸಲು ಅವರಿಗೆ ಅವಕಾಶ ನೀಡಲಾಗಿತ್ತು.

ಮಂಗಳವಾರ, ಮೇ 9, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ


ಮತ ಜಾಗೃತಿ ಬೆಂಗಳೂರಿನಲ್ಲಿ ಸೋಮವಾರ ಮತದಾನ ಜಾಗೃತಿ ಮೂಡಿಸಿದ ಕಲಾವಿದ ಪರಮೇಶ್ವರ್ ಜೋಳದ





ಕರ್ನಾಟಕದ ಪ್ರಗತಿಗೆ ಕಾಂಗ್ರೆಸ್ ವಚನಗಳು

1. ಎಲ್ಲ ಅರ್ಹ ಸಮುದಾಯಗಳಿಗೆ ಮೀಸಲಾತಿ ಒದಗಿಸಲು 'ಮೀಸಲಾತಿ ಮಿತಿ' 50% ನಿಂದ 75%ಗೆ ಏರಿಕೆ.
2. ರೈತರ ಕಲ್ಯಾಣಕ್ಕೆ ₹1.5 ಲಕ್ಷ ಕೋಟಿ ಮೊತ್ತದ ಕೃಷಿ ಸರ್ವೋದಯ ನಿಧಿ ಮತ್ತು ಬಾಕಿಯಿರುವ ಎಲ್ಲ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ₹1.5 ಲಕ್ಷ ಕೋಟಿ ಅನುದಾನ.
3. ಕ್ಷೀರಧಾರೆ ಯೋಜನೆಯಡಿ ಹಾಲಿನ ಸಬ್ಸಿಡಿಯನ್ನು ಒಂದು ಲೀಟರ್‌ಗೆ ₹5 ರಿಂದ ₹7ಕ್ಕೆ ಹೆಚ್ಚಳ.
4. ಮೊದಲ ವರ್ಷ 2.5 ಲಕ್ಷ ಸರ್ಕಾರಿ ಹುದ್ದೆಗಳ ಭರ್ತಿ.
5. ಅಂಗನವಾಡಿ ಕಾರ್ಯಕರ್ತೆಯರಿಗೆ ₹15,000, ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ ₹10,000 ಮತ್ತು ಆಶಾ ಕಾರ್ಯಕರ್ತೆಯರಿಗೆ ಮಾಸಿಕ ₹8,000 ಗೌರವಧನ.
6. ಅಸಂಘಟಿತ ಮತ್ತು ಗಿಗ್ ಕಾರ್ಮಿಕರು (ಓಲಾ, ಊಬರ್, ಸ್ವಿಗ್ಗಿ ಇತರೆ ಆ್ಯಪ್ ಆಧಾರಿತ ನೌಕರರು) ಕಲ್ಯಾಣ ಮಂಡಳಿ ಸ್ಥಾಪನೆಗೆ ₹3,000 ಕೋಟಿ ಹೂಡಿಕೆ.
7. ಎಸ್‌ಸಿ/ಎಸ್‌ಟಿ ಸಮುದಾಯಕ್ಕೆ ಸೇರಿದ 1ರಿಂದ 5ನೇ ತರಗತಿ ವರೆಗಿನ ವಿದ್ಯಾರ್ಥಿಗಳಿಗೆ ತಲಾ ₹150 ಮತ್ತು 6ರಿಂದ 10ನೇ ತರಗತಿ ವರೆಗಿನ ವಿದ್ಯಾರ್ಥಿಗಳಿಗೆ ತಲಾ ₹300 ಮಾಸಿಕ ಪ್ರೋತ್ಸಾಹ ಧನ.
8. ₹5000 ಕೋಟಿ ಒಬಿಸಿ ಕಲ್ಯಾಣ ನಿಧಿ ಮತ್ತು ಸೂಕ್ಷ್ಮ ಹಿಂದುಳಿದ ಸಮುದಾಯಗಳ ಅಭಿವೃದ್ಧಿಗೆ ₹2500 ಕೋಟಿ.
9. ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ವಾರ್ಷಿಕ ₹5000 ಕೋಟಿ.
10. ಸಾರ್ವಜನಿಕ ಕೆಲಸಗಳಲ್ಲಿ ಭ್ರಷ್ಟಾಚಾರ ನಿರ್ಮೂಲನೆ ಮಾಡಲು ಪ್ರತ್ಯೇಕ ಕಾನೂನು ರಚಿಸಲಾಗುವುದು.
11. ಅರ್ಹ ಸರ್ಕಾರಿ ಉದ್ಯೋಗಿಗಳಿಗೆ ಹಳೆಯ ಪಿಂಚಣಿ ಯೋಜನೆಯನ್ನು ಮುಂದುವರಿಸುವ ಬಗ್ಗೆ ಪರಿಗಣಿಸಲಾಗುವುದು.



ಕೈ ಬಟನ್ ಒತ್ತಿ ಕಾಂಗ್ರೆಸ್ ಗೆಲ್ಲಿಸಿ

ಗೃಹಲಕ್ಷ್ಮಿ — ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ₹2,000

ಗೃಹ ಜ್ಯೋತಿ — ನಿಮ್ಮ ಮನೆಗೆ 200 ಯೂನಿಟ್ ವಿದ್ಯುತ್ ಪ್ರತಿ ತಿಂಗಳು ಉಚಿತ

ಯುವನಿಧಿ — ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 ಪದವೀಧರರಿಗೆ | ₹1500 ಡಿಪ್ಲೋಮಾ ಪದವೀಧರರಿಗೆ

ಅನ್ನಭಾಗ್ಯ — 10kg ಬಡವರಿಗೆ ಪ್ರತಿ ತಿಂಗಳು ತಲಾ 10kg ಅಕ್ಕಿ ಉಚಿತ

ಉಚಿತ ಪ್ರಯಾಣ ನಮ್ಮ ಪ್ರಮಾಣ — ಮಹಿಳೆಯರಿಗೆ ಬಸ್ ಸಂಚಾರ ಉಚಿತ

ಮಂಗಳವಾರ, ಮೇ 9, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶ್ವಾನದ ಗತ್ತು
ನ್ಯೂಯಾರ್ಕ್‌ನಲ್ಲಿ ಸೋಮವಾರ ನಡೆದ ಶ್ವಾನ ಪ್ರದರ್ಶನದಲ್ಲಿ ಕಂಡುಬಂದ ನಾಯಿಯ ಗತ್ತು







ಕರ್ನಾಟಕ ಪ್ರದೇಶ ಜನತಾದಳ (ಜಾತ್ಯತೀತ)

ನಂಬಿಕೆ ಇಡಿ, ತೆನೆ ಹೊತ್ತ ಮಹಿಳೆಯ ಬಟನ್ ಒತ್ತುವ ನಿಮ್ಮ ಬೆರಳು ಕರ್ನಾಟಕವನ್ನೇ ಬದಲಿಸುತ್ತದೆ...

ಸಮಸ್ತ ಕರುನಾಡ ಜನರಿಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಬಹಿರಂಗ ಪತ್ರ

ನಾಡಿನ ಸಮಸ್ತ ಜನರಿಗೆ ನಮಸ್ಕಾರಗಳು.

ಕರ್ನಾಟಕ ಈಗ ಮಹತ್ತರ ತಿರುವಿನಲ್ಲಿದೆ. ನಮ್ಮ ಭಾವನಾತ್ಮಕತೆಯನ್ನು ಬಳಸಿ ಅಧಿಕಾರಕ್ಕೇರಿ ಲಕ್ಷಾಂತರ ಕೋಟಿ ಹಣವನ್ನು ಲೂಟಿ ಮಾಡುವುದನ್ನು ತಡೆಯಬೇಕಾದ, ನಮ್ಮ ಅಭಿವೃದ್ಧಿ, ನೆಮ್ಮದಿ, ನಮ್ಮತನವನ್ನು ಆಯ್ಕೆ ಮಾಡಿಕೊಳ್ಳಬೇಕಾದ ಸಂಕ್ರಮಣ ಸನ್ನಿವೇಶದಲ್ಲಿದೆ. ಇಂಥ ಹೊತ್ತಿನಲ್ಲಿ ಅನ್ಯಮಾರ್ಗವಿಲ್ಲದೆ ನಾನು ಈ ಪತ್ರ ಬರೆಯುತ್ತಿದ್ದೇನೆ.

ಚುನಾವಣೆ ಎಂದರೆ ನಮ್ಮ ವರ್ತಮಾನ ಮತ್ತು ಭವಿಷ್ಯವನ್ನು ಉತ್ತಮಪಡಿಸಿಕೊಳ್ಳುವ ಅವಕಾಶ ಎಂದು ನಿಮಗೆ ಗೊತ್ತಿದೆ. ಈ ಅವಕಾಶವನ್ನು ಕರ್ನಾಟಕದ ಅಭಿವೃದ್ಧಿಗೆ ಬಳಸಿಕೊಳ್ಳಲು ರಾಷ್ಟ್ರೀಯ ಪಕ್ಷಗಳ ಅಬ್ಬರದ ಮಧ್ಯೆ ನನ್ನದು ಏಕಾಂಗಿ ಹೋರಾಟ.

ಪ್ರತಿದಿನ ನನ್ನನ್ನು ಭೇಟಿಯಾಗುವ ವಿಕಲಚೇತನರು, ಅನಾರೋಗ್ಯಪೀಡಿತರು, ಅಶಕ್ತರು, ತಾಯಂದಿರು... ಹೀಗೆ ದಿಕ್ಕು ತೋಚದ ಅನೇಕರು ನನ್ನಲ್ಲಿ ಭರವಸೆಯ ಕಿರಣಗಳನ್ನು ಹುಡುಕಿದಾಗ ನನ್ನ ಅಂತಃಕರಣ ಅವರಿಗಾಗಿ ಮಿಡಿದಿದೆ. ಆದಾಗ್ಯೂ, ನನಗೂ ಇತಿಮಿತಿ ಇದೆ. ಅಸಹಾಯಕನಾಗುತ್ತೇನೆ. ಸರಕಾರ ನಡೆಸುವವರಿಗೆ ಬದ್ಧತೆ ಇದ್ದರೆ ಇದೆಲ್ಲಕ್ಕೂ ಪರಿಹಾರ ಸಾಧ್ಯ. ಹಾಗೆ ಆಗುತ್ತಿಲ್ಲ, ಆದ್ದರಿಂದಲೇ ಜನರಿಗಾಗಿ ನಾನು ಕಂಡುಕೊಂಡ ಪರಿಹಾರವೇ ಪಂಚರತ್ನ ಯೋಜನೆಗಳು.

ಬೆಳೆ ಬಿತ್ತನೆ, ಮಕ್ಕಳ ವಿದ್ಯಾಭ್ಯಾಸ, ಆರೋಗ್ಯ, ಸೂರು ಕಟ್ಟುವುದಕ್ಕೆ ಪ್ರತಿಯೊಬ್ಬರೂ ದೊಡ್ಡ ಮೊತ್ತದ ಸಾಲಕ್ಕೆ ಸಿಲುಕಿಕೊಳ್ಳುತ್ತಾರೆ. ಅದರಲ್ಲಿ ಕೆಲವರು ಅಪಮಾನಕ್ಕೆ ಅಂಜಿ ಜೀವವನ್ನೂ ಚೆಲ್ಲುತ್ತಾರೆ. ಬದುಕಿದ್ದಾಗ ಅವರಿಗೆ ಸಹಾಯ ಮಾಡಲಾಗದೆ, ಸತ್ತ ಮೇಲೆ ಶೋಕ ಸಂದೇಶ ಕೊಟ್ಟರೇನು ಫಲ ಅಲ್ಲವೇ? ಜನಸಾಮಾನ್ಯರನ್ನು ಸಾವಿನಕೂಪಕ್ಕೆ ತಳ್ಳುವ ಸಾಲದ ಶೂಲಕ್ಕೆ ಪಂಚರತ್ನ ಯೋಜನೆಗಳಲ್ಲಿ ಪರಿಪೂರ್ಣ ಪರಿಹಾರವಿದೆ.

ಸರ್ವರಿಗೂ ಉಚಿತ ಆರೋಗ್ಯ, ಸರ್ವರ ಮಕ್ಕಳಿಗೂ ಪಿಯುಸಿವರೆಗೆ ಉಚಿತ ಶಿಕ್ಷಣ, ಪ್ರತಿಯೊಬ್ಬರಿಗೂ ಉಚಿತ ಸೂರು, ಅನ್ನ ಕೊಡುವ ಅನ್ನದಾತನಿಗೆ ಶಕ್ತಿ, 24/7 ಉಚಿತ ವಿದ್ಯುತ್, ಪ್ರತಿ ವರ್ಷ ಎಕರೆಗೆ 10,000 ರೂ, ಗ್ರಾಮ ಮಟ್ಟದಲ್ಲಿಯೇ ಉದ್ಯೋಗ-ಆರ್ಥಿಕ ಅವಕಾಶಗಳ ಸೃಷ್ಟಿ ಇವು ನನ್ನ ಪಂಚರತ್ನಗಳು. ಇನ್ನೂ ಅನೇಕ ಕಾರ್ಯಕ್ರಮಗಳನ್ನು ಘೋಷಣೆ ಮಾಡಿದ್ದೇನೆ, ಆ ವಿವರ ಜನತಾ ಪ್ರಣಾಳಿಕೆಯಲ್ಲಿದೆ.

ವಿಜಯ ಕರ್ನಾಟಕ ಪತ್ರಿಕೆಯ ಅಂಕಣ ಒಂದರಲ್ಲಿ ಹೀಗೆ ಬರೆಯಲಾಗಿತ್ತು; "ಕುಮಾರಸ್ವಾಮಿ ಅವರ ಪಂಚರತ್ನ ಯೋಜನೆಗಳು ಜಾರಿಗೆ ಬಂದರೆ ಸ್ವರ್ಗ ಸದೃಶ ಕರ್ನಾಟಕ ನಿರ್ಮಾಣವಾಗುತ್ತದೆ " ಎಂದು. ನೀವೆಲ್ಲರೂ ಮುಕ್ತ ಮನಸ್ಸಿನಿಂದ ನನ್ನನ್ನು ಬೆಂಬಲಿಸಲು ಇನ್ನೇನು ಕಾರಣ ಬೇಕು? ಈ ಸಂಕಲ್ಪವು ನನ್ನ ಆರೋಗ್ಯವನ್ನೂ ಲೆಕ್ಕಿಸದೆ 10,000 ಕಿ.ಮಿ.ಗೂ ಹೆಚ್ಚು ದೂರ ಕ್ರಮಿಸುವಂತೆ ಮಾಡಿತು.

ನನ್ನ ಅಂತಃಕರಣದಿಂದ ಹುಟ್ಟಿದ ಪಂಚರತ್ನಗಳ ಸಾಕಾರ ನನ್ನೊಬ್ಬನಿಂದ ಅಸಾಧ್ಯ. ಹೀಗಾಗಿ, ಜನತೆಯ ಬೆಂಬಲಕ್ಕಾಗಿ ರಾಜ್ಯವಿಡೀ ಸುತ್ತಿ 5500ಕ್ಕೂ ಹೆಚ್ಚು ಗ್ರಾಮಗಳಿಗೆ ಭೇಟಿ ಕೊಟ್ಟೆ, ದಿನಕ್ಕೆ 18 ಗಂಟೆಗೂ ಹೆಚ್ಚು ಕಾಲ ಜನರೊಂದಿಗೆ ಬೆರೆತೆ. ಈ ರಥಯಾತ್ರೆ ನನ್ನ ಅಂತಃಕರಣವನ್ನು ಮತ್ತಷ್ಟು ವಿಶಾಲಗೊಳಿಸಿದೆ. ರಥಯಾತ್ರೆಯುದ್ದಕ್ಕೂ ಪಂಚರತ್ನ ಯೋಜನೆಗಳ ಅನುಷ್ಠಾನಕ್ಕಾಗಿ ನಿಮ್ಮ ಬೆಂಬಲ ಕೋರಿದ್ದೇನೆ. ಈಗಲೂ ಕೇಳುತ್ತಿದ್ದೇನೆ.

ತೆನೆ ಹೊತ್ತ ಮಹಿಳೆಯ ಗುರುತಿನ ಬಟನ್ ಮೇಲೆ ಒತ್ತುವ ನಿಮ್ಮ ಬೆರಳು, ಕರ್ನಾಟಕದ ಸಮಗ್ರ ಅಭಿವೃದ್ಧಿ ಪರ್ವಕ್ಕೆ ನಾಂದಿ ಹಾಡುತ್ತದೆ. ರಾಜ್ಯದ ಗತಿಯನ್ನೇ ಬದಲಿಸುವ ಪ್ರಕ್ರಿಯೆಯಾಗುತ್ತದೆ. ಸರ್ವರ ನೆಮ್ಮದಿ, ಶಾಂತಿ, ಸೌಹಾರ್ದತೆಯ ಸಮೃದ್ಧ ಕರ್ನಾಟಕದ ಮರು ನಿರ್ಮಾಣದತ್ತ ನಿಮ್ಮ ಬೆರಳು ಚಲಿಸಲಿ. ಜನಬಲವನ್ನೇ ನಂಬಿ ಇಡೀ ಕರ್ನಾಟಕ ಸುತ್ತಿದ್ದೇನೆ. ಮಾಜಿ ಪ್ರಧಾನಿಗಳಾದ ಶ್ರೀ ದೇವೇಗೌಡರೂ ಇಳಿವಯಸ್ಸಿನಲ್ಲೂ ಆರೋಗ್ಯ ಲೆಕ್ಕಿಸದೆ ಇದಕ್ಕಾಗಿಯೇ ಹೋರಾಡುತ್ತಿದ್ದಾರೆ. ನಮ್ಮ ಸಂಘರ್ಷಕ್ಕೆ ನೀವೇ ಶಕ್ತಿ.

ಹಳೆಯದನ್ನು ಕೆದಕಲಾರೆ. ಯಾರನ್ನೂ ನಿಂದಿಸಲಾರೆ. 2006, 2018ರಲ್ಲಿ ನನಗಾದ ಅನ್ಯಾಯವನ್ನು ಮರೆತಿದ್ದೇನೆ. ಆ ಕಹಿಯಲ್ಲೂ 25,000 ಕೋಟಿ ರೂ. ಸಾಲ ಮನ್ನಾ ಮಾಡಿದ ನನ್ನ ಬದ್ಧತೆಯನ್ನು, ನನ್ನ ಆಡಳಿತವನ್ನು ಅವಲೋಕಿಸಿ. ಒಮ್ಮೆ 5 ವರ್ಷದ ಪೂರ್ಣ ಬಹುಮತದ ಸರಕಾರ ನನಗೆ ಕೊಡಿ. ನಿಮ್ಮ ಬದುಕು ಸರಿಪಡಿಸುವ ಕೆಲಸ ನನಗೆ ಬಿಡಿ. ನನ್ನಲ್ಲಿ ವಿಶ್ವಾಸವಿಡಿ.

ವಂದನೆಗಳೊಂದಿಗೆ ,

ಸದಾ ನಿಮ್ಮ ಆಶೀರ್ವಾದವನ್ನೇ ಆಶಿಸುತ್ತಾ...

ನಿಮ್ಮ ಮನೆ ಮಗ
ಹೆಚ್.ಡಿ.ಕುಮಾರಸ್ವಾಮಿ




ಪ್ರಕಟಣೆ: ಜನತಾದಳ (ಜಾತ್ಯತೀತ) ಕರ್ನಾಟಕ

ಇರುವುದೊಂದೇ ಪರಿಹಾರ | **ಪ್ರಾದೇಶಿಕ ಪಕ್ಷಕ್ಕೆ ಅಧಿಕಾರ**

ತೆನೆ ಹೊತ್ತ ಮಹಿಳೆ ಗುರುತಿನ ಬಟನ್ ಒತ್ತಿ

ಶೈಕ್ಷಣಿಕ ಜಿಲ್ಲಾವಾರು ಫಲಿತಾಂಶ (ಶೇಕಡಾವಾರು)



ಉತ್ತೀರ್ಣದ ಪ್ರಮಾಣ
91.66% ಆಂಗ್ಲ ಮಾಧ್ಯಮ
85.59% ಕನ್ನಡ ಮಾಧ್ಯಮ

ಚಿತ್ರದುರ್ಗ: ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣಾ ಪ್ರಯೋಗಕ್ಕೆ ಯಶಸ್ಸು

ಕೋಟೆ ನಾಡಿನ ಐತಿಹಾಸಿಕ ಸಾಧನೆ

ಶಾಲೆಗಳು	ಶೇ 100 ಫಲಿತಾಂಶ	ಶೂನ್ಯ ಫಲಿತಾಂಶ
ಸರ್ಕಾರಿ	1,517	00
ಅನುದಾನಿತ	482	11
ಖಾಸಗಿ	1,824	23
ಒಟ್ಟು	3823	34

ಮೊದಲ 10 ಶೈಕ್ಷಣಿಕ ಜಿಲ್ಲೆ

ಜಿಲ್ಲೆಗಳು	ಫಲಿತಾಂಶ (ಶೇಕಡವಾರು)
ಚಿತ್ರದುರ್ಗ	96.8
ಮಂಡ್ಯ	96.74
ಹಾಸನ	96.68
ಬೆಂಗಳೂರು ಗ್ರಾಮಾಂತರ	96.48
ಚಿಕ್ಕಬಳ್ಳಾಪುರ	96.15
ಕೋಲಾರ	94.06
ಚಾಮರಾಜನಗರ	94.37
ಮಧುಗಿರಿ	93.23
ಕೊಡಗು	93.19
ವಿಜಯನಗರ	91.41

• ಜಿ.ಬಿ. ನಾಗರಾಜ್

ಚಿತ್ರದುರ್ಗ: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ 96.8ರಷ್ಟು ದಾಖಲೆಯ ಫಲಿತಾಂಶದೊಂದಿಗೆ ಚಿತ್ರದುರ್ಗ ಜಿಲ್ಲೆ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದೆ. ಇದೇ ಮೊದಲ ಬಾರಿಗೆ ಇಂತಹದೊಂದು ಹಿರಿಮೆ ಕೋಟೆ ನಾಡಿಗೆ ದಕ್ಕಿದ್ದು, ಶೈಕ್ಷಣಿಕ ವಲಯದಲ್ಲಿ ಸಂಚಲನ ಉಂಟು ಮಾಡಿದೆ.

ಕಳೆದ ವರ್ಷ ಶೇ 94.31 ಫಲಿತಾಂಶ ಪಡೆದಿದ್ದ ಜಿಲ್ಲೆಯು ರಾಜ್ಯದಲ್ಲಿ ನಾಲ್ಕನೇ ಸ್ಥಾನ ಪಡೆದಿತ್ತು. ಈ ವರ್ಷ ಶೇ 2.5 ಫಲಿತಾಂಶ ಸುಧಾರಿಸಿದ್ದು, ಮೊದಲ ಸ್ಥಾನಕ್ಕೆ ಏರಿದೆ. ಫಲಿತಾಂಶ ಸುಧಾರಣೆಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಕೈಗೊಂಡ ಕ್ರಮಗಳು ಯಶಸ್ಸಿಗೆ ಕಾರಣವಾಗಿವೆ.

2016–17ರಲ್ಲಿ ಶೇ 80.85ರಷ್ಟು ಫಲಿತಾಂಶ ಪಡೆದಿದ್ದ ಚಿತ್ರದುರ್ಗ, ರಾಜ್ಯದಲ್ಲಿ 16ನೇ ಸ್ಥಾನದಲ್ಲಿತ್ತು. 2018–19ರಲ್ಲಿ ಶೇ 87.8 ಫಲಿತಾಂಶದೊಂದಿಗೆ ಐದನೇ ಸ್ಥಾನಕ್ಕೆ ಏರಿತ್ತು. ಐದು ವರ್ಷಗಳಲ್ಲಿ ಫಲಿತಾಂಶ ಗಣನೀಯವಾಗಿ ಸುಧಾರಣೆ ಕಂಡಿದೆ. 2019- 20ರಲ್ಲಿ ಶೇ 88.66 ಫಲಿತಾಂಶದೊಂದಿಗೆ 'ಎ' ಗ್ರೇಡ್ ವ್ಯಾಪ್ತಿಗೆ ಸೇರಿತ್ತು. ಕೋವಿಡ್ ಸಂಕಷ್ಟದ ನಡುವೆಯೂ ವಿದ್ಯಾರ್ಥಿಗಳು ಕಲಿಕಾಸಕ್ತಿ ಕಾಪಾಡಿಕೊಳ್ಳಲು ಶಿಕ್ಷಕರು ಶ್ರಮಿಸಿದ್ದರು.

'ಎಸ್ಸೆಸ್ಸೆಲ್ಸಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಶಾಲೆಯಿಂದ ಹೊರಗೆ ಉಳಿಯದಂತೆ ಎಚ್ಚರ ವಹಿಸಿದ್ದೆವು. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಶಾಲೆಗೆ ಗೈರು ಹಾಜರಾಗುವುದನ್ನು ತಪ್ಪಿಸಿದೆವು. ಪಾಲಕರು ಹಾಗೂ ಮಕ್ಕಳೊಂದಿಗೆ ಸಮಾಲೋಚನೆ ನಡೆಸಿದ್ದರಿಂದ ಹಾಜರಾತಿ ಹೆಚ್ಚಳವಾಯಿತು. ಇದು ಫಲಿತಾಂಶ ಸುಧಾರಣೆಗೆ ಸಹಕಾರಿಯಾಯಿತು' ಎನ್ನುತ್ತಾರೆ ಡಿಡಿಪಿಐ ಕೆ. ರವಿಶಂಕರ್ ರೆಡ್ಡಿ.

ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟವನ್ನು ಪರೀಕ್ಷಿಸಲು ನಿರಂತರ ಮೌಲ್ಯಮಾಪನ ವಿಧಾನ ಅಳವಡಿಸಿಕೊಳ್ಳಲಾಗಿತ್ತು. ಜೂನ್ ತಿಂಗಳಿಂದ ಡಿಸೆಂಬರ್‌ವರೆಗೆ ನಡೆದ ಬೋಧನೆ ಆಧರಿಸಿ ಮಕ್ಕಳ ಮೌಲ್ಯಮಾಪನ ಮಾಡಲಾಗಿತ್ತು. ವಿದ್ಯಾರ್ಥಿಗಳ ಕಲಿಕಾ ಪ್ರಗತಿ, ಸಮಸ್ಯೆಗಳನ್ನು ಅರಿಯಲು ಈ ವಿಧಾನದಿಂದ ಅನುಕೂಲವಾಯಿತು ಎಂಬುದು ಶಿಕ್ಷಕರ ಅಭಿಪ್ರಾಯ.



> **ಪ್ರಥಮ ಸ್ಥಾನಕ್ಕೆ ಏರಬೇಕು ಎಂಬ ಗುರಿಯ ಸವಾಲನ್ನು ಸ್ವೀಕರಿಸಿದ್ದೆವು. ಶಿಕ್ಷಕರು ಕಠಿಣ ಪರಿಶ್ರಮದಿಂದ ಕಾರ್ಯ ನಿರ್ವಹಿಸಿದ ಫಲವಾಗಿ ಫಲಿತಾಂಶ ಸುಧಾರಣೆ ಕಂಡಿದೆ**
> **ಕೆ. ರವಿಶಂಕರ್ ರೆಡ್ಡಿ,** ಡಿಡಿಪಿಐ, ಚಿತ್ರದುರ್ಗ

ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜು ಒಟ್ಟಾಗಿರುವ ಜೂನಿಯರ್ ಕಾಲೇಜುಗಳಲ್ಲಿ ಕಳಪೆ ಫಲಿತಾಂಶ ಬರುತ್ತಿರುವುದನ್ನು ಶಿಕ್ಷಣ ಇಲಾಖೆ ಪತ್ತೆ ಮಾಡಿತ್ತು. ಶಿಕ್ಷಣಾಧಿಕಾರಿ, ವಿದ್ಯಾಧಿಕಾರಿ ಹಾಗೂ ಡಯಟ್ ಪ್ರಾಧ್ಯಾಪಕರನ್ನು ಒಳಗೊಂಡ ತಂಡವನ್ನು ರಚಿಸಿ ಜೂನಿಯರ್ ಕಾಲೇಜು ಮೇಲ್ವಿಚಾರಣೆಯ ಜವಾಬ್ದಾರಿ ನೀಡಲಾಯಿತು. ಈ ಬಾರಿ ಇಲ್ಲಿನ ಫಲಿತಾಂಶ ಗಣನೀಯ ಪ್ರಮಾಣದಲ್ಲಿ ಸುಧಾರಣೆ ಕಂಡಿದೆ.

'ಆರೂ ವಿಷಯಗಳ ಶಿಕ್ಷಕರಿಗೆ ಪರಿಣತರಿಂದ ತರಬೇತಿ ನೀಡಲಾಯಿತು. ಶಿಕ್ಷಕರ ಕ್ಲಬ್‌ಗಳ ಸಹಕಾರದಿಂದ ಸಂಪನ್ಮೂಲ ವ್ಯಕ್ತಿಗಳನ್ನು ಕರೆತಂದು ಕಾರ್ಯಾಗಾರ ನಡೆಸಲಾಯಿತು. ಬೋಧನೆಯಲ್ಲಿ ಎದುರಾಗುತ್ತಿದ್ದ ತೊಡಕುಗಳನ್ನು ನಿವಾರಿಸಿಕೊಳ್ಳಲು ಸಾಧ್ಯವಾಯಿತು. ವಿಷಯವಾರು ಶಿಕ್ಷಕರು ಶಾಲಾ ಹಂತದಲ್ಲಿ ಸ್ಪಷ್ಟ ಯೋಜನೆ ರೂಪಿಸಿಕೊಂಡರು' ಎನ್ನುತ್ತಾರೆ ರವಿಶಂಕರ್ ರೆಡ್ಡಿ.

ಎಸ್ಸೆಸ್ಸೆಲ್ಸಿಯ ಎಲ್ಲ ವಿಷಯಗಳಲ್ಲಿ ಅಂಕ ಗಳಿಕೆ (ಸ್ಕೋರಿಂಗ್) ಹಾಗೂ ಉತ್ತೀರ್ಣ (ಪಾಸಿಂಗ್) ಪ್ಯಾಕೇಜ್ ರೂಪಿಸಲಾಗಿತ್ತು. ಪ್ರಮುಖ ಪಾಠ, ಪದ್ಯಗಳನ್ನು ಒಳಗೊಂಡ ಸಾಹಿತ್ಯ ರಚಿಸಿ ಮಕ್ಕಳಿಗೆ ವಿತರಿಸಲಾಗಿತ್ತು. ಕಳೆದ ಕೆಲ ವರ್ಷಗಳಿಂದ ನಡೆಸುತ್ತಿರುವ ಈ ಪ್ರಯೋಗ ಮಕ್ಕಳ ಕೈಹಿಡಿದಿದೆ.

ಅಂಗವೈಕಲ್ಯ ಮೆಟ್ಟಿನಿಂತು ಸಾಧನೆ ಮಾಡಿದ ಬಾಲಕಿ

ಪ್ರಜಾವಾಣಿ ವಾರ್ತೆ

ಮುಡಿಪು (ದಕ್ಷಿಣ ಕನ್ನಡ ಜಿಲ್ಲೆ): ಅಂಗವೈಕಲ್ಯ ಮೆಟ್ಟಿನಿಂತ ಈ ಬಾಲಕಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ 91 (569 ಅಂಕ) ಫಲಿತಾಂಶ ದಾಖಲಿಸಿ ಶಾಲೆಗೆ ಟಾಪರ್ ಆಗಿದ್ದಾಳೆ.

ಕೊಣಾಜೆ ಪದವು ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಫಾತಿಮತ್ ನಿಶಾ ಎರಡೂ ಕಾಲುಗಳು ಶಕ್ತಿ ಕಳೆದುಕೊಂಡಿದ್ದು, ನಡೆದಾಡಲು ಆಗದು. ಆಕೆಯ ಪ್ರೌಢ ಶಿಕ್ಷಣದ ಕನಸಿಗೆ ದಾರಿದೀಪವಾದವರು ಸಹಪಾಠಿಗಳಾದ ಸಬ್ರಿನಾ, ಸಫಿಯಾ, ಸೌಜನ್ಯ.

ದಾನಿಗಳ ಸಹಕಾರದಿಂದ ಆಟೊ ರಿಕ್ಷಾ ಮೂಲಕ ಶಾಲೆಗೆ ಬರುತ್ತಿದ್ದ ಈಕೆಯನ್ನು ಈ ಮೂವರು ಸಹಪಾಠಿಗಳು ಎತ್ತಿಕೊಂಡು ಗಾಲಿಕುರ್ಚಿಯಲ್ಲಿ ಕುಳ್ಳಿರಿಸಿ, ಶಾಲೆಯ ಎಲ್ಲ ಚಟುವಟಿಕೆಗಳಿಗೆ ನೆರವಾಗುತ್ತಿದ್ದರು. ಶಿಕ್ಷಕರು ಹೆಚ್ಚಿನ ಪ್ರೋತ್ಸಾಹ ನೀಡುತ್ತಿದ್ದರು.

ಸಾಧನೆ ಮಾಡಬೇಕೆನ್ನುವ ಛಲದೊಂದಿಗೆ ತರಗತಿಯಲ್ಲಿ ಕೇಳಿದ ಪಾಠವನ್ನೇ ಸರಿಯಾಗಿ ಮನನ ಮಾಡುತ್ತಿದ್ದ ಈಕೆ, ಯಾವುದೇ ಕೋಚಿಂಗ್ ಪಡೆದಿರಲಿಲ್ಲ. ಅಂತಿಮ ಪರೀಕ್ಷೆ ಫಲಿತಾಂಶದಲ್ಲಿ ಈಕೆ ಕನ್ನಡದಲ್ಲಿ 121, ಇಂಗ್ಲಿಷ್ 99, ಹಿಂದಿ 95, ಗಣಿತ 78, ವಿಜ್ಞಾನ 84, ಸಮಾಜ ವಿಜ್ಞಾನದಲ್ಲಿ 92 ಅಂಕಗಳನ್ನು ಗಳಿಸಿದ್ದಾಳೆ.

'ಎಸ್ಸೆಸ್ಸೆಲ್ಸಿ ಫಲಿತಾಂಶ ನನಗೆ ಖುಷಿ ತಂದಿದೆ. ಮನೆಯವರಿಗೂ ಖುಷಿಯಾಗಿದೆ. ಶಾಲೆಯ ಎಲ್ಲ ಶಿಕ್ಷಕರು, ಮೂವರು ಸಹಪಾಠಿಗಳು, ಶಿಕ್ಷಕಿ ಮೀನಾ ಗಾಂವ್ಕರ್ ಸೇರಿದಂತೆ ನನ್ನ ಶಿಕ್ಷಣದ ಕನಸಿಗೆ ಅನೇಕರು ಸಹಕಾರ ನೀಡಿದ್ದಾರೆ. ಅವರೆಲ್ಲರಿಗೂ ನಾನು ಚಿರಋಣಿಯಾಗಿದ್ದೇನೆ. ಪರೀಕ್ಷೆ ಸಮಯದಲ್ಲಿ ನಾನು ತಡರಾತ್ರಿಯವರೆಗೂ ಓದುತ್ತಿರುವಾಗ ಅಜ್ಜಿ ಕೂಡ ಮಲಗದೆ ನನಗೆ ಸಹಕಾರ ನೀಡಿದ್ದಾರೆ. ಶಿಕ್ಷಣಕ್ಕೆ ಯಾರಾದರೂ ಸಹಕಾರ ನೀಡಿದರೆ ವಿದ್ಯಾಭ್ಯಾಸ ಮುಂದುವರಿಸಿ ವೈದ್ಯೆಯಾಗಬೇಕೆಂಬ ಕನಸು ಇಟ್ಟುಕೊಂಡಿದ್ದೇನೆ' ಎಂದು ಫಾತಿಮತ್ ಪ್ರತಿಕ್ರಿಯಿಸಿದರು.


ಫಾತಿಮತ್ ನಿಶಾ

ಚಿಕ್ಕ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡಿರುವ ಈಕೆಯನ್ನು ತಾಯಿ ಹಾಗೂ ಅಜ್ಜಿ ಸಾಕುತ್ತಿದ್ದಾರೆ. ಬಡತನದಲ್ಲಿ ಜೀವನ ಸಾಗಿಸುತ್ತಿರುವ ಈ ಕುಟುಂಬಕ್ಕೆ ಸ್ವಂತ ಸೂರು ಇಲ್ಲ. ತಾಯಿಯ ಬೀಡಿ ಕಟ್ಟುವ ಕೆಲಸವೇ ಕುಟುಂಬಕ್ಕೆ ಆಧಾರ. ಕೊಣಾಜೆಯಲ್ಲಿ ಇವರು ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದಾರೆ.

ಸಂಪರ್ಕಕ್ಕೆ ಮೊ.94804 20122

ಅಂಗವೈಕಲ್ಯ ಮೀರಿ ಪರೀಕ್ಷೆ ಗೆದ್ದ ಕೇಶವ

ಎಲ್ಲದಕ್ಕೂ ಗಾಲಿ ಕುರ್ಚಿಯೇ ಆಸರೆ; ಸ್ಟೀಫನ್ ಹಾಕಿಂಗ್ ಬದುಕೇ ಮಾದರಿ

• ಮಲ್ಲಿಕಾರ್ಜುನ ನಾಲವಾರ

ಕಲಬುರಗಿ: ಇಲ್ಲಿನ ಕೈಲಾಸ ನಗರದ ಶಾಂತೇಶ್ವರ ಪ್ರೌಢಶಾಲೆಯ ವಿದ್ಯಾರ್ಥಿ ಕೇಶವ ವಿಷ್ಣು ಸುತಾರಗೆ ಬಹುಅಂಗವೈಕಲ್ಯ ಸಮಸ್ಯೆ. ಬೆನ್ನು ನೋವಿನ ಜೊತೆಗೆ ಸೊಂಟದ ಕೆಳಭಾಗಕ್ಕೆ ಸ್ವಾಧೀನವಿಲ್ಲ. ಎಲ್ಲದಕ್ಕೂ ಗಾಲಿ ಕುರ್ಚಿಯೇ 'ಆಸರೆ'. ಇಷ್ಟೆಲ್ಲ ಸವಾಲು ಎದುರಿಸಿ ಆತ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ 625ಕ್ಕೆ 586 (ಶೇ 93.76) ಅಂಕ ಗಳಿಸಿದ್ದಾನೆ.

ತಂದೆ ವಿಷ್ಣು ಕೃಷಿಕರು, ತಾಯಿ ಗಾಯತ್ರಿ ಮಳಿಗೆ ನಡೆಸುತ್ತಾರೆ. ಈ ದಂಪತಿಗೆ ಜನಿಸಿದ ಕೇಶವಗೆ ಮೂರನೇ ತಿಂಗಳಲ್ಲಿ ಅಂಗವೈಕಲ್ಯ ಕಾಣಿಸಿತು. ಕ್ರಮೇಣ ಅದು ದೇಹವನ್ನು ಕುಬ್ಜಗೊಳಿಸಿತು. ಆದರೆ, ಮನೋಬಲ ಮತ್ತು ಜೀವನೋತ್ಸಾಹ ಕುಗ್ಗಿಸಲಿಲ್ಲ.

ಅಪರೂಪದ ನರದೌರ್ಬಲ್ಯದಿಂದ ಬಳಲುತ್ತಿದ್ದ ಖ್ಯಾತ ಭೌತಶಾಸ್ತ್ರಜ್ಞ ದಿ.ಸ್ಟೀಫನ್ ಹಾಕಿಂಗ್ ಅವರ ಜೀವನ ಚರಿತ್ರೆಯನ್ನು ಟಿ.ವಿಯಲ್ಲಿ ನೋಡಿದ ಕೇಶವಗೆ ಸಾಧನೆ ಮಾಡಲು ಪ್ರೇರಣೆ ಸಿಕ್ಕಿತು. ಗಾಲಿಕುರ್ಚಿ ಮೇಲೆ ಕೂತುಕೊಂಡೆ ಹಾಕಿಂಗ್‌ನಂತೆ ಸಾಧನೆ ಮಾಡಲು ಪಣತೊಟ್ಟ ಆತನಿಗೆ ತಂದೆ, ತಾಯಿ ಪ್ರೋತ್ಸಾಹಿಸಿದರು.

'ತರಗತಿಗಳಿಗೆ ಉತ್ತೀರ್ಣವಾಗುತ್ತ ಸಾಗಿದಂತೆ ಕೇಶವನ ದೇಹ ಕುಗ್ಗತೊಡಗಿತು. ಬೆನ್ನು ಹಿಂದೆ ಅಡ್ಡಲಾಗಿ ಬೆಳೆದ ಮೂಳೆಯಿಂದ ತುಂಬಾ ನೋವು ಆಗುತಿತ್ತು. ಹೆಚ್ಚು ಹೊತ್ತು ಕೂರಲು ಆಗುತ್ತಿರಲಿಲ್ಲ. ಆದರೂ, ಎಲ್ಲವನ್ನೂ ಸುಧಾರಿಸಿಕೊಂಡು ಓದಿದ. ಅನಾರೋಗ್ಯದಿಂದ ತರಗತಿಗೆ ಗೈರಾದಾಗ ಸ್ನೇಹಿತರು ಮನೆಗೆ ಬಂದು ಪಾಠದ ನೋಟ್ಸ್ ನೀಡಿದರು' ಎಂದು ಕೇಶವ ತಾಯಿ ಗಾಯತ್ರಿ ತಿಳಿಸಿದರು.


ಕೇಶವ ವಿಷ್ಣು ಸುತಾರ

> **ಅಂಗವೈಕಲ್ಯದಿಂದ ಕಿರಿಯ ಮಗನನ್ನು ಕಳೆದುಕೊಂಡಿದ್ದೇವೆ. ಈಗ ಕೇಶವನೇ ನಮಗೆ ಜೀವನದ ಭರವಸೆ. ವಿಜ್ಞಾನಿ ಆಗುವ ಆತನ ಕನಸಿಗಾಗಿ ದುಡಿಯುತ್ತೇವೆ. ಆತನ ಬೆನ್ನು ಮೂಳೆ ಶಸ್ತ್ರ ಚಿಕಿತ್ಸೆಗೆ ಹಣ ಹೊಂದಿಸಬೇಕಿದೆ**
> **ಗಾಯತ್ರಿ,** ಕೇಶವನ ತಾಯಿ

> **ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ 93.76 ಅಂಕ ಗಳಿಸಿರುವೆ. ಇಸ್ರೊ ವಿಜ್ಞಾನಿಯಾಗಿ ತಂದೆ-ತಾಯಿ ಮೇಲಿನ ಹೊರೆ ತಗ್ಗಿಸಬೇಕಿದೆ. ಇನ್ನು ಐದು ವರ್ಷ ದುಡ್ಡು ಕೊಟ್ಟು ಕಲಿಸಿದರೆ ಸಾಕು, ಜೀವನ ಪರ್ಯಂತ ಅವರನ್ನು ನಾನು ಸಾಕುವೆ**
> **ಕೇಶವ,** ವಿದ್ಯಾರ್ಥಿ

'ಪ್ರತಿದಿನ ಕೇಶವಗೆ ಹೊತ್ತುಕೊಂಡು ಶಾಲೆಗೆ ಬಿಟ್ಟು ಮತ್ತು ಕರೆತರಲು ಕಷ್ಟವಾಗುತಿತ್ತು. ಆಗ ದಾನಿಗಳು ಗಾಲಿಕುರ್ಚಿ ನೀಡಿದರು. ಶಾಲೆಯ ಮೇಲಿನ ಮಹಡಿ ಹತ್ತುವುದು ಕಷ್ಟವಾದಾಗ, ಶಿಕ್ಷಕರು ತರಗತಿಯನ್ನೇ ಕೆಳ ಅಂತಸ್ತಿಗೆ ವರ್ಗಾಯಿಸಿದರು' ಎಂದು ವಿವರಿಸಿದರು.

'ಅಜ್ಜ, ಅಪ್ಪನ ಮಾತೇ ಪ್ರೇರಣೆ'

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: 'ಆರಂಭದಿಂದಲೂ ಓದಿಗೆ ಶಾಲೆಯಷ್ಟೇ ಮನೆಯಲ್ಲಿಯೂ ಪ್ರೋತ್ಸಾಹ ಇತ್ತು. ಓದು ನಮಗೆ ಘನತೆ ಮತ್ತು ಗೌರವ ತಂದುಕೊಡುತ್ತದೆ ಎಂದು ನನ್ನ ತಾತ ಮತ್ತು ಅಪ್ಪ ಹೇಳುತ್ತಲೇ ಇದ್ದರು...'

–ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 625ಕ್ಕೆ 625 ಅಂಕ ಪಡೆದು ರಾಜ್ಯಕ್ಕೆ ಅಗ್ರಸ್ಥಾನ ಗಳಿಸಿದ ಚಿಕ್ಕಬಳ್ಳಾಪುರದ ಅಗಲಗುರ್ಕಿ ಬಿಜಿಎಸ್ ಶಾಲೆಯ ವಿದ್ಯಾರ್ಥಿ ಎನ್. ಯಶಸ್ ಗೌಡ ಅವರ ಮಾತಿದು.

ಈತ ದೇವನಹಳ್ಳಿ ತಾಲ್ಲೂಕಿನ ಮಜ್ಜಿಗೆ ಹೊಸಹಳ್ಳಿಯ ನಾರಾಯಣ ಸ್ವಾಮಿ ಮತ್ತು ಆರ್. ಭಾಗ್ಯಮ್ಮ ದಂಪತಿಯ ಪುತ್ರ. ಅವರ ತಂದೆಯ ಕೃಷಿಯ ಜೊತೆಗೆ ಭಾರತೀಯ ಜೀವ ವಿಮಾ ನಿಗಮದ ಏಜೆಂಟರಾಗಿಯೂ ಕೆಲಸ ಮಾಡುತ್ತಿದ್ದಾರೆ.

ಇಷ್ಟೊಂದು ಅಂಕ ಪಡೆಯಲು ತಯಾರಿ ಹೇಗಿತ್ತು ಎಂದು 'ಪ್ರಜಾವಾಣಿ' ಪ್ರಶ್ನಿಸಿದಾಗ ಯಶಸ್ ಹೇಳಿದ್ದು ಇಷ್ಟು. 'ದೀರ್ಘ ಅವಧಿಯ ಓದು ಮತ್ತು ಶಾಲೆಯ ವಾತಾವರಣ ಈ ಸಾಧನೆಗೆ ಕಾರಣ. ಹಿಂದಿನ ವರ್ಷ ನಮ್ಮ ಶಾಲೆಯ ಐವರು ವಿದ್ಯಾರ್ಥಿಗಳು 625ಕ್ಕೆ 625 ಅಂಕ ಪಡೆದಿದ್ದರು. ಅವರಂತೆ ನಾನು ಸಹ ಉತ್ತಮ ಅಂಕ ಪಡೆಯಬೇಕು ಎನ್ನುವ ಗುರಿ ಇತ್ತು' ಎಂದರು.


ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಅಗ್ರಸ್ಥಾನ ಗಳಿಸಿದ ಚಿಕ್ಕಬಳ್ಳಾಪುರದ ಅಗಲಗುರ್ಕಿ ಬಿಜಿಎಸ್ ಶಾಲೆಯ ವಿದ್ಯಾರ್ಥಿ ಯಶಸ್ ಗೌಡನಿಗೆ ತಾಯಿ ಭಾಗ್ಯಮ್ಮ ಸಿಹಿ ತಿನ್ನಿಸಿದರು. ತಂದೆ ನಾರಾಯಣಸ್ವಾಮಿ, ಅಜ್ಜ (ತಾಯಿಯ ತಂದೆ) ರಾಮಾಂಜಿನಪ್ಪ ಚಿತ್ರದಲ್ಲಿ ಇದ್ದಾರೆ

'ತರಗತಿಗಳು ನಿತ್ಯ ಬೆಳಿಗ್ಗೆ 7.45ಕ್ಕೆ ಆರಂಭವಾಗಿ ಸಂಜೆ 6ಕ್ಕೆ ಮುಗಿಯುತ್ತಿದ್ದವು. ಪರೀಕ್ಷೆ ಹತ್ತಿರ ಬಂದಂತೆ ರಾತ್ರಿ 9ರವರೆಗೂ ತರಗತಿ ನಡೆಯುತ್ತಿದ್ದವು. ಮನೆಯಲ್ಲಿ ಬೆಳಿಗ್ಗೆ 4ರಿಂದ 5ರವರೆಗೆ ಓದುತ್ತಿದ್ದೆ. ಪರೀಕ್ಷೆ ಸಮಯದಲ್ಲಿ ಓದಿಗೆ ಹೆಚ್ಚು ಗಮನಕೊಟ್ಟೆ. ಅದರ ಫಲ ಈಗ ನನಗೆ ದೊರೆತಿದೆ. ಅಂದಿನ ಪಾಠವನ್ನು ಅಂದೇ ಅರ್ಥ ಮಾಡಿಕೊಳ್ಳುತ್ತಿದ್ದೆ. ಅನುಮಾನ ಬಂದರೆ ತಕ್ಷಣ ಶಿಕ್ಷಕರನ್ನು ಕೇಳುತ್ತಿದ್ದೆ' ಎಂದರು.

'ನನ್ನ ಜ್ಞಾನ ಹೆಚ್ಚಳಕ್ಕೆ ವಾರಾಂತ್ಯ ಮತ್ತು ತಿಂಗಳಾಂತ್ಯದಲ್ಲಿ ನಡೆಸುತ್ತಿದ್ದ ಪರೀಕ್ಷೆ ನೆರವಾದವು. ಒಂದು ಮಾಸಿಕ ಪರೀಕ್ಷೆಯಲ್ಲಿ ನಾನು ಮಾಡಿರುವ ತಪ್ಪುಗಳನ್ನು ಮುಂದಿನ ಮಾಸಿಕ ಪರೀಕ್ಷೆಯಲ್ಲಿ ಮಾಡುತ್ತಿರಲಿಲ್ಲ' ಎಂದು ಓದಿನ ಹಾದಿಯ ಬಗ್ಗೆ ವಿವರಿಸಿದರು.


ದೃಷ್ಟಿದೋಷವುಳ್ಳ ವಿದ್ಯಾರ್ಥಿನಿ ಚಿನ್ಮಯಿಗೆ ಶೇ 98 ಅಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಯಲಹಂಕದ ಮಾತೃ ಎಜುಕೇಷನಲ್ ಟ್ರಸ್ಟ್ ಶಾಲೆಯ ದೃಷ್ಟಿದೋಷವುಳ್ಳ ವಿದ್ಯಾರ್ಥಿನಿ ಚಿನ್ಮಯಿ ಚಿತ್ರಿಕಿ ಶೇ 98 ಅಂಕಗಳಿಸಿ ಹೆಮ್ಮೆಯ ಸಾಧನೆ ಮಾಡಿದ್ದಾರೆ.

ಚಿನ್ಮಯಿ 625ಕ್ಕೆ 612 ಅಂಕಗಳಿಸಿ ಗಮನ ಸೆಳೆದಿದ್ದಾರೆ. ಈಕೆ ಬಳ್ಳಾರಿ ಜಿಲ್ಲೆಯ ಸಂಡೂರಿನ ಚಿತ್ರಿಕಿ ವಿಶ್ವನಾಥ್ ಹಾಗೂ ಮಂಗಳಗೌರಿ ದಂಪತಿ ಪುತ್ರಿ.

'ಹುಟ್ಟುತ್ತಲೇ ಚಿನ್ಮಯಿಗೆ ದೃಷ್ಟಿದೋಷದ ಸಮಸ್ಯೆ ಕಾಣಿಸಿತ್ತು. ಸಂಡೂರಿನಲ್ಲಿ ದೃಷ್ಟಿದೋಷವುಳ್ಳ ಮಕ್ಕಳ ಕಲಿಕೆಗೆ ಶಾಲೆಗಳು ಇರಲಿಲ್ಲ. ಮಗಳಿಗೆ ಶಿಕ್ಷಣ ಕೊಡಿಸಲು ಪೋಷಕರು ಬೆಂಗಳೂರಿಗೆ ಸ್ಥಳಾಂತರಗೊಂಡರು. ದೃಷ್ಟಿದೋಷದ ಸಮಸ್ಯೆ ನಡುವೆಯೂ ಉತ್ತಮ ಸಾಧನೆ ಮಾಡಿದ್ದಾರೆ' ಎಂದು ಟ್ರಸ್ಟ್‌ನ ಸಲಹಾ ಸಮಿತಿ ಸದಸ್ಯ ಚಂದ್ರಶೇಖರ ಪುಟ್ಟಪ್ಪ ತಿಳಿಸಿದ್ದಾರೆ.


ಚಿನ್ಮಯಿ ಚಿತ್ರಿಕಿ

'ಮಗಳು ಚಿಕ್ಕವಳಿದ್ದಾಗಲೇ ಕಣ್ಣಿನ ಸಮಸ್ಯೆ ಇರುವುದು ತಿಳಿಯಿತು. ಹಲವು ಕಡೆ ತಪಾಸಣೆ ನಡೆಸಿದ್ದರೂ ಸಮಸ್ಯೆ ನಿವಾರಣೆಯಾಗಿಲ್ಲ. ಮನೆಯಲ್ಲಿ ಅವರ ತಾತ ಕಲಿಸುತ್ತಿದ್ದರು. ಬ್ರೈಲ್ ಲಿಪಿಯಲ್ಲಿ ಪರೀಕ್ಷೆ ಬರೆಯಲು ಅವಕಾಶ ಸಿಗಲಿಲ್ಲ. ಪ್ರಜ್ವಲ್ ಎಂಬ ವಿದ್ಯಾರ್ಥಿಯ ಸಹಾಯ ಪಡೆದು ಪುತ್ರಿ ಪರೀಕ್ಷೆ ಬರೆದಳು. ಶಾಲೆಯ ಮ್ಯಾನೇಜಿಂಗ್ ಟ್ರಸ್ಟಿ ಮುಕ್ತಾ ಅವರ ಪ್ರೋತ್ಸಾಹದಿಂದ ಹೆಚ್ಚಿನ ಅಂಕ ಗಳಿಸಲು ಸಾಧ್ಯವಾಗಿದೆ' ಎಂದು ತಾಯಿ ಮಂಗಳಗೌರಿ ತಿಳಿಸಿದರು.

ಸ್ವರ್ಣ ಮಂದಿರದ ಬಳಿ ಮತ್ತೆ ಸ್ಫೋಟ

ಅಮೃತಸರ (ಪಿಟಿಐ): ಸ್ವರ್ಣ ಮಂದಿರದ ಪಾರಂಪರಿಕ ಮಾರ್ಗದಲ್ಲಿ ಶನಿವಾರ ಸ್ಫೋಟ ಸಂಭವಿಸಿದ ಸ್ಥಳಕ್ಕೆ ಸಮೀಪದಲ್ಲೇ ಸೋಮವಾರ ಬೆಳಿಗ್ಗೆ ಮತ್ತೊಂದು ಸ್ಫೋಟ ಸಂಭವಿಸಿದ್ದು, ಒಬ್ಬನಿಗೆ ಗಾಯವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸೋಮವಾರ ಬೆಳಿಗ್ಗೆ ಸುಮಾರು 6.15ಕ್ಕೆ ಸಂಭವಿಸಿದ ಸ್ಫೋಟದಲ್ಲಿ ಹೆಚ್ಚು ಹಾನಿ ಸಂಭವಿಸಿಲ್ಲ. ಸ್ಫೋಟಕವನ್ನು ಕಂಟೇನರ್‌ನಲ್ಲಿ ಇರಿಸಲಾಗಿತ್ತು. ಸ್ಫೋಟದ ಹಿಂದಿರುವ ನಿಖರ ಕಾರಣವನ್ನು ಇನ್ನಷ್ಟೇ ತಿಳಿಯಬೇಕಿದೆ ಎಂದು ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ಗೌರವ್ ಯಾದವ್ ಹೇಳಿದ್ದಾರೆ.

ಲೈಂಗಿಕ– ಮಾನಸಿಕ ಕಿರುಕುಳ ಪ್ರಕರಣ

ಶ್ರೀನಿವಾಸ್ ಅರ್ಜಿ ವಿಚಾರಣೆಗೆ 'ಸುಪ್ರೀಂ' ಒಪ್ಪಿಗೆ

ನವದೆಹಲಿ (ಪಿಟಿಐ): ಅಸ್ಸಾಂ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷೆ ಸ್ಥಾನದಿಂದ ಉಚ್ಚಾಟನೆಯಾಗಿರುವ ಅಂಗ್‌ಕಿತಾ ದತ್ತ ಅವರು ತಮ್ಮ ವಿರುದ್ಧ ದಾಖಲಿಸಿರುವ ಮಾನಸಿಕ ಕಿರುಕುಳ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರೀಕ್ಷಣಾ ಜಾಮೀನು ತಿರಸ್ಕರಿಸಿರುವ ಗುವಹಾಟಿ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ, ಭಾರತೀಯ ಯುವ ಕಾಂಗ್ರೆಸ್ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಸಲ್ಲಿಸಿರುವ ಅರ್ಜಿಯನ್ನು ಮೇ 15ರಂದು ವಿಚಾರಣೆಗೆ ಕೈಗೆತ್ತಿಕೊಳ್ಳಲು ಸುಪ್ರೀಂ ಕೋರ್ಟ್ ಸೋಮವಾರ ಒಪ್ಪಿಗೆ ಸೂಚಿಸಿದೆ.


ಶ್ರೀನಿವಾಸ್

ಶ್ರೀನಿವಾಸ್ ಪರ ವಾದ ಮಂಡಿಸಿದ ಹಿರಿಯ ವಕೀಲ ದೇವದತ್ತ ಕಾಮತ್ ಅವರು ಅಸ್ಸಾಂನಲ್ಲಿ ಹಿಂಸಾಚಾರ ನಡೆಯುತ್ತಿರುವುದರಿಂದ ಅರ್ಜಿಯನ್ನು ತುರ್ತು ವಿಚಾರಣೆಗೆ ಕೈಗೆತ್ತಿಕೊಳ್ಳುವ ಅಗತ್ಯವಿದೆ ಎಂದು ಕೋರಿದರು. ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ನ್ಯಾಯಪೀಠವು 'ನಾವು ಈ ಅರ್ಜಿಯನ್ನು ಇದೇ 15ರಂದು ವಿಚಾರಣೆಗೆ ಕೈಗೆತ್ತಿಕೊಳ್ಳಲಿದ್ದೇವೆ' ಎಂದು ತಿಳಿಸಿತು.

ಏನಿದು ಪ್ರಕರಣ?: ಅಸ್ಸಾಂ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷೆಯಾಗಿದ್ದ ಅಂಗ್‌ಕಿತಾ ದತ್ತ ಅವರು, 'ಕಳೆದ ಆರು ತಿಂಗಳಿನಿಂದ ಶ್ರೀನಿವಾಸ್ ನನಗೆ ಮಾನಸಿಕ ಮತ್ತು ಲೈಂಗಿಕ ಕಿರುಕುಳ ನೀಡುತ್ತಿದ್ದಾರೆ. ಈ ಕುರಿತು ಪಕ್ಷದ ಹಿರಿಯರಿಗೆ ದೂರು ನೀಡಿದರೆ ಭೀಕರ ಪರಿಣಾಮ ಎದುರಿಸಬೇಕಾಗುತ್ತದೆ ಎಂದೂ ಬೆದರಿಕೆ ಹಾಕಿದ್ದಾರೆ' ಎಂದು ಆರೋಪಿಸಿ, ಅಸ್ಸಾಂ ದಿಸ್ಪುರ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

'ರಾಯಪುರದಲ್ಲಿ ಇತ್ತೀಚೆಗೆ ನಡೆದ ಪಕ್ಷದ ಮಹಾ ಅಧಿವೇಶನದಲ್ಲಿ ಶ್ರೀನಿವಾಸ್ ನನ್ನನ್ನು ಥಳಿಸಿ, ತೋಳನ್ನು ಹಿಡಿದು, ತಳ್ಳಿದ್ದಾರೆ. ತಮ್ಮ ವಿರುದ್ಧ ದೂರು ನೀಡಿದರೆ ಪಕ್ಷದಲ್ಲಿ ಹಿನ್ನಡೆ ಉಂಟು ಮಾಡುವುದಾಗಿಯೂ ಶ್ರೀನಿವಾಸ್ ಬೆದರಿಕೆಯೊಡ್ಡಿದ್ದರು' ಎಂದು ದತ್ತ ಅವರು ಏಪ್ರಿಲ್ 18ರಂದು ಸರಣಿ ಟ್ವೀಟ್ ಮೂಲಕ ಶ್ರೀನಿವಾಸ್ ವಿರುದ್ಧ ಆರೋಪ ಮಾಡಿದ್ದರು.

ಪಕ್ಷ ವಿರೋಧಿ ಚಟುವಟಿಕೆ ನಡೆಸಿದ ಕಾರಣ ನೀಡಿ, ಕಾಂಗ್ರೆಸ್ ದತ್ತ ಅವರಿಗೆ ಷೋಕಾಸ್ ನೋಟಿಸ್ ನೀಡಿ, ಅವರನ್ನು ಆರು ವರ್ಷಗಳ ಕಾಲ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಹೊರಹಾಕಿದೆ.

ರಾಣಿ ಮೀನಿನ ರಫ್ತು ಕುಸಿತ: ಬೆಲೆ ಶೇ60ರಷ್ಟು ಇಳಿಕೆ

ತವರಲ್ಲೇ ಉಳಿದ ಮಂಗಳೂರು 'ಮದುಮಗಳು'

• ವಿಕ್ರಂ ಕಾಂತಿಕೆರೆ

ಮಂಗಳೂರು: ಮೀನು ಉದ್ಯಮದಲ್ಲಿ ರಫ್ತಿಗೆ ಸಂಬಂಧಿಸಿದ 'ರಾಜ'ನೆಂದೇ ಪರಿಗಣಿಸಲಾಗುವ ರಾಣಿ ಅಥವಾ ಮದಿಮಲ್ (ಮದುಮಗಳು) ಮೀನು ಕೆಲವು ದಿನಗಳಿಂದ ವಿದೇಶಕ್ಕೆ ಹೋಗದೆ ಇಲ್ಲೇ ಉಳಿದುಕೊಂಡಿದೆ. ಬೇಡಿಕೆ ಇಲ್ಲದ್ದರಿಂದ ಮೀನಿನ ದರ ಶೇಕಡ 60ರಷ್ಟು ಇಳಿಕೆಯಾಗಿದೆ. ಹೀಗಾಗಿ, ಮೀನುಗಾರಿಕೆಯೂ ಬಹುತೇಕ ಸ್ಥಗಿತಗೊಂಡಿದ್ದು, ಬೋಟ್ ಮಾಲೀಕರು ನಷ್ಟವನ್ನು ಲೆಕ್ಕ ಹಾಕುತ್ತ ಕುಳಿತಿದ್ದಾರೆ.

ಇಂಗ್ಲಿಷ್‌ನಲ್ಲಿ Pink Perch ಅಥವಾ Japanese threadfin bream ಎಂದೂ, ಕನ್ನಡದಲ್ಲಿ ರಾಣಿ ಎಂದೂ, ತುಳುವಿನಲ್ಲಿ ಮದಿಮಲ್ ಎಂದೂ ಕರೆಯುವ ಈ ಮೀನಿನ ಮಾಂಸವನ್ನು ಬೇರ್ಪಡಿಸಿ ಸಿಗಡಿ (ಪ್ರಾನ್ಸ್), ಏಡಿ (ಕ್ರ್ಯಾಬ್) ಮುಂತಾದ ಮೀನಿನ ಮಾಂಸದ ರೀತಿಯಲ್ಲಿ ಅಚ್ಚು ಮಾಡಿ ವಿದೇಶಗಳಿಗೆ ಕಳುಹಿಸಲಾಗುತ್ತದೆ. ಹೀಗಾಗಿ, ಈ ಮೀನನ್ನು ರಫ್ತು ಉದ್ದೇಶಕ್ಕೇ ಹೆಚ್ಚಾಗಿ ಬಳಸಲಾಗುತ್ತದೆ.

ಈಗ ಕೆಲವು ದಿನಗಳಿಂದ ರಾಣಿ ಮೀನಿನ ರಫ್ತು ಕಡಿಮೆಯಾಗಿದೆ. ಇದಕ್ಕೆ ಕಾರಣ ಏನೆಂಬುದಕ್ಕೆ ಸ್ಪಷ್ಟ ಉತ್ತರ ನೀಡಲು ಯಾರೂ ತಯಾರಿಲ್ಲ.

'ಮಂಗಳೂರು ನಗರದಲ್ಲಿ ನೀರಿನ ಅಭಾವ ಕಂಡುಬಂದಿರುವ ಕಾರಣ ಕೈಗಾರಿಕೆಗೆ ನೀರು ಸರಬರಾಜು ಮಾಡುವುದನ್ನು ನಿಲ್ಲಿಸಲಾಗಿದೆ. ಹೀಗಾಗಿ, ಮೀನು ಶುಚಿಗೊಳಿಸಿ ಪ್ಯಾಕ್ ಮಾಡಲು ಆಗುತ್ತಿಲ್ಲ. ಈ ಕಾರಣದಿಂದ ರಾಣಿ ಮೀನು ಖರೀದಿಸುವುದನ್ನು ಸ್ಥಗಿತಗೊಳಿಸಿರುವುದಾಗಿ ಏಜೆಂಟರು ಹೇಳುತ್ತಾರೆ. ಆದರೆ, ಇದನ್ನು ಒಪ್ಪಲಾಗದು. ಟ್ಯಾಂಕರ್ ನೀರು ಬಳಸಲು ಅವಕಾಶ ಇದೆ. ಇದಕ್ಕೆ ತಗಲುವ ವೆಚ್ಚವನ್ನು ದರದಲ್ಲಿ ಸರಿದೂಗಿಸಬಹುದು. ಆದರೆ, ಕೆ.ಜಿಗೆ ₹ 70ರಿಂದ ಏಕಾಏಕಿ ₹ 30ಕ್ಕೆ ಇಳಿಸುವ ಅಗತ್ಯ ಏನಿತ್ತು' ಎಂದು ಪ್ರಶ್ನಿಸುತ್ತಾರೆ ಬೋಟ್ ಮಾಲೀಕರ ಸಂಘದ ಅಧ್ಯಕ್ಷ ಚೇತನ್ ಬೆಂಗ್ರೆ.

ಮುಂದಿನ ಋತುವರೆಗೆ ಕಾಯಬೇಕು

'ಬೈಕಂಪಾಡಿ ಕೈಗಾರಿಕಾ ಪ್ರದೇಶದಲ್ಲಿ ಆರು ಸುರುಮಿ (ಮೀನು ಕತ್ತರಿಸಿ ಅಚ್ಚು ಮಾಡುವ ಸ್ಥಳ) ಫ್ಯಾಕ್ಟರಿಗಳು ಇವೆ. ಏಜೆಂಟರು ಆರಂಭದಲ್ಲಿ ರಫ್ತು ಆಗುತ್ತಿಲ್ಲ ಎಂದು ಹೇಳಿದರು. ನಂತರ ದಾಸ್ತಾನು ಹೆಚ್ಚು ಇದೆ ಎಂದರು. ಈಗ ನೀರಿನ ಅಭಾವದ ನೆಪ ಹೇಳತ್ತಿದ್ದಾರೆ. ಕೆಲವರು ಕೇರಳ ಮತ್ತು ಗೋವಾದಿಂದ ಮೀನು ಖರೀದಿಸಿ ತಂದಿರಿಸುವ ಮೂಲಕ ಇಲ್ಲಿನವರಿಗೆ ದ್ರೋಹ ಬಗೆಯುತ್ತಿದ್ದಾರೆ. ಇದಕ್ಕೆಲ್ಲ ಪರಿಹಾರ ಕಂಡುಕೊಳ್ಳಬೇಕಾಗಿದೆ. ಚುನಾವಣೆ ಮುಗಿದು ಹೊಸ ಸರ್ಕಾರ ರಚನೆಯಾದ ನಂತರ ಸಭೆ ಕರೆದು ಚರ್ಚಿಸಲಾಗುವುದು' ಎಂದು ಚೇತನ್ ಬೆಂಗ್ರೆ ತಿಳಿಸಿದರು.

ಈ ಮೀನುಗಾರಿಕಾ ಋತು ಇನ್ನೇನು ಮುಗಿಯುತ್ತ ಬಂದಿದೆ. ಗಾಳಿ–ಮಳೆ ಶುರುವಾದರೆ ಕೊನೆಯ ದಿನಗಳಲ್ಲೂ ಮೀನುಗಾರಿಕೆ ಸರಿಯಾಗಿ ನಡೆಯುವುದಿಲ್ಲ. ಹೀಗಾಗಿ, ಇನ್ನೇನಿದ್ದರೂ ಟ್ರೋಲಿಂಗ್ ನಿಷೇಧದ ನಂತರ ಮುಂದಿನ ಆಗಸ್ಟ್‌ನಲ್ಲಿ ಮೀನುಗಾರಿಕೆ ಪ್ರಕ್ರಿಯೆ ಚುರುಕು ಪಡೆದುಕೊಳ್ಳಲಿದೆ. ಅಷ್ಟರಲ್ಲಿ ಅನೇಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕಾಗಿದೆ ಎಂದು ಅವರು ಹೇಳಿದರು.


ರಾಣಿ ಮೀನು –ಪ್ರಜಾವಾಣಿ ಚಿತ್ರ

> **ಕೊರಿಯಾ, ಚೀನಾ ಮತ್ತು ಯುರೋಪ್ ರಾಷ್ಟ್ರಗಳಿಗೆ ರಾಣಿ ಮೀನು ಹೆಚ್ಚು ರಫ್ತಾಗುತ್ತದೆ. ಈ ಬಾರಿ ವಿದೇಶದಿಂದ ಬೇಡಿಕೆ ಕಡಿಮೆಯಾಗಿದೆ. ಹೀಗಾಗಿ, ವಹಿವಾಟು ಕಡಿಮೆಯಾಗಿದೆ**
> **ಇಬ್ರಾಹಿಂ ಎಸ್.ಎಂ.,** ಸಾಗರೋತ್ಪನ್ನ ಖರೀದಿದಾರರ ಸಂಘದ ಅಧ್ಯಕ್ಷ

ಮೀನುಗಾರಿಕೆ ಬೋಟ್‌ಗಳ ಮಾಲೀಕರಿಗೆ ಹೆಚ್ಚು ಲಾಭ ತಂದುಕೊಡುವ ಮೀನು ಇದಾಗಿದೆ. 10–12 ದಿನಗಳ ಒಂದು ಸುತ್ತಿನ ಮೀನುಗಾರಿಕೆಯಲ್ಲಿ 6ರಿಂದ 7 ಟನ್ ಮೀನು ಬಲೆಗೆ ಬಿದ್ದರೆ ₹ 7ಲಕ್ಷದಿಂದ ₹ 8 ಲಕ್ಷ ಆದಾಯ ಬರುತ್ತದೆ. ಬೇಸಿಗೆಯಲ್ಲಿ ಮೀನು ಹೆಚ್ಚು ಆಳಕ್ಕೆ ಇಳಿಯುವುದರಿಂದ 'ಇಳುವರಿ' ಕಡಿಮೆ. ಈಗ ದರವೂ ಕಡಿಮೆ ಮಾಡಿದ್ದರಿಂದ ಹೆಚ್ಚಿನ ಬೋಟ್‌ಗಳು ದಕ್ಕೆಯಲ್ಲಿ ಲಂಗರು ಹಾಕಿವೆ.

'ಈ ವರ್ಷದ ಆರಂಭದಿಂದಲೇ ದರ ಕಡಿಮೆಯಾಗುತ್ತ ಬಂದಿದೆ. ಸಬ್ಸಿಡಿ ಇದ್ದರೂ ಬೋಟ್‌ಗಳಿಗೆ ಡೀಸೆಲ್ ಹಾಕಲು ದೊಡ್ಡ ಮೊತ್ತ ಬೇಕಾಗುತ್ತದೆ. ಕಾರ್ಮಿಕರ ವೇತನ, ಬೋಟ್ ನಿರ್ವಹಣೆ ಇತ್ಯಾದಿಗಳಿಗೂ ಹಣ ವೆಚ್ಚವಾಗುತ್ತದೆ. ಹೀಗಾಗಿ, ಮೀನಿಗೆ ನಿರೀಕ್ಷಿತ ದರ ಸಿಗದೇ ಇದ್ದರೆ ಮೀನುಗಾರಿಕೆ ಮಾಡುವುದು ವ್ಯರ್ಥ. ಆದ್ದರಿಂದ ಬೋಟ್‌ಗಳು ಸಮುದ್ರಕ್ಕೆ ಇಳಿಯುತ್ತಿಲ್ಲ' ಎಂದು ಟ್ರಾಲ್ ಬೋಟ್ ಮಾಲೀಕರ ಸಂಘದ ಕಾರ್ಯದರ್ಶಿ ರಾಜೇಶ್ ಪುತ್ರನ್ ಹೇಳಿದರು.

'ಎಕ್ಸ್‌ಪೋರ್ಟ್ ಹಬ್' ಆಗಲಿ

ವಿಮಾನ ನಿಲ್ದಾಣ, ಬಂದರು ಇತ್ಯಾದಿ ಇದ್ದೂ ಮಂಗಳೂರಿನಲ್ಲಿ 'ಎಕ್ಸ್‌ಪೋರ್ಟ್ ಹಬ್' ಇಲ್ಲದ್ದರಿಂದ ಮೀನುಗಾರಿಕೆ ಉದ್ಯಮದಲ್ಲಿ ತೊಡಗಿಸಿಕೊಂಡಿರುವವರು ತುಂಬ ತೊಂದರೆ ಅನುಭವಿಸುತ್ತಿದ್ದಾರೆ. ಮಂಗಳೂರಿನ ಮೀನಿನ ಬಹುಪಾಲು ಗುಜರಾತ್ ಮೂಲಕ ಮತ್ತು ಸ್ವಲ್ಪ ಕೊಚ್ಚಿ, ಗೋವಾ, ಮುಂಬೈ ಮೂಲಕ ರಫ್ತಾಗುತ್ತದೆ. ಮೀನು ಸಾಗಾಟಕ್ಕೆ ಮಂಗಳೂರಿನಲ್ಲಿ ಕಾರ್ಗೊ ಸೌಲಭ್ಯ ಇಲ್ಲದಿರುವುದರಿಂದ ಅನಿವಾರ್ಯವಾಗಿ ಬೇರೆ ನಗರಗಳನ್ನು ಆಶ್ರಯಿಸಬೇಕಾಗಿದೆ. ಇದರಿಂದ ವೆಚ್ಚ ಹೆಚ್ಚಾಗುತ್ತಿದೆ ಎಂದು ರಾಜೇಶ್ ಪುತ್ರನ್ ಅಭಿಪ್ರಾಯಪಡುತ್ತಾರೆ.

ಛತ್ತೀಸಗಢ: ಇಬ್ಬರು ನಕ್ಸಲರ ಹತ್ಯೆ

ಸುಕ್ಮಾ (ಪಿಟಿಐ): ಮಹಿಳೆ ಸೇರಿ ಇಬ್ಬರು ನಕ್ಸಲರನ್ನು ಪೊಲೀಸರು ಎನ್‌ಕೌಂಟರ್ ಮೂಲಕ ಹತ್ಯೆ ಮಾಡಿರುವ ಘಟನೆ ಛತ್ತೀಸ್‌ಗಢದ ಸುಕ್ಮಾ ಜಿಲ್ಲೆಯಲ್ಲಿ ಸೋಮವಾರ ಬೆಳಿಗ್ಗೆ ಸುಮಾರು 5.30ಕ್ಕೆ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಇಬ್ಬರನ್ನು ಹಿಡಿದು ಕೊಟ್ಟವರಿಗೆ ಒಟ್ಟು ₹ 11 ಲಕ್ಷ ಬಹುಮಾನ ಘೋಷಿಸಲಾಗಿತ್ತು.

ದಾಂಟೇಶ್‌ಪುರಂ ಗ್ರಾಮ ಬಳಿಯ ಅರಣ್ಯ ಪ್ರದೇಶದಲ್ಲಿ ಈ ಎನ್‌ಕೌಂಟರ್ ನಡೆದಿದೆ. ಈ ಪ್ರದೇಶದಲ್ಲಿ 30–35 ನಕ್ಸಲರನ್ನು ಒಳಗೊಂಡ ತಂಡದ ಇರುವಿಕೆ ಕುರಿತ ಖಚಿತ ಮಾಹಿತಿ ಆಧರಿಸಿ ಜಿಲ್ಲಾ ಮೀಸಲು ಪಡೆ, ಕೇಂದ್ರೀಯ ಮೀಸಲು ಪಡೆ ಮತ್ತು ಕೋಬ್ರಾ ಪಡೆ ಭಾನುವಾರ ರಾತ್ರಿ ಕಾರ್ಯಾಚರಣೆಗೆ ಇಳಿದಿದ್ದವು.

ಜಿಲ್ಲಾ ಮೀಸಲು ಪಡೆಯು ದಾಂಟೇಶ್ಪುರಂ ಅರಣ್ಯದಲ್ಲಿ ಪಹರೆ ಕಾರ್ಯದಲ್ಲಿ ನಿರತವಾಗಿದ್ದ ವೇಳೆ ನಕ್ಸಲರು ಗುಂಡಿನ ದಾಳಿ ಆರಂಭಿಸಿದ್ದಾರೆ. ಆಗ ಎರಡೂ ಕಡೆಯಿಂದ ಗುಂಡಿನ ಚಕಮಕಿ ನಡೆದಿದೆ. ಬಳಿಕ ಸ್ಥಳದಲ್ಲಿ ನಕ್ಸಲ್ ಸಂಘಟನೆಯ ಸ್ಥಳೀಯ ಕಮಾಂಡರ್ ಮಾಡ್ಕಮ್ ಎರ್ರಾ ಮತ್ತು ಮಹಿಳಾ ನಕ್ಸಲ್ ಪೋಡಿಯಮ್ ಭೀಮೆ ಅವರ ಮೃತದೇಹಗಳು ಪತ್ತೆಯಾಗಿವೆ. ಜೊತೆಗೆ, ಸ್ಥಳದಿಂದ ಸ್ಫೋಟಕಗಳು ಮತ್ತು ಸ್ವಯಂಚಾಲಿತ ಶಸ್ತ್ರಗಳನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ.

ಎರ್ರಾ ಮತ್ತು ಭೀಮೆ ತಲೆಗೆ ಕ್ರಮವಾಗಿ ₹8 ಲಕ್ಷ ಮತ್ತು ₹3 ಲಕ್ಷ ಬಹುಮಾನ ಘೋಷಿಸಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಐವರು ನಕ್ಸಲರ ಶರಣಾಗತಿ

ರಾಂಚಿ (ಪಿಟಿಐ): ಐವರು ನಕ್ಸಲರು ಜಾರ್ಖಂಡ್‌ನ ರಾಂಚಿಯ ಭದ್ರತಾ ಪಡೆಗಳ ಎದುರು ಸೋಮವಾರ ಶರಣಾದರು ಎಂದು ಪೊಲೀಸರು ತಿಳಿಸಿದ್ದಾರೆ. ಇವರೆಲ್ಲರ ವಿರುದ್ಧ ಜಾರ್ಖಂಡ್‌ನ ವಿವಿಧ ಪೊಲೀಸ್ ಠಾಣೆಗಳಲ್ಲಿ ಹಲವಾರು ಮೊಕದ್ದಮೆಗಳು ದಾಖಲಾಗಿದ್ದವು.

ಇವರಲ್ಲಿ ವಲಯ ಕಮಾಂಡರ್ ಅಮರ್‌ಜಿತ್ ಯಾದವ್ ಅಲಿಯಾಸ್ ಲಖನ್ ಯಾದವ್ ಮತ್ತು ಉಪ ವಲಯ ಕಮಾಂಡರ್ ನೀರು ಯಾದವ್ ಎಂಬುವವರ ತಲೆಗೆ ಪೊಲೀಸರು ಕ್ರಮವಾಗಿ ₹10 ಲಕ್ಷ ಮತ್ತು ₹ 5 ಲಕ್ಷ ಬಹುಮಾನ ಘೋಷಿಸಿದ್ದರು. ಅಮರ್‌ಜಿತ್ ವಿರುದ್ಧ 81 ಮೊಕದ್ದಮೆಗಳಿದ್ದರೆ, ನೀರು ವಿರುದ್ಧ 60 ಮೊಕದ್ದಮೆಗಳಿವೆ. ಉಳಿದ ಮೂವರ ವಿರುದ್ಧವೂ ಹಲವಾರು ಮೊಕದ್ದಮೆಗಳು ದಾಖಲಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಇವರಿಂದ ಎರಡು ಎಕೆ– 56 ರೈಫಲ್‌ಗಳು, ಒಂದು ಎಸ್‌ಎಲ್‌ಆರ್ ರೈಫಲ್, ಎರಡು 303 ರೈಫಲ್ ಮತ್ತಿತರ ಶಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ.

ಮಂಗಳವಾರ, ಮೇ 9, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಹೊಸದರ ಪುಳಕ
ತಮ್ಮ ಮುಂದಿನ ಥ್ರಿಲ್ಲರ್ ವೆಬ್ ಸಿರೀಸ್‌ನ ಪ್ರಚಾರಕ್ಕಾಗಿ ಮುಂಬೈಯಲ್ಲಿ ಸೋಮವಾರ ಕಾಣಿಸಿಕೊಂಡ ನಟ ಸೊನಾಕ್ಷಿ ಸಿನ್ಹಾ

ಆಳ-ಅಗಲ
ಮಣಿಪುರ ಮೀಸಲು ಸಮರ

ಕೃಷಿಕರಿಗೇಕೆ ಹೆಣ್ಣು ಸಿಗುತ್ತಿಲ್ಲ? 2

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,764 ▲	18,264 ▲	₹63,080 (ಬೆಂಗಳೂರು)	₹78,600 (ಬೆಂಗಳೂರು)	81.80 ▼

ಹಳ್ಳಿ ಹೈಕ್ಳು, ಹೆಣ್ಮಕ್ಕಳೇ ಮೇಲು

ಎಸ್ಸೆಸ್ಸೆಲ್ಸಿ ಚಿತ್ರದುರ್ಗ ಜಿಲ್ಲೆ ಮೊದಲು ● ಕೊನೆಯಲ್ಲಿ ಯಾದಗಿರಿ ಜಿಲ್ಲೆ ● ಉತ್ತೇಜಕ ಅಂಕ ಕೊಟ್ಟರೂ ಫಲಿತಾಂಶ ಕುಸಿತ

83.89 % ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತೀರ್ಣ ವಿದ್ಯಾರ್ಥಿಗಳ ಪ್ರಮಾಣ

86.74% ಸರ್ಕಾರಿ ಶಾಲೆಯ ಉತ್ತೀರ್ಣದ ಪ್ರಮಾಣ

85.64% ಅನುದಾನಿತ ಶಾಲೆಯ ಉತ್ತೀರ್ಣದ ಪ್ರಮಾಣ

90.89% ಖಾಸಗಿ ಶಾಲೆಯ ಉತ್ತೀರ್ಣದ ಪ್ರಮಾಣ

625/625 — **4** 625 ಅಂಕ ಪಡೆದವರ ಸಂಖ್ಯೆ

624/625 — **17** 624 ಅಂಕ ಪಡೆದವರ ಸಂಖ್ಯೆ

623/625 — **39** 623 ಅಂಕ ಪಡೆದವರ ಸಂಖ್ಯೆ



ಕೋವಿಡ್ ವೇಳೆ ಶಿಕ್ಷಕರು ನಡೆಸುತ್ತಿದ್ದ ಆನ್‌ಲೈನ್ ತರಗತಿಗಳಿಗೆ ತಪ್ಪಿಸಲಿಲ್ಲ. ಅಂದಿನ ಪಠ್ಯವನ್ನು ಅಂದೇ ಅಭ್ಯಾಸ ಮಾಡುತ್ತಿದ್ದೆ. ಎಲ್ಲ ವಿಷಯಗಳನ್ನೂ ಇಷ್ಟಪಟ್ಟು ಓದಿದೆ. ಒತ್ತಡವಿಲ್ಲದೆ ಓದಿದ್ದರಿಂದ ಪೂರ್ಣ ಅಂಕಗಳು ಬಂದಿವೆ. ಮೊಬೈಲ್, ಟಿ.ವಿ ಬಳಸಿದರೂ, ಸಮಯದ ಮಿತಿ ಹಾಕಿಕೊಂಡಿದ್ದೆ.
ಭೂಮಿಕಾ ಆರ್. ಪೈ, ನ್ಯೂ ಮೆಕಾಲೆ ಶಾಲೆ, ಬೆಂಗಳೂರು



ನಾನು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದದ್ದು ಖುಷಿಯಾಗಿದೆ. ಎಸ್ಸೆಸ್ಸೆಲ್ಸಿಯಲ್ಲಿ ಹೆಚ್ಚು ಅಂಕ ಪಡೆಯಬೇಕು ಎಂಬುದು ನಮ್ಮ ತಾತನ ಆಸೆಯಾಗಿತ್ತು. ಪೋಷಕರು ಹಾಗೂ ಶಾಲಾ ಶಿಕ್ಷಕರ ಪ್ರೋತ್ಸಾಹದಿಂದ ಈ ಸಾಧನೆ ಸಾಧ್ಯವಾಗಿದೆ. ಚೆನ್ನಾಗಿ ಓದಿ ಸ್ವಂತ ಮಾಹಿತಿ ತಂತ್ರಜ್ಞಾನ ಕಂಪನಿ ಸ್ಥಾಪಿಸಬೇಕು ಎಂಬ ಆಸೆ ಇದೆ.
ಎನ್.ಯಶಸ್ ಗೌಡ, ಬಿಜಿಎಸ್ ಪ್ರೌಢಶಾಲೆ, ಅಗಲಗುರ್ಕಿ, ಚಿಕ್ಕಬಳ್ಳಾಪುರ.



ಬಡತನದ ಮಧ್ಯೆಯೂ ಶ್ರಮವಹಿಸಿ ಓದಿದ್ದೆ. ಶೈಕ್ಷಣಿಕ ವರ್ಷದ ಆರಂಭದಿಂದಲೇ ಪರೀಕ್ಷೆಗೆ ಸಿದ್ಧತೆ ನಡೆಸಿದ್ದೆ. ದಿನದ ಹೆಚ್ಚಿನ ಸಮಯವನ್ನು ಕಲಿಕೆಗೆ ಮೀಸಲಿಡುತ್ತಿದ್ದೆ. ನಿರೀಕ್ಷೆಯಂತೆ ರಾಜ್ಯಕ್ಕೆ ಮೊದಲ ಸ್ಥಾನ ಸಿಕ್ಕಿರುವುದು ಖುಷಿ ತಂದಿದೆ. ಮುಂದೆ ವಿಜ್ಞಾನ ವಿಭಾಗಕ್ಕೆ ಪ್ರವೇಶ ಪಡೆದು ಐಎಎಸ್ ಅಧಿಕಾರಿಯಾಗುವ ಗುರಿ ಹೊಂದಿದ್ದೇನೆ
ಅನುಪಮಾ ಹಿರೇಹೊಳಿ, ಕುಮಾರೇಶ್ವರ ಪ್ರೌಢಶಾಲೆ, ಸವದತ್ತಿ



ದಿನಕ್ಕೆ 10 ತಾಸು ನಿರಂತರ ಅಧ್ಯಯನ ಮಾಡಿದ್ದರ ಫಲವಾಗಿ ಮೊದಲ ಸ್ಥಾನ ಬಂದಿದೆ. ಈ ನಿರೀಕ್ಷೆ ಮೊದಲೇ ಇತ್ತು. ಪರೀಕ್ಷೆ ಮುಗಿದ ತಕ್ಷಣವೇ ಕೀ ಆನ್ಸರ್ ಚೆಕ್ ಮಾಡಿದ್ದೆ, ಎಲ್ಲ ಸರಿಯಾಗಿತ್ತು. ಶಾಲೆಯ ಎಲ್ಲ ಶಿಕ್ಷಕ ವೃಂದದ ಮಾರ್ಗದರ್ಶನವೇ ಈ ಸಾಧನೆಗೆ ಕಾರಣ. ಪಿಯುಸಿಯನ್ನೂ ಇಲ್ಲಿಯೇ ಓದಲಿದ್ದೇನೆ
ಭೀಮನಗೌಡ ಪಾಟೀಲ, ನಾಗರಬೆಟ್ಟದ ಆಕ್ಸ್‌ಫರ್ಡ್ ಪ್ರೌಢಶಾಲೆ, ಮುದ್ದೇಬಿಹಾಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಕಟವಾಗಿದ್ದು, ಎಲ್ಲ ಸೌಲಭ್ಯಗಳೂ ಇರುವ ನಗರ ಪ್ರದೇಶದ ಮಕ್ಕಳಿಗೆ ಹೋಲಿಸಿದರೆ ನಾಲ್ಕೈದು ಕಿ.ಮೀ ನಡೆದು, ಸಿಕ್ಕ ಬಸ್ಸೋ ಲಾರಿಯೇರಿ ಶಾಲೆಗೆ ಹೋಗುವ ಹಳ್ಳಿ ಹೈಕಳೇ ಉತ್ತಮ ಸಾಧನೆ ಮಾಡಿದ್ದಾರೆ. ಬಾಲಕಿಯರು ಸಾಧನೆಯಲ್ಲಿ ಮುಂದಿದ್ದಾರೆ.

2022–23ನೇ ಸಾಲಿನ ಫಲಿತಾಂಶವನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ ಸೋಮವಾರ ಪ್ರಕಟಿಸಿದೆ. ಪರೀಕ್ಷೆ ಬರೆದಿದ್ದ 8,35,102 ವಿದ್ಯಾರ್ಥಿಗಳಲ್ಲಿ 7,00,619 ವಿದ್ಯಾರ್ಥಿಗಳು (ಶೇ 83.89) ಉತ್ತೀರ್ಣರಾಗಿದ್ದಾರೆ.

ನಾಲ್ವರು ವಿದ್ಯಾರ್ಥಿಗಳು 625ಕ್ಕೆ 625 ಅಂಕ ಪಡೆದು, ಅಗ್ರ ಸಾಧನೆ ಮಾಡಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಬೆಂಗಳೂರಿನ ಹೊಸೂರು ರಸ್ತೆಯ ನ್ಯೂ ಮೆಕಾಲೆ ಶಾಲೆಯ ಭೂಮಿಕಾ ಆರ್. ಪೈ, ಚಿಕ್ಕಬಳ್ಳಾಪುರ ಜಿಲ್ಲೆ ಅಗಲಗುರ್ಕಿ ಶ್ರೀಬಾಲಗಂಗಾಧರನಾಥ ಸ್ವಾಮೀಜಿ ಶಾಲೆಯ ಎನ್.ಯಶಸ್ ಗೌಡ, ಬೆಳಗಾವಿ ಜಿಲ್ಲೆ ಸವದತ್ತಿ ಶ್ರೀಕುಮಾರೇಶ್ವರ ಶಾಲೆಯ ಅನುಪಮ ಶ್ರೀಶೈಲ್ ಹಿರೇಹೊಳಿ, ವಿಜಯಪುರ ಜಿಲ್ಲೆ ಮುದ್ದೇಬಿಹಾಳ ತಾಲ್ಲೂಕು ನಾಗರಬೆಟ್ಟದ ಆಕ್ಸ್‌ಫರ್ಡ್ ಶಾಲೆಯ ಶಾಲೆಯ ಭೀಮನಗೌಡ ಹನುಮಂತಗೌಡ ಬಿರಾದಾರ್ ಪಾಟೀಲ ಶೇ 100 ಅಂಕ ಪಡೆದ ವಿದ್ಯಾರ್ಥಿಗಳು.

ಕಳೆದ ಸಾಲಿಗೆ ಹೋಲಿಸಿದರೆ ಈ ಬಾರಿಯ ಫಲಿತಾಂಶದಲ್ಲಿ ಶೇ 1.24ರಷ್ಟು ಕುಸಿತವಾಗಿದೆ. ಕಳೆದ ಬಾರಿ ಶೇ 85.13ರಷ್ಟು ಫಲಿತಾಂಶ ದೊರೆತಿತ್ತು. 2021–22ನೇ ಸಾಲಿನಲ್ಲಿ 145 ವಿದ್ಯಾರ್ಥಿಗಳು ಶೇ 100ರಷ್ಟು ಅಂಕ ಗಳಿಸಿದ್ದರು. ಈ ಬಾರಿ ಪೂರ್ಣ ಅಂಕ ಪಡೆದವರ ಸಂಖ್ಯೆ ನಾಲ್ಕು.

ಶೇ 87.87 ಫಲಿತಾಂಶ ಪಡೆಯುವ ಮೂಲಕ ಈ ಬಾರಿಯೂ ಬಾಲಕಿಯರೇ ಮೇಲುಗೈ ಸಾಧಿಸಿದ್ದಾರೆ. ವಿದ್ಯಾರ್ಥಿಗಳು ಪಡೆದ ಫಲಿತಾಂಶ ಶೇ 80.08 ಇದೆ. ನಗರ ಪ್ರದೇಶಗಳಿಗೆ ಹೋಲಿಸಿದರೆ (ಶೇ 79.62) ಗ್ರಾಮೀಣ ವಿದ್ಯಾರ್ಥಿಗಳು (ಶೇ 87) ಉತ್ತಮ ಸಾಧನೆ ಮಾಡಿದ್ದಾರೆ. ಪರೀಕ್ಷೆ ಬರೆದ 4,649 ಅಂಗವಿಕಲ ವಿದ್ಯಾರ್ಥಿಗಳಲ್ಲಿ 3,723 ತೇರ್ಗಡೆಯಾಗಿದ್ದಾರೆ.

ಉತ್ತೇಜಕ ಅಂಕ ಕೊಟ್ಟರೂ ಫಲಿತಾಂಶ ಕುಸಿತ: ಕೋವಿಡ್ ಸಮಯದಲ್ಲಿ ಮಕ್ಕಳು ಕಲಿಕೆಯಲ್ಲಿ ತೊಂದರೆ ಅನುಭವಿಸಿದ್ದರು ಎನ್ನುವ ಕಾರಣಕ್ಕೆ ಉತ್ತೇಜಕ ಅಂಕ ಗಳನ್ನು ನೀಡಲಾಗಿತ್ತು. ಈ ಬಾರಿಯೂ ಮೂರು ವಿಷಯಗಳಿಗೆ ತಲಾ ಶೇ 10ರಷ್ಟು ಉತ್ತೇಜಕ ಅಂಕಗಳನ್ನು ನೀಡಿ ದ್ದರೂ, ಫಲಿತಾಂಶದಲ್ಲಿ ಏರಿಕೆ ಕಂಡಿಲ್ಲ. ಉತ್ತೇಜಕ ಅಂಕದ ಪ್ರಯೋಜನ ಪಡೆದು 59,246 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

8,35,102 ಪರೀಕ್ಷೆಗೆ ಹಾಜರಾದವರು

7,00,619 ಉತ್ತೀರ್ಣರಾದವರು

4,25,968 ಪರೀಕ್ಷೆ ಬರೆದ ಬಾಲಕರು

3,41,108 ತೇರ್ಗಡೆಯಾದ ಬಾಲಕರು

4,09,134 ಪರೀಕ್ಷೆ ಬರೆದ ಬಾಲಕಿಯರು

3,59,511 ತೇರ್ಗಡೆಯಾದ ಬಾಲಕಿಯರು

ಪೂರಕ ಪರೀಕ್ಷೆ: ನೋಂದಣಿಗೆ ಮೇ 15 ಕೊನೆಯ ದಿನ

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಹಾಗೂ ಫಲಿತಾಂಶ ತಿರಸ್ಕರಿಸಲು ಬಯಸುವ ವಿದ್ಯಾರ್ಥಿಗಳು ಪೂರಕ ಪರೀಕ್ಷೆಗೆ ಹೆಸರು ನೋಂದಾಯಿಸಲು ಮೇ 15ರವರೆಗೆ ಅವಕಾಶ ನೀಡಲಾಗಿದೆ.

ವಿದ್ಯಾರ್ಥಿಗಳು ಮೇ 14ರ ಒಳಗೆ ಉತ್ತರ ಪತ್ರಿಕೆಗಳ ಛಾಯಾಪ್ರತಿ ಪಡೆಯಬೇಕು. ಮರುಎಣಿಕೆ, ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಮೇ 21ರವರೆಗೆ ಅವಕಾಶ ನೀಡಲಾಗಿದೆ.

ಮರುಎಣಿಕೆ, ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದವರು ಫಲಿತಾಂಶದವರೆಗೂ ಕಾಯದೇ ಪೂರಕ ಪರೀಕ್ಷೆಗೆ ಅರ್ಜಿ ಸಲ್ಲಿಸಬೇಕು ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಅಧ್ಯಕ್ಷ ರಾಮಚಂದ್ರನ್ ಹೇಳಿದರು.

ಫಲಿತಾಂಶ ಕುಸಿತಕ್ಕೆ ಏನು ಕಾರಣ?

‘ಕೋವಿಡ್ ಪೂರ್ವದಲ್ಲಿ ಇದ್ದ ಪ್ರಶ್ನೆ ಪತ್ರಿಕೆ ಮಾದರಿಯನ್ನು ಮರಳಿ ಪರಿಚಯಿಸಿದ ಕಾರಣ ತೇರ್ಗಡೆ ಪ್ರಮಾಣದಲ್ಲಿ ಕುಸಿತವಾಗಿದೆ. 2021–22ನೇ ಸಾಲಿಗೆ ಹೋಲಿಸಿದರೆ ಈ ಬಾರಿ ಕಠಿಣ ಪ್ರಶ್ನೆಗಳಿದ್ದವು. ಹಾಗಾಗಿ, ಫಲಿತಾಂಶ ಕುಸಿದಿದೆ’ ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಅಧ್ಯಕ್ಷ ರಾಮಚಂದ್ರನ್ ಹೇಳಿದರು.



ರಾಜಸ್ಥಾನದ ಬಹಲೋಲ್ ನಗರ ಹೊರ ವಲಯದ ಮನೆಯ ಮೇಲೆ ಸೋಮವಾರ ಭಾರತೀಯ ವಾಯುಪಡೆಯ ಮಿಗ್–21 ಯುದ್ಧ ವಿಮಾನ ಪತನವಾಗಿದ್ದು, ಗ್ರಾಮಸ್ಥರು ಘಟನಾ ಸ್ಥಳದಲ್ಲಿ ಜಮಾಯಿಸಿದ್ದರು – ಪಿಟಿಐ ಚಿತ್ರ

ಮಿಗ್ ಪತನ: 3 ಮಹಿಳೆಯರ ಸಾವು

ಜೈಪುರ/ನವದೆಹಲಿ (ಪಿಟಿಐ): ಭಾರತೀಯ ವಾಯು ಪಡೆಯ ಮಿಗ್–21 ಯುದ್ಧ ವಿಮಾನವೊಂದು ರಾಜಸ್ಥಾನದ ಹನುಮಾನ್‌ಗಢ ಜಿಲ್ಲೆಯಲ್ಲಿ ಮನೆಯ ಮೇಲೆ ಸೋಮವಾರ ಪತನವಾಗಿದೆ. ಮನೆಯೊಳಗಿದ್ದ ಮೂವರು ಮಹಿಳೆಯರು ಮೃತಪಟ್ಟಿದ್ದು, ಇತರ ಮೂವರು ಗಾಯಗೊಂಡಿದ್ದಾರೆ.

ಪೈಲಟ್‌ಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಬೆಳಿಗ್ಗೆ 9.45ರ ಸುಮಾರಿಗೆ ಯುದ್ಧ ವಿಮಾನ ಬಿದ್ದಿದೆ. ವಿಮಾನವು ಗಂಗಾನಗರ ಜಿಲ್ಲೆಯ ಸೂರತ್‌ಗಢದ ವಾಯು ನೆಲೆಯಿಂದ ದೈನಂದಿನ ತರಬೇತಿಯ ಹಾರಾಟ ನಡೆಸುತ್ತಿತ್ತು. ವಿಮಾನದಲ್ಲಿ ತಾಂತ್ರಿಕ ಸಮಸ್ಯೆ ಇರುವುದು ಪೈಲಟ್ ಗಮನಕ್ಕೆ ಬಂದಿದೆ. ವಿಮಾನವನ್ನು ತುರ್ತು ಭೂಸ್ಪರ್ಶ ಮಾಡಲು ಪೈಲಟ್ ಯತ್ನಿಸಿದ್ದಾರೆ. ಆದರೆ, ನಿಯಂತ್ರಣಕ್ಕೆ ಸಿಗದೆ, ಹನುಮಾನ್‌ಗಢ ಜಿಲ್ಲೆಯ ಬಹಲೋಲ್ ನಗರ ಹೊರ ವಲಯದಲ್ಲಿ ಮನೆಯ ಮೇಲೆ ಬಿದ್ದಿದೆ. ಪೈಲಟ್ ಪ್ಯಾರಾಚೂಟ್‌ನೊಂದಿಗೆ ಹೊರ ಜಿಗಿದಿದ್ದಾರೆ’ ಎಂದು ವಾಯುಪಡೆಯು ಹೇಳಿಕೆಯಲ್ಲಿ ತಿಳಿಸಿದೆ.

ಕಳೆದ ಆರು ದಶಕಗಳಲ್ಲಿ 400 ಮಿಗ್-21 ಯುದ್ಧ ವಿಮಾನಗಳು ಪತನವಾಗಿದೆ. ಮಿಗ್ ವಿಮಾನಗಳಲ್ಲಿ ಸುರಕ್ಷತೆ ಕಳಪೆ ಮಟ್ಟದಲ್ಲಿರುವುದು ಮತ್ತೊಮ್ಮೆ ಸಾಬೀತಾಗಿದೆ.

ಮುಖ್ಯಾಂಶಗಳು

- ವಿಮಾನ ಬಿದ್ದ ಮನೆ ಸಂಪೂರ್ಣ ನಾಶವಾಗಿದೆ
- ಸಮೀಪದ ಕೆಲವು ಮನೆಗಳಿಗೂ ಹಾನಿ ಆಗಿದೆ
- ಸ್ಥಳೀಯರು, ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸಿದರು

₹50 ಲಕ್ಷ ಪರಿಹಾರ, ಸರ್ಕಾರಿ ಉದ್ಯೋಗಕ್ಕೆ ಆಗ್ರಹ: ಶವಗಳನ್ನು ಪಡೆಯಲು ಸಂತ್ರಸ್ತ ಕುಟುಂಬದವರು ನಿರಾಕರಿಸಿದ್ದು, ₹50 ಲಕ್ಷ ಪರಿಹಾರ ಮತ್ತು ಸರ್ಕಾರಿ ಉದ್ಯೋಗಕ್ಕೆ ಬೇಡಿಕೆ ಇರಿಸಿದ್ದಾರೆ.

ಹನುಮಾನ್‌ಗಢ ಜಿಲ್ಲಾಧಿಕಾರಿ ರುಕ್ಮಿಣಿ ರಿಯಾರ್, ಮೃತ ಮಹಿಳೆಯರ ಕುಟುಂಬಕ್ಕೆ ತಲಾ ₹5 ಲಕ್ಷ ಪರಿಹಾರ ನೀಡಲಾಗುವುದು. ಶವಗಳನ್ನು ಪಡೆದು ಅಂತಿಮ ವಿಧಿ ನೆರವೇರಿಸುವಂತೆ ಮನವೊಲಿಸಲು ಸಂತ್ರಸ್ತ ಕುಟುಂಬದ ಸದಸ್ಯರೊಂದಿಗೆ ಮಾತುಕತೆ ನಡೆಸಲಾಗುತ್ತಿದೆ ಎಂದು ಹೇಳಿದರು.

ಸಂತ್ರಸ್ತ ಕುಟುಂಬಕ್ಕೆ ಸಾಂತ್ವನ ಹೇಳಿರುವ ರಾಜಸ್ಥಾನ ಮುಖ್ಯಮಂತ್ರಿ ಅಶೋಕ ಗೆಹಲೋತ್, ಚಿರಂಜೀವಿ ವಿಮೆಯಡಿ ಸಂತ್ರಸ್ತ ಕುಟುಂಬಕ್ಕೆ ಪರಿಹಾರ ಕಲ್ಪಿಸುವುದಾಗಿ ಭರವಸೆ ನೀಡಿದ್ದಾರೆ.



ರೈತ ಶಕ್ತಿ

ಪ್ರತಿಭಟನೆನಿರತ ಕುಸ್ತಿಪಟುಗಳಿಗೆ ಬೆಂಬಲ ಸೂಚಿಸಲು ದೆಹಲಿಯ ಜಂತರ್ ಮಂತರ್‌ಗೆ ಸೋಮವಾರ ಬಂದ ರೈತರು ಬ್ಯಾರಿಕೇಡ್‌ಗಳನ್ನು ದಾಟಲು ಪ್ರಯತ್ನಿಸಿದರು –ಪಿಟಿಐ ಚಿತ್ರ

ಪ್ರತಿಭಟನೆ ಸ್ಥಳ ತಲುಪಲು ಬ್ಯಾರಿಕೇಡ್ ದಾಟಿದ ರೈತರು

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ಕುಸ್ತಿಪಟುಗಳಿಗೆ ಬೆಂಬಲ ಸೂಚಿಸಲು ದೆಹಲಿಗೆ ಆಗಮಿಸಿರುವ ಹಲವಾರು ರೈತರು ಬ್ಯಾರಿಕೇಡ್‌ಗಳನ್ನು ದಾಟಿ ಪ್ರತಿಭಟನೆ ಸ್ಥಳಕ್ಕೆ ಹೋಗಲು ಪ್ರಯತ್ನಿಸಿರುವ ಘಟನೆ ಸೋಮವಾರ ನಡೆದಿದೆ.

ಈ ವೇಳೆ ಸ್ಥಳದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ರೈತರು ಬ್ಯಾರಿಕೇಡ್‌ಗಳನ್ನು ದಾಟಲು ಮತ್ತು ಅವನ್ನು ಪಕ್ಕಕ್ಕೆ ಎಳೆಯಲು ಪ್ರಯತ್ನಿಸುತ್ತಿರುವ ದೃಶ್ಯಗಳು ವಿಡಿಯೊದಲ್ಲಿ ಸೆರೆಯಾಗಿವೆ.

ಪ್ರತಿಭಟನೆ ನಡೆಯುತ್ತಿರುವ ಸ್ಥಳಕ್ಕೆ ತೆರಳಲು ಕೆಲ ರೈತರು ಧಾವಂತ ತೋರಿದ ಹಿನ್ನೆಲೆಯಲ್ಲಿ ಈ ಘಟನೆ ನಡೆದಿದೆ. ಬ್ಯಾರಿಕೇಡ್‌ಗಳನ್ನು ತೆರವುಗೊಳಿಸಿ ರೈತರನ್ನು ಪ್ರತಿಭಟನೆ ನಡೆಯುತ್ತಿದ್ದ ಸ್ಥಳಕ್ಕೆ ಪೊಲೀಸ್ ಬೆಂಗಾವಲಿನಲ್ಲಿ ಕರೆದೊಯ್ಯಲಾಯಿತು. ಬಳಿಕ, ಪ್ರತಿಭಟನನಿರತರ ಸಭೆ ಶಾಂತಿಯುತವಾಗಿ ನಡೆಯಿತು ಎಂದು ದೆಹಲಿಯ ಡಿಸಿಪಿ ಪ್ರಣವ್ ತಯಾಲ್ ತಿಳಿಸಿದ್ದಾರೆ.

ಪ್ರತಿಭಟನೆ ಸ್ಥಳದಲ್ಲಿ ಘರ್ಷಣೆ ಸಂಭವಿಸಿದೆ ಎಂದು ಸುಳ್ಳು ಸುದ್ದಿಗಳು ಹರಿದಾಡುತ್ತಿರುವ ಹಿನ್ನೆಲೆಯಲ್ಲಿ ದೆಹಲಿ ಪೊಲೀಸ್ ಅಧಿಕೃತ ಟ್ವಿಟರ್ ಖಾತೆ ಟ್ವೀಟ್ ಮಾಡಿದೆ. ‘ಸುಳ್ಳು ಸುದ್ದಿಗಳನ್ನು ನಂಬದಂತೆ ಎಲ್ಲರಲ್ಲೂ ಮನವಿ ಮಾಡುತ್ತೇವೆ. ರೈತರಿಗೆ ಜಂತರ್ ಮಂತರ್ ಪ್ರವೇಶಿಸಲು ಲೋಹ ಶೋಧಕ ಬಾಗಿಲುಗಳ ಮೂಲಕ ಅನುವು ಮಾಡಿದ್ದೇವೆ. ಎಲ್ಲರೂ ಶಾಂತಿ ಕಾಯ್ದುಕೊಳ್ಳಿ ಮತ್ತು ಕಾನೂನಿಗೆ ಬದ್ಧರಾಗಿರಿ’ ಎಂದು ಮನವಿ ಮಾಡಿದೆ.

ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ಬ್ರಿಜ್ ಭೂಷಣ್ ಅವರನ್ನು ಬಂಧಿಸುವಂತೆ ಆಗ್ರಹಿಸಿ ಕುಸ್ತಿಪಟುಗಳು ಏಪ್ರಿಲ್ 23ರಿಂದ ಪ್ರತಿಭಟನೆ ನಡೆಸುತ್ತಿದ್ದಾರೆ. ಸಂಯುಕ್ತ ಕಿಸಾನ್ ಮೋರ್ಚಾ ಸೇರಿ ಹಲವು ರೈತ ಸಂಘಟನೆಗಳು ಕುಸ್ತಿಪಟುಗಳಿಗೆ ಬೆಂಬಲ ಸೂಚಿಸಿವೆ.

ಐದು ಜಿಲ್ಲೆಗಳಲ್ಲಿ ಭಾರಿ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜನಗರ, ಚಿಕ್ಕಮಗಳೂರು, ಕೊಡಗು, ಮೈಸೂರು ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಮಂಗಳವಾರ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮುನ್ಸೂಚನೆ ನೀಡಿದೆ.

ದಕ್ಷಿಣ ಒಳನಾಡು ಹಾಗೂ ಕರಾವಳಿ ವ್ಯಾಪ್ತಿಯ ಎಲ್ಲ ಜಿಲ್ಲೆಗಳಲ್ಲೂ ಜೋರು ಮಳೆಯಾಗುವ ಸಂಭವವಿದೆ. ಅಲ್ಲದೇ ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಕಲಬುರಗಿ, ರಾಯಚೂರು, ವಿಜಯಪುರ ಜಿಲ್ಲೆಯ ಅಲ್ಲಲ್ಲಿ ಮಳೆಯಾಗಲಿದೆ ಎಂದು ಸೂಚನೆ ನೀಡಿದೆ.

ಬೆಂಗಳೂರಿನಲ್ಲಿ ಮಂಗಳವಾರ ಸಹ ಮೋಡ ಕವಿದ ವಾತಾವರಣ ಇರಲಿದೆ. ಸಂಜೆ ವೇಳೆಯಲ್ಲಿ ಮಳೆಯಾಗಲಿದೆ ಎಂದು ತಿಳಿಸಿದೆ.

ದಶಪಥ ಅವ್ಯವಸ್ಥೆ; ಸರ್ವೀಸ್ ರಸ್ತೆಯಲ್ಲಿ ಇಲ್ಲದ ಚರಂಡಿ

ಸೋನೆ ಮಳೆಯಿಂದಲೇ ಕೆಳಸೇತುವೆ ಜಲಾವೃತ

● ಎಂ.ಎನ್.ಯೋಗೇಶ್

ಮಂಡ್ಯ: ಬೆಂಗಳೂರು–ಮೈಸೂರು ದಶಪಥ ಕಾಮಗಾರಿ ಉದ್ಘಾಟನೆಯಾಗಿ ತಿಂಗಳಾದರೂ ಸರ್ವೀಸ್ ರಸ್ತೆಯ ಅವ್ಯವಸ್ಥೆ ತಪ್ಪಿಲ್ಲ. ಕಳೆದೊಂದು ವಾರದಿಂದ ಸುರಿಯುತ್ತಿರುವ ಸಣ್ಣ ಮಳೆಗೇ ಕೆಳಸೇತುವೆಗಳು ಮುಳುಗಿದ್ದು, ದೊಡ್ಡ ಮಳೆ ಬಿದ್ದರೆ ಏನು ಗತಿ ಎಂಬ ಪ್ರಶ್ನೆ ಜನರನ್ನು ಕಾಡುತ್ತಿದೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಆರು ಪಥಕ್ಕೆ ನೀಡಿದ ಆದ್ಯತೆಯನ್ನು ಸರ್ವೀಸ್ ರಸ್ತೆ ಕಾಮಗಾರಿಗೆ ನೀಡಿಲ್ಲ. ಬೆಂಗಳೂರು– ಮೈಸೂರು ಸಂಚಾರ ವಷ್ಟೇ ಪ್ರಾಧಿಕಾರಕ್ಕೆ ಮುಖ್ಯವಾಗಿದ್ದು, ಸ್ಥಳೀಯ ಹಳ್ಳಿ ಜನ ಅನುಭವಿಸುತ್ತಿರುವ ತೊಂದರೆಗಳತ್ತ ಗಮನ ಹರಿಸುತ್ತಿಲ್ಲ. ಸರ್ವೀಸ್ ರಸ್ತೆಯಲ್ಲಿ ಚರಂಡಿ ಕಾಮಗಾರಿ ಪೂರ್ಣಗೊಳ್ಳದೆ ಮಳೆ ನೀರು ಇಳಿಜಾರು ಹಾಗೂ ಗುಂಡಿಯಂತಿರುವ ಕೆಳಸೇತುವೆಯತ್ತ ನುಗ್ಗುತ್ತಿದೆ.

ಇಂಡುವಾಳು ಗ್ರಾಮದ ಬಳಿ ಬಾಕಿ ಉಳಿದಿದ್ದ ರಸ್ತೆ ಕಾಮಗಾರಿ ಪೂರ್ಣಗೊಂಡಿದ್ದು ವಾಹನ ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ. ಆದರೆ, ಸರ್ವೀಸ್ ರಸ್ತೆ ಅವ್ಯವಸ್ಥೆಯ ಆಗರವಾಗಿದ್ದು, ಜನರು ಓಡಾಡಲು ಆಗದೆ ತೊಂದರೆ ಅನುಭವಿಸುತ್ತಿದ್ದಾರೆ. ಫುಟ್‌ಪಾತ್ ಕೂಡ ಇಲ್ಲದೆ ರೈತರು ಜಾನುವಾರುಗಳ ಜೊತೆ ಹೊಲಕ್ಕೆ ತೆರಳಲು ಪರದಾಡುತ್ತಿದ್ದಾರೆ.

ಈಚೆಗೆ ಸುರಿದ ಮಳೆ ನೀರು ಇಂಡುವಾಳು ಗ್ರಾಮದ ಕೆಳಸೇತುವೆಯ ಒಳಗೆ ನುಗ್ಗಿದ್ದು ಅಲ್ಲಿ ಕಟ್ಟೆಯಂತಾಗಿದೆ. ಮಂಡಿಯುದ್ದ ನೀರು ನಿಂತಿದ್ದು ಓಡಾಡಲು ಸಾಧ್ಯವಿಲ್ಲದಂತಾಗಿದೆ. ಪಕ್ಕದ ಚರಂಡಿಯು ರಸ್ತೆಯ ಮೇಲ್ಮಟ್ಟದಲ್ಲಿರುವುದರಿಂದ ನೀರು ಚರಂಡಿಗೆ ಹರಿದು ಹೋಗುವ ಅವಕಾಶವೇ ಇಲ್ಲ.



ಈಚೆಗೆ ಸುರಿದ ಸೋನೆ ಮಳೆಗೆ ಮಂಡ್ಯ ತಾಲ್ಲೂಕು ಇಂಡುವಾಳು ಕೆಳಸೇತುವೆಯಲ್ಲಿ ನೀರು ತುಂಬಿದೆ

ಬಸ್ ನಿಲ್ದಾಣ ನುಂಗಿದ ರಸ್ತೆ

ರಸ್ತೆಯ ನಡುವಿನ ಹಳ್ಳಿಗಳಲ್ಲಿ ಸ್ಥಳೀಯ ವಾಹನಗಳ ನಿಲುಗಡೆಗೆ ಇದ್ದ ಜಾಗವನ್ನು ಸರ್ವೀಸ್ ರಸ್ತೆ ಆವರಿಸಿಕೊಂಡಿದೆ. ಈಗ ರಸ್ತೆಯಲ್ಲೇ ವಾಹನ ನಿಲ್ಲಬೇಕು. ಒಂದು ವಾಹನ ರಸ್ತೆಯಲ್ಲಿ ನಿಂತರೆ ಹಿಂದೆ ಬರುವ ವಾಹನವೂ ನಿಲ್ಲಲೇಬೇಕು. ಇದರಿಂದ ವಾಹನ ದಟ್ಟಣೆ ಉಂಟಾಗುತ್ತಿದೆ.

‘ಶಾಲಾ ಮಕ್ಕಳು ಬಸ್ ಹತ್ತಲು ತೊಂದರೆ ಅನುಭವಿಸುತ್ತಿದ್ದಾರೆ. ನಿಲ್ಲಲು ಫುಟ್‌ಪಾತ್ ಕೂಡ ಇಲ್ಲದಿರುವುದು, ಅವರ ಜೀವಕ್ಕೂ ಅಪಾಯಕಾರಿಯಾಗಿ ಪರಿಣಮಿಸಿದೆ’ ಎಂದು ಯಲಿಯೂರು ಗ್ರಾಮದ ಶಾರದಮ್ಮ ಕಳವಳ ವ್ಯಕ್ತಪಡಿಸಿದರು.

ಒಂದೆಡೆಯಿಂದ ಇನ್ನೊಂದೆಡೆಗೆ ಓಡಾಡುವ ಜನರಿಗೆ ಕೆಳಸೇತುವೆಯಲ್ಲಿ ನಿಂತಿರುವ ನೀರು ಅಡ್ಡಿಯಾಗಿದ್ದು ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

‘ಕೆಳಸೇತುವೆಯಲ್ಲಿ ನೀರು ನಿಂತಿದ್ದು ಮಕ್ಕಳು, ಮಹಿಳೆಯರು ಓಡಾಡಲು ಸಾಧ್ಯವಾಗುತ್ತಿಲ್ಲ. ಇದರಿಂದ ಇಂಡುವಾಳು ಗ್ರಾಮ ಇಬ್ಭಾಗವಾಗಿದೆ. ರಸ್ತೆ ಕಾಮಗಾರಿ ಮಾಡುತ್ತಿರುವ ಗುತ್ತಿಗೆದಾರನನ್ನು ಕೇಳಿದರೆ ಅದಕ್ಕೂ ತಮಗೂ ಸಂಬಂಧವೇ ಇಲ್ಲವೆಂಬಂತೆ ಮಾತನಾಡುತ್ತಾರೆ. ಮುಂಗಾರು ಮಳೆ ಆರಂಭವಾಗುತ್ತಿದ್ದು ಭಾರಿ ಮಳೆ ಸುರಿದರೆ ಸರ್ವೀಸ್ ರಸ್ತೆಯೇ ಮುಳುಗುವ ಅಪಾಯವಿದೆ’ ಎಂದು ಇಂಡುವಾಳು ಬಸವರಾಜು ಹೇಳಿದರು.

ಜಿಲ್ಲೆಯ ವ್ಯಾಪ್ತಿಯಲ್ಲಿ ಹನಕೆರೆ, ಬೂದನೂರು, ಉಮ್ಮಡಹಳ್ಳಿ, ಸಿದ್ದಯ್ಯನಕೊಪ್ಪಲು ಕಾಳೇನಹಳ್ಳಿ, ತೂಬಿನಕೆರೆ ಸೇರಿ ಒಟ್ಟು 15 ಕಡೆ ಕೆಳ ಸೇತುವೆ ನಿರ್ಮಿಸಲಾಗಿದೆ. ಬಹುತೇಕ ಕೆಳಸೇತುವೆಗಳು ಇಳಿಜಾರಿನಂತಿದ್ದು ಮಳೆ ನೀರು ನಿಲ್ಲುತ್ತಿದೆ. ಉಮ್ಮಡಹಳ್ಳಿ ಬಳಿಯ ಕೆಳಸೇತುವೆಯೇ ಕಾಲುವೆಯಂತಾಗಿದೆ. ಚರಂಡಿ ನೀರು ರಸ್ತೆಯ ಮೇಲೆ ಹರಿಯುತ್ತಿದ್ದು, ವಾಹನ ಸಂಚಾರಕ್ಕೆ ತೊಂದರೆ ಉಂಟಾಗಿದೆ.

ಈ ಕುರಿತು ಪ್ರತಿಕ್ರಿಯೆ ಪಡೆಯಲು ಯತ್ನಿಸಿದಾಗ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಸಂಪರ್ಕಕ್ಕೆ ಸಿಗಲಿಲ್ಲ.


ಓದುಗರ ಗಮನಕ್ಕೆ
ಇಂದಿನ ಸಂಚಿಕೆಯು ಎರಡು ಭಾಗಗಳಲ್ಲಿ ಪ್ರಕಟವಾಗಿದೆ.

ಸೇವಾವಧಿ ವಿಸ್ತರಣೆ ಕೇಂದ್ರ ಸಮರ್ಥನೆ

ನವದೆಹಲಿ (ಪಿಟಿಐ): ಜಾರಿ ನಿರ್ದೇಶನಾಲಯದ ನಿರ್ದೇಶಕ ಸಂಜಯ್ ಕುಮಾರ್ ಮಿಶ್ರಾ ಸೇವಾವಧಿಯನ್ನು ಮೂರನೇ ಬಾರಿಗೆ ವಿಸ್ತರಿಸಿರುವುದನ್ನು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಸಮರ್ಥಿಸಿಕೊಂಡಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಯಾದಗಿರಿ: 2018ರಲ್ಲಿಯೇ ಬಯಲು ಶೌಚ ಮುಕ್ತವಾಗಿ ಘೋಷಣೆ

‘ಬಯಲು ಬಹಿರ್ದೆಸೆ’ಗಿಲ್ಲ ಮುಕ್ತಿ

● ಬಿ.ಜಿ.ಪ್ರವೀಣಕುಮಾರ

ಯಾದಗಿರಿ: ಬೆಟ್ಟಗುಡ್ಡಗಳಿಂದ ಕೂಡಿರುವ ಯಾದಗಿರಿಯು ಬಯಲು ಶೌಚ ಮುಕ್ತ ಜಿಲ್ಲೆ ಎಂದು 2018ರಲ್ಲೇ ಘೋಷಣೆಯಾಗಿದೆ. ಆದರೆ, ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಬಯಲು ಬಹಿರ್ದೆಸೆ ‘ಪದ್ಧತಿ’ ಇಂದಿಗೂ ಕೊನೆಗೊಂಡಿಲ್ಲ.

ಬೆಳಗಿನ ಜಾವವೇ ಗ್ರಾಮಗಳಿಗೆ ತೆರಳಿ ಅಭ್ಯರ್ಥಿಗಳು ಎಲ್ಲರಿಗೂ ‘ಕೈ ಮುಗಿದು’ ಮತಯಾಚಿಸುವಾಗ, ಅವರ ಎದುರು ‘ಕೈಯಲ್ಲಿ ಚೊಂಬು’ ಹಿಡಿದು ಗ್ರಾಮಸ್ಥರು ಹೊಲಗಳತ್ತ ಹೋಗುವುದು ಸಾಮಾನ್ಯವಾಗಿದೆ. ಇದನ್ನು ಕಂಡ ಕೆಲ ಅಭ್ಯರ್ಥಿಗಳು ‘ಮನೆಗೊಂದು ಇಲ್ಲವೇ ಸಾರ್ವಜನಿಕ ಶೌಚಾಲಯ’ ನಿರ್ಮಿಸಿಕೊಡುವುದಾಗಿ ಘೋಷಿಸಿದ್ದಾರೆ.

ಜಿಲ್ಲೆಯಲ್ಲಿ 3 ನಗರಸಭೆ ಮತ್ತು 3 ಪುರಸಭೆಗಳಿವೆ. ಆದರೆ, ಜನಸಂಖ್ಯೆಗೆ ತಕ್ಕ ಶೌಚಾಲಯಗಳು ಇಲ್ಲ. ಸಾಮೂಹಿಕ ಶೌಚಾಲಯಗಳಲ್ಲಿ ನೀರಿಲ್ಲ. ಹೀಗಾಗಿ ‘ಬಯಲಿನಲ್ಲಿ ಮಲ, ಮೂತ್ರ ವಿಸರ್ಜನೆ ಅನಿವಾರ್ಯ’ ಎಂಬ ಸ್ಥಿತಿ ಇದೆ.

‘ಕೆಲ ಕಡೆ ಬಂಡೆಗಲ್ಲುಗಳ ಮೇಲೆ ಮನೆಗಳಿರುವ ಕಾರಣ ಶೌಚಗುಂಡಿ ನಿರ್ಮಿಸಿಕೊಳ್ಳಲು ಆಗಿಲ್ಲ. ಮನೆ ಆವರಣದಲ್ಲಿ ಶೌಚಾಲಯ ಕಟ್ಟಿಕೊಳ್ಳಲು ಜಾಗವಿಲ್ಲ. ಇದ್ದರೂ ಕಟ್ಟಿಕೊಳ್ಳಲು ಮನೆಯ ಹಿರಿಯರು ಒಪ್ಪುವುದಿಲ್ಲ. ಕೆಲವರು ಶೌಚಾಲಯ ಕಟ್ಟಿಕೊಂಡಿದ್ದಾರೆ. ಆದರೆ, ನೀರಿನ ಸೌಲಭ್ಯ ಇಲ್ಲದ ಕಾರಣ ಬಯಲಿಗೆ ಹೋಗುತ್ತಾರೆ’ ಎಂದು ಗ್ರಾಮಸ್ಥ ಸೂರಪ್ಪ ತಿಳಿಸಿದರು.

‘ಮನೆ ಆವರಣದಲ್ಲಿ ಇಕ್ಕಟ್ಟಾದ ಶೌಚಾಲಯ ನಿರ್ಮಿಸಿಕೊಂಡರೆ ಕೆಟ್ಟ ವಾಸನೆ ಬರುವುದೆಂದು ಅಕ್ಕಪಕ್ಕದ ಮನೆಯವರು ಕಿರಿಕಿರಿ ಮಾಡುತ್ತಾರೆ. ಬೇಸಿಗೆ ಸಮಯದಲ್ಲಿ ನೀರಿನ ಸಮಸ್ಯೆ ಕಾಡುವುದರಿಂದ ಶೌಚಾಲಯವಿದ್ದರೂ ಪ್ರಯೋಜನ ಆಗುವುದಿಲ್ಲ. ಶೌಚಾಲಯ ನಿರ್ಮಿಸಿಕೊಳ್ಳಲು ಜಾಗೃತಿ ಮೂಡಿಸಲಾಗುತ್ತದೆ. ಆದರೆ, ನೀರಿನ ಸೌಲಭ್ಯ ಕಲ್ಪಿಸುವುದಿಲ್ಲ’ ಎಂದರು.

ಜಿಲ್ಲಾ ಪಂಚಾಯಿತಿ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ನಸುಕಿನಲ್ಲಿ ಗ್ರಾಮಸ್ಥರ ಕೈಗೆ ಗುಲಾಬಿ ಹೂವನ್ನು ನೀಡಿ, ಶೌಚಾಲಯದ ಮಹತ್ವ ತಿಳಿಸುವ ಕಾರ್ಯವು ಇಲ್ಲಿ ವಿಫಲವಾಗಿದೆ.

‘ಮನೆಯಲ್ಲಿ ಶೌಚಾಲಯ ಇರಬಾರದು ಎಂಬ ಮೂಢನಂಬಿಕೆ ಕೆಲ ಗ್ರಾಮಸ್ಥರಲ್ಲಿದೆ. ಕೆಲ ಕಡೆ ಶೌಚಾಲಯಗಳನ್ನು ನಿರ್ಮಿಸಿ ಕೊಟ್ಟರೂ ಅದನ್ನು ಕೋಳಿ ಗೂಡು, ಕಟ್ಟಿಗೆ ಇಡುವ ಸ್ಥಳವಾಗಿ ಬಳಸಲಾಗುತ್ತಿದೆ’ ಎಂದು ಸ್ವಚ್ಛ ಭಾರತ ಅಭಿಯಾನ ಸಿಬ್ಬಂದಿ ಮಾಹಿತಿ ನೀಡಿದರು.




ನಗರದ ಕೋತ್ವಲಗೇರಾದಲ್ಲಿ ಶೌಚಾಲಯ ಬಾಗಿಲು ಮುರಿದಿದ್ದು, ಬಟ್ಟೆ ಶೇಖರಣೆ ಮಾಡಲಾಗಿದೆ

33,810 ಮನೆಗಳಿಗೆ ಶೌಚಾಲಯವಿಲ್ಲ

2012–2013ರ ಜಿಲ್ಲಾ ಪಂಚಾಯಿತಿ ಸಮೀಕ್ಷೆ ಪ್ರಕಾರ, ಜಿಲ್ಲೆಯಲ್ಲಿ 1,69,731 ಮನೆಗಳಲ್ಲಿ ಶೌಚಾಲಯ ಇರಲಿಲ್ಲ. ಆದರೆ, 2021–2022ರ ಅಕ್ಟೋಬರ್ 31ರವರೆಗಿನ ಅಂಕಿ ಅಂಶಗಳ ಪ್ರಕಾರ 1,35,921 ಮನೆಗಳಿಗೆ ಶೌಚಾಲಯ ನಿರ್ಮಿಸಿ ಕೊಡಲಾಗಿದೆ. 33,810 ಮನೆಗಳಲ್ಲಿ ಇನ್ನಷ್ಟೇ ನಿರ್ಮಿಸಬೇಕಿದೆ. ‘2023ನೇ ಸಾಲಿನಲ್ಲಿ 5 ಸಾವಿರ ಶೌಚಾಲಯ ನಿರ್ಮಿಸುವ ಗುರಿಯಿದೆ. 6 ಸಾವಿರ ಅರ್ಜಿಗಳು ಬಂದಿವೆ. ಚುನಾವಣೆ ಬಳಿಕ ಅರ್ಜಿಗಳನ್ನು ಪರಿಶೀಲಿಸಿ, ಅನುಮೋದನೆ ಕೊಡುತ್ತೇವೆ’ ಎಂದು ಸ್ವಚ್ಛ ಭಾರತ ಅಭಿಯಾನ ಸಿಬ್ಬಂದಿಯೊಬ್ಬರು ಮಾಹಿತಿ ನೀಡಿದರು.

ಬಟ್ಟೆಯಿಂದ ಮರೆ ಮಾಡಿಕೊಂಡು ಬಹಿರ್ದೆಸೆಗೆ ಹೋಗಬೇಕು. ಇಲ್ಲವೇ ರಾತ್ರಿ ಅಥವಾ ನಸುಕಿನಲ್ಲಿ ಬಯಲಿಗೆ ಹೋಗಬೇಕು. ಆಗ ಲೈಂಗಿಕ ಕಿರುಕುಳ, ಅತ್ಯಾಚಾರ ಆಗುವ ಸಾಧ್ಯತೆ ಇರುತ್ತದೆ
ನರಸಮ್ಮ
ಗ್ರಾಮಸ್ಥೆ

ಜಿಲ್ಲೆಯಲ್ಲಿ ಶೌಚಾಲಯಗಳ ಸಮೀಕ್ಷೆ ನಡೆದಿದೆ. ನರೇಗಾ ಅಡಿ ಶಾಲೆಗಳಲ್ಲಿ ಶೌಚಾಲಯ ನಿರ್ಮಿಸಿ, ಮಕ್ಕಳ ಜೊತೆ ಪೋಷಕರಿಗೆ ಅರಿವು ಮೂಡಿಸಲಾಗುವುದು
ಗರಿಮಾ ಪನ್ವಾರ,
ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯಿತಿ, ಯಾದಗಿರಿ



ಸುಭಾಷಿತ

ಒಬ್ಬ ವಿದ್ಯಾವಂತ ಮತ್ತು ಅವಿದ್ಯಾವಂತ ಇಬ್ಬರೂ ಮೂಢನಂಬಿಕೆ ಉಳ್ಳವರಾಗಿದ್ದರೆ, ಅವರಲ್ಲಿ ವಿದ್ಯಾವಂತನೇ ಹೆಚ್ಚು ಅಪಾಯಕಾರಿ. -ಡಾ. ಎಚ್.ನರಸಿಂಹಯ್ಯ

ಗೊಂದಲ–ಸವಾಲುಗಳನ್ನು ಎದುರಿಸಿಯೂ ಎಸ್‌ಎಸ್‌ಎಲ್‌ಸಿ ಉತ್ತಮ ಫಲಿತಾಂಶ

ಕಳೆದ ವರ್ಷ ದಾಖಲೆ ಪ್ರಮಾಣದಲ್ಲಿ ಪ್ರಕಟಗೊಂಡಿದ್ದ ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಸಕ್ತ ಸಾಲಿನಲ್ಲಿ ಕೊಂಚ ಕಡಿಮೆಯಾಗಿದ್ದರೂ, ವಿದ್ಯಾರ್ಥಿಗಳ ಒಟ್ಟಾರೆ ಸಾಧನೆ ಅಭಿನಂದನಾರ್ಹ. ಈ ವರ್ಷ ಶೇಕಡ 83.89ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದರೆ, 2021–22ರ ಸಾಲಿನಲ್ಲಿ ಶೇ 85.13ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದರು. ಆದರೆ, ಕಳೆದ ವರ್ಷ ಶೇ 20ರಷ್ಟು ಸರಳ ಪ್ರಶ್ನೆಗಳನ್ನು ಕೇಳುವುದರ ಜೊತೆಗೆ ಅಗತ್ಯವಿರುವ ವಿದ್ಯಾರ್ಥಿಗಳಿಗೆ ಕೃಪಾಂಕಗಳನ್ನೂ ನೀಡಲಾಗಿತ್ತು. ಈ ಬಾರಿ ಕೂಡ ಕೃಪಾಂಕಗಳನ್ನು ನೀಡಲಾಗಿದ್ದರೂ, ಪ್ರಶ್ನೆಪತ್ರಿಕೆಯಲ್ಲಿ ಕಠಿಣ ಪ್ರಶ್ನೆಗಳ ಸಂಖ್ಯೆ ಹೆಚ್ಚಾಗಿತ್ತು. ಕಠಿಣ ಪ್ರಶ್ನೆಪತ್ರಿಕೆಗಳನ್ನು ಎದುರಿಸಿಯೂ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿರುವುದು ಗಮನಾರ್ಹ. ಕೊರೊನಾ ಬಿಕ್ಕಟ್ಟಿನ ಸಂದರ್ಭದಲ್ಲಿ ವಿದ್ಯಾರ್ಥಿಗಳ ಕಲಿಕೆ ಕುಂಠಿತಗೊಂಡಿದ್ದು, 2020–21ರಲ್ಲಿ ಶೇ 99.99ರ ಫಲಿತಾಂಶದೊಂದಿಗೆ ಎಲ್ಲ ಪರೀಕ್ಷಾರ್ಥಿಗಳನ್ನೂ ಉತ್ತೀರ್ಣಗೊಳಿಸಲಾಗಿತ್ತು. ಕೊರೊನಾ ಕಣ್ಣಾಮುಚ್ಚಾಲೆಯ ನಡುವೆಯೇ ಕಳೆದ ವರ್ಷವೂ ತರಗತಿಗಳು ನಡೆದಿದ್ದವು. ಈ ವರ್ಷ ಕೊರೊನಾದ ಆತಂಕ ತಿಳಿಗೊಂಡಿದ್ದರೂ, ಪಠ್ಯಪುಸ್ತಕ ಪರಿಷ್ಕರಣೆಯು ವಿವಾದದ ರೂಪು ತಾಳಿ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪೋಷಕರನ್ನು ಗೊಂದಲಕ್ಕೆ ದೂಡಿತ್ತು. ಕಳೆದ ಮೂರು ವರ್ಷಗಳಲ್ಲಿ ಕಲಿಕೆಯಲ್ಲಿ ಉಂಟಾದ ಏರುಪೇರನ್ನು ಸರಿಪಡಿಸಿಕೊಂಡು ಪರೀಕ್ಷೆ ಬರೆಯಬೇಕಾದ ಸವಾಲು ವಿದ್ಯಾರ್ಥಿಗಳ ಮೇಲಿತ್ತು. ಗೊಂದಲ, ಸವಾಲುಗಳನ್ನು ಎದುರಿಸಿಯೂ ಉತ್ತಮ ಸಾಧನೆ ಮಾಡಿರುವ ಮಕ್ಕಳು ಹಾಗೂ ಅವರನ್ನು ಪರೀಕ್ಷೆಗೆ ಸಜ್ಜುಗೊಳಿಸಿರುವ ಶಿಕ್ಷಕರು ಅಭಿನಂದನಾರ್ಹರು. ಚುನಾವಣಾ ದಿನಗಳಲ್ಲೂ ಮೌಲ್ಯಮಾಪನ ಪ್ರಕ್ರಿಯೆಯನ್ನು ಕ್ಷಿಪ್ರವಾಗಿ ಮುಗಿಸಿ, ಪರೀಕ್ಷೆ ಮುಕ್ತಾಯಗೊಂಡ ಒಂದು ತಿಂಗಳಿಗಿಂತ ಕಡಿಮೆ ಅವಧಿಯಲ್ಲಿಯೇ ಫಲಿತಾಂಶ ಪ್ರಕಟಿಸಿರುವ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿಗೆ ಕೂಡ ಮೆಚ್ಚುಗೆ ಸಲ್ಲಬೇಕು. ಫಲಿತಾಂಶ ಪ್ರಕಟವಾದಷ್ಟೇ ಸರಾಗವಾಗಿ, ಹೆಚ್ಚಿನ ಸಂಖ್ಯೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಕಾಲೇಜು ಪ್ರವೇಶ ಪ್ರಕ್ರಿಯೆಯೂ ತೊಡಕಿಲ್ಲದಂತೆ ನಡೆಯಬೇಕಾಗಿದೆ. ಪ್ರವೇಶ ಪ್ರಕ್ರಿಯೆಗೆ ಸಂಬಂಧಿಸಿದಂತೆ ಯಾವ ಅಡಚಣೆಗಳೂ ಉಂಟಾಗದಂತೆ ಸರ್ಕಾರ ಎಚ್ಚರ ವಹಿಸಬೇಕಾಗಿದೆ.



‘ಎ’ ಶ್ರೇಣಿಯಲ್ಲಿ ಸ್ಥಾನ ಪಡೆದಿರುವ ಜಿಲ್ಲೆಗಳು ಇತ್ತೀಚಿನ ವರ್ಷಗಳಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಬಗ್ಗೆ ತೆಗೆದುಕೊಳ್ಳುತ್ತಿರುವ ವಿಶೇಷ ಕಾಳಜಿಯು ಫಲಿತಾಂಶದಲ್ಲಿ ಹಿಂದುಳಿದಿರುವ ಜಿಲ್ಲೆಗಳಿಗೂ ಮಾದರಿಯಾಗಬೇಕು

ಬಾಲಕಿಯರು ಮತ್ತು ಗ್ರಾಮೀಣ ವಿದ್ಯಾರ್ಥಿಗಳು ಈ ಬಾರಿಯೂ ಮೇಲುಗೈ ಸಾಧಿಸಿರುವುದು ಹಾಗೂ ಕನ್ನಡ ಮಾಧ್ಯಮದ ಮಕ್ಕಳು ಫಲಿತಾಂಶದಲ್ಲಿ ಹಿಂದಿರುವುದು 2022–23ರ ಫಲಿತಾಂಶದ ಮುಖ್ಯಾಂಶಗಳಲ್ಲಿ ಸೇರಿವೆ. ಶೇ 87.87ರಷ್ಟು ಬಾಲಕಿಯರು ಉತ್ತೀರ್ಣರಾಗಿದ್ದರೆ, ಬಾಲಕರ ಯಶಸ್ಸಿನ ಪ್ರಮಾಣ ಶೇ 80.08ರಷ್ಟು ಮಾತ್ರ. ನಗರ ಪ್ರದೇಶಗಳ ಶೇ 79.62ರಷ್ಟು ಮಕ್ಕಳು ಯಶಸ್ಸು ಗಳಿಸಿದ್ದರೆ, ಗ್ರಾಮೀಣ ಪ್ರದೇಶಗಳ ಶೇ 87ರಷ್ಟು ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ಗ್ರಾಮೀಣ ಪ್ರದೇಶಗಳ ಮಕ್ಕಳು ಸವಲತ್ತುಗಳ ಕೊರತೆಯ ನಡುವೆಯೂ ಉತ್ತಮ ಸಾಧನೆ ಮಾಡಿರುವುದು ಅಭಿನಂದನೆಗೆ ಅರ್ಹ. ನೂರಕ್ಕೆ ನೂರು ಅಂಕಗಳ ಸಾಧನೆ ಮಾಡಿರುವ ನಾಲ್ವರಲ್ಲಿ ಓರ್ವ ವಿದ್ಯಾರ್ಥಿಯನ್ನು ಹೊರತುಪಡಿಸಿದರೆ, ಉಳಿದ ಮೂವರೂ ಬೆಂಗಳೂರಿನ ಹೊರಗಿನವರಾಗಿರುವುದು ಗಮನಾರ್ಹ. ಆದರೆ, ಕನ್ನಡ ಮಾಧ್ಯಮದ ಶೇ 85.59ರಷ್ಟು ಮಕ್ಕಳಷ್ಟೇ ಯಶಸ್ಸು ಕಂಡಿದ್ದರೆ, ಇಂಗ್ಲಿಷ್ ಮಾಧ್ಯಮದಲ್ಲಿ ಫಲಿತಾಂಶದ ಪ್ರಮಾಣ ಶೇ 91.66ರಷ್ಟಿದೆ. ‘ಗುಣಾತ್ಮಕ ಫಲಿತಾಂಶ ವಿಶ್ಲೇಷಣೆ ಆಧರಿಸಿದ ಜಿಲ್ಲಾ ಶ್ರೇಣಿ’ಯನ್ನು ಪ್ರಕಟಿಸುವ ಪದ್ಧತಿ ಈಗ ಚಾಲ್ತಿಯಲ್ಲಿದ್ದು, ಆ ಸಂಪ್ರದಾಯ ಈ ವರ್ಷವೂ ಮುಂದುವರಿದಿದೆ. ಯಾವುದೊಂದು ಜಿಲ್ಲೆಯೂ ‘ಸಿ’ ಶ್ರೇಣಿಯಲ್ಲಿ ಇಲ್ಲದಿರುವುದು ಸಮಾಧಾನದ ಸಂಗತಿಯಾದರೂ, ‘ಬಿ’ ವರ್ಗದಲ್ಲಿರುವ ಯಾದಗಿರಿ, ಬಾಗಲಕೋಟೆ, ರಾಯಚೂರು, ಬೀದರ್, ಬಳ್ಳಾರಿ, ಕಲಬುರಗಿ ಜಿಲ್ಲೆಗಳಲ್ಲಿನ ಫಲಿತಾಂಶವನ್ನು ಮತ್ತಷ್ಟು ಉತ್ತಮಗೊಳಿಸಲು ಅವಕಾಶ ಇದ್ದೇ ಇದೆ. ‘ಎ’ ಶ್ರೇಣಿಯಲ್ಲಿ ಸ್ಥಾನ ಪಡೆದಿರುವ ಚಿತ್ರದುರ್ಗ, ಮಂಡ್ಯ ಮತ್ತು ಹಾಸನ ಜಿಲ್ಲೆಗಳು ಇತ್ತೀಚಿನ ವರ್ಷಗಳಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಬಗ್ಗೆ ತೆಗೆದುಕೊಳ್ಳುತ್ತಿರುವ ವಿಶೇಷ ಕಾಳಜಿಯು ಫಲಿತಾಂಶದಲ್ಲಿ ಹಿಂದುಳಿದಿರುವ ಜಿಲ್ಲೆಗಳಿಗೂ ಮಾದರಿಯಾಗಬೇಕು.

ದಿನದ ಟ್ವೀಟ್


ಮತ ಹಾಕುವ ಮುನ್ನ...



ಸಿಂಪಲ್ ಫಾರ್ಮುಲ... ನೀವು ಮತ ಹಾಕುವ ಅಭ್ಯರ್ಥಿ ಗೆಲ್ಲುತ್ತಾರೋ ಸೋಲುತ್ತಾರೋ ಯೋಚಿಸಬೇಡಿ. ಗೆಲ್ಲಲಿ, ಸೋಲಲಿ ಮತ ವ್ಯರ್ಥವಾಗುವುದಿಲ್ಲ. ಮತ ಹಾಕುವ ಮೊದಲು ಕರ್ನಾಟಕದ ಪರ ಕಾಳಜಿಯಿದೆಯೇ, ಜಾತಿ, ಧರ್ಮಕ್ಕಿಂತ ಕರ್ನಾಟಕ, ಕನ್ನಡ ಮುಖ್ಯವೇ, ಮನುಷ್ಯತ್ವ ಇದೆಯೇ ಎನ್ನುವುದರ ಆಧಾರದಲ್ಲಿ ಮತ ಹಾಕಿ.

ಅರುಣ್ ಜಾವಗಲ್, ಕನ್ನಡಪರ ಕಾರ್ಯಕರ್ತ

ಕಿಡಿನುಡಿ



ಐಎಎಸ್ ಅಸೋಸಿಯೇಷನ್ ಜೊತೆ ಸಹಮತ ವ್ಯಕ್ತಪಡಿಸಿರುವ ಐಪಿಎಸ್ ಅಸೋಸಿಯೇಷನ್, ಬಿಹಾರದಲ್ಲಿ ಭೂಗತ ಪಾತಕಿ ಆನಂದ ಮೋಹನ್ ಬಿಡುಗಡೆಗೆ ಸಂಬಂಧಿಸಿದಂತೆ ಭಾರಿ ಆತಂಕ ವ್ಯಕ್ತಪಡಿಸಿರುವುದು ಸಂತೋಷದ ವಿಚಾರ. ಜಿಲ್ಲೆಯೊಂದರಲ್ಲಿ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಪಿ) ಮತ್ತು ಜಿಲ್ಲಾಧಿಕಾರಿ ಒಟ್ಟಾಗಿ ಕೆಲಸ ನಿರ್ವಹಿಸಿದ್ದೇ ಆದರೆ, ಯಾವ ಬಗೆಯ ಮಾಫಿಯಾವನ್ನಾದರೂ ಅವರು ತೊಡೆದುಹಾಕಬಹುದು. ಮುಖ್ಯಮಂತ್ರಿ ಇದರಲ್ಲಿ ತಲೆ ಹಾಕುವ ಮೂಲಕ ಅಪಖ್ಯಾತಿಗೆ ಒಳಗಾಗಲು ಇಚ್ಛಿಸುವುದಿಲ್ಲ.

ಯಶೋವರ್ಧನ್ ಝಾ ಆಜಾದ್, ಉದ್ಯಮಿ, ನಿವೃತ್ತ ಐಪಿಎಸ್ ಅಧಿಕಾರಿ

25 ವರ್ಷಗಳ ಹಿಂದೆ

ಶನಿವಾರ, 9-5-1998

• ಮೇಲ್ಮನೆ ಚುನಾವಣೆ: ಅಧಿಕೃತ ಅಭ್ಯರ್ಥಿಗಳ ಜಯ

ಬೆಂಗಳೂರು, ಮೇ 8– ವಿಧಾನಸಭೆಯಿಂದ ವಿಧಾನ ಪರಿಷತ್ತಿನ ಏಳು ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್‌ನ ರಾಣಿ ಸತೀಶ್ ಮತ್ತು ಲೋಕಶಕ್ತಿ ಸ್ಪರ್ಧಿ ವಿ.ಎಸ್.ಉಗ್ರಪ್ಪ ನಡುವೆ ಹಣಾಹಣಿ ಹೋರಾಟ ನಡೆದು ಇಡೀ ಚುನಾವಣೆಗೆ ರಂಗೇರಿಸಿತ್ತಾದರೂ ಕೂದಲೆಳೆ ಅಂತರದಲ್ಲಿ ರಾಣಿ ಸತೀಶ್ ಜಯ ಗಳಿಸಿದ್ದು ಒಂದೆಡೆಯಾದರೆ, ಆಡಳಿತಾರೂಢ ಜನತಾದಳ 4 ಸ್ಥಾನ ಗಳಿಸಿತು. ಕಾಂಗ್ರೆಸ್ 2 ಹಾಗೂ ಬಿಜೆಪಿ 1 ಸ್ಥಾನ ಪಡೆದವು.

ಲೋಕಶಕ್ತಿಯನ್ನು ಸೋಲಿಸಲು ಜನತಾದಳ ಮತ್ತು ಕಾಂಗ್ರೆಸ್ ಎರಡೂ ‘ಜಾತ್ಯತೀತ ಶಕ್ತಿಗಳು ಒಂದಾಗಬೇಕು’ ಎನ್ನುವ ತಾತ್ಕಾಲಿಕ ಒಡಂಬಡಿಕೆಯಡಿ ಉಗ್ರಪ್ಪ ಅವರನ್ನು ಸೋಲಿಸಿದ್ದು ಇಂದಿನ ಚುನಾವಣೆಯ ವಿಶೇಷವಾಗಿತ್ತು.

ಜನತಾದಳದಿಂದ ಕಾನೂನು ಸಚಿವ ಎಂ.ಸಿ.ನಾಣಯ್ಯ, ಜನತಾದಳ ರಾಜ್ಯ ಘಟಕದ ಅಧ್ಯಕ್ಷ ಬಿ.ಎಲ್.ಶಂಕರ್, ಹುಬ್ಬಳ್ಳಿಯ ಇಸ್ಮಾಯಿಲ್ ಕಾಲೇಬುಡ್ಡೆ ಹಾಗೂ ಹನುಮಂತಪ್ಪ ಅಲ್ಕೋಡ್, ಕಾಂಗ್ರೆಸ್ ಪಕ್ಷದಿಂದ ಮೇಲ್ಮನೆಯ ಹಾಲಿ ಸದಸ್ಯೆ ಟಿ.ಕೆಂಪಮ್ಮ, ಉಪಸಭಾಪತಿ ರಾಣಿ ಸತೀಶ್ ಹಾಗೂ ಬಿಜೆಪಿಯಿಂದ ಚಿತ್ರನಟ ಮುಖ್ಯಮಂತ್ರಿ ಚಂದ್ರು ಅವರು ಗೆದ್ದರು.

• ಚಿತ್ರದುರ್ಗ ಜೈಲಿನಲ್ಲಿ ಕೈದಿಗಳ ಬಂಡಾಯ

ಚಿತ್ರದುರ್ಗ, ಮೇ 8– ಇಲ್ಲಿನ ಜಿಲ್ಲಾ ಬಂದೀಖಾನೆಯಲ್ಲಿ ಇಂದು ಕೈದಿಗಳು ಹಠಾತ್ತನೆ ದಂಗೆಯೆದ್ದು ಜೈಲಿನ ಇಬ್ಬರು ಸಿಬ್ಬಂದಿ ಮತ್ತು ಒಬ್ಬ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ಮೇಲೆ ತೀವ್ರ ಹಲ್ಲೆ ನಡೆಸಿದರು.

ಬೆಂಗಾವಲು ಸಿಬ್ಬಂದಿ ಕೊರತೆಯ ಕಾರಣ ಇಂದು ಕೈದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದ್ದರಿಂದ ಕೋಪಗೊಂಡ ಕೈದಿಗಳು ಬಂಡೆದ್ದರು ಎನ್ನಲಾಗಿದೆ.

50 ವರ್ಷಗಳ ಹಿಂದೆ

ಬುಧವಾರ, 9-5-1973

• ತೆರಿಗೆ ಕಳ್ಳರಿಗೆ ಕಠಿಣ ಶಿಕ್ಷೆ

ನವದೆಹಲಿ, ಮೇ 8– ಕೇಂದ್ರ ಸಚಿವ ಸಂಪುಟವು ಅಂತಿಮವಾಗಿ ಇತ್ಯರ್ಥ ಪಡಿಸಿರುವ ಉದ್ದೇಶಿತ ಹೊಸ ವಿಧೇಯಕ ಒಂದರಂತೆ, ಒಂದು ಲಕ್ಷ ರೂಪಾಯಿಗಿಂತ ಹೆಚ್ಚು ತೆರಿಗೆ ಮೋಸ ಮಾಡುವವರಿಗೆ ದಂಡದ ಸಮೇತ 7 ವರ್ಷಗಳವರೆಗೆ ಕಠಿಣ ಶಿಕ್ಷೆ ವಿಸ್ತರಿಸಲಾಗುವುದೆಂದು ಬಲ್ಲ ವಲಯಗಳು ತಿಳಿಸಿವೆ.

ಹೊಸ ವಿಧೇಯಕದ ಪ್ರಕಾರ, ತೆರಿಗೆ ಮೋಸ, ಆದಾಯ ತೆರಿಗೆ ಮೊತ್ತ ಸರಿಯಾಗಿ ತೋರಿಸದೆ ತಪ್ಪು ಲೆಕ್ಕ ಸಲ್ಲಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು.

• ರಫ್ತು ಸಂಸ್ಥೆಯೊಂದರ ಫೈಲು ಕಣ್ಮರೆ: ರಾಜ್ಯಸಭೆಯಲ್ಲಿ ಕೋಲಾಹಲ

ನವದೆಹಲಿ, ಮೇ 8– ಕರ್ನಾಟಕ ಎಕ್ಸ್‌ಪೋರ್ಟ್ ಹೌಸ್ ಸಂಸ್ಥೆಯ ಕೆಲವು ಅಕ್ರಮಗಳಿಗೆ ಸಂಬಂಧಿಸಿದ ಕಾಗದ ಪತ್ರಗಳನ್ನೊಳಗೊಂಡ ಫೈಲು ಕೇಂದ್ರ ವಾಣಿಜ್ಯ ಸಚಿವ ಶಾಖೆಯಿಂದ ಕಣ್ಮರೆಯಾಗಿರುವ ಬಗ್ಗೆ ಇಂದು ರಾಜ್ಯಸಭೆಯಲ್ಲಿ ಕೋಲಾಹಲ ಉಂಟಾಯಿತು.

ಸರ್ಕಾರ ಈ ಸಂಸ್ಥೆಗೆ ಲಾಭ ಗಳಿಸಲು ಸಾಧ್ಯವಾಗುವಂತೆ ವಿಶೇಷ ಅನುಗ್ರಹ ತೋರಿಸಿದೆಯೆಂದು ಕಾಂಗ್ರೆಸ್ಸಿನ ಚಂದ್ರಶೇಖರ್, ಕೃಷ್ಣಕಾಂತ್, ಎ.ಜಿ.ಕುಲಕರ್ಣಿ ಮೊದಲಾದವರು ಆಪಾದಿಸಿದರು.

ಗಂಡುಮಕ್ಕಳು ವೃತ್ತಿ ಆಯ್ಕೆಗಳೇನೇ ಇದ್ದರೂ ಉನ್ನತ ಶಿಕ್ಷಣಕ್ಕೆ ಹೆಚ್ಚು ತೆರೆದುಕೊಳ್ಳುವುದು ಸೂಕ್ತ

ಕೃಷಿಕರಿಗೇಕೆ ಹೆಣ್ಣು ಸಿಗುತ್ತಿಲ್ಲ?



ವಿಶ್ಲೇಷಣೆ

ಡಾ. ಜ್ಯೋತಿ

ನಗರಗಳೆಂದರೆ ಸುಸ್ಥಿರ ಬದುಕು ನೀಡುವ ಮತ್ತು ಹಳ್ಳಿಗಳೆಂದರೆ ಮೂಲಭೂತ ವ್ಯವಸ್ಥೆಗಳಿಲ್ಲದ ತಾಣಗಳೆನ್ನುವ ಜನಾಭಿಪ್ರಾಯವಿದೆ. ಅಷ್ಟಾದರೂ ನಗರವಾಸಿ ಯುವಕರು ಇಂದು ಹಳ್ಳಿಯಲ್ಲಿ ಬದುಕು ಕಟ್ಟಿಕೊಳ್ಳಬೇಕೆಂದು ಆಶಿಸಿ ತಮ್ಮ ಉತ್ತಮ ಸಂಪಾದನೆಯ ಉದ್ಯೋಗಗಳನ್ನು ತ್ಯಜಿಸಿ, ಹಳ್ಳಿಗಳಲ್ಲಿ ಪ್ರಯೋಗಾತ್ಮಕ ಕೃಷಿ, ತೋಟಗಾರಿಕೆ ಮತ್ತು ಪೂರಕ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಸಾಹಸಕ್ಕೆ ಮುಂದಾಗುತ್ತಿರುವುದು ಹೆಚ್ಚಾಗುತ್ತಿದೆ. ಇದರ ನಡುವೆ, ಇಂದು ಹಳ್ಳಿಯಲ್ಲಿ ನೆಲೆ ನಿಂತಿರುವ ಗಂಡು ಮಕ್ಕಳು ಎದುರಿಸುತ್ತಿರುವ ಬಹು ದೊಡ್ಡ ಸಮಸ್ಯೆಯೆಂದರೆ, ಮದುವೆಗೆ ಹೆಣ್ಣು ಸಿಗದಿರುವುದು. ಈ ಸಮಸ್ಯೆ ದಿನದಿಂದ ದಿನಕ್ಕೆ ಬೃಹದಾಕಾರವಾಗಿ ಬೆಳೆಯುತ್ತಿದೆ. ಹಳ್ಳಿಗಳು ತಮ್ಮ ಅಸ್ತಿತ್ವ ಉಳಿಸಿಕೊಳ್ಳಬೇಕಾದರೆ, ಈ ಸಮಸ್ಯೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸೂಕ್ತ ಮಾರ್ಗಗಳನ್ನು ಕಂಡುಕೊಳ್ಳಬೇಕಾಗಿದೆ. ಇದೊಂದು, ಸಮಾಜದಲ್ಲಿ ಆಗಬೇಕಾದ ಮಾನಸಿಕ ಪರಿವರ್ತನೆ ಮತ್ತು ಹಳ್ಳಿಗಳ ಮೂಲ ಸೌಲಭ್ಯಗಳ ಸುವ್ಯವಸ್ಥೆ.

ಮೊದಲನೆಯದಾಗಿ, ಮದುವೆಗೆ ಹೆಣ್ಣು ಸಿಗುವುದಿಲ್ಲವೆಂದರೆ, ಹೆಣ್ಣುಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆಯೇ? ಸದ್ಯ ಭಾರತದಲ್ಲಿ ಗಂಡು- ಹೆಣ್ಣಿನ ಸಂಖ್ಯಾ ಅನುಪಾತವು ಕ್ರಮವಾಗಿ ಶೇ 51.6 ಮತ್ತು ಶೇ 48.4ರಷ್ಟಿದೆ. ಈ ಶೇಕಡ ಮೂರರಷ್ಟು ಅಸಮತೋಲನದಿಂದ ವಧುಗಳ ಬರಗಾಲವಾಗಿದೆಯೇ? ಖಂಡಿತವಾಗಿಯೂ ಇದೊಂದೇ ಕಾರಣವಲ್ಲ. ಇನ್ನಿತರ ಬಹಳಷ್ಟು ಕಾರಣಗಳಿವೆ. ಹೆಣ್ಣುಮಕ್ಕಳು ಉನ್ನತ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ನಗರಗಳತ್ತ ವಲಸೆ ಹೋಗುತ್ತಿರುವುದು ಹೆಚ್ಚಾಗಿದೆ. ಹಳ್ಳಿಯಲ್ಲಿ ಮಹಿಳೆಯರ ಮೇಲೆ ಹೇರುವ ಶಿಷ್ಟಾಚಾರಗಳು, ಜಾತಿ ವ್ಯವಸ್ಥೆ, ಕೃಷಿಗೆ ಇಲ್ಲದ ಗೌರವ, ರೈತರ ಆತ್ಮಹತ್ಯೆ, ಉನ್ನತ ಶಿಕ್ಷಣದಲ್ಲಿ ಆಸಕ್ತಿ ಕಳೆದುಕೊಂಡ ಹಳ್ಳಿಯ ಗಂಡುಮಕ್ಕಳು, ಹೆಣ್ಣುಮಕ್ಕಳಲ್ಲಿ ಕೃಷಿಯ ಕುರಿತು ನಿರಾಸಕ್ತಿ, ಹಳ್ಳಿಗಳಲ್ಲಿ ಹೆಣ್ಣುಮಕ್ಕಳಿಗೆ ಇಲ್ಲದ ವೈಯಕ್ತಿಕ ಸ್ವಾತಂತ್ರ್ಯದಂತಹವು ಸೇರಿವೆ.

ಹಲವಾರು ವರ್ಷಗಳಿಂದ ದೇಶದ ಉನ್ನತ ಶಿಕ್ಷಣದಲ್ಲಿ ಕಂಡುಬರುತ್ತಿರುವ ವಿದ್ಯಮಾನವೆಂದರೆ, ತರಗತಿಗಳಲ್ಲಿ ಗಂಡುಮಕ್ಕಳಿಗೆ ಹೋಲಿಸಿದರೆ ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚಾಗುತ್ತಿದೆ. ಆದರೆ, ಉದ್ಯೋಗ ಕ್ಷೇತ್ರದಲ್ಲಿ ಅದೇ ಪ್ರಮಾಣದಲ್ಲಿ ಹೆಣ್ಣುಮಕ್ಕಳನ್ನು ನಾವು ಕಾಣುತ್ತಿಲ್ಲ. ಹಾಗಿದ್ದರೆ, ಹೆಣ್ಣುಮಕ್ಕಳು ಎಲ್ಲಿ ಕಳೆದುಹೋಗುತ್ತಾರೆ? ಇಂದಿಗೂ, ಹೆಚ್ಚಿನ ಹೆತ್ತವರು ತಮ್ಮ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತಿರುವುದು ಅವರು ಉದ್ಯೋಗ ಪಡೆಯಲಿ ಎಂದಲ್ಲ, ಬದಲಾಗಿ ಒಳ್ಳೆಯ ಕೆಲಸದಲ್ಲಿರುವ ಗಂಡು ಸಿಗಲಿ ಎಂದು. ಹಾಗಾಗಿ, ಕಡಿಮೆ ವಿದ್ಯಾಭ್ಯಾಸ ಮಾಡಿದ ಹುಡುಗರಿಗೆ ಹೆಣ್ಣು ಸಿಗುವುದು ಸ್ವಲ್ಪ ಕಷ್ಟವೇ. ನಗರಗಳಲ್ಲಿ ವಾಸಿಸುವ ಉದ್ಯೋಗಸ್ಥ, ಕಡಿಮೆ ಶಿಕ್ಷಣ ಪಡೆದ ಹುಡುಗರಿಗೆ ಒಂದು ವೇಳೆ ಹೆಣ್ಣು ಸಿಗಬಹುದು. ನಗರಗಳಲ್ಲಿ ಹೆಣ್ಣುಮಕ್ಕಳಿಗೂ ಕೆಲಸಕ್ಕೆ ವಿಪುಲ ಅವಕಾಶಗಳಿರುವುದರಿಂದ, ಇಬ್ಬರೂ ದುಡಿದರೆ ಹೇಗೋ ಸಂಸಾರ ನಿರ್ವಹಿಸುತ್ತಾರೆ ಎನ್ನುವ ಧೈರ್ಯ ತೆಗೆದುಕೊಳ್ಳುತ್ತಾರೆ. ಆದರೆ, ಹಳ್ಳಿಯಲ್ಲಿ ಕೃಷಿಯನ್ನು ಹೊರತುಪಡಿಸಿ ಅನ್ಯ ಉದ್ಯೋಗಗಳ ಕೊರತೆಯಿರುವುದರಿಂದ ಮತ್ತು ಕೃಷಿ ಅವಲಂಬನೆ ಸದಾ ಅನಿಶ್ಚಿತತೆಯಿಂದ ಕೂಡಿರುವುದರಿಂದ, ಹೆಣ್ಣು ಮಕ್ಕಳು ಮತ್ತು ಅವರ ಹೆತ್ತವರು ಹಳ್ಳಿಗಳಲ್ಲಿ ಭವಿಷ್ಯ ಕಳೆಯುವ ಮನಸ್ಸು ಮಾಡುವುದು ದುರ್ಲಭ.

ಹಳ್ಳಿಯಲ್ಲಿ ಆಚರಣೆ, ಶಿಷ್ಟಾಚಾರ, ಸಂಪ್ರದಾಯದ ಹೆಸರಿನಲ್ಲಿ ಮಹಿಳೆಯರ ಮೇಲೆ ನಿರ್ಬಂಧಗಳನ್ನು ಹೇರುವ ಪರಿಪಾಟ ಹೆಚ್ಚು. ಗ್ರಾಮೀಣ ಪರಿಸರಕ್ಕೆ ಹೋಲಿಸಿದರೆ, ನಗರಗಳಲ್ಲಿ ಹೆಣ್ಣುಮಕ್ಕಳಿಗೆ ಸಂಪ್ರದಾಯಗಳನ್ನು ಅನುಸರಿಸುವ ಅಥವಾ ಅನುಸರಿಸದಿರುವ ವೈಯಕ್ತಿಕ ಸ್ವಾತಂತ್ರ್ಯ ಹೆಚ್ಚಿದೆ ಎನ್ನಬಹುದು.

ಇನ್ನು ಜಾತಿ ವ್ಯವಸ್ಥೆಯ ಬಿಗಿಬಂಧವು ಹಳ್ಳಿಗಳ ದೈನಂದಿನ ಜೀವನದ ಭಾಗವಾಗಿರುವುದರಿಂದ, ದುರ್ಬಲ ಜಾತಿಯ ಹೆಣ್ಣುಮಕ್ಕಳು ಹಳ್ಳಿಗಳಲ್ಲಿ ನೆಲೆ ನಿಲ್ಲಲು ಆಸಕ್ತಿ ತೋರಿಸದಿರಬಹುದು. ನಗರಗಳೇನೂ ಜಾತಿ ನಿಂದನೆಯಿಂದ ಮುಕ್ತವಾಗಿಲ್ಲ ನಿಜ, ಆದರೆ ಹಳ್ಳಿಗಳಂತೆ ನಿರ್ಭೀತಿಯಿಂದ ಆಚರಿಸುವಷ್ಟು ಧೈರ್ಯ ತೋರುವುದು ಬಹಳ ಕಡಿಮೆ, ಬದಲಾಗಿ ತೆರೆಮರೆಯಲ್ಲಿ ನಡೆದುಹೋಗುತ್ತದೆ.

ರೈತರನ್ನು ಅನ್ನದಾತ, ದೇಶದ ಬೆನ್ನೆಲುಬು ಎನ್ನುವ ಗೌರವ ಸೂಚಕ ವ್ಯಾಖ್ಯಾನಗಳ ನಡುವೆ ಇಂದು ಕೃಷಿಕರಿಗೆ ಸಿಗುವ ಗೌರವ ಕಡಿಮೆಯಾಗುತ್ತಿದೆ. ರೈತರೆಂದರೆ ಬಡವರು, ಆರ್ಥಿಕವಾಗಿ ದಿವಾಳಿಯಾಗಿರುವವರು ಮತ್ತು ಹತಾಶೆಗೊಂಡು ಆತ್ಮಹತ್ಯೆ ಮಾಡಿಕೊಳ್ಳುವವರು ಎನ್ನುವ ಅಭಿಪ್ರಾಯ ಮಾಧ್ಯಮಗಳಲ್ಲಿ ಪ್ರಚಾರಗೊಂಡಷ್ಟೂ ರೈತರಿಗೆ ಹೆಣ್ಣು ಸಿಗುವುದು ಕಷ್ಟವಾಗುತ್ತಿದೆ. ಪ್ರಸಕ್ತ, ಕೃಷಿಕರು ಬಹಳಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆದರೆ, ಕೃಷಿಯಲ್ಲಿ ಇನ್ನಷ್ಟು ಯುವಕರು ತೊಡಗಿಸಿಕೊಳ್ಳಲು, ಯಶಸ್ವಿ ರೈತರ ಕುರಿತ ಸುದ್ದಿಗಳು ಮತ್ತು ಅವರು ಮಾಡುತ್ತಿರುವ ವಿಭಿನ್ನ ಪ್ರಯೋಗಗಳ ಮಾಹಿತಿ ಹೆಚ್ಚು ಪ್ರಸಾರವಾಗುವುದು ಕೂಡ ಮುಖ್ಯ. ಇದು ರೈತರಿಗೆ ಕೃಷಿಯಲ್ಲಿ ಮುಂದುವರಿಯಲು ಭರವಸೆ ನೀಡುತ್ತದೆ.



ಸಾಮಾನ್ಯವಾಗಿ, ನಮ್ಮ ಸಮಾಜದಲ್ಲಿ ಮದುವೆಯಾಗುವಾಗ ಗಂಡು ಹೆಣ್ಣಿಗಿಂತ ಹೆಚ್ಚು ಶಿಕ್ಷಣ ಹೊಂದಿರಬೇಕೆಂಬ ನಿರೀಕ್ಷೆ ಇದೆ. ಇದು ಬದಲಾಗಬೇಕಾದ ಸಂದರ್ಭವಿದು. ಉನ್ನತ ಶಿಕ್ಷಣದಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಕ್ರಮೇಣ ಹೆಚ್ಚುತ್ತಿದೆ. ಹಾಗಾಗಿ, ಅನಿವಾರ್ಯವಾಗಿ ಮದುವೆಯಾಗ ಬಯಸುವ ಹೆಣ್ಣುಮಕ್ಕಳು ತಮಗಿಂತ ಕಡಿಮೆ ಓದಿರುವ ಗಂಡನ್ನು ವಿವಾಹಯೋಗ್ಯವೆಂದು ಪರಿಗಣಿಸಬೇಕಾದ ಅಗತ್ಯವಿದೆ. ಹಿಂದೆ, ಒಳ್ಳೆಯ ಕೆಲಸ ಹೊಂದಿರುವ ಗಂಡು ಸಿಗಬೇಕೆಂದು ಹೆಣ್ಣುಮಕ್ಕಳನ್ನು ಓದಿಸುತ್ತಿದ್ದರು. ಆದರೆ, ಈಗ ಗಂಡುಮಕ್ಕಳು ಮದುವೆಯಾಗಬೇಕೆಂದರೆ ಶಿಕ್ಷಣ ಹೊಂದುವುದು ಅನಿವಾರ್ಯ ಎಂಬಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ, ಹಳ್ಳಿಯಲ್ಲಿ ನೆಲೆ ನಿಲ್ಲಬಯಸುವ ಗಂಡುಮಕ್ಕಳೂ ಉನ್ನತ ಶಿಕ್ಷಣ ಪಡೆದು ಕೃಷಿ ಚಟುವಟಿಕೆಯಲ್ಲಿ ಮುಂದುವರಿಯಬಹುದು. ಶಿಕ್ಷಣ ವಂಚಿತರು ಮಾತ್ರ ಕೃಷಿಕರು ಎನ್ನುವ ಮನೋಭಾವ ಬದಲಾಗಬೇಕಿದೆ. ಜೊತೆಗೆ, ಶಿಕ್ಷಣ ಪಡೆದ ಕೃಷಿಕರು ತಮ್ಮ ವೃತ್ತಿಯಲ್ಲಿ ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಮರ್ಥರಾಗಿದ್ದು, ಮಧ್ಯವರ್ತಿಗಳಿಂದ ಮೋಸ ಹೋಗುವುದನ್ನು ತಪ್ಪಿಸಬಹುದು ಮತ್ತು ಆರ್ಥಿಕ ಸಂಕಷ್ಟಗಳಿಂದ ಪಾರಾಗಬಹುದು. ಆದ್ದರಿಂದ, ಗಂಡುಮಕ್ಕಳು ತಮ್ಮ ವೃತ್ತಿ ಆಯ್ಕೆಗಳೇನೇ ಇದ್ದರೂ ಉನ್ನತ ಶಿಕ್ಷಣಕ್ಕೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ತೆರೆದುಕೊಳ್ಳುವುದು ಸೂಕ್ತ.

ಇವುಗಳ ನಡುವೆ, ಇಂದು ಹಳ್ಳಿಯ ಗಂಡುಮಕ್ಕಳಿಗೆ ಹೆಣ್ಣು ಸಿಗದಿರಲು ಕಾರಣವೆಂದರೆ, ಹೆಣ್ಣುಮಕ್ಕಳಲ್ಲಿ ಕೃಷಿಯ ಕುರಿತು ನಿರಾಸಕ್ತಿ ಮತ್ತು ಅವರಲ್ಲಿ ಗಂಡನ ಉದ್ಯೋಗ ಹೀಗೆಯೇ ಇರಬೇಕೆಂಬ ನಿರೀಕ್ಷೆ. ಕೃಷಿಕರೆಂದರೆ, ಸಿನಿಮಾ ಹೀರೊಗಳಂತೆ ಕಾಣದಿರಬಹುದು, ಆದರೆ, ಪ್ರೀತಿಗೇನೂ ಕಡಿಮೆ ಮಾಡಲಾರರು. ಈ ಹಳ್ಳಿಯ ಕೃಷಿಕರನ್ನು ಕೈಹಿಡಿದು ಯಶಸ್ಸಿನ ದಾರಿಯಲ್ಲಿ ಜೊತೆಯಾಗುವ ಕೆಲಸವನ್ನು ಪಟ್ಟಣದ ವಿದ್ಯಾವಂತ ಹೆಣ್ಣುಮಕ್ಕಳು ಮಾಡಬೇಕಾಗಿದೆ. ಮೂಲತಃ ಕೃಷಿಯು ಹೆಣ್ಣುಮಕ್ಕಳಿಂದ ಆರಂಭವಾದ ಚಟುವಟಿಕೆ. ಕಾಲಾನಂತರ, ಸಲಕರಣೆಗಳು ಮತ್ತು ಪ್ರಾಣಿಗಳನ್ನು ಪಳಗಿಸಿ ಕೃಷಿಗೆ ಉಪಯೋಗಿಸಲು ಆರಂಭಿಸಿದ ನಂತರ ಕೃಷಿಯ ಆಧಿಪತ್ಯ ಗಂಡಿನ ಪಾಲಾಯಿತು. ಆದರೆ ದುಡಿಮೆಯಲ್ಲಿ ಹೆಣ್ಣುಮಕ್ಕಳ ಪಾಲೇ ಹೆಚ್ಚು.

ವಿದ್ಯಾವಂತ ಹೆಣ್ಣಿನ ಮೇಲ್ವಿಚಾರಣೆಯಲ್ಲಿರುವ ಕೃಷಿ ಚಟುವಟಿಕೆಯಲ್ಲಿ ನಷ್ಟ ಕಾಣುವುದು ಬಹಳ ಅಪರೂಪ. ಆದ್ದರಿಂದ ಹೆಣ್ಣುಮಕ್ಕಳು ಕೃಷಿಯಲ್ಲಿ ಹೆಚ್ಚು ತೊಡಗುವುದರಿಂದ ಕೃಷಿ ಒಂದು ಲಾಭದಾಯಕ ಉದ್ಯಮವಾಗಬಹುದು, ಹಳ್ಳಿಗಳ ಜೀವನಮಟ್ಟ ಸುಧಾರಿಸಬಹುದು ಮತ್ತು ಹಳ್ಳಿಯ ಗಂಡುಮಕ್ಕಳು ತಮಗೆ ಹೆಣ್ಣು ಸಿಗುತ್ತಿಲ್ಲ ಎಂದು ಹಲುಬುವುದು ತಪ್ಪಬಹುದು.

ಪ್ರಪಂಚದ ಉಳಿವು ಮತ್ತು ಅಳಿವು ಎರಡೂ ಹೆಣ್ಣಿನ ಕೈಯಲ್ಲಿದೆ ಎನ್ನುವುದಕ್ಕೆ ಇದು ಮತ್ತೊಂದು ನಿದರ್ಶನ. ಹಾಗೆಯೇ, ಹಳ್ಳಿಯ ಗಂಡುಮಕ್ಕಳು ಹೆಣ್ಣು ಸಿಗುವುದಿಲ್ಲವೆಂದರೆ, ಹಳ್ಳಿಯ ಜೀವನದಲ್ಲಿ ಆಸಕ್ತಿಯಿರುವ ಬೇರೆ ಜಾತಿಯ ಹೆಣ್ಣುಮಕ್ಕಳನ್ನು ಮದುವೆಯಾಗುವ ಮನಸ್ಸು ಮಾಡಬೇಕು. ಮದುವೆಗೆ ಸಮಾನ ಆಸಕ್ತಿ, ಪರಸ್ಪರ ಗೌರವ ಮತ್ತು ಪ್ರೀತಿ ಮುಖ್ಯವೇ ವಿನಾ ಜಾತಿಯಲ್ಲ.

ಚುರುಮುರಿ



ಮತ್ತೆ ಕೆಜಿಎಫ್

• ಲಿಂಗರಾಜು ಡಿ.ಎಸ್.

‘ಪವರ್, ಪವರ್, ಪವರ್! ಐ ಡೋಂಟ್ ಲೈಕ್ ಪವರ್. ಬಟ್ ಪವರ್ ಲೈಕ್ಸ್ ಮಿ’ ಅಂತ ತುರೇಮಣೆ ಪುಂಗ್ತಾ ಇದ್ದರು.

‘ನೀವ್ಯಾವ ಗೊಂಜಾಯಿ ಅಂತ ನಿಮಿಗೆ ಪವರ್ ಕೊಟ್ಟಾರು ಸಾ. ಅಮಿಕ್ಕಂಡು ಸುಮ್ಮಗಿರಿ’ ಅಂದೆ.

‘ಇದು ಸ್ಟೇಜ್ ಮ್ಯಾಲೆ ಆಯ ತಪ್ಪಿ ಬೀಳೊ ಪೊಲಿಟಿಕಲ್ ಕೆಜಿಎಫ್‌ಗಳ ಡೈಲಾಗು ಕಲಾ. ಇವುರ ಜೊತೆಗೆ ಬಂದಿರೋ ಕ್ಯಾಮೆ ಇಲ್ಲೋವು ‘ಅವರನ್ನ ಬುಟ್ಟು ಇವರನ್ನ ಬುಟ್ಟು ಅವರ್‍ಯಾರು’ ಅಂತ ಪ್ರಚಾರದ ಡೋಲು ಬಾರಿಸ್ತಾವೆ’ ಅಂದ್ರು. ನನಗರ್ಥ ಆಗಲಿಲ್ಲ.

‘ಅದೇನು? ಈಥರಕೀಥರ, ಹಿಂಗಿಂಗೆ ಅಂತ ಬುಡುಸಿ ಹೇಳಿಸಾ, ವಡಪು ಹಾಕಬ್ಯಾಡಿ’ ಅಂದೆ.

‘ನೋಡ್ಲಾ, ಇದು ಪವರ್ ರಾಮಾಣ್ಣದ ಪ್ರೀಕ್ವೆಲ್ ಕಲಾ. ಈಗ ರಂಗದ ಮ್ಯಾಲಿರೋ ಒಂದು ಕೆಜಿಎಫ್ ‘ಪುಷ್ಪ- ಫ್ಲವರ್ ನಹೀ ಫಯರ್ ಹೈ. ತಗ್ಗೋದೇ ಇಲ್ಲ!’ ಅಂದ್ರೆ ಇನ್ನೊಂದು ‘ಅಧಿಕಾರ ನಂದೀಯೆ’ ಅಂತದೆ. ಮತ್ತೊಂದು ‘ಬಹುಮತ ಯಾರಿಗೂ ಬರಕುಲ್ಲ. ಸರ್ಕಾರ ಮಾಡಕ್ಕೆ ನಾನೇ ಕೈ ಎತ್ತಬೇಕಾಯ್ತದೆ, ಇಲ್ಲ ಹೂವು ಎತ್ತಬೇಕಾಯ್ತದೆ’ ಅಂತ ತಲೆ ಬಾಚ್ತಾದೆ’ ಅಂದ್ರು ತುರೇಮಣೆ.

‘ಕೆಜಿಎಫ್ ಅಂದ್ರೇನು ಸಾ?’ ಕೇಳಿದೆ.

‘ಅದೇ ಕಲಾ, ಕೆ ಅಂದ್ರೆ ಕುಮಾರಣ್ಣನ ಟೀಮು, ಜಿ ಅಂದ್ರೆ ಗಾಂಧಿ ಟೀಮು, ಎಫ್ ಅಂದ್ರೆ ಫ್ಲವರ್ ಟೀಮು. ರಾಜಕೀಯ ಈಗ ಹಡಾಲೆದ್ದು ಹೋಗ್ಯದೆ. ಅಧಿಕಾರಕ್ಕೋಸ್ಕರ ಅರೀದ ಹುಡ್ಲಿಗೆಲ್ಲಾ ಕುಡಿಯದು ಕಲಿಸಿ ಬಾಳುಗೆಡಿಸ್ತಾ ಅವೆ ಅನ್ನದೇ ನನ್ನ ಯಥೆ’ ಅಂತ ಬೇಜಾರಾದರು.

‘ಇನ್ನೇಡು ಜಿನ ತಡೀರ್ಲಾ ಬೊಡ್ಡಿ ಹೈಕ್ಳಾ, ಇವರೆಲ್ಲಾ ಏನಾಯ್ತರೆ ನೋಡಮು! ಆಮೇಲೆ ಈ ಪವರ್ ಪಾಲಿಟ್ರಿಕ್ಸಲ್ಲಿ ನಮ್ಮ ಭಾಗ್ಯಕ್ಕೂ ಎರಡು ಬಿಳಿ ಒಂದು ಕೆಂಪು ಗ್ಯಾರಂಟಿ ಅನ್ನೋ ಭರವಸೆ ಅದೆ ಕನ್ರೋ!’ ಅಂದ ಯಂಟಪ್ಪಣ್ಣನ ಮಾತಿಗೆ ನಕ್ಕು ಮೇಲೆದ್ದೊ.

ಸಂಗತ

ಹಕ್ಕು ಚಲಾವಣೆ: ಇರಲಿ ಅರಿವು

ಮತದಾರನೊಬ್ಬ ಮತದಾನದ ಬಗ್ಗೆ ಕನಿಷ್ಠ ತಿಳಿದಿರಲೇಬೇಕಾದ ವಿಚಾರಗಳ ಕುರಿತು ಅರಿವು ಮೂಡಿಸಬೇಕಾಗಿದೆ

• ಸದಾಶಿವ್ ಸೊರಟೂರು

ಹತ್ತಾರು ಚುನಾವಣೆಗಳಲ್ಲಿ ಮತಗಟ್ಟೆ ಅಧಿಕಾರಿಯಾಗಿ ಕೆಲಸ ಮಾಡಿರುವ ನನಗೆ, ಅಲ್ಲಿ ಮೊದಲ ಬಾರಿಗೆ ಮತದಾನ ಮಾಡಲು ಬರುವವರ ಗಾಬರಿ ಕಂಡು ಮರುಕ ಹುಟ್ಟುತ್ತದೆ. ಮತದಾನ ನಡೆಯುವ ಕೊಠಡಿಯಲ್ಲಿ ಏನು ನಡೆಯುತ್ತದೆ, ಎಲ್ಲಿ ತಮ್ಮ ಗುರುತು ಸಾಬೀತುಪಡಿಸಬೇಕು, ಸಹಿ ಮಾಡಬೇಕೊ ಬೇಡವೊ, ವೋಟು ಮಾಡುವ ಕಂಪಾರ್ಟ್‌ಮೆಂಟ್‌ನಲ್ಲಿ ಏನಿರುತ್ತದೆ, ತನ್ನ ವೋಟು ಚಲಾವಣೆಯಾಗಿದೆಯೊ ಇಲ್ಲವೊ ತಿಳಿಯುವುದು ಹೇಗೆ... ಇಂಥವೇ ಹತ್ತೆಂಟು ಗೊಂದಲಗಳಿಂದ ಕೆಲವರು ಪರದಾಡುತ್ತಾರೆ.

ಹಿಂದಿನ ಬಾರಿ ಒಬ್ಬ ಹುಡುಗನಂತೂ ‘ವೋಟು ಹೇಗೆ ಮಾಡೋದು?’ ಅಂತ ಕೇಳಬೇಕೆ! ಯುವತಿಯೊಬ್ಬಳು ಸಹಿ ಮಾಡಿ, ಬೆರಳಿಗೆ ಇಂಕು ಹಾಕಿಸಿಕೊಂಡು ಸುಮ್ಮನೆ ಹೊರ ನಡೆದುಹೋಗಿದ್ದಳು. ಇನ್ನೊಬ್ಬನಂತೂ ತಾನು ವೋಟು ಹಾಕಬೇಕಾದ ವ್ಯಕ್ತಿಯ ಹೆಸರು ಹೇಳಿ ‘ಅವರಿಗೆ ಎಲ್ಲಿ ವೋಟು ಹಾಕುವುದು?’ ಎಂದು ಕೇಳಿಬಿಟ್ಟ. ಇದರಲ್ಲಿ ಅವರ ತಪ್ಪಿಲ್ಲ. ಇದೆಲ್ಲವೂ ಅವರಿಗೆ ಹೊಸದು. ಅದನ್ನು ನಾವು ಸರಿಯಾಗಿ ಹೇಳಿಕೊಟ್ಟಿಲ್ಲ ಅಷ್ಟೆ.

ಪ್ರತಿಬಾರಿ ಚುನಾವಣೆ ಬಂದಾಗಲೂ ಬಹಳಷ್ಟು ಹೊಸ ಮತದಾರರು ಪಟ್ಟಿಗೆ ಸೇರುತ್ತಾ ಹೋಗುತ್ತಾರೆ. ಈ ವರ್ಷ ಸುಮಾರು ಏಳು ಲಕ್ಷದಷ್ಟು ಯುವಕ-ಯುವತಿಯರು ಮೊದಲ ಬಾರಿ ಮತದಾನಕ್ಕೆ ಅಣಿಯಾಗಿದ್ದಾರೆ. ಅಲ್ಲದೆ ಚುನಾವಣೆಯಲ್ಲಿ ಅವರ ವೋಟಿನ ಪರಿಣಾಮವೂ ಹೆಚ್ಚಿದೆ. ಅವರ ಜೀವನದ ಮೊದಲ ಮತದಾನವೇ ಹೀಗೆ ಗೊಂದಲಮಯವಾಗ ಬಾರದು ಅಲ್ಲವೇ?

ಅದಕ್ಕಾಗಿ, ಮೊದಲ ಬಾರಿ ಮತದಾನಕ್ಕೆ ಹೊರಡುವ ಯುವಜನರನ್ನು ಮತ ಹಾಕುವ ವಿಚಾರದಲ್ಲಿ ಶಿಕ್ಷಿತರನ್ನಾಗಿ ಮಾಡಬೇಕಿದೆ. ಶಾಲೆಗಳಲ್ಲಿ ಮಕ್ಕಳಿಗೆ ಅಣಕು ಚುನಾವಣೆಗಳನ್ನು ನಡೆಸಿ, ಶಾಲಾ ಸಂಸತ್ತು ರಚನೆ ಮಾಡಲಾಗುತ್ತದೆ. ಅದು ನಮ್ಮ ಚುನಾವಣಾ ವ್ಯವಸ್ಥೆ ಮತ್ತು ಸರ್ಕಾರ ರಚನಾ ಕ್ರಮವನ್ನು ತಿಳಿಸುವ ಒಂದು ಬೋಧನಾ ವಿಧಾನ. ಇದೇ ಕಾರ್ಯಕ್ಕೆ ನಾವು ಹಿಂದಿನ ಬಾರಿ ತಾಲ್ಲೂಕು ಚುನಾವಣಾ ವಿಭಾಗಕ್ಕೆ ‘ಇವಿಎಂ ಕೊಡಿ, ಶಾಲೆಯಲ್ಲಿ ಮಕ್ಕಳಿಗೆ ಚುನಾವಣೆ ಇದೆ. ಅವರಿಗೂ ಮತದಾನದ ಬಗ್ಗೆ ಅರಿವು ಬರುತ್ತದೆ’ ಎಂದು ಮನವಿ ಮಾಡಿದ್ದೆವು. ಅವರು ನಮ್ಮ ಮನವಿ ಪುರಸ್ಕರಿಸಲಿಲ್ಲ. ನಂತರ ನಾವು ಟ್ಯಾಬ್‌ನಲ್ಲಿ ಯಾವುದೋ ಒಂದು ಮತದಾನದ ಆ್ಯಪ್ ಹಾಕಿಕೊಂಡು ಅದರಲ್ಲಿ ಮಕ್ಕಳಿಂದ ಅಣಕು ಮತದಾನ ಮಾಡಿಸಿದ್ದೆವು. ತಿಳಿವಳಿಕೆ ನೀಡಲು ಸಹಕರಿಸಬೇಕಾದ ಅಧಿಕಾರಿಗಳು ಹೀಗೆ ಕೈಬಿಟ್ಟರೆ ಯುವ ಮತದಾರರನ್ನು ಮತದಾನಕ್ಕೆ ಅಣಿಗೊಳಿಸುವುದು ಹೇಗೆ?

ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಮತದಾನದ ಅರಿವು ಮೂಡಿಸಲು ‘ಮತದಾರ ಸಾಕ್ಷರ ಸಂಘ’ವನ್ನು (ಇಎಲ್‌ಸಿ) ಪ್ರತೀ ಕಾಲೇಜಿನಲ್ಲಿ ಸ್ಥಾಪಿಸುವಂತೆ ಚುನಾವಣಾ ಆಯೋಗ ಆದೇಶಿಸಿದೆ. ‘ಪ್ರತಿಯೊಂದು ಮತವೂ ಪರಿಗಣಿಸಲ್ಪಡುವುದು’ ಮತ್ತು ‘ಯಾವುದೇ ಮತದಾರನು ಮತದಾನದಿಂದ ಹೊರಗೆ ಉಳಿಯಬಾರದು’ ಎಂಬ ಎರಡು ತತ್ವಗಳನ್ನು ಪರಿಣಾಮಕಾರಿಯಾಗಿಸುವ ಉದ್ದೇಶದಿಂದ ಇದನ್ನು ಸ್ಥಾಪಿಸಲು ಸೂಚಿಸಲಾಗಿದೆ.

ಇ.ವಿ.ಎಂ.ನಲ್ಲಿ ವೋಟು ಹಾಕುವುದು ಹೇಗೆ, ಹಾಕಿದ ವೋಟನ್ನು ವಿವಿ ಪ್ಯಾಟ್‌ನಲ್ಲಿ ದೃಢಪಡಿಸಿಕೊಳ್ಳುವುದು ಹೇಗೆ, ವಿವಿ ಪ್ಯಾಟ್ ಎಂದರೇನು, ಬ್ಯಾಲೆಟ್ ಯುನಿಟ್ ಎಂದರೇನು, ಕಂಟ್ರೋಲ್ ಯುನಿಟ್ ಯಾಕಾಗಿ ಇರುತ್ತದೆ, ಒಂದುವೇಳೆ ತನ್ನ ವೋಟನ್ನು ಯಾರೋ ಹಾಕಿ ಹೋದರೆ ತಾನೇನು ಮಾಡಬೇಕು, ಆಗ ಬಳಸಬೇಕಾದ ಟೆಂಡರ್ ವೋಟಿನ ಹಕ್ಕಿನ ಸ್ವರೂಪ ಏನು, ಚಾಲೆಂಜಿಂಗ್ ವೋಟು ಯಾವಾಗ ಬಳಸಬೇಕು, ಮತದಾನದ ಗೋಪ್ಯತೆ ಮುರಿದರೆ ಆಗುವ ಶಿಕ್ಷೆ ಏನು ಎಂಬಂತಹ ಅನೇಕ ವಿಚಾರಗಳ ಬಗ್ಗೆ ತಿಳಿವಳಿಕೆ ಮೂಡಿಸಲು ಚುನಾವಣಾ ಆಯೋಗ ಸೂಚಿಸಿದೆ.



ಹಳ್ಳಿ ಹಳ್ಳಿಗೂ ಹೋಗಿ ಜನರಿಗೆ ಇದರ ಬಗ್ಗೆ ಅರಿವು ಮೂಡಿಸಲು ಕೂಡ ಆಯೋಗ ಹೇಳಿದೆ. ಆದರೆ ಆ ಕಾರ್ಯ ಹೆಚ್ಚಿನ ಬಾರಿ ಬರೀ ಫೋಟೊಕ್ಕೆ, ದಾಖಲೆಗೆ ಸೀಮಿತವಾದ ಉದಾಹರಣೆಗಳುಂಟು. ಮೊದಲ ಬಾರಿಗೆ ಮತದಾನ ಮಾಡಲು ಬರುವವರು ಮತಗಟ್ಟೆಯಲ್ಲಿ ಪರದಾಡುವುದನ್ನು ಗಮನಿಸಿದರೆ ಇದು ಸಾಬೀತಾಗುತ್ತದೆ. ಮತದಾರ ಸಾಕ್ಷರತಾ ಸಂಘವು ಇನ್ನಷ್ಟು ಪರಿಣಾಮಕಾರಿಯಾಗಬೇಕಾದ ಅಗತ್ಯವನ್ನು ಇದು ಹೇಳುತ್ತದೆ.

ಮೊದಲ ಬಾರಿ ಮತದಾನ ಮಾಡುವವರು ಇರಲಿ, ಎಷ್ಟೋ ಬಾರಿ ಮತದಾನ ಮಾಡಿದವರಿಗೂ ಮತದಾನ ಪ್ರಕ್ರಿಯೆಯ ಬಗ್ಗೆ ಅಷ್ಟೊಂದು ಜ್ಞಾನವಿಲ್ಲದಿರುವುದು ನಮ್ಮ ಗಮನಕ್ಕೆ ಬರುತ್ತಲೇ ಇರುತ್ತದೆ. ಬಂದ, ಯಂತ್ರದ ಬಟನ್ ಒತ್ತಿದ, ಹೋದ ಎಂದಾಗಬಾರದು. ಮತದಾರನಿಗೆ ಮತಗಟ್ಟೆಯಲ್ಲಿ ಕೆಲವು ಹಕ್ಕುಗಳಿವೆ. ಅಲ್ಲದೆ ಅವನು ಪಾಲಿಸಬೇಕಾದ ಕೆಲವು ಕರ್ತವ್ಯಗಳು ಕೂಡ ಇವೆ. ಹೇಗೆ ವರ್ತಿಸಬೇಕು, ಹೇಗೆ ವರ್ತಿಸಬಾರದು ಎಂಬುದಕ್ಕೆ ಸೂಚನೆಗಳಿವೆ. ಅವು ಮತದಾರನಿಗೆ ತಿಳಿಯಬೇಕು.

ಮತದಾರನೊಬ್ಬ ಕನಿಷ್ಠ ತಿಳಿದಿರಲೇಬೇಕಾದ ವಿಚಾರಗಳ ಬಗ್ಗೆ ಅರಿವು ಉಂಟು ಮಾಡಬೇಕು. ಮತಗಟ್ಟೆ ಅಧಿಕಾರಿಗಳ ತಪ್ಪುಗಳನ್ನು ಪ್ರಶ್ನಿಸುವಂತೆ ಆಗಬೇಕು. ಏಕೆಂದರೆ ಮತದಾನ ಒಂದು ಹಕ್ಕು. ಆ ಹಕ್ಕಿಗೆ ಎಲ್ಲೂ ಲೋಪವಾಗಬಾರದು.

ವಾಚಕರ ವಾಣಿ

ಶಿಕ್ಷಣಕ್ಕಾಗಿ ವಲಸೆ ತರವೇ?

ಕರ್ನಾಟಕದಲ್ಲಿ ಪಠ್ಯಕ್ರಮದ ಬೋಧನೆ ಎಲ್ಲರಿಗೂ ಸಮಾನವಾದ ರೀತಿಯಲ್ಲಿ ನಡೆಯುತ್ತಿದೆ. ಆದರೂ ಪರೀಕ್ಷೆಯ ಫಲಿತಾಂಶದಲ್ಲಿ ಮಾತ್ರ ಧಾರವಾಡ, ಬೆಂಗಳೂರು, ಕರಾವಳಿ ಭಾಗದ ಜಿಲ್ಲೆಗಳೇ ಸಾಮಾನ್ಯವಾಗಿ ಉನ್ನತ ಸ್ಥಾನವನ್ನು ಗಿಟ್ಟಿಸಿಕೊಳ್ಳುತ್ತಿರುವುದಕ್ಕೆ ಕಾರಣ ಏನೆಂಬುದು ತಿಳಿಯುವುದಿಲ್ಲ.

ಉತ್ತರ ಕರ್ನಾಟಕ ಯಾವಾಗಲೂ ಶಿಕ್ಷಣದಲ್ಲಿ ಕಡಿಮೆ ಸಾಧನೆಯನ್ನು ದಾಖಲಿಸುತ್ತದೆ. ಅದರಲ್ಲೂ ಯಾದಗಿರಿ ಪ್ರತ್ಯೇಕ ಜಿಲ್ಲೆಯಾದಾಗಿನಿಂದಲೂ ಕೊನೆಯ ಸ್ಥಾನದಿಂದ ಮೇಲೆ ಬಂದಿಲ್ಲ. ಇದನ್ನು ನೋಡಿದರೆ, ರಾಜ್ಯದಲ್ಲಿ ಬೋಧನಾ ಕ್ರಮ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿದೆಯೇ ಎನ್ನುವ ಅನುಮಾನ ಮೂಡುತ್ತದೆ ಅಥವಾ ಉತ್ತರ ಕರ್ನಾಟಕ ಭಾಗದಲ್ಲಿ ಮಕ್ಕಳಿಗೆ ಸರಿಯಾಗಿ ಶಿಕ್ಷಣವನ್ನು ನೀಡುತ್ತಿಲ್ಲವೇ? ಒಟ್ಟಿನಲ್ಲಿ, ಇಲ್ಲಿನ ಮಕ್ಕಳನ್ನು ಪೋಷಕರು ಪೂರ್ವ ಮತ್ತು ದಕ್ಷಿಣ ಭಾಗದ ಕಡೆ ಶಿಕ್ಷಣಕ್ಕಾಗಿ ವಲಸೆ ಕಳುಹಿಸುವಂತಹ ಸ್ಥಿತಿ ನಿರ್ಮಾಣವಾಗಿರುವುದು ದುರದೃಷ್ಟಕರ.

ಭೀಮಣ್ಣ ಹತ್ತಿಕುಣಿ, ಯಾದಗಿರಿ

ಪ್ರವಾಸಿ ತಾಣಕ್ಕೆ ನಿರ್ಬಂಧ ಸಲ್ಲ

ವಿಧಾನಸಭೆ ಚುನಾವಣೆ ಪ್ರಯುಕ್ತ ಇದೇ 10ರಂದು ಕೆಲ ಜಿಲ್ಲೆಗಳಲ್ಲಿ ಪ್ರವಾಸಿ ತಾಣಗಳಿಗೆ ರಜೆ ಘೋಷಣೆ ಮಾಡಿದ್ದು, ಇನ್ನು ಕೆಲ ಜಿಲ್ಲೆಗಳ ಪ್ರವಾಸಿ ತಾಣಗಳಿಗೆ ಪ್ರವಾಸಿಗರಿಗೆ ಪ್ರವೇಶ ನೀಡುವುದಕ್ಕೆ ನಿರ್ಬಂಧ ಹೇರಿದ ಸುದ್ದಿಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಹೀಗೆ ನಿರ್ಬಂಧ ಹೇರುವ ಬದಲು, ಮತದಾನ ಮಾಡಿದ ನಾಗರಿಕರಿಗೆ ಪ್ರವೇಶ ನೀಡಿದರೆ ಒಳಿತು. ಇದರಿಂದ ಸಣ್ಣಪುಟ್ಟ ವ್ಯಾಪಾರಿಗಳು, ಸಾರಿಗೆ, ಆಟೊ ಚಾಲಕರಿಗೆ ಅನುಕೂಲವಾಗುತ್ತದೆ. ಪ್ರವಾಸಿಗರ ಮನ ತಣಿಯುತ್ತದೆ. ಪ್ರವಾಸೋದ್ಯಮ ಇಲಾಖೆಯು ಆರ್ಥಿಕವಾಗಿ ಚೇತರಿಕೆಯಲ್ಲಿ ಇರುವುದಲ್ಲದೆ ಕಡ್ಡಾಯವಾಗಿ ಮತದಾನ ಕೂಡ ಆಗುತ್ತದೆ.

ಎ.ಎಸ್.ಮಕಾನದಾರ, ಗದಗ

ಭೋಗ್ಯಕ್ಕೆ ಒಪ್ಪಿಸಿಕೊಳ್ಳುವ ಪ್ರಕ್ರಿಯೆ...

ಅಂತೂ ಇಂತೂ ಚುನಾವಣೆಯ ಭರಾಟೆ ಕೊನೆಗೊಂಡಿದೆ. ಎಲ್ಲ ರಾಜಕೀಯ ಪಕ್ಷಗಳ ಚಿತ್ತ ಮತದಾನದತ್ತ. ಶನಿವಾರ ಮಧ್ಯಾಹ್ನ ಫಲಿತಾಂಶ. ದೇವರಾಜ ಅರಸು ‘ಅದೃಶ್ಯ ಮತದಾರ’ ಎಂಬ ಮಾತು ಹೇಳುತ್ತಿದ್ದರು. ಈ ಮತದಾರ ಪ್ರಭುವಿನ ಒಲವು ಯಾರತ್ತ ಎಂದು ಯಾರೂ ಊಹಿಸಲು ಸಾಧ್ಯವಿಲ್ಲ. ಇದು ಸಾರ್ವಕಾಲಿಕ ಸತ್ಯ. ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲ ಎನ್ನುವಂತೆ, ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಅಂದರೆ, ನಾವು ಮತದಾನ ಮಾಡಿ ಐದು ವರ್ಷಗಳ ಕಾಲ ಈ ರಾಜಕೀಯ ಪಕ್ಷಗಳಿಗೆ ನಮ್ಮನ್ನು ನಾವು ಭೋಗ್ಯಕ್ಕೆ ಒಪ್ಪಿಸಿಕೊಳ್ಳುವ ಒಂದು ಪ್ರಕ್ರಿಯೆ ಅಷ್ಟೇ.

ಮುರುಗೇಶ್ ಹನಗೋಡಿಮಠ, ಹುಬ್ಬಳ್ಳಿ

ಮತಕ್ಕಾಗಿ ಪ್ರಚೋದನೆ: ತರಬೇಕು ತಹಬಂದಿಗೆ

ಚುನಾವಣೆ ಹತ್ತಿರ ಬಂದಾಗ ಕಾತರವೂ ಜಾಸ್ತಿಯಾಗುತ್ತಾ ಹೋಗುವುದು ಸಹಜ. ಚುನಾವಣೆಯ ದಿನ ಬೂತ್‌ಗಳ ಬಳಿ ಕುಳಿತು, ಸ್ಥಳಕ್ಕೆ ಬರುವ ಪ್ರತಿಯೊಬ್ಬ ಮತದಾರನಿಗೂ ಯಾವ ಬೂತ್‌ಗೆ ಹೋಗಬೇಕು ಎಂದು ತಿಳಿಸಿ, ಅವರ ಹೆಸರಿನ ಚೀಟಿಯನ್ನು ಕೊಡಲು ಯುವಕರು ಕಾರ್ಯಪ್ರವೃತ್ತರಾಗಿರುತ್ತಾರೆ. ಆದರೆ ಅವರು ಅಷ್ಟನ್ನೇ ಮಾಡದೆ, ಬಂದ ಮತದಾರನಿಗೆ ಮಾತ್ರ ಕೇಳುವಂತೆ, ತಾನು ಕೆಲಸ ಮಾಡುತ್ತಿರುವ ತನ್ನ ಪಕ್ಷದ ಚಿಹ್ನೆಗೇ ಆದ್ಯತೆ ಕೊಟ್ಟು ಮತ ಚಲಾಯಿಸುವಂತೆ ಪ್ರಚೋದಿಸುತ್ತಾರೆ. ಇದನ್ನು ಆದಷ್ಟು ತಹಬಂದಿಗೆ ತರಲೇಬೇಕು. ಅಲ್ಲದೆ ತಕ್ಷಣವೇ ಅಂತಹವರನ್ನು ಹತ್ತಿರದಲ್ಲೇ ಇರುವ ಪೊಲೀಸರಿಗೆ ಹಿಡಿದುಕೊಡಬೇಕು. ಇದರಿಂದ ಮತದಾರ ತನ್ನ ಇಚ್ಛೆಯ ಅನುಸಾರ ನಡೆದುಕೊಳ್ಳಲು ಸಾಧ್ಯವಾಗುತ್ತದೆ.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಈಗಲಾದರೂ ನ್ಯಾಯ ಸಿಗಲಿ

ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಹಾಗೂ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿ ದೆಹಲಿಯ ಜಂತರ್ ಮಂತರ್‌ನಲ್ಲಿ ಪ್ರಮುಖ ಕುಸ್ತಿಪಟುಗಳು ಕೆಲ ದಿನಗಳಿಂದ ಧರಣಿ ನಡೆಸುತ್ತಿದ್ದರೂ ಇಲ್ಲಿಯವರೆಗೂ ಆಳುವ ಪಕ್ಷದ ಯಾವೊಬ್ಬ ಪ್ರತಿನಿಧಿಯೂ ಅಲ್ಲಿಗೆ ಭೇಟಿ ನೀಡಿಲ್ಲ. ಚಿನ್ನ ಗೆದ್ದು ಬಂದಾಗ ಸನ್ಮಾನಿಸುವ ಪ್ರತಿನಿಧಿಗಳಿಂದಲೇ ತದನಂತರ ಕ್ರೀಡಾಪಟುಗಳು ಕಿರುಕುಳಕ್ಕೆ ಒಳಗಾಗುತ್ತಿರುವ ಸಂದರ್ಭ ಭಾರತದಲ್ಲಿ ಮಾತ್ರ ಇದೆ ಎಂದು ಅನ್ನಿಸುತ್ತದೆ.

ಭಾರತಕ್ಕೆ ಚಿನ್ನ ತಂದುಕೊಟ್ಟ ಕ್ರೀಡಾಪಟುಗಳಿಗೇ ನ್ಯಾಯ ಒದಗಿಸದ ಸರ್ಕಾರ ಇನ್ನು ಜನಸಾಮಾನ್ಯರಿಗೆ ಹೇಗೆ ರಕ್ಷಣೆ ಒದಗಿಸುತ್ತದೆ ಎನ್ನುವ ಪ್ರಶ್ನೆ ಮೂಡುತ್ತದೆ. ಸರ್ಕಾರ ಈಗಲಾದರೂ ಸಂತ್ರಸ್ತರಿಗೆ ಸೂಕ್ತ ನ್ಯಾಯ ಒದಗಿಸಲು ಮುಂದಾಗಲಿ.

ಮಲ್ಲಿಕಾರ್ಜುನ ಕೊಳ್ಳುರ, ಕಲಬುರಗಿ

ಮನ ಗೆದ್ದ ಗಜಗಾಂಭೀರ್ಯದ ನಡಿಗೆ

ಚಿನ್ನದ ಅಂಬಾರಿ ಹೊರುತ್ತಿದ್ದ ಬಲರಾಮ ಇನ್ನಿಲ್ಲ ಎಂಬ ಶೀರ್ಷಿಕೆ ಕಂಡಕೂಡಲೆ (ಪ್ರ.ವಾ., ಮೇ 8) ಬೇಸರವಾಯಿತು. ಜೊತೆಗೆ ಅದು ಕೆಲವು ದಿನಗಳಿಂದ ಅನಾರೋಗ್ಯದ ಕಾರಣದಿಂದ ಆಹಾರವನ್ನು ತ್ಯಜಿಸಿ ಭಾನುವಾರ ಕೊನೆಯುಸಿರೆಳೆಯಿತು ಎಂದು ತಿಳಿದಾಗ ತೀವ್ರ ದುಃಖವಾಯಿತು. ಚಿನ್ನದ ಅಂಬಾರಿಯಲ್ಲಿನ ತಾಯಿ ಚಾಮುಂಡೇಶ್ವರಿಯ ಮೂರ್ತಿಯನ್ನು ತನ್ನದೇ ಗಜಗಾಂಭೀರ್ಯ ನಡಿಗೆಯಿಂದ ಹೊತ್ತು ಸಾಗುತ್ತಿದ್ದ ದೃಶ್ಯವನ್ನು ಖುದ್ದಾಗಿ ಮೈಸೂರಿನಲ್ಲೇ ವೀಕ್ಷಿಸಿ ಕಣ್ಣು ತುಂಬಿಕೊಂಡವರಲ್ಲಿ ನಾನೂ ಒಬ್ಬ. ಅಲ್ಲದೆ ದೃಶ್ಯ ಮಾಧ್ಯಮಗಳ ಮೂಲಕವೂ ಹಲವರು ಅದನ್ನು ಕಂಡು, ಮೆಚ್ಚಿ ತಮ್ಮ ಮನದಲ್ಲಿ ಸ್ಥಾನ ಕೊಟ್ಟಿದ್ದಾರೆ. ತಾಯಿ ಚಾಮುಂಡೇಶ್ವರಿ ಆತನ ಆತ್ಮಕ್ಕೆ ಶಾಂತಿ ನೀಡಲಿ.

ರವಿಕಿರಣ್ ಶೇಖರ್, ಬೆಂಗಳೂರು

ಮಣಿಪುರ ಮೀಸಲು ಸಮರ

ಪ್ರಜಾವಾಣಿ ವಾರ್ತೆ

ಈಶಾನ್ಯ ಭಾರತದ ಅತ್ಯಂತ ಚಿಕ್ಕ ರಾಜ್ಯಗಳಲ್ಲಿ ಒಂದಾದ ಮಣಿಪುರ ಬಹುಪಾಲು ಪರ್ವತ ಪ್ರದೇಶಗಳಿಂದಲೇ ಕೂಡಿದೆ. ರಾಜ್ಯದಲ್ಲಿ ಬಯಲು ಪ್ರದೇಶ ಇರುವುದು 'ಇಂಫಾಲ್' ನದಿಯ ಇಕ್ಕೆಲಗಳಲ್ಲಿ ಮಾತ್ರ. ರಾಜ್ಯದ ಒಟ್ಟು ಭೂವಿಸ್ತೀರ್ಣದಲ್ಲಿ ಈ ಬಯಲು ಪ್ರದೇಶದ ಪಾಲು ಶೇ 10ರಷ್ಟು ಮಾತ್ರ. ಪಶ್ಚಿಮ ಇಂಫಾಲ್, ಪೂರ್ವ ಇಂಫಾಲ್, ವಿಷ್ಣುಪುರ ಮತ್ತು ಥೌಬಾಲ್ ಜಿಲ್ಲೆಗಳಲ್ಲಿ ಹರಡಿರುವ ಈ ಪ್ರದೇಶವನ್ನು 'ಮಣಿಪುರ ಕಣಿವೆ', 'ಇಂಫಾಲ್ ಕಣಿವೆ' ಎಂದು ಕರೆಯಲಾಗುತ್ತದೆ. ಈ ಪ್ರದೇಶದ ನಿವಾಸಿಗಳನ್ನು 'ಕಣಿವೆ ಜನರು' ಎಂದು ಕರೆಯಲಾಗುತ್ತದೆ. ಈ ಕಣಿವೆ ಪ್ರದೇಶದಲ್ಲಿ ನೆಲೆಸಿರುವ ಜನರಲ್ಲಿ ಶೇ 99ರಷ್ಟು ಜನರು 'ಮೈತೇಯಿ' ಸಮುದಾಯಕ್ಕೆ ಸೇರಿದವರು. ಮೈತೇಯಿ ಜನರು ತಮ್ಮನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿ ಎಂದು ಒತ್ತಾಯಿಸುತ್ತಿದ್ದಾರೆ. ರಾಜ್ಯ ವಿಧಾನಸಭೆಯ 60 ಶಾಸಕರಲ್ಲಿ 50 ಶಾಸಕರು ಇದೇ ಸಮುದಾಯದವರು. ಹೀಗಾಗಿ ಸರ್ಕಾರವು ಮೈತೇಯಿ ಜನರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಉತ್ಸುಕವಾಗಿದೆ. ಆದರೆ, ಒಂದು ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ವಿಚಾರಕ್ಕೆ ಇದು ಸೀಮಿತವಲ್ಲ. ಈ ಕಾರಣದಿಂದಲೇ ಮಣಿಪುರದಲ್ಲಿ ಸಂಘರ್ಷ ಭುಗಿಲೆದ್ದಿದೆ.


ದಟ್ಟಅರಣ್ಯದಿಂದ ಕೂಡಿರುವ ಗುಡ್ಡಗಾಡು ಪ್ರದೇಶದ ಬಹುತೇಕ ನಿವಾಸಿಗಳು ಬುಡಕಟ್ಟು ಸಮುದಾಯಗಳಿಗೆ ಸೇರಿದವರೇ ಆಗಿದ್ದಾರೆ. ಈ ಸಮುದಾಯಗಳನ್ನು ನಾಗಾ ಜನರು ಮತ್ತು ಕುಕಿ ಜನರು ಎಂದು ಎರಡು ಪ್ರಧಾನ ಪಂಗಡಗಳಾಗಿ ವಿಂಗಡಣೆ ಮಾಡಲಾಗಿದೆ. ಈ ಎರಡೂ ವಿಂಗಡಣೆಗಳ ಅಡಿಯಲ್ಲಿ ಒಟ್ಟು 34 ಬುಡಕಟ್ಟು ಸಮುದಾಯಗಳನ್ನು ಕೇಂದ್ರ ಸರ್ಕಾರವು ಗುರುತಿಸಿದ್ದು, ಅವಕ್ಕೆ ಮಾನ್ಯತೆ ನೀಡಿದೆ. ಸಂವಿಧಾನದ 371A ವಿಧಿಯ ಅಡಿ ಈ 34 ಸಮುದಾಯಗಳಿಗೆ ಮಾತ್ರ ಅರಣ್ಯದ ಮೇಲೆ ವಿಶೇಷ ಹಕ್ಕು ನೀಡಲಾಗಿದೆ. ಕೇಂದ್ರದ ಯುಪಿಎ ಸರ್ಕಾರವು 2006ರಲ್ಲಿ ಜಾರಿಗೆ ತಂದಿದ್ದ 'ಅರಣ್ಯ ಹಕ್ಕುಗಳ ಕಾಯ್ದೆ'ಯಲ್ಲಿಯೂ ಮಣಿಪುರದ ಬುಡಕಟ್ಟು ಜನರ ಈ ಹಕ್ಕುಗಳನ್ನು ಎತ್ತಿಹಿಡಿಯಲಾಗಿತ್ತು.

ಈ 34 ಬುಡಕಟ್ಟು ಸಮುದಾಯಗಳು ಅಲ್ಲಿನ ಅರಣ್ಯ ಪ್ರದೇಶದ ಮೇಲೆ ಪಾರಂಪರಿಕ ಹಕ್ಕು ಹೊಂದಿವೆ. ಈ ಸಮುದಾಯಗಳು ಇರುವ ಅರಣ್ಯ ಪ್ರದೇಶಗಳನ್ನು 'ಸಮುದಾಯ ಅರಣ್ಯ ಪ್ರದೇಶ'ಗಳು ಎಂದು ಗುರುತಿಸಲಾಗಿದೆ. 1968ರಲ್ಲಿ ಕೇಂದ್ರ ಸರ್ಕಾರವು ಇವುಗಳನ್ನು 'ಮೀಸಲು ಅರಣ್ಯ ಪ್ರದೇಶ' ಎಂದು ಘೋಷಿಸಿತ್ತು. ವಿರೋಧ ವ್ಯಕ್ತವಾದ ಕಾರಣ, ಘೋಷಣೆಯನ್ನು ಅನುಷ್ಠಾನಕ್ಕೆ ತಂದಿರಲಿಲ್ಲ. ಆನಂತರದಲ್ಲಿ ಈ ಜನರ ಹಕ್ಕುಗಳನ್ನು ಕಾಯ್ದುಕೊಳ್ಳಲು ರಾಜ್ಯ ವಿಧಾನಸಭೆಯಲ್ಲಿ ಗುಡ್ಡಗಾಡು ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯಲ್ಲಿ ಗುಡ್ಡಗಾಡು ಪ್ರದೇಶ ಮತ್ತು ಬುಡಕಟ್ಟು ಜನರನ್ನು ಪ್ರತಿನಿಧಿಸುವ ಶಾಸಕರು ಇರಬೇಕು. ಸಂವಿಧಾನದ ಆರನೇ ಪರಿಚ್ಛೇದದ ಅಡಿಯಲ್ಲಿ ಈ ಜನರಿಗೆ ವಿಶೇಷ ಅಧಿಕಾರವಿದೆ. ಈ ಪರಿಚ್ಛೇದದ ಅನ್ವಯ ಮಣಿಪುರದ ಆರು ಜಿಲ್ಲೆಗಳಲ್ಲಿ ಸ್ವಾಯತ್ತ ಜಿಲ್ಲಾ ಮಂಡಳಿಗಳು ಎಂದು ಘೋಷಿಸಲಾಗಿದೆ. ಈ ಪರಿಚ್ಛೇದಕ್ಕೆ ಸಂಬಂಧಿಸಿದಂತೆ ಯಾವುದೇ ಬದಲಾವಣೆಗಳನ್ನು ತರುವ ಮುನ್ನ ಈ ಸಮಿತಿಯ ಮತ್ತು ಸ್ವಾಯತ್ತ ಜಿಲ್ಲಾ ಮಂಡಳಿಗಳ ಒಪ್ಪಿಗೆ ಅತ್ಯಗತ್ಯ.

ಆದರೆ, ಬುಡಕಟ್ಟು ಸಮುದಾಯಗಳಿಗೆ ಸಂವಿಧಾನಬದ್ಧವಾಗಿ ದತ್ತವಾಗಿರುವ ಅರಣ್ಯ ಹಕ್ಕುಗಳನ್ನು ರಾಜ್ಯ ಸರ್ಕಾರ ಕಿತ್ತುಕೊಳ್ಳುತ್ತಿದೆ. ಹಲವು ಸಮುದಾಯ ಅರಣ್ಯ ಪ್ರದೇಶಗಳನ್ನು 'ಮೀಸಲು ಅರಣ್ಯ ಪ್ರದೇಶ' ಎಂದು ಏಕಪಕ್ಷೀಯವಾಗಿ ಘೋಷಿಸಿದೆ. ಮೈತೇಯಿ ಸಮುದಾಯದ ಮುಖಂಡ ಮತ್ತು ಮುಖ್ಯಮಂತ್ರಿ ಬಿರೇನ್ ಸಿಂಗ್ ಅವರು, 'ರಾಜ್ಯ ಎಲ್ಲಾ ಜನಗಳ ಸರ್ಕಾರದ್ದು' ಎಂದು ಘೋಷಿಸಿರುವುದು ಸಂವಿಧಾನಬಾಹಿರ ಎಂಬುದು ಕುಕಿ ವಿದ್ಯಾರ್ಥಿ ಸಂಘಟನೆಯ ಆರೋಪ. ಬುಡಕಟ್ಟು ಜನರನ್ನು ಅರಣ್ಯ ಪ್ರದೇಶದಿಂದ ವ್ಯವಸ್ಥಿತವಾಗಿ ಹೊರಹಾಕಲು ಸರ್ಕಾರ ಮುಂದಾಗಿದೆ. ಈ ಕಾರಣದಿಂದಲೇ ಕುಕಿ ಬುಡಕಟ್ಟಿನ ಸಂಘಟನೆಗಳ ಜತೆಗಿನ ಕದನ ವಿರಾಮವನ್ನು ರಾಜ್ಯ ಸರ್ಕಾರ ಅಮಾನತು ಮಾಡಿದೆ ಎಂದು ಸಂಘಟನೆ ಆರೋಪಿಸಿದೆ.

ಈಗ ಮೈತೇಯಿ ಜನರಿಗೆ ಪರಿಶಿಷ್ಟ ಪಂಗಡದ ಸ್ಥಾನ ನೀಡಲು ಸರ್ಕಾರ ಒಲವು ತೋರಿರುವುದು ಕುಕಿ ಮತ್ತು ನಾಗಾ ಬುಡಕಟ್ಟು ಜನರನ್ನು ಕೆರಳಿಸಿದೆ. ಸರ್ಕಾರದ ನಡೆ ಮತ್ತು ಹೈಕೋರ್ಟ್‌ನ ಆದೇಶವನ್ನು ಖಂಡಿಸಿ ಕುಕಿ ಮತ್ತು ನಾಗಾ ಜನರು ಇಂಫಾಲ್‌ನಲ್ಲಿ ಪ್ರತಿಭಟನಾ ಮೆರವಣಿಗೆಯನ್ನು ಆಯೋಜಿಸಿದ್ದರು. ಮೆರವಣಿಗೆ ವೇಳೆ ಹಿಂಸಾಚಾರ ನಡೆದಿದೆ. ಹಿಂಸಾಚಾರ ನಿಯಂತ್ರಣಕ್ಕೆ ಬಂದಿದೆಯಾದರೂ, ಸಂಘರ್ಷ ಮತ್ತೆ ಭುಗಿಲೇಳುವ ಸಾಧ್ಯತೆಗಳಿವೆ ಇವೆ ಎಂದು ಭದ್ರತಾ ಪಡೆಗಳು ಹೇಳಿವೆ.

ಮಣಿಪುರ



41% ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಈ ಪ್ರದೇಶದಲ್ಲಿರುವ ಜನರ ಪ್ರಮಾಣ

ಕೌಬ್ರು ಪರ್ವತ ಸಾಲು ರಾಜ್ಯ ಸರ್ಕಾರ ಇದನ್ನು ಮೀಸಲು ಅರಣ್ಯ ಪ್ರದೇಶ ಎಂದು ಘೋಷಿಸಿದೆ

2.16 ಲಕ್ಷ ನಾಗಾ ಬುಡಕಟ್ಟು ಜನರ ಸಂಖ್ಯೆ

9 ಲಕ್ಷ ಕುಕಿ ಬುಡಕಟ್ಟು ಜನರ ಸಂಖ್ಯೆ

ಇಂಫಾಲ್ ಕಣಿವೆ ಪ್ರದೇಶ

59% ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಈ ಪ್ರದೇಶದಲ್ಲಿರುವ ಜನರ ಪ್ರಮಾಣ

15.22 ಲಕ್ಷ ಇಲ್ಲಿರುವ ಮೈತೇಯಿ ಜನರ ಸಂಖ್ಯೆ

ಮೈತೇಯಿ ಬೇಡಿಕೆಗೆ ಕಾರಣಗಳು

ಪರಿಶಿಷ್ಟ ಪಂಗಡದ ಪಟ್ಟಿಗೆ ತಮ್ಮನ್ನು ಸೇರಿಸುವಂತೆ ಮೈತೇಯಿ ಸಮುದಾಯವು 10 ವರ್ಷಗಳ ಹಿಂದೆಯೇ ಸರ್ಕಾರದ ಮುಂದೆ ಬೇಡಿಕೆಯಿಟ್ಟಿದೆ. ತಮಗೆ ಎಸ್‌.ಟಿ ಮೀಸಲಾತಿಯೇ ಬೇಕು ಎಂದು ಸಮುದಾಯ ಪಟ್ಟು ಹಿಡಿದಿರುವುದಕ್ಕೆ ನೀಡುತ್ತಿರುವ ಕಾರಣಗಳಿವು

- 1949ರಲ್ಲಿ ಭಾರತದ ಒಕ್ಕೂಟಕ್ಕೆ ಮಣಿಪುರವು ಸೇರ್ಪಡೆಯಾಗುವ ಮುನ್ನ ತಮ್ಮ ಸಮುದಾಯವನ್ನು 'ಬುಡಕಟ್ಟು' ಎಂದೇ ಪರಿಗಣಿಸಲಾಗಿತ್ತು. ಆದರೆ, ಒಕ್ಕೂಟಕ್ಕೆ ಸೇರ್ಪಡೆಯಾದ ಬಳಿಕ ಈ ಸ್ಥಾನಮಾನ ತೆಗೆದುಹಾಕಲಾಗಿತ್ತು. ಇದರಿಂದ ನಮ್ಮ ಪಾರಂಪರಿಕ ಹಕ್ಕುಗಳಿಗೆ ಧಕ್ಕೆಯಾಗಿದೆ. ನಮ್ಮ ಸಮುದಾಯದ ಸಂಸ್ಕೃತಿ, ಭಾಷೆ ಹಾಗೂ ಪೂರ್ವಜರ ಭೂಮಿಯನ್ನು ಸಂರಕ್ಷಿಸಿಕೊಳ್ಳಬೇಕಾದರೆ ಎಸ್‌.ಟಿ ಮೀಸಲು ಬೇಕು
- ರಾಜ್ಯದ ಗುಡ್ಡಗಾಡು ಮತ್ತು ಪರ್ವತ ಪ್ರದೇಶದಲ್ಲಿ ಮೈತೇಯಿ ಜನರು ಭೂಮಿ ಖರೀದಿಸಲು ಸಾಧ್ಯವಿಲ್ಲ. ಕಣಿವೆ ಪ್ರದೇಶದಲ್ಲಿ ಭೂಮಿ ಲಭ್ಯವಿಲ್ಲ. ನಮ್ಮನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿದರೆ, ಗುಡ್ಡಗಾಡು ಮತ್ತು ಪರ್ವತ ಪ್ರದೇಶದಲ್ಲಿ ನಾವೂ ಭೂಮಿ ಖರೀದಿಸಲು ಸಾಧ್ಯವಾಗುತ್ತದೆ
- ಸಾಂವಿಧಾನಿಕ ರಕ್ಷಣೆಯಿಂದ ಸಮುದಾಯ ವಿಮುಖವಾಗಿದ್ದು, ಸಮಾಜದ ಅಂಚಿಗೆ ತಳ್ಳಲಾಗಿದೆ ಎಂಬ ಭಾವವು ಜನರಲ್ಲಿ ಮೂಡಿದೆ. ನಮ್ಮನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸುವುದರಿಂದ ಮಾತ್ರ ನಮ್ಮ ಅಭಿವೃದ್ಧಿ ಸಾಧ್ಯ

ಬೇಡಿಕೆ ವಿರೋಧಕ್ಕೆ ಸಮರ್ಥನೆಗಳು

ತಮ್ಮನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು ಎಂಬ ಮೈತೇಯಿ ಜನರ ಬೇಡಿಕೆಯನ್ನು ನಾಗಾ ಮತ್ತು ಕುಕಿ ಬುಡಕಟ್ಟು ಜನರು ವಿರೋಧಿಸುತ್ತಲೇ ಇದ್ದಾರೆ. ಈ ವಿರೋಧಕ್ಕೆ ಬುಡಕಟ್ಟು ಸಮುದಾಯಗಳು ನೀಡುತ್ತಿರುವ ಸಮರ್ಥನೆಗಳು ಇಂತಿವೆ

- ಯಾವುದೇ ಸಮುದಾಯವನ್ನು ಬುಡಕಟ್ಟು ಸಮುದಾಯ ಎಂದು ಪರಿಗಣಿಸಬೇಕಾದ ಯಾವ ಮಾನದಂಡವೂ ಮೈತೇಯಿ ಜನರಿಗೆ ಅನ್ವಯವಾಗುವುದಿಲ್ಲ. ಅರಣ್ಯವನ್ನೇ ನಂಬಿ ಬದುಕುವ ಸಮುದಾಯಗಳನ್ನು ಮಾತ್ರ ಅರಣ್ಯವಾಸಿ ಬುಡಕಟ್ಟು ಸಮುದಾಯ ಎಂದು ಕರೆಯಲಾಗುತ್ತದೆ. ಸಾವಿರಾರು ವರ್ಷಗಳಿಂದ ಪಟ್ಟಣ ಪ್ರದೇಶದಲ್ಲೇ ಇದ್ದು–ರೂಪುಗೊಂಡಿರುವ, ಅರಣ್ಯವಾಸಿಗಳಲ್ಲದ ಮೈತೇಯಿ ಸಮುದಾಯಕ್ಕೆ ಪರಿಶಿಷ್ಟ ಪಂಗಡದ ಮಾನ್ಯತೆ ನೀಡುವುದು ಸಂವಿಧಾನ ಬಾಹಿರ. ಹೀಗಾಗಿಯೇ ಸ್ವಾತಂತ್ರ್ಯಾನಂತರ ಅವರನ್ನು ಪರಿಶಿಷ್ಟ ಪಂಗಡದ ಪಟ್ಟಿಯಿಂದ ಹೊರಗಿಡಲಾಗಿತ್ತು.
- ಅರಣ್ಯಗಳನ್ನು ಸಂರಕ್ಷಿಸಿಕೊಂಡು ಹೋಗುತ್ತವೆ ಎಂಬ ಕಾರಣದಿಂದಲೇ ಅರಣ್ಯವಾಸಿ ಬುಡಕಟ್ಟು ಸಮುದಾಯಗಳಿಗೆ ಅರಣ್ಯ ಪ್ರದೇಶಗಳ ಪಾರಂಪರಿಕ ಹಕ್ಕನ್ನು ಸಂವಿಧಾನಬದ್ಧವಾಗಿ ನೀಡಲಾಗಿದೆ. ಪರಿಶಿಷ್ಟ ಪಂಗಡದ ಸ್ಥಾನ ನೀಡಿದರೆ ತಾವೂ ಇಲ್ಲಿ ಭೂಮಿ ಖರೀದಿಸಬಹುದು ಎಂಬ ಒಂದೇ ಕಾರಣದಿಂದ ಮೈತೇಯಿ ಜನರು ಈ ಬೇಡಿಕೆ ಇಡುತ್ತಿದ್ದಾರೆ. ಅರಣ್ಯದ ಬಗ್ಗೆ ಗೌರವ ಇಲ್ಲದವರಿಗೆ ಈ ಹಕ್ಕು ನೀಡಿದರೆ, ಅರಣ್ಯ ಪ್ರದೇಶಗಳು ನಾಶವಾಗುತ್ತವೆ. ಸರ್ಕಾರ ಮೀಸಲು ಅರಣ್ಯ ಎಂದು ಘೋಷಿಸಿರುವಲ್ಲಿ ಈಗಾಗಲೇ ಹಲವು ಅಭಿವೃದ್ಧಿ ಚಟುವಟಿಕೆಗಳನ್ನು ಆರಂಭಿಸಲಾಗಿದೆ.
- ಮೈತೇಯಿ ಜನರಿಗೆ ಸಂವಿಧಾನಬದ್ಧವಾಗಿ ಈಗಾಗಲೇ ಹಲವು ಸೌಲಭ್ಯಗಳನ್ನು ನೀಡಲಾಗುತ್ತಿದೆ. ಮೈತೇಯಿ ಸಮುದಾಯದಲ್ಲಿ ಹಲವು ಜಾತಿಗಳಿವೆ. ಈ ಜಾತಿಗಳಿಗೆ ವಿವಿಧ ಪಂಗಡಗಳ ಅಡಿಯಲ್ಲಿ ಈಗಾಗಲೇ ಮೀಸಲಾತಿ ನೀಡಲಾಗುತ್ತಿದೆ. ಇತರೆ ಹಿಂದುಳಿದ ವರ್ಗಗಳ ಅಡಿಯಲ್ಲಿ ಶೇ 17ರಷ್ಟು, ಪರಿಶಿಷ್ಟ ಜಾತಿಗಳ ಅಡಿಯಲ್ಲಿ ಶೇ 2ರಷ್ಟು ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳ ಅಡಿಯಲ್ಲಿ ಶೇ 10ರಷ್ಟು ಮೀಸಲಾತಿಯನ್ನು ಮೈತೇಯಿ ಸಮುದಾಯ ಪಡೆಯುತ್ತಿದೆ. ಪರಿಶಿಷ್ಟ ಪಂಗಡಗಳಿಗೆ ಶೇ 31ರಷ್ಟು ಮೀಸಲಾತಿ ಇದ್ದು, ಮೈತೇಯಿ ಜನರಿಗೆ ಪರಿಶಿಷ್ಟ ಪಂಗಡದ ಸ್ಥಾನ ನೀಡಿದರೆ ನಿಜವಾದ ಬುಡಕಟ್ಟು ಸಮುದಾಯಗಳಿಗೆ ಮೀಸಲಾತಿಯ ಲಾಭ ದೊರೆಯುವುದಿಲ್ಲ
- ರಾಜ್ಯದಲ್ಲಿ ಶೇ 70ರಷ್ಟು ಶಾಸಕರು ಮೈತೇಯಿ ಸಮುದಾಯದವರು. ಆ ಸಮುದಾಯವು ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಮುಂದುವರಿದಿದೆ. ತಮ್ಮನ್ನು ನಿರ್ಲಕ್ಷಿಸಲಾಗಿದೆ ಎಂಬ ಅವರ ಆರೋಪದಲ್ಲಿ ಹುರುಳಿಲ್ಲ

ಆಧಾರ: ಸಂವಿಧಾನದ 371ಸಿ ವಿಧಿ, ಸಂವಿಧಾನದ ಆರನೇ ಪರಿಚ್ಛೇದ, ಅರಣ್ಯ ಹಕ್ಕುಗಳ ಕಾಯ್ದೆ, ಬುಡಕಟ್ಟು ವ್ಯವಹಾರಗಳ ಸಚಿವಾಲಯದ ವರದಿಗಳು, ಕುಕಿ ವಿದ್ಯಾರ್ಥಿ ಸಂಘಟನೆಯ ಪ್ರಕಟಣೆಗಳು, ಮೈತೇಯಿ ಪರಿಶಿಷ್ಟ ಪಂಗಡ ಒತ್ತಾಯ ಸಮಿತಿಯ ಪ್ರಕಟಣೆಗಳು, 2011ರ ಜನಗಣತಿ ವರದಿ, ಪಿಟಿಐ



ಹಿಂಸಾಪೀಡಿತ ಪ್ರದೇಶದಲ್ಲಿದ್ದ ಜನರನ್ನು ಸೇನಾ ಸಿಬ್ಬಂದಿ ಸುರಕ್ಷಿತ ಸ್ಥಳಕ್ಕೆ ಕಳುಹಿಸಿದರು —ಎಎಫ್‌ಪಿ ಚಿತ್ರ

ಸರ್ಕಾರದ ವಿರುದ್ಧ ಆರೋಪಗಳು

ಮಣಿಪುರ ವಿಧಾನಸಭೆಯ ಬಹುಸಂಖ್ಯಾತ ಸದಸ್ಯರು ಮೈತೇಯಿ ಸಮುದಾಯಕ್ಕೆ ಸೇರಿದವರು. ಮುಖ್ಯಮಂತ್ರಿ ಬಿರೆನ್ ಸಿಂಗ್ ಸಹ ಮೈತೇಯಿ ಸಮುದಾಯದವರು. ಹೀಗಾಗಿ ಮುಖ್ಯಮಂತ್ರಿ ಮತ್ತು ರಾಜ್ಯ ಸರ್ಕಾರವು, ಬುಡಕಟ್ಟು ಜನರ ವಿರುದ್ಧವೇ ಕೆಲಸ ಮಾಡುತ್ತಿದೆ ಎಂಬುದು ಕುಕಿ ವಿದ್ಯಾರ್ಥಿ ಸಂಘಟನೆಯ ಆರೋಪ. ಸರ್ಕಾರವು ಈಚೆಗೆ ತೆಗೆದುಕೊಂಡ ಕೆಲವು ಕ್ರಮಗಳನ್ನು ಕುಕಿ ಜನರು ಇದಕ್ಕೆ ಉದಾಹರಿಸುತ್ತಾರೆ

- ಇಂಫಾಲ್‌ನಲ್ಲಿ ಇದ್ದ ಮೂರು ಚರ್ಚ್‌ಗಳನ್ನು ರಾಜ್ಯ ಸರ್ಕಾರವು ಇದೇ ಏಪ್ರಿಲ್‌ನಲ್ಲಿ ನೆಲಸಮ ಮಾಡಿತ್ತು. ಆ ಚರ್ಚ್‌ಗಳನ್ನು ಅಕ್ರಮವಾಗಿ ನಿರ್ಮಿಸಲಾಗಿತ್ತು. ಹೀಗಾಗಿ ಅವನ್ನು ನೆಲಸಮ ಮಾಡಲಾಯಿತು ಎಂದು ಮುಖ್ಯಮಂತ್ರಿ ಬಿರೆನ್ ಸಿಂಗ್ ಹೇಳಿದ್ದರು.

ಮೈತೇಯಿ ಸಮುದಾಯದವರು ಹಿಂದೂಗಳು. ನಾಗಾ ಮತ್ತು ಕುಕಿ ಜನರು ಪ್ರಧಾನವಾಗಿ ಕ್ರೈಸ್ತ ಸಮುದಾಯದವರು. ಇಂಫಾಲ್‌ನಲ್ಲಿ ಅಕ್ರಮವಾಗಿ ನಿರ್ಮಿಸಲಾಗಿರುವ ಹಲವು ದೇವಾಲಯಗಳಿವೆ. ಹೀಗಿದ್ದೂ ಚರ್ಚ್‌ಗಳನ್ನು ಮಾತ್ರ ನೆಲಸಮ ಮಾಡಲಾಗಿದೆ. ಇದು ಬುಡಕಟ್ಟು ಜನರನ್ನು ಗುರಿಯಾಗಿಸಿಕೊಂಡು ತೆಗೆದುಕೊಂಡ ಕ್ರಮ ಎಂದು ಕುಕಿ ವಿದ್ಯಾರ್ಥಿ ಸಂಘಟನೆಯು ಆರೋಪಿಸಿದೆ.

- ಕಾಂಗ್‌ಪೋಕ್ಪಿ ಜಿಲ್ಲೆಯಲ್ಲಿರುವ ಕೌಬ್ರು ಪರ್ವತ ಶ್ರೇಣಿಯನ್ನು ರಾಜ್ಯ ಸರ್ಕಾರವು ಈಚೆಗಷ್ಟೇ 'ಮೀಸಲು ಅರಣ್ಯ ಪ್ರದೇಶ' ಎಂದು ಘೋಷಿಸಿದೆ.

ಕೌಬ್ರು ಪರ್ವತ ಶ್ರೇಣಿಯು ಕುಕಿ ಬುಡಕಟ್ಟಿನ ಪ್ರಾಬಲ್ಯವಿರುವ ಪ್ರದೇಶದಲ್ಲಿ ಬರುತ್ತದೆ. ಆದರೆ, ನಾಗಾ ಬುಡಕಟ್ಟಿನ ಒಳಪಂಗಡವಾದ 'ಲಾಯಿಂಗ್‌ಮಾಯ್ ನಾಗಾ' ಸಮುದಾಯವು ಕೌಬ್ರು ಪರ್ವತ ಪ್ರದೇಶ ಮತ್ತು ಅರಣ್ಯ ಪ್ರದೇಶದ ಒಡೆತನ ಹೊಂದಿದೆ ಎಂದು ಸರ್ಕಾರದ ದಾಖಲೆಗಳು ಹೇಳುತ್ತವೆ. 2008ರಲ್ಲಿ ಅರಣ್ಯ ಹಕ್ಕುಗಳ ಕಾಯ್ದೆಯನ್ನು ಅನ್ವಯ ಮಾಡುವಾಗ ಮಣಿಪುರ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದ ವರದಿಯಲ್ಲೂ ಇದನ್ನೇ ಉಲ್ಲೇಖಿಸಲಾಗಿದೆ. ಇದು ಸಮುದಾಯ ಒಡೆತನದ ಅರಣ್ಯ ಪ್ರದೇಶವಾಗಿದ್ದು, ಇದನ್ನು ಮೀಸಲು ಅರಣ್ಯ ಪ್ರದೇಶ ಎಂದು ಘೋಷಿಸಲು ಸಾಧ್ಯವಿಲ್ಲ ಎಂದು ಹೇಳಿತ್ತು.

'ಕಾನೂನಿನ ಪ್ರಕಾರ ಈ ಪರ್ವತದ ಒಡೆಯರು ನಾವೇ. ಆದರೆ, ನಮ್ಮೊಂದಿಗೆ ಸಮಾಲೋಚನೆ ನಡೆಸದೆ ಮತ್ತು ನಮ್ಮ ಅನುಮತಿ ಪಡೆಯದೇ, ರಾಜ್ಯ ಸರ್ಕಾರವು ಕೌಬ್ರು ಪರ್ವತ ಪ್ರದೇಶವನ್ನು ಮೀಸಲು ಅರಣ್ಯ ಪ್ರದೇಶ ಎಂದು ಏಕಪಕ್ಷೀಯವಾಗಿ ಘೋಷಿಸಿದೆ. ಇದು ಸಂವಿಧಾನದ ಉಲ್ಲಂಘನೆ' ಎಂದು ಲಾಯಿಂಗ್‌ಮಾಯ್ ನಾಗಾ ಬುಡಕಟ್ಟು ಸಮುದಾಯವು ಆರೋಪಿಸಿದೆ.

ಸಿನಿ ಬಿಟ್ಸ್

ಮೇ 19ಕ್ಕೆ ಬರ್ತಾನೆ 'ಡೇರ್‌ಡೆವಿಲ್ ಮುಸ್ತಾಫಾ'

ಪೂರ್ಣಚಂದ್ರ ತೇಜಸ್ವಿ ಅವರ ಕಥೆಯೊಂದು ತೆರೆಮೇಲೆ ಬರಲು ಸಜ್ಜಾಗಿದೆ. 'ಡೇರ್‌ಡೆವಿಲ್ ಮುಸ್ತಾಫಾ' ಎಂಬ ಶೀರ್ಷಿಕೆಯಡಿ ಮೂಡಿಬರುತ್ತಿರುವ ಈ ಸಿನಿಮಾ ಬಿಡುಗಡೆಗೆ ಮುಹೂರ್ತ ನಿಗದಿಯಾಗಿದೆ. ಚುನಾವಣೆಯ ಭರಾಟೆ ಮುಗಿಯಲು ಕಾಯುತ್ತಿದ್ದ ಚಿತ್ರತಂಡ ಮೇ 19ಕ್ಕೆ ಸಿನಿಮಾವನ್ನು ತೆರೆಗೆ ತರಲಿದೆ.

ಯೂಟ್ಯೂಬ್ ಸ್ಟಾರ್ 'ಡಾ.ಬ್ರೊ' ಖ್ಯಾತಿಯ ಗಗನ್ ಶ್ರೀನಿವಾಸ್ ಪೂಚಂತೇ ಪ್ರಪಂಚವನ್ನು ಟ್ರೈಲರ್ ಮೂಲಕ ಜನರಿಗೆ ಪರಿಚಯಿಸಿದ್ದಾರೆ. 'ಡೇರ್‌ಡೆವಿಲ್ ಮುಸ್ತಾಫಾ' ಸಿನಿಮಾಗೆ ಶಶಾಂಕ್ ಸೋಗಾಲ್ ಸಾರಥಿ. ಅವರೇ ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಈ ಸಿನಿಮಾ ಮೂಲಕ ಸ್ವತಂತ್ರ ನಿರ್ದೇಶಕರಾಗಿ ಅವರು ಬೆಳ್ಳಿತೆರೆಯಲ್ಲಿ ಮೊದಲ ಹೆಜ್ಜೆ ಇಡಲಿದ್ದಾರೆ. 'ಡೇರ್‌ಡೆವಿಲ್ ಮುಸ್ತಾಫಾ ಮತ್ತು ರಾಮಾನುಜ ಅಯ್ಯಂಗಾರಿ ಪಟಾಲಂ' ನಡುವಿನ ಕಥೆಯೇ ಸಿನಿಮಾ ಜೀವಾಳ.

ಪೂರ್ಣಚಂದ್ರ ತೇಜಸ್ವಿ ಅಭಿಮಾನಿಗಳಿಂದಲೇ ತಯಾರಾಗಿರುವ ಸಿನಿಮಾಗೆ 'ನಟರಾಕ್ಷಸ' ಡಾಲಿ ಧನಂಜಯ ಬೆಂಬಲವಾಗಿ ನಿಂತಿದ್ದಾರೆ. ಧನಂಜಯ ಈ ಚಿತ್ರವನ್ನು ಪ್ರಸ್ತುತಪಡಿಸುತ್ತಿದ್ದು, ಕೆಆರ್‌ಜಿ ಸ್ಟುಡಿಯೋಸ್ ರಾಜ್ಯದೆಲ್ಲೆಡೆ ಚಿತ್ರವನ್ನು ವಿತರಿಸಲಿದೆ. ಶಿಶಿರ್ ಬೈಕಾಡಿ, ಆದಿತ್ಯ ಅಶ್ರೀ, ಅಭಯ್, ಸುಪ್ರೀತ್ ಭಾರದ್ವಾಜ್, ಆಶಿತ್, ಶ್ರೀವತ್ಸ, ಪ್ರೇರಣಾ, ಎಂ.ಎಸ್. ಉಮೇಶ್, ಮಂಡ್ಯ ರಮೇಶ್, ಮೈಸೂರ್ ಆನಂದ್, ಸುಂದರ್ ವೀಣಾ, ನಾಗಭೂಷಣ್, ಪೂರ್ಣಚಂದ್ರ ಮೈಸೂರು ತಾರಾಬಳಗದಲ್ಲಿದ್ದಾರೆ.



'ಡೇರ್‌ಡೆವಿಲ್ ಮುಸ್ತಾಫಾ' ಪೋಸ್ಟರ್

ಇದು ವಿನಯ್ 'ಪೆಪೆ' ಲುಕ್



ದೊಡ್ಮನೆ ಕುಡಿ, 'ರಾಯಲ್ ಸ್ಟಾರ್' ವಿನಯ್ ರಾಜ್‌ಕುಮಾರ್ ನಟನೆಯ 'ಪೆಪೆ' ಸಿನಿಮಾ ಬಿಡುಗಡೆಗೆ ಸಜ್ಜಾಗುತ್ತಿದೆ. ವಿನಯ್ ರಾಜ್‌ಕುಮಾರ್ ಜನ್ಮದಿನದ ಸಂದರ್ಭದಲ್ಲಿ 'ಪೆಪೆ' ಟೀಸರ್ ಬಿಡುಗಡೆಯಾಗಿದೆ.

ಹಳ್ಳಿ ಬ್ಯಾಕ್‌ಡ್ರಾಪ್‌ನಲ್ಲಿ ಮೂಡಿಬಂದಿರುವ ಟೀಸರ್ ಝಲಕ್‌ನಲ್ಲಿ ವಿನಯ್ ರಾಜ್‌ಕುಮಾರ್ ರಗಡ್ ಲುಕ್‌ನಲ್ಲಿ ಮಿಂಚಿದ್ದಾರೆ. 'ಪೆಪೆ' ಗ್ಯಾಂಗ್‌ಸ್ಟರ್ ಸಿನಿಮಾ ಆಗಿದ್ದು, ವಿನಯ್ ಹಿಂದಿನ ಎಲ್ಲಾ ಸಿನಿಮಾಗಳಿಗಿಂತ ಇಲ್ಲಿ ವಿಭಿನ್ನ ಅವತಾರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಚಿತ್ರವು ಸದ್ಯ ಚಿತ್ರೀಕರಣ ಪೂರ್ಣಗೊಳಿಸಿದೆ. ಪೋಸ್ಟ್ ಪ್ರೊಡಕ್ಷನ್‌ನ ಅಂತಿಮ ಹಂತದಲ್ಲಿದ್ದು, ಶೀಘ್ರದಲ್ಲೇ ಬಿಡುಗಡೆ ದಿನಾಂಕ ಘೋಷಣೆಯಾಗಲಿದೆ ಎಂದಿದೆ ಚಿತ್ರತಂಡ.

ಶ್ರೀಲೇಶ್ ಎಸ್. ನಾಯರ್ ಆ್ಯಕ್ಷನ್ ಕಟ್ ಹೇಳಿರುವ ಈ ಚಿತ್ರದಲ್ಲಿ ನಾಯಕಿಯಾಗಿ ಕಾಜಲ್ ಕುಂದರ್ ನಟಿಸಿದ್ದು, ಮಯೂರ್ ಪಟೇಲ್, ಯಶ್ ಶೆಟ್ಟಿ, ಬಾಲ ರಾಜ್‌ವಾಡಿ, ಮೇದಿನಿ ಕೆಳಮನಿ, ಅರುಣಾ ಬಾಲರಾಜ್, ನವೀನ್ ಡಿ. ಪಡೀಲ್ ಒಳಗೊಂಡ ತಾರಾಬಳಗವಿದೆ. 'ಪೆಪೆ' ಚಿತ್ರಕ್ಕೆ ಅಭಿಷೇಕ್ ಜಿ. ಕಾಸರಗೋಡು ಛಾಯಾಚಿತ್ರಗ್ರಹಣ, ಪೂರ್ಣಚಂದ್ರ ತೇಜಸ್ವಿ ಸಂಗೀತ ನಿರ್ದೇಶನವಿದೆ.

ಡಾ. ರವಿವರ್ಮಾ, ಚೇತನ್ ಡಿಸೋಜಾ, ಡಿಫ್ರೆಂಟ್ ಡ್ಯಾನಿ, ನರಸಿಂಹ ಚಿತ್ರದ ಸಾಹಸ ದೃಶ್ಯಗಳನ್ನು ನಿರ್ದೇಶನ ಮಾಡಿದ್ದಾರೆ. ಬೆಂಗಳೂರು, ಮೈಸೂರು ಹೀಗೆ ಹಲವೆಡೆ ಚಿತ್ರೀಕರಣ ನಡೆದಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ತನ್ನ ಪತ್ನಿಯನ್ನು ಕೊಲೆ ಮಾಡಿರುವುದಾಗಿ ಸಂದರ್ಶನವೊಂದರಲ್ಲಿ ಆರೋಪಿ ಒಪ್ಪಿಕೊಂಡಿರುವ ವಿಡಿಯೊ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇಸ್ಲಾಂ ಧರ್ಮದ ಮೇಲಿನ ಗೌರವಕ್ಕಾಗಿ ತಾನು ಹೀಗೆ ಮಾಡಿದೆ ಎಂದು ಆರೋಪಿ ವಿಡಿಯೊದಲ್ಲಿ ಹೇಳುತ್ತಾನೆ. 'ತನ್ನ ಹೆಂಡತಿ ಹಿಂದೂ ಎಂಬ ಕಾರಣಕ್ಕೆ ಹತ್ಯೆ ಮಾಡಿದ್ದಾನೆ' ಎಂಬ ಬರಹವು ವಿಡಿಯೊದ ಕೆಳಭಾಗದಲ್ಲಿ ಕಾಣಿಸುತ್ತದೆ. ವಿಡಿಯೊದ ಕೊನೆಯಲ್ಲಿ ಹಲವು ಹೆಣ್ಣುಮಕ್ಕಳ ಚಿತ್ರಗಳು ಕಾಣುತ್ತವೆ. ಇವರೆಲ್ಲಾ 'ಲವ್ ಜಿಹಾದ್'ನ ಸಂತ್ರಸ್ತರು ಎಂದು ಹೇಳುತ್ತಾ ವಿಡಿಯೊ ಕೊನೆಗೊಳ್ಳುತ್ತದೆ. 'ಹೆಂಡತಿ ಹಿಂದೂ ಎಂಬ ಕಾರಣಕ್ಕೆ ಕೊಲೆ ಮಾಡಿದೆ ಎಂದು ಆರೋಪಿಯು ಎಷ್ಟು ಹೆಮ್ಮೆಯಿಂದ ಹೇಳುತ್ತಿದ್ದಾನೆ. ಈ ವಿಡಿಯೊ ನೋಡಿ ಎಲ್ಲರೊಂದಿಗೆ ಹಂಚಿಕೊಳ್ಳಿ' ಎಂದು ಟ್ವಿಟರ್ ಬಳಕೆದಾರರೊಬ್ಬರು ತಮ್ಮ ಖಾತೆಯಲ್ಲಿ ಬರೆದಿದ್ದಾರೆ. ಹಲವರು ವಿಡಿಯೊ ಹಂಚಿಕೊಂಡಿದ್ದಾರೆ. ಆದರೆ ಇದು ಸುಳ್ಳು.



ಬಿಹಾರದ ಸಮಸ್ತಿಪುರ ಜಿಲ್ಲೆಯ ಮೆಹಬೂಬ್ ಎಂಬಾತ ವರ್ಷದ ಹಿಂದೆ ಮದುವೆಯಾಗಿದ್ದ ತನ್ನ ಪತ್ನಿಯನ್ನು ಕೊಲೆ ಮಾಡಿದ್ದಾಗಿ ಒಪ್ಪಿಕೊಂಡಿದ್ದಾನೆ. ಆದರೆ ಆರೋಪಿಯ ಪತ್ನಿ ಹಿಂದೂ ಧರ್ಮಕ್ಕೆ ಸೇರಿದವಳು ಎಂದು ತಪ್ಪಾಗಿ ಬಿಂಬಿಸಲಾಗಿದೆ ಎಂದು 'ದಿ ಕ್ವಿಂಟ್' ಹಾಗೂ 'ಇಂಡಿಯಾಟುಡೇ' ಫ್ಯಾಕ್ಟ್ ಚೆಕ್ ಪ್ರಕಟಿಸಿವೆ. ಇಬ್ಬರೂ ಇಸ್ಲಾಂ ಧರ್ಮಕ್ಕೆ ಸೇರಿದವರು. 'ಮಾನಸಿಕ ಅಸ್ವಸ್ಥನಾಗಿದ್ದ ಮೆಹಬೂಬ್, ಪತ್ನಿ ಯಾಸ್ಮೀನ್ ಅವರನ್ನು ಹತ್ಯೆ ಮಾಡಿದ್ದಾನೆ ಎಂದು ಪ್ರಕರಣದ ತನಿಖಾಧಿಕಾರಿ ಅವಿನಾಶ್ ಕುಮಾರ್ ತಿಳಿಸಿದ್ದಾರೆ' ಎಂದು ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಲಾಗಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಮೃಗೀಯ ಗುಣಗಳ ತೃಪ್ತಿ

ಮೃಗಶೇಷವಿರುವನಕ ಜಗಳ ತಪ್ಪದು ಜಗದಿ |
ಹಗೆಗೆ ಕೊಲದವರು ಹಸಿವಿನಿಂದ ಕೊಂದಾರು ||
ಟಗರು ಜೂಜೋ ಸಭೆಯ ರಗಳೆಯೋ ಕುಸ್ತಿಯೋ
ಸೊಗ ಜನಕೆ ರಣರಂಗ – ಮಂಕುತಿಮ್ಮ || 879 ||

ಪದ-ಅರ್ಥ: ಮೃಗಶೇಷವಿರುವನಕ = ಮೃಗಶೇಷ(-ಮೃಗೀಯಲಕ್ಷಣ) + ಇರುವನಕ (ಇರುವವರೆಗೆ), ಹಗೆಗೆ = ದ್ವೇಷಕ್ಕೆ, ಸೊಗ = ಸಂತೋಷ, ಸೊಗಸು.

ವಾಚ್ಯಾರ್ಥ: ಮನುಷ್ಯರಲ್ಲಿ ಮೃಗೀಯ ಗುಣಗಳು ಇರುವತನಕ ಜಗತ್ತಿನಲ್ಲಿ ಜಗಳ ತಪ್ಪಲಾರದು. ದ್ವೇಷಕ್ಕಾಗಿ ಕೊಲ್ಲದವರು, ಹಸಿವಿನಿಂದ ಕೊಂದಾರು. ಟಗರುಗಳ ಹೊಡೆದಾಟವೊ, ಜೂಜೋ, ಸಭೆಯಲ್ಲಿಯ ವಾದ ವಿವಾದಗಳೋ, ಕುಸ್ತಿಯಾಟವೊ, ಒಟ್ಟಿನಲ್ಲಿ ಕಾದಾಟ ಜನರಿಗೆ ಬಲು ಸೊಗಸು.

ವಿವರಣೆ: ವಿಜ್ಞಾನ ಹೇಳುವಂತೆ ಮನುಷ್ಯ, ಪ್ರಾಣಿ ಜೀವನದಿಂದ ಸತತವಾಗಿ ಬದಲಾಗುತ್ತ ಈ ಸ್ಥಿತಿಗೆ ಬಂದಿದ್ದಾನೆ. ದಾಸರು ಹೇಳುತ್ತಾರೆ, ಎಂಭತ್ನಾಲ್ಕು ಲಕ್ಷ ಜೀವಕೋಟಿಗಳನ್ನು ದಾಟಿ ಬಂದದ್ದು ಈ ಶರೀರ. ಈಗ ಮನುಷ್ಯ ತನ್ನ ಸ್ವಭಾವವನ್ನು, ನಡತೆಯನ್ನು ಎಷ್ಟೇ ಪರಿಷ್ಕಾರಗೊಳಿಸಿಕೊಂಡಿದ್ದರೂ ಮೃಗಸ್ವಭಾವದ ಶೇಷ ಇನ್ನೂ ಉಳಿದೇ ಇದೆ ಎನ್ನುತ್ತಾರೆ ಮನಃಶಾಸ್ತ್ರಜ್ಞರು. ಆ ಮೃಗದ ಸ್ವಭಾವ ಯಾವಾಗ, ಎಲ್ಲಿ ಹೊರಬಂದೀತೋ ಹೇಳುವುದು ಕಷ್ಟ. ನಾವು ದಿನನಿತ್ಯ ಪತ್ರಿಕೆಗಳಲ್ಲಿ ಓದುತ್ತೇವೆ, ದೂರದರ್ಶನದಲ್ಲಿ ಕಾಣುತ್ತೇವೆ, ಇಂಥ ಮೃಗೀಯ ನಡವಳಿಕೆಯ ಸುದ್ದಿಗಳನ್ನು. ಒಬ್ಬ ತರುಣಿ ತನ್ನ ಯಾವುದೋ ಕೆಲಸಕ್ಕೆ ಹೊರಟಿದ್ದಾಳೆ. ಆಕೆ ಏಕಾಂಗಿಯಾಗಿರುವುದನ್ನು ಕಂಡ ನಾಲ್ಕು ಜನರು ಆಕೆಯ ಮೇಲೆ ಪಶುಗಳ ಹಾಗೆ ಹಾರಿ ಬಿದ್ದು ಅತ್ಯಾಚಾರ ಮಾಡಿ ದೇಹವನ್ನು ಚಿಂದಿ ಚಿಂದಿ ಮಾಡುತ್ತಾರಲ್ಲ, ಅಲ್ಲಿ ಮನುಷ್ಯತ್ವ ಕಾಣುತ್ತದೆಯೇ? ಒಂದು ರೀತಿ ಅವರು ಮೃಗಗಳ ಹಾಗೆ ವರ್ತಿಸಿದರು ಎನ್ನುವುದು ಮೃಗಗಳಿಗೆ ಮಾಡಿದ ಅಪಚಾರ ಎನ್ನಿಸುತ್ತದೆ. ಮೃಗಗಳೂ ಕೂಡ ಹಾಗೆ ಅನಾವಶ್ಯಕವಾಗಿ ಕ್ರೂರವಾಗುವುದಿಲ್ಲ. ತಾನು ಪ್ರೀತಿಸಿದ ಹುಡುಗಿಯನ್ನೇ ಕೊಂದು, ಚೂರು ಚೂರು ಮಾಡಿ ರೆಫ್ರಿಜಿರೇಟರ್‌ನಲ್ಲಿ ತಿಂಗಳುಗಟ್ಟಲೆ ಇಟ್ಟುಕೊಂಡು ನಿವಾರಿಸಿದವನನ್ನು ಏನೆನ್ನಬೇಕು? ಸಣ್ಣ ಸಣ್ಣ ವಿಷಯಗಳಿಗೆ ಕಾದಾಡುತ್ತೇವೆ, ಕೋಪಮಾಡಿಕೊಂಡು ಕೆಟ್ಟ ಮಾತನಾಡುತ್ತೇವೆ. ಹಾವು ದ್ವೇಷವನ್ನು ಸಾಧಿಸುತ್ತದೆ ಎನ್ನುತ್ತಾರೆ. ಅದು ಸತ್ಯವೋ, ಸುಳ್ಳೋ ತಿಳಿಯದು. ಆದರೆ ಮನುಷ್ಯ ಮಾತ್ರ ದಶಕಗಳ ಕಾಲ ದ್ವೇಷವನ್ನು ಮನದಲ್ಲಿ ತುಂಬಿಕೊಂಡು, ಸಾಧಿಸುತ್ತಾನೆ. ದ್ವೇಷಕ್ಕಾಗಿ ಕೊಲ್ಲದಿದ್ದರೂ, ತಮ್ಮ ಹಸಿವನ್ನು ತೀರಿಸಿಕೊಳ್ಳಲು ಮತ್ತೊಬ್ಬರನ್ನು ಕೊಂದದ್ದನ್ನು ನೋಡಿದ್ದೇವೆ. ಹಸಿವಾದಾಗ ಮನುಷ್ಯ ಮೃಗವಾಗುತ್ತಾನೆ ಎನ್ನುತ್ತೇವೆ. ಕಗ್ಗ ಈ ಮಾತನ್ನು ಹೇಳುತ್ತದೆ. ಇಷ್ಟು ವಿಕಾಸ ಹೊಂದಿ ಬಂದರೂ ಮನುಷ್ಯನಲ್ಲಿ ಇನ್ನೂ ಶೇಷವಾಗಿ ಉಳಿದಿರುವ ಮೃಗೀಯ ಗುಣಗಳು ಇರುವವರೆಗೂ ಜಗಳ ತಪ್ಪಲಾರದು. ದ್ವೇಷಕ್ಕಾಗಿ ಕೊಲ್ಲುವವರು ಕೆಲವರು, ಹಸಿವಿಗಾಗಿ ಕೊಲ್ಲುವವರು ಮತ್ತೆ ಕೆಲವರು. ಒಟ್ಟಿನಲ್ಲಿ ಜನ ಕಾದಾಟ, ಕ್ರೌರ್ಯಗಳಲ್ಲಿ ಸಂತೋಷ, ಆನಂದ ಪಡುತ್ತಾರೆ. ಅದು ಟಗರುಗಳ ಹೋರಾಟವಾಗಬಹುದು, ಜೂಜಿನಲ್ಲಿ ಆವೇಶಗಳ ಮೆರವಣಿಗೆಯಾಗಬಹುದು. ಸಭೆಯಲ್ಲಿ ಏರಿದ ಧ್ವನಿಯ ವಾದವಿವಾದವಾಗಬಹುದು ಅಥವಾ ಕುಸ್ತಿಯಾಟವಾಗಬಹುದು. ತಮ್ಮ ಮನದಲ್ಲಿರುವ ಮೃಗೀಯ ಗುಣಗಳ ತೃಪ್ತಿಗೆ ಇವೆಲ್ಲ ಸಾಧನಗಳು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಮೇ 9, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ವೈಶಾಖ ಕೃಷ್ಣ ಚತುರ್ಥಿ ಗಂ. 16-09 ನಕ್ಷತ್ರ: ಮೂಲಾ ಗಂ. 17-45, ಯೋಗ: ಸಿದ್ಧ ಗಂ. 21-16 ಕರಣ: ಬಾಲವ ಗಂ. 16-09, ಮೇಷ ಮಾಸದ 25 ನೇ ದಿನ, ಮಳೆನಕ್ಷತ್ರ: ಭರಣಿ 4. ರಾಹುಕಾಲ : ಮಧ್ಯಾಹ್ನ 03-00 – 04-30, ಸೂರ್ಯೋದಯ : 06-10 ಸೂರ್ಯಾಸ್ತ : 06-44. ಮುಸ್ಲಿಂ ದಿನಾಂಕ : 18 ಶವ್ವಾಲ್
ದಿನ ವಿಶೇಷ : ರವೀಂದ್ರನಾಥ ಠಾಗೋರ್‌ರವರ ಜನ್ಮದಿನ
ಅದೃಷ್ಟ ಸಂಖ್ಯೆ : 12, 6

ಮೇಷ: ಐಷಾರಾಮಿ ಜೀವನದ ಬಗ್ಗೆ ಜಿಗುಪ್ಸೆ ಹುಟ್ಟುವುದು. ಬಹಳ ದಿನಗಳಿಂದ ಅಪೇಕ್ಷಿಸಿದ ಯಾತ್ರೆಗೆ ಶುಭ ಮುಹೂರ್ತ ಸಿಗುವುದು. ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗಕ್ಕೆ ಅವಕಾಶಗಳು ಲಭಿಸುತ್ತದೆ.

ವೃಷಭ: ಕುಟುಂಬದಿಂದ ನಡೆಸಬೇಕಾದ ಸತ್ಕಾರ್ಯ ಕುರಿತು ಸಮಾಲೋಚನೆ ನಡೆಸಿ. ಸಾಧ್ಯವಾದಷ್ಟೂ ಉಳಿತಾಯ ಮಾಡುವ ಪ್ರಯತ್ನ ನಿತ್ಯ ರೂಢಿಸಿಕೊಳ್ಳಿ. ನಟನಾ ವೃತ್ತಿಯವರಿಗೆ ಖ್ಯಾತಿ ಮತ್ತು ಸಂಪತ್ತು ಹರಿದು ಬರಲಿದೆ.

ಮಿಥುನ: ಕಾರ್ಮಿಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ನಿರ್ಧಾರ ಅನುಕೂಲಕರವಾಗುವುದು. ಉದ್ಯಮಿಗಳಿಗೆ ಕಾರ್ಮಿಕರ ಕೊರತೆ ಎದ್ದುಕಾಣಲಿದೆ. ಅದರಿಂದಾಗಿ ನಷ್ಟಗಳು ಸಂಭವಿಸಬಹುದು. ಅಕಾಲ ಭೋಜನವಾಗುತ್ತದೆ.

ಕರ್ಕಾಟಕ: ಧಾರ್ಮಿಕ ಕ್ಷೇತ್ರದಲ್ಲಿ ದುಡಿಯುವವರಿಗೆ ದೇವರ ರಕ್ಷಣೆ ಸಿಗುವುದು. ಗುರಿ ಸಾಧಿಸಲು ಅನಿವಾರ್ಯವಾಗಿರುವ ಕೆಲವು ಬದಲಾವಣೆ ಮಾಡಿಕೊಳ್ಳುವುದು ಉತ್ತಮ. ವ್ಯವಹಾರಗಳಲ್ಲಿ ಅಭಿವೃದ್ಧಿ ಸಾಧಿಸಬಲ್ಲಿರಿ.

ಸಿಂಹ: ಸಾಮಾಜಿಕ ಸೇವಾ ಕಾರ್ಯದಲ್ಲಿ ಸಮಯ ವ್ಯರ್ಥವಾಗದಂತೆ ಜಾಗರೂಕತೆ ವಹಿಸಿ. ಮಾತು ಅತಿರೇಕ ತಲುಪದಂತೆ ಎಚ್ಚರ ವಹಿಸುವಿರಿ. ತುರ್ತು ಪ್ರಯಾಣ ಮಾಡಬೇಕಾದ ಸಂದರ್ಭ ಬರುವುದು.

ಕನ್ಯಾ: ನಿರುದ್ಯೋಗಿಗಳಿಗೆ ತಾತ್ಕಾಲಿಕ ಉದ್ಯೋಗದಿಂದ ತುಸು ಸಮಾಧಾನ ಸಿಗುವುದು. ಭಾವನೆಯ ಕಲ್ಪನಾಲೋಕದ ಬದಲು ವಾಸ್ತವದತ್ತ ಗಮನ ಹರಿಸಲು ಇದು ಸೂಕ್ತ ಸಮಯ. ಪ್ರಾಪಂಚಿಕ ಬದುಕಿನ ಬಗ್ಗೆ ತಿಳಿದುಕೊಳ್ಳಿ.

ತುಲಾ: ಇತರರು ಕಷ್ಟಕಾಲದಲ್ಲಿ ಮಾಡಿದ ಸದುಪಕಾರದ ಉತ್ತಮ ಫಲಗಳು ನಿಮ್ಮ ಈ ಕಷ್ಟಕಾಲದಲ್ಲಿ ನಿಮ್ಮ ಸಹಾಯಕ್ಕೆ ಬರುತ್ತದೆ. ಪರಿಚಯವೇ ಇಲ್ಲದ ವ್ಯಕ್ತಿ ಕ್ಲಿಷ್ಟ ಸಮಯದಲ್ಲಿ ನಿಮಗೆ ಸಹಕಾರ ಮಾಡುವರು.

ವೃಶ್ಚಿಕ: ಬದುಕಿನಲ್ಲಿ ಒಳ್ಳೆಯ ಬೆಳವಣಿಗೆಗಳಾಗುವ ಲಕ್ಷಣ ಕಾಣುತ್ತಿವೆ. ಲೇವಾದೇವಿ ವ್ಯವಹಾರ ನಡೆಸುವವರು ವಿಶ್ರಾಂತಿ ಪಡೆಯುವುದು ಉತ್ತಮ. ದೈನಂದಿನ ಆಗುಹೋಗುವ ಗಮನಹರಿಸಬೇಕಾಗುವುದು.

ಧನು: ಕಾರ್ಮಿಕರ ಅಸಹಕಾರದಿಂದ ಗೃಹ ನಿರ್ಮಾಣ ಕಾರ್ಯ ವಿಳಂಬವಾಗುತ್ತದೆ. ಈ ದಿನ ಬೇರೆಯವರ ಸಹಾಯ ಅಪೇಕ್ಷಿಸದೆ ಕಠಿಣ ಕಾರ್ಯ ನೀವೆ ಸಾಧಿಸಿಕೊಳ್ಳಿ. ವೈವಾಹಿಕ ಸಂಬಂಧಗಳು ಗಟ್ಟಿಗೊಳ್ಳಲಿವೆ.

ಮಕರ: ಎಲೆಕ್ಟ್ರಿಕಲ್ ಉಪಕರಣಗಳ ಮಾರಾಟಗಾರರಿಗೆ ಮತ್ತು ಕಬ್ಬಿಣ ವ್ಯಾಪಾರಿಗಳಿಗೆ ಹೆಚ್ಚು ಲಾಭ ಇರುವುದು. ಇಂದು ಕೈಗೊಳ್ಳುವ ನಿರ್ಧಾರಗಳು ಕುಟುಂಬದ ಎಲ್ಲ ಸದಸ್ಯರ ಮನಸ್ಸಿಗೆ ನೆಮ್ಮದಿ ತರಲಿದೆ.


ಕುಂಭ: ನಿವೇಶನಗಳ ಖರೀದಿಯ ವ್ಯವಹಾರದಲ್ಲಿ ಮತ್ತೊಮ್ಮೆ ಭೂಮಿಯ ದಾಖಲೆಗಳ ಪರೀಕ್ಷೆ ಅನಿವಾರ್ಯ ಎನಿಸಲಿದೆ. ಸಂಶೋಧನಾಕಾರರಿಗೆ ಹಾಗೂ ನ್ಯಾಯಾಂಗ ಇಲಾಖೆಯವರಿಗೆ ಒಳ್ಳೆಯ ದಿನಗಳು.

ಮೀನ: ಸರ್ಕಾರಿ ಲೋಕೋಪಯೋಗಿ ಕೆಲಸದ ಗುತ್ತಿಗೆದಾರರು ಕಾಮಗಾರಿ ನಿಮ್ಮೆಡೆಗೆ ಮಾಡಿಕೊಳ್ಳುವ ವಿಚಾರದಲ್ಲಿ ಎಡವುವ ಪರಿಸ್ಥಿತಿಗೆ ಹೋಗುವಿರಿ. ತೆಂಗಿನ ಬೆಳೆ ಹೇರಳವಾಗಿರುವುದು ಜೊತೆಗೆ ಲಾಭದಾಯಕವಾಗಿ ಇರುತ್ತವೆ.

ಪದಬಂಧ 5313 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಹಣವನ್ನು ಜೊತೆಯಲ್ಲಿಟ್ಟುಕೊಂಡು ಏರುವಿಕೆ! (4)
3. ಬಿಡುವು ಹೀಗೆ ದೊರಕಿದೆ (4)
5. ತಾರ ನುಡಿಸಿದ ತಂತಿವಾದ್ಯ (3)
7. ಇದು ಬೇರೆಯವರ ಹಣ (4)
9. ತಂಟೆಕೋರನಿಲ್ಲಿ ತಿರುಗಿ ನಿಂತಿದ್ದಾನೆ (2)
10. ಅತ್ಯಂತ ಕಠಿಣ ನವರತ್ನ (2)
11. ಯಜ್ಞೋಪವೀತವಿದು (4)
13. ಸಂತನಿಂದ ಬಂದಿರುವ ಪೀಳಿಗೆ (3)
16. ಈಕೆ ವಿದ್ಯಾಧಿದೇವತೆ (4)
17. ಬಹಳವಾಗಿ ಭೇದಿಯಾಗುವ ಒಂದು ರೋಗ (4)

ಮೇಲಿಂದ ಕೆಳಕ್ಕೆ
1. ಆಲದ ಮರದ ಹತ್ತಿರವಿರುವ ಸೋಮಾರಿ (3)
2. ಭಾರವಲ್ಲದ್ದು ಇದು (3)
3. ಹಾರವನ್ನಿಟ್ಟುಕೊಂಡು ಮಾಡಿದ ವ್ಯಾಪಾರ (4)
4. ಲಾಭಕ್ಕೊಂದು ಪರ್ಯಾಯ ಪದ (2)
6. ನಕ್ಷತ್ರಗಳ ಗುಂಪು (4)
7. ಉತ್ತರದ ಕಡೆಯವರ ವೇತನ (3)
8. ಅದೇ ತಾನೆ ಹುಟ್ಟಿದುದು (4)
12. ಬ್ರಹ್ಮನ ಇನ್ನೊಂದು ಹೆಸರು (4)
13. ಜೊತೆಯಲ್ಲಿ ಇರುವ ವ್ಯಕ್ತಿ (3)
14. ಕತ್ತಲು ಇಲ್ಲಿದೆ (3)
15. ನೆನಪಿನಿಂದ ಮಾಸದ ತಿಂಗಳು (2)



5312ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಶಾಬ್ದಿಕ 2.ಬಾಲರವಿ 4.ಮಾತೃಭಾಷೆ 6.ಪ್ರಸಂಗ 7.ಕಸ 9.ಪರಾಕು 11.ರಲು 13.ವಿಲೋಮ 14.ಕನ್ನಡಕ 16.ಮಕರಂದ 17.ಅರುಣ

ಮೇಲಿಂದ ಕೆಳಕ್ಕೆ 1.ಶಾಖಮಾಪಕ 2.ಬಾವಿ 3.ರಕ್ತಸಂಚಾರ 5.ಷರಿಪ 8.ಸಮಾಲೋಚಕ 10.ಕುಹಕ 12.ಉಪಕರಣ 15.ಪದ

ಸುಡೊಕು 5699

			7		2		8	6
						3		4
	7	8	3		9		1	
1		4			5		2	3
	2			3				
8		7	6					9
		3	9		6	5	4	8
5	4					1		
	8		5		4		3	2

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5698 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

ಕ್ಷೇಮ ಕುಶಲ

ಸುಖನಿದ್ರೆಗೆ ಸರಳ ಸೂತ್ರಗಳು



ನಿದ್ರೆ ಬಾರದಿರಲು ಹಲವಾರು ಕಾರಣಗಳಿರಬಹುದು. ಆದರೆ, ನಿಶ್ಚಿತ ಸಮಯಕ್ಕೆ ಮಲಗುವ ಮತ್ತು ಏಳುವ ಪದ್ಧತಿಯನ್ನು ರೂಢಿಸಿಕೊಂಡರೆ, ತನ್ನಿಂದ ತಾನೆ ನಿದ್ರೆ ಹತ್ತುತ್ತದೆ. ಸುಖನಿದ್ರೆಗೆ ಇಲ್ಲಿವೆ ಕೆಲವೊಂದು ಸರಳ ಉಪಾಯಗಳು:

- ನಿಶ್ಚಿತ ಸಮಯದಲ್ಲಿ ಮಲಗುವ ಮತ್ತು ಏಳುವ ಪದ್ಧತಿಯನ್ನು ಕಡ್ಡಾಯವಾಗಿ ರೂಢಿಸಿಕೊಳ್ಳಬೇಕು.
- ಅಧಿಕ ಬೆಳಕು ನಿದ್ರೆಯ ಶತ್ರು. ಹೀಗಾಗಿ ಮಲಗುವ ಸಮಯಕ್ಕೆ ಕನಿಷ್ಠ ಒಂದು ಗಂಟೆ ಮುನ್ನ ಕೋಣೆಯ ಬೆಳಕಿನ ಪ್ರಮಾಣವನ್ನು ಕಡಿಮೆ ಮಾಡಿ, ಮಂದ ಬೆಳಕಿಗೆ ದೃಷ್ಟಿಯನ್ನು ಹೊಂದಿಸಿಕೊಳ್ಳಬೇಕು.
- ಮಲಗುವ ಸಮಯಕ್ಕೆ ಮೊದಲು ಟಿ.ವಿ, ಕಂಪ್ಯೂಟರ್, ಮೊಬೈಲ್ ಪರದೆಗಳಂತಹ ಬೆಳಕನ್ನು ಸೂಸುವ ಆಕರಗಳಿಂದ ದೂರವಿರಬೇಕು. ಇದರ ಬದಲಿಗೆ ನಿದ್ರೆಯ ವೇಳೆಗೆ ಮುನ್ನ ಮನಸ್ಸಿಗೆ ಆಪ್ತವಾದ ಪುಸ್ತಕವನ್ನು ಓದುವುದು ಒಳಿತು.
- ನಿದ್ರೆಯ ಸಮಯದಲ್ಲಿ ಸಾಮಾನ್ಯ ಆಹಾರಸೇವನೆ ಸೂಕ್ತ. ರಾತ್ರಿಯ ವೇಳೆ ಭೂರಿಭೋಜನ, ಮದ್ಯಪಾನ, ಧೂಮಪಾನ, ಕಾಫಿ-ಟೀಗಳಿಂದ ದೂರವಿರಬೇಕು.
- ನಿತ್ಯ ಶರೀರಕ್ಕೆ ಸಹ್ಯವಾಗುವಷ್ಟು ವ್ಯಾಯಾಮ, ವೇಗದ ನಡಿಗೆ, ತೋಟದ ಕೆಲಸದಂತಹ ಚಟುವಟಿಕೆಗಳಿಗೆ ಸಮಯವನ್ನು ಹೊಂದಿಸಿಕೊಳ್ಳಬೇಕು.
- ನಿದ್ರೆಯ ಕೋಣೆ ತಂಪಾಗಿ, ಸಾಧ್ಯವಾದಷ್ಟೂ ನಿಶ್ಶಬ್ದವಾಗಿ, ಮಂದಬೆಳಕಿನಿಂದಿರುವುದು ಅಗತ್ಯ.
- ನಿದ್ರೆಗೆ ಮುನ್ನ ಬಿಸಿನೀರಿನಲ್ಲಿ ಸ್ನಾನ ಮಾಡಿ, ಧ್ಯಾನ ಮಾಡುವುದರಿಂದ ಮನಸ್ಸು ಪ್ರಫುಲ್ಲವಾಗಿರುತ್ತದೆ. ಹಗಲುವೇಳೆಯಲ್ಲಿ ಮಲಗುವ ಅಭ್ಯಾಸ ಕೂಡ ರಾತ್ರಿ ನಿದ್ರೆ ಬಾರದಿರುವುದಕ್ಕೆ ಪ್ರಮುಖ ಕಾರಣ. ಹಾಗಾಗಿ ಹಗಲಿನ ವೇಳೆಯಲ್ಲಿ ನಿದ್ರೆ ಮಾಡುವುದನ್ನು ತಪ್ಪಿಸಿ.

ಪಿಯುಸಿ- ಸಿಇಟಿ ಪರೀಕ್ಷೆ ದಿಕ್ಸೂಚಿ

BIOLOGY

MULTIPLE CHOICE QUESTIONS

94. one of the following is incorrect about cancer cells.

(a) They exhibit the property of contact inhibition
(b) They are metastatic
(c) They exhibit mass proliferation
(d) They are produced when cellular oncogenes of normal cells are activated.

Ans:(a) all the statements given in the option are appropriate about the property of cancer cells excepting the one that they exhibit the property of contact inhibition.

This is not true because only normal cells has the property of contact inhibition or anchorage dependence (a growth mechanism designed to keep cells growing into a layer one cell thick.) The cancerous cells lacks this property and grow in an uncontrolled manner even neighbouring cells because they are motivated to change their direction upon contact. Hence, start to pile up and grow over one another.

95. Match the items listed under column :1 with those given under column: 2, choose the appropriate option from the given choices.

Column I	Column II
A. Residual Volume (RV)	1. 4000-4600 mL
B. Inspiratory Reserve Volume (IRV)	2. 1100-1200 mL
C. Vital Capacity (VC)	3. 100-1100 mL
D. Expiratory Reserve Volume (ERV)	4. 3000-3500 mL
E. Inspiratory Capacity (IC)	5. 2500-3000 mL

	A	B	C	D	E
(a)	2	3	4	5	1
(b)	3	5	1	2	4
(c)	5	2	4	3	1
(d)	2	5	1	3	4

Ans: d

Residual Volume (RV) is the volume of air remaining in the lungs even after a forcible expiration. It is about 1100-1200 ml. While, Inspiratory Reserve Volume (IRV) is the additional air after a normal inspiration. It is about 2500-3000 ml. of air. Vital Capacity (VC) is the maximum value of air a person can breathe in after a forced expiration or the maximum volume of air a person can breathe out after a forced inspiration. It varies 4000-4600 ml. depending upon age, sex and height of individual.`

Expiratory Reserve Volume (ERV) is the additional volume of air that can be expired forcibly after a normal expiration. It is about 1000-1100 ml. and Inspiratory Capacity (IC) is the total volume of air a person can inspire after a expiration, It is about 3000-3500 ml.

96. The centrosome duplicates during the

(a) S-phase of cell cycle
(b) G_1-phase of cell cycle
(c) G_2-phase of cell cycle
(d) Prophase of cell cycle

Ans:(a) S-phase (synthesis phase) is the part of the interphase of cell cycle occurring between G_1 and G_2-phase. This is the phase in which DNA replication take place, i.e., chromosomes are replicated.

97. Which of the following statements is correct?

(a) Elaioplasts store starch, whereas aleuroplasts store proteins
(b) Acrocentric chromosomes have only one arm
(c) The core of cilium or flagellum is the basal body
(d) Membranous extensions into the cytoplasm in cyanobacteria which contain pigments are called chromatophores

Ans:(d) All statements given are appropriate in the options excepting the one for chromatophores. Because chromatophores are internal membrane systems of photosynthetic forms, which possess photosynthetic or light reflecting pigments in the cells of wide range of animals.

98. Sickle-cell anaemia is caused due to the substitution of

(a) Valine at the 6th position of alpha globin chain by glutamic acid
(b) Glutamic acid at the 6th position of beta globin chain by valine
(c) Valine at the 6th position of beta globin chain by glutamine
(d) Glycine at the 6th position of alpha globin chain by glutamic acid

Ans:(b) Sickle-cell anaemia is an autosome-linked recessive trait that can be transmitted from parents to the offsprings when both the parents are carrier of the gene.

The disease is called by the single base substitution of Glutamic Acid (Glu). Valine (Val) at the sixth positions of the Beta globin chain of the haemoglobin molecule.

CHEMISTRY

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

142) A solution has 1 : 4 mole ratio of pentane to hexane. The vapor pressures of the pure hydrocarbons at 20^0 C and 440 mm Hg is for pentane and 120 mm Hg for hexane. The mole fraction of pentane in the vapour phase will be:

a) 0.200 b) 0.549
c) 0.786 d) 0.478

Ans:- d

143) KBr is 80% dissociated in aqueous solution of 0.5 m concentration (Given k_f=1.86Kkg mol^{-1}). The solution freezes at……………………..

a) 271.326 K b) 272 K
c) 270.5 K d) 268.5 K

Ans:- a

144) Elements of group -15 form compound in +5 oxidation state. However, bismuth forms only one well characterized compound in +5 oxidation state. The compound is…………..

a) Bi_2O_5 b) BiF_5
c) $BiCl_5$ d) Bi_2S_5

Ans:-b

145) On heating ammonium dichromate and barium azide separately we get …………..

a) N_2 in both cases
b) N_2 with ammonium dichromate and NO with barium azide
c) N_2O with ammonium dichromate and N_2 with barium azide
d) N_2O with ammonium dichromate and NO_2 with barium azide

Ans:-a

146) In the preparation of HNO_3. We get NO gas by catalytic oxidation of ammonia. The moles of No produced by oxidation of two moles of NH_3 will be ………….

a) 2 b) 3
c) 4 d) 6

Ans:-a

147) The oxidation state of central atom in the anion of compound NaH_2PO_2 will be …………

a) +3 b) +5
c) +1 d) -3

Ans:- C

148) Which of the following is not tetrahedral in shape?

a) NH^+_4 b) $SiCl_4$
c) SF_4 d) SO^{2-}_4

Ans:- C

149) Which of the following are peroxoacids of sulphur?

a) H_2SO_5 and $H_2S_2O_8$ b) H_2SO_5 and $H_2S_2O_7$
c) $H_2S_2O_7$ and $H_2S_2O_8$ d) $H_2S_2O_6$ and $H_2S_2O_7$

Ans:- a

150) Hot conc. H_2SO_4 Acts as moderately strong oxidising agent. It oxidises both metals and nonmetals. Which of the following element is oxidized by conc. H_2SO_4 Into two gaseous products?

a) Cu b) S
c) C d) Zn

Ans:- C

151) A black compound of manganese reacts with a halogen acid to give greenish yellow gas. When excess of this gas reacts with NH_3 an unstable trihalide is formed. In this process the oxidation state of nitrogen changes from …………………

a) - 3 to + 3 b) - 3 to 0
c) – 3 to + 5 d) 0 to – 3

Ans:- a

152) In the preparation of compounds of Xe, Bartlett had taken O^+_2 Pt F^-_2 as a base compound. This is because………….

a) both O_2 and Xe have same size.
b) both O_2 and Xe have same electron gain enthalpy.
c) both O_2 and Xe have almost same ionization enthalpy.
d) both Xe and O_2 are gases.

Ans:- C

153) In solid state PCl_5 is a …………..

a) covalent solid
b) octahedral structure
c) ionic solid with $[PCl_6]^+$ octahedral and $[PCl_4]^-$ tetrahedra
d) ionic solid with $[PCl_4]^-$ tetrahedral and $[PCl_6]^+$ octahedra

Ans:- d

154) Which of the following is isoelectronic pair?

a) ICl_2, ClO_2 b) BrO^-_2, BrF^+_2
c) ClO_2, BrF d) CN^-, O_3

Ans:- b

155) Electronic configuration of a transition element X in +3 oxidation state is [Ar] $3d^5$. What is the atomic number?

a) 25 b) 26
c) 27 d) 24

Ans:- b

156) Electronic configuration of Cu(II) is $3d^9$ whereas that of Cu(I) is $3d^{10}$. Which of the following is correct?

a) Cu(II) is more stable
b) Cu(II) is less stable
c) Cu(I) and Cu(II) are equally stable
d) Stability of Cu(I) and Cu(II) depends on the nature of copper salts

Ans:- a

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ASC Committed to Excellence Since 2009

ASC GROUP OF INSTITUTIONS

#A3, 1st Main Road, 6th Block, Rajajinagar, Bengaluru - 560010.

Prof. H. S. Ananthamurthy
Founder Chairman
ASC Educational & Cultural Trust

Management, Principal and Staff Congratulate the students who have excelled in PU and DEGREE examinations 2023

- **16** STATE RANKS IN TOP 10
- **39** STATE RANKS IN TOP 20
- **255** DISTINCTIONS
- **323** FIRST CLASS
- **121** CENTUMS

ASC INDEPENDENT PU COLLEGE

COMMERCE

Rank	Name	Percentage
State 2nd Rank	INCHARA N	99.33%
State 3rd Rank	SHUBHASHREE M	99.17%
State 4th Rank	DEEPTHI P	99.00%
State 4th Rank	KEERTHANA K	99.00%
State 4th Rank	KHUSHI R	99.00%
State 5th Rank	DEVIKA SATHISH	98.83%
State 5th Rank	NISARGA D	98.83%
State 5th Rank	SOUNDARYA B R	98.83%
State 7th Rank	NITHIN KASHYAP S	98.50%
State 7th Rank	SPANDANA POOJARY	98.50%
State 8th Rank	POORNACHANDRA A N	98.33%
State 9th Rank	RAMYA J Y	98.17%
State 10th Rank	MANMOHAN PRASAD	98.00%
State 10th Rank	NEHA BHAT	98.00%
State 10th Rank	SANDHYASHREE K	98.00%

SCIENCE

Rank	Name	Percentage
State 9th Rank	NIHARIKA	98.00%
State 15th Rank	MAMATHA M	97.00%
State 18th Rank	MONIKA M	96.50%

ASC DEGREE COLLEGE

4 UNIVERSITY RANKS

BANGALORE UNIVERSITY RANK HOLDERS - 2023

- DEEKSHITHA R NAYAK — 1st RANK — B.Com
- DEEEPA S — 5th RANK — B.Com
- CHETHAN KUMAR M — 9th RANK — BCA
- HARSHITHA R — 9th RANK — BBA

18 UNIVERSITY GOLD MEDALS

BANGALORE UNIVERSITY GOLD MEDALISTS - 2023

- DEEKSHITHA R NAYAK — 9 GOLD MEDALS
- DEEKSHA V KASHYAP — 3 GOLD MEDALS
- DEEPA S — 1 GOLD MEDAL
- SHIVU T — 1 GOLD MEDAL
- ANUSHREE M V — 1 GOLD MEDAL
- BHAVANA K — 1GOLD MEDAL
- BHOOMIKA P — 1 GOLD MEDAL
- RAKSHAMBIGHA S — 1 GOLD MEDAL

ADMISSIONS OPEN FOR 2023-2024

ASC Independent PU College
- SCIENCE: PCMB, PCMC, PCME
- COMMERCE: ABMS, ABEM, ABES, ABEC, ABEH

www.ascpucollege.ac.in

ASC Degree College
(Affiliated to Bangalore University)
B.Com, BBA, BCA
www.ascdegreecollege.ac.in

ASC Degree Evening College
(Affiliated to Bangalore University)
B.Com

Smt. SANGEETHA MURTHY
CHAIRPERSON - ASC Educational & Cultural Trust

For details, call:
PUC: 080 - 23400290 Degree: 080 - 23400192/194

Dr. RAMAKRISHNA MURALI
CEO - ASC Group of Institutions

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

CHANAKYA UNIVERSITY

Established under The Chanakya University Act 2021 (Karnataka Act No. 37 of 2021)
Recognized by the University Grants Commission (UGC), New Delhi.

Devanahalli Bengaluru

THE CHANAKYA EDGE



- Liberal Education & Multidisciplinary Learning
- Academic Programs aligned with National Education Policy (NEP 2020)
- Indian Knowledge Systems for developing the pride for Indian heritage
- Industry-linked academic curriculum
- Experiential Career Empowerment Programs
- Strategically located in the vicinity of major globally reputed industries in Bengaluru

8C's of personal effectiveness

- Curiosity
- Competence
- Compassion
- Creative Thinking
- Character
- Culture
- Communication
- Commitment

Chanakya University offers **Scholarships worth INR 10 Cr** for meritorious/deserving students

CUPP 2023 CHANAKYA UNIVERSITY PRAVESHA PAREEKSHA

Placements Assured**
Value-Added Professional Programs to enhance your employability skills
** As per Placement Policy


Separate Hostel Facility for Boys and Girls.
Transportation available

Liberal Education for flexibility in learning

Over **40** Majors & Minors to choose from


4 Schools of Academic Excellence







State of the art Global Infrastructure and Facilities






Chanakya university is going to go places, going to go to heights and become a world class research university.



Dr. Kasturi Rangan
Former Chairman - ISRO

I'm very sure Chanakya university will do exceedingly well.



Padma Bhushan Smt. Sudha Murthy
Chairperson- Infosys Foundation

International Advisory Council

Dr. K. Kasturirangan
Former Chairman, ISRO

Prof. Manjul Bhargava
Professor, Princeton University

Prof. Sunaina Singh
Vice-Chancellor, Nalanda University

Prof. Vasudha Kamat
Chairperson, Governing Board, CEC

Dr. Chandraprakash Dwivedi
Renowned Film Director, Member-IGNCA

Sri Hari Kiran Vadlamani
Founder, Indic Academy

Dr. Sitaram Jindal
Chairman & MD, Jindal Aluminium Limited

Sri Harish Bijoor
Brand Guru & Founder,
Harish Bijoor Consults Inc

Prof. Kapil Kapoor
Chairman, IIAS

Sri Manish Sabharwal
Chairman,
Teamlease Services

Prof. Bhushan Patwardhan
Former Vice Chairman,
University Grants Commission

Dr. Kiran Mazumdar-Shaw
Executive Chairperson, Biocon Ltd

Prof. Subhash Kak
Computer Scientist & Historian
Oklahoma State University

Sri Ricky Kej
Indian Music Composer & Environmentalist
Three times Grammy Award Winner

Sri S. V. Ranganath, IAS
Former Chief Secretary,
Government of Karnataka

Prof. S. Sadagopan
Former Director, IIIT Bengaluru

Smt. Sonal Mansingh
Renowned Dancer,
Member-Rajya Sabha

Prof. Bhimaraya Metri
Director, IIM-Nagpur

Sri Anurag Behar
Chief Executive Officer,
Azim Premji Foundation

Prof. Michel Danino
Visiting Professor, IIT Gandhinagar

Sri Prakash Belawadi
Co-Founder, Centre for Film & Drama

Board of Governors

Prof. M. K. Sridhar
President, CESS

Sri M. P. Kumar
Founder & Ex-CEO, Global Edge

Prof. Yashavantha Dongre
Vice-Chancellor,
Chanakya University

Sri T. V. Mohandas Pai
Chairman, Manipal Global Education Services

Sri Kris Gopalakrishnan
Co-Founder & Ex-CEO, Infosys
Chairman, Axilor ventures

Dr. L .Gomathi Devi
Vice-Chancellor, Maharani Cluster University

Justice A. V. Chandrashekar
Former Judge,, High Court of Karnataka

Prof. B. Mahadevan
Professor, IIM-B, Bengaluru

Sri Nagaraj Reddy
Secretary, CESS

Principal Secretary
Department of Higher Education
Govt. of Karnataka

Dr. Sushant Joshi
Registrar, Chanakya University

Academic Programs for Batch 2023

School of Commerce and Management

UG Programs

B. B. A. (Hons.)
- Digital Enterprises Management
- Start-ups and Business Innovation
- International Business
- Services Management
- Business Analytics

B. B. A.
- Industry Embedded

B. Com. (Hons.)
- Accounting and Taxation
- Fintech

PG Programs

M.Com.
- Finance
- Business Analytics
- Banking and Insurance
- Logistics and Supply Chain Management

M.B.A.
- Finance
- Human Resources
- Marketing
- Logistics and Supply Chain Management
- Business Analytics
- Aviation
- Tourism and Hospitality Management
- Hospital Administration

School of Mathematics and Natural Sciences

UG Programs

B. Sc. (Hons.)
- Computer Science
- Mathematics
- Actuarial Sciences

B. C. A. (Hons.)
- Data Science
- Cloud and Mobile Computing
- Cyber Security and Digital Forensics

PG Programs

M.Sc. - Psychology
M.Sc. - Data Science
M.C.A.

School of Arts, Humanities and Social Sciences

UG Programs

Scheme - 1
B. A. (Hons.)
With Majors and Minors
- Psychology
- Economics
- Journalism and Media Studies
- English
- Political Science
- International Relations

Scheme - 2
B. A. (Hons.)
Liberal Arts

Scheme - 3
B. A. (Hons.)
With Civil Services Test Preparation

B.S.W.
Bachelor of Social Work

PG Programs

M.A. - English
M.A. - Economics
M.S.W.

School of Public Policy and Legal Studies

UG Programs

5 Years integrated
B. A., L.L.B. (Hons.)
B.B.A., L.L.B. (Hons.)

PG Programs

L.L.M.
1 Year
- Constitutional Law
- Alternative Dispute Resolution

The Legal Studies Programs are subject to approval of Regulatory Body.

Admissions Open for A.Y. 2023-24

+91 8550 8550 92 / 94
admissions@chanakyauniversity.edu.in
www.chanakyauniversity.edu.in

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331